" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ:19.12.2018
ಬುಧವಾರ

ವಿಷಯಾನುಕ್ರಮಾಣಿಕೆ

1. **ಉಪಸಭಾಪತಿಯವರ ಚುನಾವಣೆ**
   - ಸಭಾಪತಿಯವರು
   - ಡಾ:ಜಯಮಾಲ(ಸಭಾನಾಯಕರು)
   - ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
   - ಶ್ರೀ ಕೆ.ಜೆ.ಜಾರ್ಜ್(ಬೃಹತ್ ಮತ್ತು ಮಾಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ.ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)
   - ಡಾ:ವೈ.ಎ.ನಾರಾಯಣಸ್ವಾಮಿ
   - ಶ್ರೀ ಸಿ.ಎಂ.ಇಬ್ರಾಹಿಂ
   - ಶ್ರೀ ಎಂ.ಕೆ.ಪ್ರಾಣೇಶ್
   - ಶ್ರೀ ಆಯನೂರು ಮಂಜುನಾಥ್
   - ಡಾ: ತೇಜಸ್ವಿನಿ ಗೌಡ
   - ಶ್ರೀ ಐವನ್ ಡಿ'ಸೋಜಾ
   - ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
   - ಶ್ರೀ ಹೆಚ್.ಎಂ.ರಮೇಶ ಗೌಡ
   - ಶ್ರೀ ಎನ್.ಅಪ್ಪಾಜಿಗೌಡ
   - ಶ್ರೀ ಟಿ.ಎ.ಶರವಣ
   - ಶ್ರೀ ಎಸ್.ಎಲ್.ಧರ್ಮೇಗೌಡ(ಉಪಸಭಾಪತಿ)

**(ಸರ್ವಾನುಮತದಿಂದ ಆಯ್ಕೆಗೊಳ್ಳಿಸಲಾಯಿತು)**

2. **ಪ್ರಶ್ನೋತ್ತರ ಅವಧಿ**

**ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**37** – ಆನೆಗಳ ದಾಳಿ ಬಗ್ಗೆ
- ಶ್ರೀ ಎಂ.ಕೆ.ಪಾಣೇಶ್
- ಶ್ರೀ ಆರ್.ಶಂಕರ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

**989** – **ಮುಜರಾಯಿ ಇಲಾಖೆಗೆ ಸೇರಿದ ಸ್ವತ್ತಿನ ವಿವರ ನೀಡುವ ಬಗ್ಗೆ.**
- ಶ್ರೀ ಪಿ.ಆರ್.ರಮೇಶ್
- ಶ್ರೀ ರಾಜಶೇಖರ ಬಿ.ಪಾಟೀಲ(ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

984 – **ಕಸ್ತೂರಿ ರಂಗನ್ ವರದಿಯ ಬಗ್ಗೆ**
– ಶ್ರೀ ಐವನ್ ಡಿ'ಸೋಜಾ
– ಶ್ರೀ ಆರ್.ಶಂಕರ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

962 – **ದೇವಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನದ ಬಗ್ಗೆ**
– ಶ್ರೀ ಎಂ.ಸಿ.ವೇಣುಗೋಪಾಲ್
– ಶ್ರೀ ರಾಜಶೇಖರ ಬಿ.ಪಾಟೀಲ(ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು)

1078 – **ನಗರ ಪ್ರದೇಶದ ಆಸ್ತಿಗಳ ಸಂರಕ್ಷಣೆ ಬಗ್ಗೆ**
– ಶ್ರೀ ಶರಣಪ್ಪ ಮಟ್ಟೂರ(ರಿಜ್ವಾನ್ ಅರ್ಷದ್‌ರವರ ಪರವಾಗಿ)
– ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

1038 – **ಕಾರ್ಮಿಕ ಕಲ್ಯಾಣ ನಿಧಿಯ ಅಸಮರ್ಪಕ ನಿರ್ವಹಣೆ ಬಗ್ಗೆ**
– ಶ್ರೀ ಎನ್.ರವಿಕುಮಾರ್
– ಶ್ರೀ ವೆಂಕಟರಮಣಪ್ಪ(ಕಾರ್ಮಿಕ ಸಚಿವರು)

969 – **ಬೀದರ್ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರಿಗೆ ಕಬ್ಬಿನ ಸಂಪೂರ್ಣ ಬೆಲೆ ಪಾವತಿಸುವ ಬಗ್ಗೆ**
– ಶ್ರೀ ವಿಜಯ ಸಿಂಗ್
– ಶ್ರೀ ಕೆ.ಜೆ.ಜಾರ್ಜ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ.ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

1000 – **ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸಂರಕ್ಷಿತ ಪ್ರದೇಶದಲ್ಲಿನ ಅಕ್ರಮ ಗಣಿಗಾರಿಕೆ ಬಗ್ಗೆ.**
– ಶ್ರೀ ಅರುಣ ಶಹಾಪುರ
– ಶ್ರೀ ರಾಜಶೇಖರ ಬಿ.ಪಾಟೀಲ(ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು)

979 – **ಅನುದಾನಿತ ಐ.ಟಿ.ಐ. ಸಂಸ್ಥೆಗಳ ಬಗ್ಗೆ**
– ಮರಿತಿಬ್ಬೇಗೌಡ
– ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

1002+1001 – **ಶ್ರೀಗಂಧದ ಮರಗಳ ಅನಧಿಕೃತ ಕಟಾವಣೆ/ಕಳ್ಳಸಾಗಣೆ ಬಗ್ಗೆ**
– ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ
– ಶ್ರೀ ಆರ್.ಶಂಕರ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

991 – **ಭೂ ಪರಿವರ್ತನೆಗೆ ಬಂದ 5000 ಅರ್ಜಿಗಳ ಬಾಕಿ ಬಗ್ಗೆ**
– ಶ್ರೀ ಬಿ.ಎಂ.ಫಾರೂಖ್
– ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

995 – **ಕೊಡಗು ಜಿಲ್ಲೆಯಲ್ಲಿ ಮಳೆಯಿಂದಾಗಿರುವ ಪರಿಣಾಮಗಳ ಬಗ್ಗೆ**
– ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
– ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

164 ~~8~~ – **ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿ ಹಾಗೂ ಭೂ ಕುಸಿತದಿಂದಾಗಿ ಕಾಫಿ ತೋಟಗಳು ಕೊಚ್ಚಿ ಹೋಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ.**

– ಶ್ರೀ ಎಸ್.ವೀಣಾ ಅಚ್ಚಯ್ಯ
– ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

~~232~~ **232– ಸವದತ್ತಿ ಯಲ್ಲಮ್ಮ ದೇವಸ್ಥಾನದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಗ್ಗೆ**
– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
– ಶ್ರೀ ರಾಜಶೇಖರ ಬಿ.ಪಾಟೀಲ(ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು)

Formatted: Normal, No bullets or numbering
Formatted: Font: 14 pt, Bold
Formatted: Font: Nudi 01 e, 14 pt, Bold

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. <u>ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ವಿದ್ಯುತ್ ಅವಘಡದಿಂದ ಉಂಟಾಗಿರುವ ಹಾನಿಗೆ ಪರಿಹಾರ ನೀಡುವ ಬಗ್ಗೆ.**
– ಶ್ರೀ ಕೋಟ ಶ್ರೀನಿವಾಸ ಪೂಜಾರಿ
– ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

**ಆ) ಬೆಳಗಾವಿ ಜಿಲ್ಲೆಯಲ್ಲಿನ ಗಡಿಯಲ್ಲಿ ಬರುವ 'ಗಾಂವ' ಎಂದಿರುವ ಎಲ್ಲಾ ಗ್ರಾಮಗಳ ಹೆಸರನ್ನು ಗ್ರಾಮ ಎಂದು ಮರುನಾಮಕರಣ ಮಾಡುವ ಬಗ್ಗೆ.**
– ಡಾ|| ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ)
– ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಇ) ಬೆಂಗಳೂರು ನಗರದ ಟ್ರಿನಿಟಿ ವೃತ್ತದ ನಿಲ್ದಾಣ ಬಳಿಯಲ್ಲಿ ಮೆಟ್ರೋದ**
ವಯಾಡಕ್ಟ್‌ನಲ್ಲಿ ಕಾಂಕ್ರೀಟ್ ಶಿಥಿಲವಾಗಿರುವ ಬಗ್ಗೆ
- ಶ್ರೀ ಕೆ.ಗೋವಿಂದರಾಜ್
- ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

**ಈ) ಪೊಲೀಸ್ ಇಲಾಖೆಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಸೇವೆಯಿಂದ ವಜಾ ಮಾಡಿರುವ ಬಗ್ಗೆ**
- ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
- ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

**ಉ) ಹಾಸನ ಜಿಲ್ಲೆಯ ಸಾವಂತಹಳ್ಳಿಯಲ್ಲಿರುವ ಜೀತ ಪದ್ಧತಿ ಬಗ್ಗೆ**
- ಶ್ರೀ ಎನ್.ರವಿಕುಮಾರ್
- ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

**ಊ) ರೈತರು ಸಾಲ ಪಡೆದು ಬೆಳೆದ ಕಬ್ಬಿಗೆ ಸಾಗಾಣಿಕೆ ವ್ಯವಸ್ಥೆ ಇಲ್ಲದೇ ಕಟಾವಿಗೆ ಬಂದಿರುವ ಕಬ್ಬು ಬೆಳೆ ಒಣಗುತ್ತಿರುವ ಬಗ್ಗೆ**
- ಶ್ರೀ ರಘುನಾಥ ರಾವ್ ಮಲ್ಕಾಪೂರೆ
- ಶ್ರೀ ಕೆ.ಜೆ.ಜಾರ್ಜ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ.ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು)

**ಋ) ಕಂಬಳ ಜಾನಪದ ಕ್ರೀಡೆಯ ಬಗ್ಗೆ**
- ಶ್ರೀ ಆಯನೂರು ಮಂಜುನಾಥ್
- ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

**ಎ) ಎಸ್‌ಎಸ್‌ಎ/ಆರ್‌ಎಂಎಸ್‌ಎ ಶಿಕ್ಷಕರಿಗೆ ಕಳೆದ ಹತ್ತು ತಿಂಗಳಿನಿಂದ ವೇತನ ಬಿಡುಗಡೆಯಾಗದಿರುವ ಬಗ್ಗೆ**
- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಏ) ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾದ "ರಾಜ್ಯದಲ್ಲಿ 5272 ಗ್ರಾಮಗಳಲ್ಲಿ ಶಾಲೆ ಇಲ್ಲ" ಎಂಬ ಬಗ್ಗೆ.**

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

**ಐ) ಜೆ.ಓ.ಸಿ. ಶಿಕ್ಷಕರನ್ನು ಖಾಯಂಗೊಳಿಸುವ ಬಗ್ಗೆ**

– ಶ್ರೀ ಅರುಣ ಶಹಾಪುರ

– ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ**

**ಅ) ರಾಜ್ಯ ಸರ್ಕಾರಿ ನೌಕರರಿಗೆ ಪರಿಮಿತಿ ರಜಾ ಪಟ್ಟಿಯಲ್ಲಿ ಕ್ರೈಸ್ತ ಸಮುದಾಯದವರಿಗೆ ಪವಿತ್ರ ಹಬ್ಬವಾದ ಕನ್ಯಾಮರಿಯಮ್ಮ ಜಯಂತಿ ಹಬ್ಬವನ್ನು ಸೇರಿಸುವ ಬಗ್ಗೆ.**

– ಶ್ರೀ ಕೃಷ್ಣಭೈರೇಗೌಡ, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಮುಖ್ಯಮಂತ್ರಿಗಳ ಪರವಾಗಿ)

**ಆ) ಬೆಳಗಾವಿಯಲ್ಲಿನ ಸುವರ್ಣ ವಿಧಾನಸೌಧಕ್ಕೆ ಕೆಲವು ಕಛೇರಿಗಳನ್ನು ಸ್ಥಳಾಂತರಿಸುವ ಬಗ್ಗೆ.**

– ಶ್ರೀ ಕೃಷ್ಣಭೈರೇಗೌಡ, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಮುಖ್ಯಮಂತ್ರಿಗಳ ಪರವಾಗಿ)

**ಇ) ಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿನ ಭತ್ತ ಖರೀದಿ ಕೇಂದ್ರದಲ್ಲಿ ನೋಂದಣಿ ಮಾಡಿಸಿಲ್ಲವೆಂಬ ಕಾರಣಕ್ಕೆ ಜ್ಯೋತಿ ತಳಿ ಭತ್ತವನ್ನು ಖರೀದಿಸಲು ನಿರಾಕರಿಸುತ್ತಿರುವ ಬಗ್ಗೆ.**

– ಶ್ರೀ ಕೃಷ್ಣಭೈರೇಗೌಡ,(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಹಾಗೂ ಹಜ್ ಸಚಿವರ ಪರವಾಗಿ)

**ಈ) ಕೈಗಾ ಪರಮಾಣು ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕ ನಿರ್ಮಾಣಕ್ಕೆ ಸಾರ್ವಜನಿಕರ ವಿರೋಧದ ಬಗ್ಗೆ.**

– ಶ್ರೀ ಕೃಷ್ಣಭೈರೇಗೌಡ, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಮುಖ್ಯಮಂತ್ರಿಗಳ ಪರವಾಗಿ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**5. ಸಭೆಯ ಮಂದಿಡಲಾದ ಕಾಗದ ಪತ್ರಗಳು**

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ(ತಿದ್ದುಪಡಿ) ವಿಧೇಯಕ, 2018**

- ಶ್ರೀ ಸಿ.ಪುಟ್ಟರಂಗ ಶೆಟ್ಟಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀಮತಿ ಜಯಮ್ಮ
- ಶ್ರೀ ಪುಟ್ಟಣ್ಣ
- ಡಾ:ತೇಜಸ್ವಿನಿ ಗೌಡ
- ಶ್ರೀ ಪಿ.ಆರ್.ರಮೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
- ಶ್ರೀ ಎಂ.ನಾರಾಯಣಸ್ವಾಮಿ
- ಶ್ರೀ ಅಬ್ದುಲ್ ಜಬ್ಬಾರ್

**(ವಿಧೇಯಕಕ್ಕೆ ಅನುಮೋದನೆ ದೊರೆಯಿತು)**

**ಆ) ಕರ್ನಾಟಕ ಧನವಿನಿಯೋಗ(ಸಂಖ್ಯೆ:3) ವಿಧೇಯಕ, 2018**

- ಶ್ರೀ ಕೃಷ್ಣಭೈರೇಗೌಡ, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)
- ಡಾ: ವೈ.ಎ.ನಾರಾಯಣಸ್ವಾಮಿ
- ಆಯನೂರು ಮಂಜುನಾಥ್
- ಶ್ರೀ ಎನ್.ರವಿಕುಮಾರ್
- ಶ್ರೀ ಹೆಚ್.ಎಂ.ರೇವಣ್ಣ
- ಡಾ: ತೇಜಸ್ವಿನಿಗೌಡ
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಧರ್ಮಸೇನ
- ಶ್ರೀ ಐವನ್ ಡಿ'ಸೋಜಾ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

**(ವಿಧೇಯಕಕ್ಕೆ ಅನುಮೋದನೆ ದೊರೆಯಿತು)**

**7. ನಿಯಮ 68 ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**

- ಶ್ರೀ ಆರ್.ವಿ.ದೇಶಪಾಂಡೇ(ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಂ.ಕೆ.ಪ್ರಾಣೇಶ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಡಾ: ವೈ.ಎ.ನಾರಾಯಣಸ್ವಾಮಿ
– ಡಾ: ತೇಜಸ್ವಿನಿ ಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

– – –

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕರ್ನಾಟಕ ವಿಧಾನ ಪರಿಷತ್ತು**
**ಬುಧವಾರ, 19ನೇ ಡಿಸೆಂಬರ್ 2018**

**ಸದನವು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 110 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(551)19-12-2018(10.20)ಎಂವಿ-ಕೆಎಸ್

**1.ಉಪ ಸಭಾಪತಿಯವರ ಚುನಾವಣೆ**

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಗಳೆ, ಶ್ರೀ ಎಸ್.ಎಲ್.ಧರ್ಮೇಗೌಡ ಅವರನ್ನು 136ನೆಯ ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಆರ್.ಚೌಡರೆಡ್ಡಿ ತೂಪಲ್ಲಿಯವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಶ್ರೀ ಎಸ್.ಎಲ್.ಧರ್ಮೇಗೌಡ ಅವರನ್ನು 136ನೆಯ ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಸಭಾಪತಿಯವರು:-** ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿಯವರು ಮತ್ತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ಸೂಚಿಸಿರುವ ಹಾಗೂ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಮತ್ತು ಶ್ರೀ ಎನ್.ಅಪ್ಪಾಜಿಗೌಡರವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

"ಶ್ರೀ ಎಸ್.ಎಲ್.ಧರ್ಮೇಗೌಡ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸುವುದು"

**ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.**

**ಸಭಾಪತಿಯವರು:-** ಮೊದಲನೆಯ ಪ್ರಸ್ತಾವನೆ ಅಂಗೀಕೃತಗೊಂಡಿರುವುದರಿಂದ ಉಳಿದ ಪ್ರಸ್ತಾವಗಳನ್ನು ಮತಕ್ಕೆ ಹಾಕುವ ಅಗತ್ಯವಿಲ್ಲದಿರುವುದರಿಂದ ಮಾನ್ಯ ಎಸ್.ಎಲ್.ಧರ್ಮೇಗೌಡರು ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆಂದು ಘೋಷಿಸುತ್ತೇನೆ.

**(ಶ್ರೀ ಎಸ್.ಎಲ್.ಧರ್ಮೇಗೌಡ ಅವರನ್ನು ಉಪಸಭಾಪತಿಯವರನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು)**

(ಈ ಹಂತದಲ್ಲಿ, ನೂತನವಾಗಿ ಆಯ್ಕೆಯಾದ ಶ್ರೀ ಎಸ್.ಎಲ್.ಧರ್ಮೇಗೌಡರವರನ್ನು ಮಾನ್ಯ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಹಾಗೂ ಸೂಚಕರಾದ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿಯವರು, ಅನುಮೋದಕರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ ಅವರುಗಳು ಉಪ ಸಭಾಪತಿಯ ಪೀಠದ ಹತ್ತಿರ ಕರೆತಂದರು)

**ಉಪಸಭಾಪತಿಗಳಾದ (ಶ್ರೀ ಎಸ್.ಎಲ್.ಧರ್ಮೇಗೌಡರವರು) ಉಪ ಸಭಾಪತಿಯವರ ಪೀಠವನ್ನು ಅಲಂಕರಿಸಿದರು.**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಈ ದಿನ ಅವಿರೋಧವಾಗಿ, ಸರ್ವಾನುಮತದಿಂದ ಚುನಾಯಿತರಾಗಿರತಕ್ಕಂಥ ಶ್ರೀ ಎಸ್.ಎಲ್.ಧರ್ಮೇಗೌಡರವರು, 2004ರಲ್ಲಿ ಚಿಕ್ಕಮಗಳೂರು, ಬೀರೂರು ಕ್ಷೇತ್ರದಿಂದ, ವಿಧಾನಸಭಾ ಶಾಸಕರಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ದಕ್ಷತೆಯಿಂದ ಕೆಲಸ ನಿರ್ವಹಿಸಿರತಕ್ಕಂಥ ಶ್ರೀ ಎಸ್.ಎಲ್.ಧರ್ಮೇಗೌಡರವರು ಸಹಕಾರಿ ಕ್ಷೇತ್ರದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ. ರಾಷ್ಟ್ರಮಟ್ಟದ ಸಹಕಾರ ಸಂಸ್ಥೆಗಳಾದ IFFCO (Indian Farmers Fertiliser Cooperative) Society, IPL (Indian Potash Limited) and NCDC (National Cooperative Development Corporation) ಗಳಲ್ಲಿ ನಿರ್ದೇಶಕರಾಗಿ ಕೆಲಸ ನಿರ್ವಹಿಸಿ, ಅಂತರರಾಷ್ಟ್ರೀಯ ಸಹಕಾರ ಕ್ಷೇತ್ರಗಳಲ್ಲಿ ನಡೆಯುವ 33 ದೇಶಗಳ ಪ್ರತಿನಿಧಿಗಳು ಭಾಗವಹಿಸುವ ಸಭೆಯಲ್ಲಿ ಭಾಗವಹಿಸಿ, ಅಂತರರಾಷ್ಟ್ರೀಯ ಸಹಕಾರ ಕ್ಷೇತ್ರಗಳಲ್ಲಿ ಮೂರು ಬಾರಿ ಮತ ಚಲಾಯಿಸಿರುತ್ತಾರೆ. ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ಸಂಘದ ಶತಮಾನೋತ್ಸವದಲ್ಲಿ 'ಸಹಕಾರ ರತ್ನ' ಪ್ರಶಸ್ತಿಯನ್ನು ನೀಡಿ ಅವರನ್ನು ಸನ್ಮಾನಿಸಿದೆ. ಪ್ರಸ್ತುತ ದಿನಾಂಕ: 18.06.2018ರಲ್ಲಿ ವಿಧಾನಸಭಾ ಕ್ಷೇತ್ರದಿಂದ, ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದು, ಈ ದಿವಸ ಉಪ ಸಭಾಪತಿಯಾಗಿ ಸರ್ವಾನುಮತದಿಂದ ಚುನಾಯಿತರಾಗಿರುವ ಶ್ರೀ ಎಸ್.ಎಲ್.ಧರ್ಮೇಗೌಡರವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

**ಡಾ॥ ಜಯಮಾಲ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಚಿಕ್ಕಮಗಳೂರು ತಾಲ್ಲೂಕು, ಲಕ್ಯ ಹೋಬಳಿ, ಸರ್ಪನಹಳ್ಳಿ ಗ್ರಾಮದ ಶ್ರೀ ಎಸ್.ಆರ್.ಲಕ್ಷ್ಮಯ್ಯ ಮತ್ತು ಶ್ರೀಮತಿ ಕೃಷ್ಣಮ್ಮನವರ ಎರಡನೆ ಮಗನಾಗಿ ಜನಿಸಿರುವಂತಹ ಶ್ರೀ ಎಸ್.ಎಲ್.ಧರ್ಮೇಗೌಡರು ಉಪ ಸಭಾಪತಿ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆಯಾಗಿರುವಂಥದ್ದು ಇಡೀ ಸದನಕ್ಕೆ ಸಂತೋಷವನ್ನು ತಂದಿದೆ. ಸಭಾಪತಿ ಆಗಿರಬಹುದು, ಸಭಾಧ್ಯಕ್ಷರು ಆಗಿರಬಹುದು ಮತ್ತು ಉಪ ಸಭಾಪತಿ ಆಗಿರಬಹುದು, ಈ ಹುದ್ದೆಗಳು ಒಂದು ರೀತಿಯಲ್ಲಿ ಧರ್ಮರಾಯನ ರೀತಿಯಲ್ಲಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ ಮತ್ತು ರಾಜಧರ್ಮವನ್ನು ಪರಿಪಾಲನೆ ಮಾಡಬೇಕಾಗುತ್ತದೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತೇನೆಂದರೆ,

ಶ್ರೀ ಎಸ್.ಎಲ್.ಧರ್ಮೇಗೌಡರ ಹೆಸರಿನಲ್ಲಿ ಧರ್ಮ ಅಡಗಿರುವುದರಿಂದ ಅವರು ಕೂಡ ಈ ಸದನದಲ್ಲಿ ಧರ್ಮರಾಯನಂತೆ ಧರ್ಮವನ್ನು ಪರಿಪಾಲನೆ ಮಾಡಿಕೊಂಡು ವಸ್ತು ನಿಷ್ಠವಾಗಿ ಈ ಸದನವನ್ನು ಅತ್ಯಂತ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೆ, ಈಗ ಇಲ್ಲಿ ಅರ್ಜುನನ್ನು ನಿಯಂತ್ರಣ ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ಜಯಮಾಲ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಅರ್ಜುನನ ಮಾತನ್ನು ಧರ್ಮರಾಯ ಕೇಳುತ್ತಿರಲಿಲ್ಲ. ಆದರೆ, ಧರ್ಮರಾಯನ ಮಾತನ್ನು ಅರ್ಜುನ ಕೇಳುತ್ತಿದ್ದರು. ಇವತ್ತಿನಿಂದ ಧರ್ಮರಾಯನ ಸ್ಥಾನದಲ್ಲಿ ಕುಳಿತಿರುವವರ ಮಾತನ್ನು ಅರ್ಜುನ ಕೇಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಿನ್ನೆಯ ದಿವಸ ಸದನದ ಕಾರ್ಯಕಲಾಪದಲ್ಲಿ ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿದ್ದಂತಹ ಸಂದರ್ಭದಲ್ಲಿ ಅವರು ಹೇಳಿದ ಒಂದೆರಡು ಮಾತುಗಳು ನನಗೆ ಅತ್ಯಂತ ಸಂತೋಷವನ್ನು ಉಂಟು ಮಾಡಿದವು. ಈ ಸಮಾಜದಲ್ಲಿ ಬರ ನಿರ್ವಹಣೆಗಾಗಿ ಹೊಸ ತಂತ್ರಜ್ಞಾನವನ್ನು ಬಳಸುವುದಕ್ಕೆ, ದೇಶದಲ್ಲಿ ತೆಗೆದುಕೊಳ್ಳಬೇಕಾಗಿರುವ ಕ್ರಮದ ಬಗ್ಗೆ ಅವರು ಬೆಳಕು ಚೆಲ್ಲಿರುವಂಥದ್ದು ಮತ್ತು ಹೊಸ ತಂತ್ರಜ್ಞಾನಗಳು ಬಂದಾಗ ಅವುಗಳನ್ನು ನಾವು ಹೇಗೆ ಬಳಸಿಕೊಳ್ಳಬೇಕು ಎಂಬುದರ ಜೊತೆಗೆ ಅದರ ಬಗ್ಗೆ ಮುನ್ಸೂಚನೆಯನ್ನು ತೆಗೆದುಕೊಳ್ಳಬೇಕಾಗಿರುವುದಕ್ಕೆ ನಮ್ಮ ಸರ್ಕಾರಗಳು ಗಮನ ಹರಿಸಬೇಕಾಗುತ್ತದೆ. ಸಮಾಜದಲ್ಲಿ ಸಾಮಾಜಿಕವಾಗಿ ರೈತರು ಮತ್ತು ಸಾರ್ವಜನಿಕರು ಈ ಬರ ನಿರ್ವಹಣೆಯಲ್ಲಿ ಅದರ ಮುನ್ಸೂಚನೆಯನ್ನು ಮೊದಲು ಹೇಗೆ ಪಡೆದುಕೊಳ್ಳುತ್ತಿದ್ದರು ಅದನ್ನು ಈಗಲೂ ಅವರೆಲ್ಲರೂ ಕೂಡ ಎಚ್ಚರಿಕೆ ವಹಿಸಬೇಕು ಎನ್ನುವುದರ ಬಗ್ಗೆ ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಅವರ ಮಾತನ್ನು ಇನ್ನಷ್ಟು ಕೇಳಬೇಕೆಂದು ಅನಿಸುತ್ತಿತ್ತು. ಅಂದರೆ, ಅಪಾರವಾದ ಜ್ಞಾನ ಮತ್ತು concern ಅವರಿಗಿದೆ ಎನ್ನುವಂಥದ್ದು ನಮಗೆ ಸ್ಪಷ್ಟವಾಗುತ್ತಿತ್ತು. ಅವರು ಅದನ್ನು ಗ್ರಾಮ್ಯ ಭಾಷೆಯಲ್ಲಿ ಬಹಳ ಚೆನ್ನಾಗಿ ಹೇಳಿದರು. ನನಗೆ ಒಂದು ಭರವಸೆ ಏನೆಂದರೆ, ಈ ಸದನಕ್ಕೆ ಹಲವಾರು ವಿಷಯಗಳ ಬಗ್ಗೆ ನಮಗೆ ಮಾಹಿತಿಗಳು ಸಿಗುವುದರ ಜೊತೆಯಲ್ಲಿ ಅವರ ಪಾಲ್ಗೊಳ್ಳುವಿಕೆ ಮತ್ತು ಅದರ ಅನುಷ್ಠಾನದಲ್ಲಿ ಅವರು ಖಂಡಿತವಾಗಿ ಕುಳಿತುಕೊಂಡು, ಧರ್ಮವನ್ನು ಪಾಲನೆ ಮಾಡುತ್ತಾರೆ ಎನ್ನುವ ಬಗ್ಗೆ ನನಗೆ ಒಂದು ಆಶಾಭಾವನೆ ಮೂಡಿದೆ.

ಮಾನ್ಯ ಸಭಾಪತಿಯವರೆ, ಈ ಸಂದರ್ಭದಲ್ಲಿ ನಾನು ಅವರಿಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ಈ ಸದನವನ್ನು ಮುನ್ನಡೆಸಿಕೊಂಡು ಕಾರ್ಯನಿರ್ವಹಿಸಿಕೊಂಡು ಹೋಗುವುದಕ್ಕೆ ನಾವೆಲ್ಲರೂ ಕೂಡ ಅವರಿಗೆ ಎಲ್ಲಾ ರೀತಿಯಲ್ಲೂ ಕೂಡ ಸಹಾಯ ಹಸ್ತವನ್ನು ನೀಡುತ್ತೇವೆ. ಅವರ ಸಹಕಾರದ ಪಾಲ್ಗೊಳ್ಳುವಿಕೆಗೆ ಈ ಇಡೀ ಸದನದ ಪರವಾಗಿ ಅವರು ಆಯ್ಕೆಯಾಗಿರುವುದು ನಮ್ಮೆಲ್ಲರಿಗೂ ಸಂತೋಷವಾಗಿದೆ. ನಿಮ್ಮೆಲ್ಲಾ ಕನಸುಗಳು ನನಸಾಗಲಿ. ಈ ಸದನದ ಘನತೆಯನ್ನು ಇನ್ನಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗುವಂತಹ ಕೆಲಸಗಳು ಅವರಿಂದ ಆಗಲ್ಲಿ ಎಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

(552)19-12-2018(11-30)ಎಲ್‌ಎಲ್-ಕೆಎಸ್

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾನಾಯಕರು, ಈಗ ಧರ್ಮರಾಯ ಮತ್ತು ಅರ್ಜುನರ ಉದಾಹರಣೆ ಕೊಟ್ಟಿದ್ದಾರೆ. ಆದರೆ, ಮಾನ್ಯ ಸಭಾಪತಿಯವರಾದ ತಾವು, ಸಭಾ ನಾಯಕರು, ವಿರೋಧ ಪಕ್ಷದ ನಾಯಕರು

ಮತ್ತು ಪಕ್ಕದ ಜಿಲ್ಲೆಯ ಶ್ರೀ ಎಸ್.ಎಲ್. ಧರ್ಮೇಗೌಡರು ಈ ನಾಲ್ಕು ಜನರ ಮಾತುಗಳನ್ನು ನಾವು ಕೇಳಬೇಕಾಗುತ್ತದೆ.

**ಡಾ: ಜಯಮಾಲ:-** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಎಂದು ಹೇಳಿದಾಗ, ನಾನು ಒಂದು ಮಾತನ್ನು ಹೇಳಬೇಕು. ನಾನು ಹುಟ್ಟಿದ್ದು ಮಂಗಳೂರಿನ ಪಣಂಬೂರು, ಆದರೆ, ಬೆಳೆದಿದ್ದು, ಬಾಲ್ಯ ಕಟ್ಟಿಕೊಟ್ಟಿರುವುದು ಚಿಕ್ಕಮಗಳೂರು.

**ಶ್ರೀ ಎಸ್. ನಾಗರಾಜ್(ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ಆದರೆ ಈಗ ಇರುವುದು ಬೆಂಗಳೂರಿನಲ್ಲಿ.

**ಡಾ: ಜಯಮಾಲ:-** ಮಾನ್ಯ ಸಭಾಪತಿಯವರೇ, ಹೌದು. ನನಗೆ ಅನ್ನ ಕೊಟ್ಟಿರುವುದು ಬೆಂಗಳೂರು. ನಾನು ಜನರ ಋಣದಲ್ಲಿದ್ದೇವೆ. ನಾನು ಯಾವುದನ್ನು ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ನಾವು ಕಲಾವಿದರು. ನಾವು ಋಣದಲ್ಲಿರುವಂತಹವರು. ನಾವು ಆ ರೀತಿಯ ಜನರ ಋಣದಿಂದ ಬಂದಿದ್ದೇವೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾನಾಯಕರಿಗೆ ಬಾಲ್ಯದ ನೆನಪುಗಳು ಮರೆತು ಹೋಗಿವೆ.

**ಡಾ: ಜಯಮಾಲ:-** ಮಾನ್ಯ ಸಭಾಪತಿಯವರೇ, ಮನುಷ್ಯನಿಗೆ ಬಾಲ್ಯದ ನೆನಪುಗಳನ್ನು ಮರೆಯುವುದಕ್ಕೆ ಸಾಧ್ಯವೇ ಇಲ್ಲ. ಮನುಷ್ಯ ಎಲ್ಲವನ್ನೂ ಮರೆಯುತ್ತಾನೆ. ಆದರೆ, ಬಾಲ್ಯದ ನೆನಪು ಮನುಷ್ಯನ ಆಹಾರ ಪದ್ಧತಿಯಲ್ಲಿ ಬಂದಿರುತ್ತದೆ. ಉದಾಹರಣೆಗೆ, ಆಹಾರ ಪದ್ಧತಿ ಬಾಲ್ಯದಲ್ಲಿ ನಾವು ಯಾವ ಆಹಾರವನ್ನು ತಿಂದಿರುತ್ತೇವೆ, ಕೊನೆಯವರೆಗೂ ಆ ಆಹಾರವೇ ಇಷ್ಟವಾಗುವುದು. ಹಾಗಾಗಿ, ಇವೆಲ್ಲವನ್ನೂ ಮರೆಯುವುದಕ್ಕೆ ಸಾಧ್ಯವಿಲ್ಲ. ಸಮಗ್ರ ಕರ್ನಾಟಕ ನಮ್ಮದು ಎನ್ನುವ ನಂಬಿಕೆ ನಮಗಿದೆ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಧರ್ಮರಾಯರ ಮಾತು ಅರ್ಜುನರವರು ಕೇಳಿಯೇ ಕೇಳುತ್ತಾರೆ. ಆದರೆ, ಧರ್ಮರಾಯರ ಮಾತು ದುರ್ಯೋಧನ ಕೇಳಿದರೆ ಅನುಕೂಲವಾಗುತ್ತದೆ. ಹಾಗಾಗಿ, ಆ ದುರ್ಯೋಧನ ಯಾರು ಎಂಬುದನ್ನು ನಾವು ಕಂಡುಹಿಡಿಯಬೇಕು.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಲಹರ್ ಸಿಂಗ್‌ರವರು ಮೊದಲನೆ ಬ್ಯಾಟಿಂಗ್ ಶುರು ಮಾಡಿದರು. ಡಾ: ಜಯಮಾಲರವರ ನೆನಪು ಬರುವುದು ಗಿರಿಕನ್ಯೆ ಎಂದರೆ ಕರಾವಳಿಯ ಕನ್ಯೆ ಅಂತಲೇ. ಹುಟ್ಟೂರು ಕರಾವಳಿ ಮತ್ತು ಮಲೆನಾಡು ಅವರ ಗಂಡನ ಮನೆ ಸಾಗರ. ಹಾಗೇ ಅನೇಕ ಅನುಭವಗಳಿರುವಂತಹ ಸಂದರ್ಭ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮಗೆ ಅತ್ಯಂತ ಸಮಾಧಾನ ಮತ್ತು ಸಂತೋಷವೆಂದು ಹೇಳಿದರೆ ಶ್ರೀ ಎಸ್.ಎಲ್. ಧರ್ಮೇಗೌಡರವರು ಉಪ ಸಭಾಪತಿಯಾಗಿ ಅವಿರೋಧವಾಗಿ ಆಯ್ಕೆಯಾಗಿರುವುದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಳುವವರಿಗೆ, ಜಂಟಿ

ಪಕ್ಷಗಳಿಗೆ ಪೂರ್ಣ ಬಹುಮತ ಇದ್ದರೂ ಕೂಡ ಈ ಅವಿರೋಧ ಆಯ್ಕೆಯಲ್ಲಿ ಪ್ರತಿಪಕ್ಷದ ಸಹಕಾರವಿದೆ ಎನ್ನುವುದನ್ನು ಅತ್ಯಂತ ಪ್ರೀತಿಯಿಂದ ನೆನಪು ಮಾಡುತ್ತೇನೆ. ಶ್ರೀ ಎಸ್.ಎಲ್. ಧರ್ಮೇಗೌಡರವರ ರಾಜಕೀಯ ಇತಿಹಾಸ ಬಹುಶಃ ನಾನು ಹಾಗೆ ಸುಮ್ಮನೆ ನೋಡಿದಾಗ 30 ಚುನಾವಣೆಗಿಂತಲೂ ಹೆಚ್ಚು ಚುನಾವಣೆಗಳಲ್ಲಿ ಅವರು ಸ್ಪರ್ಧೆ ಮಾಡಿದ್ದಾರೆಂದು ತಿಳಿಯಿತು. ಬೇರೆ ಬೇರೆ ಶಾಸಕರಾಗಿ, ಜಿಲ್ಲಾ ಪಂಚಾಯತಿ ಸದಸ್ಯರಾಗಿ, ತಾಲ್ಲೂಕು ಪಂಚಾಯತಿ ಸದಸ್ಯರಾಗಿ, ಗ್ರಾಮ ಪಂಚಾಯತಿಯಲ್ಲಿ ಸ್ಪರ್ಧೆ ಮಾಡಿ, ಬಹುಶಃ ಎಷ್ಟು ಸಹಕಾರ ಸಂಘಗಳ ಚುನಾವಣಾ ಪ್ರಕ್ರಿಯೆಗಳಿತ್ತು ಅಷ್ಟನ್ನೂ ಸ್ಪರ್ಧೆ ಮಾಡಿದಂತಹ ವ್ಯವಸ್ಥೆಗಳಿದ್ದರೆ 30 ರಿಂದ 36 ಚುನಾವಣೆಗಳು ಎಂದು ಹೇಳುತ್ತಾರೆ. ಆ ಬಗ್ಗೆ ಅವರ ಬಳಿ ನಿಖರವಾದ ಮಾಹಿತಿ ಇರಬಹುದು. ಆಶ್ಚರ್ಯವೇನೆಂದರೆ, ಈ ಎಲ್ಲಾ ಚುನಾವಣೆಗಳಲ್ಲಿ ಅವರು ಗೆದ್ದಿದ್ದಾರೆ. ಇದು ಬಹಳ ಸುಲಭವಾದ ವಿಚಾರವಲ್ಲ. ಅಂತಹ ಒಂದು ಸದಸ್ಯರು ಮೇಲ್ಮನೆಯ ಉಪ ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ.

ನಾನು ತಮ್ಮ ಮೂಲಕ ಉಪ ಸಭಾಪತಿಯವರಿಗೆ ನೆನಪು ಮಾಡುವುದೇನೆಂದರೆ, ಪಾರ್ಲಿಮೆಂಟ್‌ನಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಹೇಗೆ ಇರುತ್ತದೆಯೋ, ರಾಜ್ಯಸಭೆಗೆ ಯಾವ ರೀತಿ ಈ ದೇಶದಲ್ಲಿ ಘನತೆ ಗೌರವಗಳಿದೆಯೋ ಅದೇ ರೀತಿ ನಮ್ಮ ರಾಜ್ಯದಲ್ಲಿ ಮೇಲ್ಮನೆಗೆ ಒಂದು ವಿಶಿಷ್ಟವಾದ ಗೌರವವಿದೆ. "ಚಿಂತಕರ ಛಾವಡಿ" ಎಂದು ಅನೇಕರು ಇದನ್ನು ಕರೆದಿದ್ದಾರೆ. ಇತಿಹಾಸದ ಪುಟಗಳನ್ನು ಮತ್ತು ದಾಖಲೆಗಳನ್ನು ನಾವು ನೋಡಿದರೆ, ಅತ್ಯಂತ ಸರ್ವ ಶ್ರೇಷ್ಠರಾಗಿರುವಂತಹ ಸಂಸದೀಯ ಪಟುಗಳು ಈ ಸದನದಲ್ಲಿ ಕೆಲಸ ಮಾಡಿದ ಅನೇಕ ದಾಖಲೆಗಳನ್ನು ನಾವು ನೋಡುವುದಕ್ಕೆ ಅವಕಾಶವಾಗಿದೆ. ಅಂತಹ ಒಂದು ಚಿಂತಕರ ಛಾವಡಿಯಾದ ಮೇಲ್ಮನೆಯಲ್ಲಿ ಉಪ ಸಭಾಪತಿಯಾಗಿ ಆಯ್ಕೆಯಾಗಿರುವುದು ಬಹು ದೊಡ್ಡ ಗೌರವ ಎಂದು ನಾನು ಅಂದುಕೊಂಡಿದ್ದೇನೆ. ಸಾಮಾನ್ಯವಾಗಿ ಕೆಳಮನೆಯಲ್ಲಿ pass ಆಗಿ ಬಂದಂತಹ ವಿಧೇಯಕಗಳು, ಮೇಲ್ಮನೆಯಲ್ಲಿ ಬಹು ದೊಡ್ಡ ಪರೀಕ್ಷೆಗೆ ಒಡ್ಡಲ್ಪಡುತ್ತದೆಂದು ಅನೇಕ ಹಿಂದಿನ ಮಂತ್ರಿಗಳು ಭಾವಿಸಿದ್ದರು. ಕೆಳಮನೆಯಲ್ಲಿ pass ಆಗುವ ಒಂದು ವಿಧೇಯಕ ಮೇಲ್ಮನೆಗೆ ಬಂದಾಗ ಇಲ್ಲಿ ವಿಮರ್ಶೆಗೆ ತುತ್ತಾಗಿ ಮಂತ್ರಿಯೊಬ್ಬ ಆ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಟ್ಟು, ವಿಧೇಯಕವನ್ನು pass ಮಾಡಿಕೊಂಡನೆಂದರೆ, ಬಹು ದೊಡ್ಡ ಪರೀಕ್ಷೆಯಲ್ಲಿ ಗೆದ್ದಂತಹ ಅನುಭವಗಳು ಮಂತ್ರಿಗಳಿಗೆ ಆಗುತ್ತಿತ್ತು ಎನ್ನುವಂತಹ ಭಾವನೆಗಳು ಮೊದಲಿಂದಲೂ ಇತ್ತು. ಅಲ್ಲಿಯೋ ಇಲ್ಲಿಯೋ ಸ್ವಲ್ಪ ಹೆಚ್ಚು ಕಡಿಮೆ ನಮ್ಮಿಂದ ಆಗಿರಬಹುದು. ಆದರೆ, ಚಿಂತಕರ ಛಾವಡಿ ಎನ್ನುವಂತಹ ಭಾವನೆಗಳು ಇವತ್ತಿಗೂ ಸಹ ಇರುವುದರಿಂದ ಬಹು ದೊಡ್ಡ ಗೌರವವಾದ ಸ್ಥಾನಕ್ಕೆ ಶ್ರೀ ಎಸ್.ಎಲ್. ಧರ್ಮೇಗೌಡರವರು ಏರಿದ್ದಾರೆ ಎನ್ನುವುದನ್ನು ನಾನು ಅತ್ಯಂತ ಪ್ರೀತಿಯಿಂದ ನೆನಪು ಮಾಡಿಕೊಳ್ಳುತ್ತೇನೆ.

ಯಾವುದೇ ಸದನ ನಡೆಯುವುದು ಅಥವಾ ಸರ್ಕಾರ ನಡೆಯುವುದು ಶಾಸನದ ಆಧಾರದ ಮೇಲೆಯೇ ಹೊರತು ವ್ಯಕ್ತಿಗಳ ಆಧಾರದ ಮೇಲೆ ಅಲ್ಲ. ಈ ಶಾಸಕಾಂಗದ ವ್ಯವಸ್ಥೆಗಳ ನಡುವೆ ಜನಾಂಗವನ್ನು ಮರೆತು ಕೆಲಸ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ಸಾಧ್ಯವಿಲ್ಲ. ಅನೇಕ ಸಾರಿ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಸದಸ್ಯರಾದ ನಾವು ಮಾಡುವ ವ್ಯಾಪಕವಾದಂತಹ ಟೀಕೆಗಳನ್ನು ಸರ್ಕಾರ ಒಪ್ಪದೇ ಇರುವಂತಹ ಅನೇಕ ವಿಚಾರಗಳನ್ನು ಚರ್ಚೆ ಮಾಡುತ್ತೇವೆ. ಸರ್ಕಾರಕ್ಕೆ ಸ್ವಾಭಾವಿಕವಾಗಿ ಇರಿಸು ಮುರಿಸು ಆಗಬೇಕಾದಂತಹ ಹೊಣೆಯನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷದವರು ಮಾಡಬೇಕು ಎನ್ನುವುದು ಸಂವಿಧಾನದ ಆಶಯ. ಆ ಮೂಲಕ ಆಡಳಿತ ಚಕ್ರಗಳು ಸರಿಯಾದ ದಿಕ್ಕಿನಲ್ಲಿ ಹೋಗುವುದಕ್ಕೆ ವಿಪಕ್ಷದ ಜವಾಬ್ದಾರಿಯನ್ನು ನೆನಪು ಮಾಡುವುದಕ್ಕೋಸ್ಕರ ಅನೇಕ ಸಾರಿ ನಾವು ಈ ಕಡೆಯಿಂದ ಟೀಕೆ-ಟಿಪ್ಪಣಿಗಳನ್ನು ಮಾಡಿದಂತಹ ಉದಾಹರಣೆಗಳಿವೆ. ಇನ್ನೂ ಮಾಡಬೇಕಾಂದಹ ಅನಿವಾರ್ಯತೆ ಇದೆ. ಅದು ಇಲ್ಲವಾದರೆ ಸರ್ಕಾರ ಸ್ವೇಚ್ಛಾಚಾರವಾಗುತ್ತದೆ. ಅದು ಯಾವ ಸರ್ಕಾರ ಎನ್ನುವುದು ಅಲ್ಲ. ಆಡಳಿತ ನಡೆಸುವ ಸರ್ಕಾರ. ಅಂತಹ ಸಂದರ್ಭದಲ್ಲಿ ಉಪ ಸಭಾಪತಿಯ ಸ್ಥಾನದಲ್ಲಿರುವವರು ವಿರೋಧ ಪಕ್ಷದ ಬಗ್ಗೆ ವಿಶೇಷವಾದಂತಹ ಗಮನವನ್ನು ಕೊಡಬೇಕು. ಅದರ ಅರ್ಥ ನಾವು ಹೇಳಿದ್ದನ್ನೆಲ್ಲಾ ಒಪ್ಪಬೇಕು ಎಂಬ ಭ್ರಮೆಯಲ್ಲಿ ನಾವು ಇಲ್ಲ. ಆದರೆ, ನಮ್ಮ ಟೀಕೆ-ಟಿಪ್ಪಣಿಗಳು ಪ್ರಜಾತಂತ್ರ ವ್ಯವಸ್ಥೆಯ ಒಂದು ಭಾಗವಾಗಿರುವುದರಿಂದ ತಾವು ಅದನ್ನು ಗಮನಿಸಬೇಕು ಮತ್ತು ವಿಪಕ್ಷಗಳಿಗೆ ಹೆಚ್ಚು ಅವಕಾಶ ಮತ್ತು ಒತ್ತನ್ನು ಕೊಡಬೇಕೆಂದು ಅತ್ಯಂತ ಪ್ರೀತಿಯಿಂದ ನೆನಪು ಮಾಡುತ್ತೇನೆ.

ನಾನು ಉಪ ಸಭಾಪತಿಯವರಿಂದ ನಿರೀಕ್ಷೆ ಮಾಡುವುದೇನೆಂದರೆ, ರಾಜಧರ್ಮದ ರಾಜಕಾರಣವನ್ನು. ಶ್ರೀ ಎಸ್.ಎಲ್. ಧರ್ಮೇಗೌಡರವರು ಎಂದು ಹೇಳಿದಾಗ, ಧರ್ಮರಾಯರು ಎಂಬ ಉಲ್ಲೇಖಗಳು ಅನೇಕರಿಂದ ಬಂತು. ಧರ್ಮರಾಯ ಯಾವಾಗಲೂ ರಾಜಧರ್ಮದ ರಾಜಕಾರಣವನ್ನೇ ಮಾಡಿಕೊಂಡಿದ್ದರು. ಆ ಕಾರಣಕೋಸ್ಕರ ಆತನನ್ನು ಧರ್ಮರಾಯ ಎಂದು ಈ ವ್ಯವಸ್ಥೆಗಳು, ಇತಿಹಾಸ ಕರೆಯಿತು ಎನ್ನುವುದು ರೂಢಿ. ಹಾಗಾಗಿ, ಶ್ರೀ ಎಸ್.ಎಲ್. ಧರ್ಮೇಗೌಡರವರು ಈ ಹಿಂದೆ ಯಾವ ಪಾರ್ಟಿ, ಪಕ್ಷದಲ್ಲಿದ್ದರು, ಉಪ ಸಭಾಪತಿ ಹುದ್ದೆ ಪಾರ್ಟಿಯಿಂದ ವ್ಯತಿರಿಕ್ತವಾಗಿರುವುದಕ್ಕೆ ಸಾಧ್ಯವಿಲ್ಲ. ಸಭಾಪತಿಯವರ ಹುದ್ದೆಗೆ ಯಾವುದೇ ರಾಜಕಾರಣದ ಲೇಪಗಳು ಅಂಟಬಾರದೆಂದು ಹೇಳಿ, ಉಪ ಸಭಾಪತಿಯವರಿಗೆ ಸಕ್ರಿಯ ರಾಜಕಾರಣಕ್ಕೆ ನಿಷೇಧವಿಲ್ಲ. ಆದಾಗ್ಯೂ ಕೂಡ, ಈ ವ್ಯವಸ್ಥೆಯಲ್ಲಿ ರಾಜಧರ್ಮದ ರಾಜಕಾರಣವನ್ನು ಎತ್ತಿ ಹಿಡಿಯುವಂತಹ ಕೆಲಸಗಳು ತಮ್ಮಿಂದ ಆಗಬೇಕು ಎನ್ನುವುದು ನಮ್ಮ ಆಶಯ.

ಬಹುಶಃ ನಾವು ಒಂದೆರಡು ದೇಶಗಳನ್ನು ನೋಡುವುದು ಸುಲಭವಲ್ಲ. ಯಾವುದೋ ಒಂದು ಪುಸ್ತಕದಲ್ಲಿ/ಪತ್ರಿಕೆಯಲ್ಲಿ ಶ್ರೀ ಎಸ್.ಎಲ್. ಧರ್ಮೇಗೌಡರವರು 40 ಕ್ಕೂ ಹೆಚ್ಚು ದೇಶಗಳನ್ನು ಸುತ್ತಿದ್ದಾರೆಂದು ನೋಡಿದ್ದೇನೆ. ಇದು ಬಹಳ ಸುಲಭವಾದ ಕೆಲಸವಲ್ಲ. ಆ ಸಾಧನೆ ಮಾಡಿರುವಂತಹ ತಮ್ಮ ಅನುಭವಗಳನ್ನು ಈ ಚಿಂತಕರ ಛಾವಡಿಯಲ್ಲಿ ಹೆಚ್ಚು ಅರ್ಥವತ್ತಾಗಿ ಬಳಸಿಕೊಂಡು, ಈ ವ್ಯವಸ್ಥೆಗಳು ಮತ್ತು ರಾಜ್ಯದ ಸುಭಿಕ್ಷತೆಗೆ ತಮ್ಮ ಅನುಭವಗಳು ಅವಕಾಶವಾಗಲೀ ಎನ್ನುವಂತಹ ಮಾತನ್ನು ಹೇಳಿ, ವಿಪಕ್ಷವಾಗಿ ತಮಗೆ ಪೂರ್ಣ ಸಹಕಾರವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಡುತ್ತೇವೆ ಮತ್ತು ವಿಪಕ್ಷದ ಜವಾಬ್ದಾರಿ ಬಗ್ಗೆ ತಾವು ಹೆಚ್ಚು ಗಮನ ಕೊಡಬೇಕೆಂದು ವಿನಂತಿ ಮಾಡಿ, ಈ ಆಯ್ಕೆ ಪ್ರಕ್ರಿಯೆಗಳನ್ನು ಸ್ವಾಗತ ಮಾಡಿ ನಮ್ಮ ಇಡೀ ವಿರೋಧ ಪಕ್ಷದ ಪರವಾಗಿ ನಾನು ಉಪ ಸಭಾಪತಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಕೆ.ಜೆ. ಜಾರ್ಜ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ. ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ಎಲ್. ಧರ್ಮೇಗೌಡರವರು ಇವೊತ್ತಿನ ದಿವಸ ಉಪ ಸಭಾಪತಿಯವರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ತಾವು ಸಹ ಅವಿರೋಧವಾಗಿ ಆಯ್ಕೆಯಾಗಿದ್ದೀರಿ. ಇದೊಂದು ಒಳ್ಳೆಯ ಸಂದರ್ಭವಾಗಿರುವುದರಿಂದ, ಆಡಳಿತ ಪಕ್ಷ, ವಿರೋಧ ಪಕ್ಷ ಮತ್ತು ಎಲ್ಲಾ ಸಮಿಶ್ರ ಸರ್ಕಾರದವರನ್ನು ನಿಜವಾಗಿಯೋ ಪ್ರಶಂಸೆ ಮಾಡಬೇಕು. ನಾನು ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ಸಚಿವನಾಗಿದ್ದಾಗ, ಅಲ್ಲಿಗೆ ಹೋದ ನಂತರ ಶ್ರೀ ಎಸ್.ಎಲ್. ಧರ್ಮೇಗೌಡರವರೊಂದಿಗೆ ನನಗೆ ಹೆಚ್ಚಿನ ಒಡನಾಡ ಇತ್ತು. ಅವರು ವಿಧಾನ ಪರಿಷತ್ತಿನ ಒಬ್ಬ ಸದಸ್ಯರಾಗಿ ಸಾರ್ವಜನಿಕ ಜೀವನದಲ್ಲಿ ಸಾಕಷ್ಟು ಆಸಕ್ತಿಯನ್ನು ವಹಿಸುತ್ತಾರೆ. ಯಾವುದೇ ಸರ್ಕಾರಿ ಸಮಾರಂಭವಿರಲಿ, ಅದರಲ್ಲಿ ಅವರು ಪಾಲ್ಗೊಳ್ಳುತ್ತಾರೆ. ಮೊದಲು ಅವರು ಬೀರೂರು ಕ್ಷೇತ್ರದಿಂದ ವಿಧಾನಸಭೆಯ ಸದಸ್ಯರಾಗಿದ್ದರು. ಅಲ್ಲಿ ಸಮಾರಂಭವಾದಾಗ ಆ ಕ್ಷೇತ್ರದ ಜನ ಮತದಾರರು ಎಷ್ಟು ಗೌರವದಿಂದ, ಆತ್ಮೀಯತೆಯಿಂದ ನೋಡುತ್ತಾರೆಂದು ನನಗೆ ಗೊತ್ತಾಯಿತು. ಬಹುಶಃ, ಚಿಕ್ಕಮಗಳೂರು ಜಿಲ್ಲೆಗೆ ಯಾರೂ ಮಂತ್ರಿಗಳಿಲ್ಲ. ಈಗ ಚಿಕ್ಕಮಗಳೂರು ಜಿಲ್ಲೆಯಿಂದ ಉಪ ಸಭಾಪತಿಯಾಗಿದ್ದಾರೆ. ಅವರ ನೆರವು ಆ ಜಿಲ್ಲೆಯ ಜನರಿಗೆ ಆಗಲಿ. ಶ್ರೀ ಎಸ್.ಎಲ್. ಭೋಜೇಗೌಡರವರು ಇವರಿಬ್ಬರು ಎರಡು poles ಇದ್ದ ಹಾಗೆ. ಇವರು ಭಾರೀ ಸೌಮ್ಯ ಸ್ವಭಾವದವರು. ಆದರೆ, ನನ್ನ ಅನುಭವದಲ್ಲಿ ಕೆಲಸ ಆಗಬೇಕಾದರೆ, ಶ್ರೀ ಎಸ್.ಎಲ್. ಭೋಜೇಗೌಡರಂತಹವರು ಇರಬೇಕಾಗುತ್ತದೆ. ಸಾರ್ವಜನಿಕ ವಿಚಾರದಲ್ಲಿ ಎಷ್ಟು ಒತ್ತಡ ಹಾಕುತ್ತಾರೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಚಿವರಿಗೂ ಶ್ರೀ ಎಸ್.ಎಲ್. ಭೋಜೇಗೌಡರ guidance ಇರಬಹುದು ಎಂದು ನಮಗೆ ಅನ್ನಿಸುತ್ತಿದೆ?

**ಶ್ರೀ ಕೆ.ಜೆ. ಜಾರ್ಜ್:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಶ್ರೀ ಎಸ್.ಎಲ್. ಭೋಜೇಗೌಡರಂತಹವರು ಸಹ ಇರಬೇಕಾಗುತ್ತದೆ. ಬಿಜೆಪಿಯ ಶ್ರೀ ಎಂ.ಕೆ. ಪ್ರಾಣೇಶ್‌ರವರು ಮತ್ತು ಬೇರೆ ಬೇರೆ ಶಾಸಕರು ಇದ್ದಾರೆ. ನಾನು ಗಮನಿಸುವುದೇನೆಂದರೆ, ಆ ಮಲೆನಾಡಿನ ಗಾಳಿ ಇರಬಹುದು ಪ್ರತಿಯೊಬ್ಬ ಸದಸ್ಯರು ಯಾವುದೇ ಪಕ್ಷದವರಾಗಿದ್ದರು ಸಹ ಅಭಿವೃದ್ಧಿ ವಿಚಾರದಲ್ಲಿ ಜೊತೆಯಲ್ಲಿದ್ದಾರೆ. ತಾವು ಸಹ 4 ಬಾರಿ ವಿಧಾನಸಭೆಯ ಸದಸ್ಯರಾಗಿ 3 ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಹೆಚ್ಚು ಅನುಭವ ಪಡೆದು ಸಭಾಪತಿಯಾಗಿ ಬಂದಿದ್ದೀರಿ. ಅದೇ ರೀತಿ ಶ್ರೀ ಎಸ್.ಎಲ್. ಧರ್ಮೇಗೌಡರವರು ವಿಧಾನಸಭೆಯ ಸದಸ್ಯರಾಗಿ ನಂತರ ಉಪ ಸಭಾಪತಿಯಾಗಿ ಇಲ್ಲಿಗೆ ಬಂದಿದ್ದಾರೆ. ಈ ಇಬ್ಬರು ಸದಸ್ಯರಿಗಿಂತಲೂ ಹೆಚ್ಚಾಗಿ ಅವರ ತಂದೆಯವರಾದ ಶ್ರೀ

ಲಕ್ಷ್ಮಯ್ಯನವರ ವಿಚಾರದಲ್ಲಿ ಜನ ಸಾಕಷ್ಟು ಗೌರವ ಕೊಟ್ಟು ಮಾತನಾಡುತ್ತಿದ್ದಾರೆ. ಅವರು ಒಳ್ಳೆಯ ಮನೆತನದಿಂದ ಬಂದಿದ್ದಾರೆ. ಆ ಎಲ್ಲಾ ಅನುಭವಗಳು, ಅವರ ಒಳ್ಳೆಯತನ ಆ ಜಿಲ್ಲೆಯ ಮತ್ತು ಕರ್ನಾಟಕ ರಾಜ್ಯದ ಒಳಿತಿಗಾಗಿ ಆಗಲಿ ಎಂಬುದಾಗಿ ಅವರಿಗೆ ಆಶಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಅಧಿವೇಶನದಲ್ಲಿ ವಿಶೇಷವಾಗಿ ಈ ಸದನದ ಗೌರವವನ್ನು ಹೆಚ್ಚಿಸುವ ಎರಡು ಪ್ರಕ್ರಿಯೆ ನಡೆದಿವೆ. ಮೊದಲನೆಯದಾಗಿ, ಸಭಾಪತಿಯವರ ಆಯ್ಕೆಯ ವಿಚಾರ. ಎರಡನೆಯದಾಗಿ, ಉಪ ಸಭಾಪತಿಯವರ ಆಯ್ಕೆಯ ವಿಚಾರ. ಎಲ್ಲಾ ಪಕ್ಷಗಳು ಒಮ್ಮತದಿಂದ ಅವಿರೋಧವಾಗಿ ಆಯ್ಕೆ ಮಾಡಿದಾಗ ಸದನದ ಗೌರವ ಜಾಸ್ತಿಯಾಗುತ್ತದೆ ಎನ್ನುವುದು ನಮ್ಮೆಲ್ಲರ ಭಾವನೆ. ಆದುದರಿಂದ, ವಿರೋಧ ಪಕ್ಷಗಳು ಸಹ ಇದರಲ್ಲಿ ಕೈ ಜೋಡಿಸಿವೆ. ಎಲ್ಲಾ ಸೇರಿ ಒಟ್ಟಾಗಿ ಈ ಸದನದ ಪರಂಪರೆ ಗೌರವವನ್ನು ಹೆಚ್ಚಿಸುವ ದೃಷ್ಟಿಯಿಂದ ತಮ್ಮನ್ನು ಸೇರಿದಂತೆ, ಶ್ರೀ ಎಸ್.ಎಲ್.ಧರ್ಮೇಗೌಡರವರನ್ನು ಸಹ ಇವೊತ್ತಿನ ದಿವಸ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿ ಇಡೀ ಸದನಕ್ಕೆ ನಾವು ಅಭಿನಂದನೆ ಸಲ್ಲಿಸುತ್ತಿದ್ದೇವೆ.

(553) 19–12–2018 (11.40) ವೈಎಲ್–ಜಿಆರ್

ಡಾ॥ ವೈ.ಎ.ನಾರಾಯಣಸ್ವಾಮಿ(ಮುಂದು):–

ವಿಶೇಷವಾಗಿ ಉಪ ಸಭಾಪತಿಯವರ ಸ್ಥಾನಕ್ಕೆ ಆಯ್ಕೆಯಾದಂಥ ಮಾನ್ಯ ಎಸ್.ಎಲ್.ಧರ್ಮೇಗೌಡರಿಗೆ ಶುಭಾಶಯವನ್ನು ಕೋರುತ್ತಾ, ಈ ಸದನದಲ್ಲಿ ಎರಡು ವಿಚಾರವನ್ನು ಗಮನಿಸಬೇಕಾಗಿದೆ. ಮೊದಲನೆಯದಾಗಿ, ಭಾರತ ದೇಶದಲ್ಲಿ ಮೇಲ್ಮನೆಯ ಸದಸ್ಯರುಗಳೈಕಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಅತ್ಯಂತ ಹಿರಿಯ ಸದಸ್ಯರು. ಎರಡನೆಯದಾಗಿ, ಬಹುಶಃ ನನಗೆ ಅನಿಸುತ್ತಿರುವ ಹಾಗೆ ಅಣ್ಣ–ತಮ್ಮಂದಿರುಗಳಾದ ಮಾನ್ಯ ಎಸ್.ಎಲ್.ಧರ್ಮೇಗೌಡರು ಮತ್ತು ಮಾನ್ಯ ಎಸ್.ಎಲ್.ಭೋಜೇಗೌಡರು ಇಬ್ಬರೂ ಮೊದಲನೆಯ ಸಲ ಒಂದೇ ಬಾರಿ ಆಯ್ಕೆಯಾಗಿ ಈ ಸದನಕ್ಕೆ ಆಗಮಿಸಿದ್ದಾರೆ ಎಂದು ಭಾವಿಸುತ್ತೇನೆ. ಇವತ್ತು ಈ ಸದನ ಎರಡೂ ವಿಶೇಷತೆಯು ಸಾಕ್ಷೀಭೂತವಾಗಿದೆ. ಸರಳ ಸಜ್ಜನರಾದ ಮಾನ್ಯ ಎಸ್.ಎಲ್.ಧರ್ಮೇಗೌಡರವರ ಆಯ್ಕೆಯಿಂದ ಉಪ ಸಭಾಪತಿ ಸ್ಥಾನದ ಗೌರವ ಜಾಸ್ತಿಯಾಗಿದೆ ಎಂದು ಭಾವಿಸುತ್ತಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಿದ ಹಾಗೆ ಮಾನ್ಯ ಎಸ್.ಎಲ್.ಧರ್ಮೇಗೌಡರು ಮಾನ್ಯ ಎಸ್.ಎಲ್.ಭೋಜೇಗೌಡರ ಬಗ್ಗೆ ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಒಂದು ಸಣ್ಣ ಘಟನೆ ಜ್ಞಾಪಕಕ್ಕೆ ಬರುತ್ತದೆ. ಮೈಸೂರು ಮಹಾರಾಜರು ಶ್ರೀ ಸರ್.ಎಂ.ವಿಶ್ವೇಶ್ವರಯ್ಯನವರನ್ನು ದಿವಾನರಾಗಿ ನೇಮಿಸಿದಾಗ ಅವರು ದಿವಾನ ಗಿರಿಯನ್ನು ಒಪ್ಪಿಕೊಳ್ಳುವುದಕ್ಕೆ ಮೊದಲು ಅವರ ಸಂಬಂಧಿಕರನ್ನು, ನೆಂಟರನ್ನು, ಸ್ನೇಹಿತರನ್ನು ಎಲ್ಲರನ್ನೂ ಸಂಜೆ ಊಟಕ್ಕೆ ಬರಬೇಕೆಂದು ಆಹ್ವಾನಿಸುತ್ತಾರೆ. ಔತಣ ಕೂಟ ಮುಗಿದ ನಂತರ ನನ್ನನ್ನು ಮೈಸೂರು

ಮಹಾರಾಜರು ದಿವಾನರಾಗಿ ಬರಬೇಕೆಂದು ನೇಮಿಸಿದ್ದಾರೆ, ಆ ದಿವಾನಗಿರಿಯನ್ನು ಒಪ್ಪಿಕೊಳ್ಳುವುದಕ್ಕೆ ಮೊದಲು ತಾವುಗಳೆಲ್ಲರೂ ಸೇರಿ ನನಗೆ ಒಂದು ಮಾತನ್ನು ಕೊಡಬೇಕೆಂದು ಹೇಳುತ್ತಾ, ಊಟದ ನಂತರ ಒಂದು ವಿಚಾರವನ್ನು ಪ್ರಸ್ತಾಪವನ್ನು ಮಾಡುತ್ತಾರೆ. ಇನ್ನು ಮುಂದೆ ನನ್ನ ಮೇಲೆ ಪ್ರಭಾವ ಬೀರುವಂಥ ಯಾವುದೇ ಸ್ವಂತ ಕೆಲಸ ಕಾರ್ಯಗಳಿಗೆ ನೀವುಗಳು ಯಾರು ನನ್ನ ಹತ್ತಿರ ಬರುವುದಿಲ್ಲ ಎಂದು ಮಾತು ನೀಡಿದರೆ ಮಾತ್ರ ದಿವಾನಗಿರಿಯನ್ನು ಒಪ್ಪಿಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತಾರೆ.

**ಶ್ರೀ ಸಂದೇಶ್ ನಾಗರಾಜ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಚಾರವನ್ನು ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರಿಗೆ ಹೇಳುತ್ತಿದ್ದಾರೆ ಅಲ್ಲವೇ?

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯದ್ಭಾವಂ ತದ್ಭವತಿ ಎಂದು ಅವರವರ ಭಾವನೆಗೆ ಬಿಟ್ಟಿರುವ ವಿಚಾರ.

**ಶ್ರೀ ಕೆ.ಜೆ.ಜಾರ್ಜ್(ಬೃಹತ್ ಮತ್ತು ಮಾಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ಅವರ ಸ್ವಂತ ಶಕ್ತಿಯನ್ನೇ ಬಳಸುತ್ತಾರೆ. ಅವರಿಗೆ ಉಪ ಸಭಾಪತಿಯವರ ಅವಶ್ಯಕತೆ ಏನು ಇರುವುದಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಆ ರೀತಿ ಹೇಳಿದ್ದೇನೆಯೇ? ಆ ರೀತಿ ಹೇಳಲಿಲ್ಲ. ಆದರೆ, ರಾಜಧರ್ಮ ಪಾಲನೆಯಲ್ಲಿ ಪಾರಂಪರೆಯುಳ್ಳ ಕರ್ನಾಟಕ ರಾಜ್ಯದಲ್ಲಿ,... ಬಹುಶಃ ಉಪ ಸಭಾಪತಿಯವರಾದ ಮಾನ್ಯ ಎಸ್.ಎಲ್.ಧರ್ಮೇಗೌಡರು ಮಾತನಾಡಿರುವುದೆಲ್ಲವನ್ನು ಅವರ ವ್ಯವಸ್ಥೆಯಲ್ಲಿ ಜ್ಞಾಪಕದಲ್ಲಿಟ್ಟುಕೊಳ್ಳುತ್ತಾರೆ ಎಂದು ನನಗೆ ಅನಿಸುತ್ತದೆ. ಏಕೆಂದರೆ, ಅವರ ಸ್ಥಾನ ವಿರೋಧ ಪಕ್ಷದ ಮೊದಲನೆಯ ಸ್ಥಾನವಾಗಿದೆ. ನಾವು ಯಾವಾಗಲೂ ಅಂದುಕೊಳ್ಳುತ್ತಿದ್ದೆವು. ಉಪ ಸಭಾಪತಿಯ ಸ್ಥಾನವು ಸಹಜವಾಗಿ majority ಇರುವ ಪಕ್ಷದಿಂದ ಆಯ್ಕೆಯಾಗುವಂಥದ್ದು. ಆದರೆ, ಸಂವಿಧಾನದಲ್ಲಿ ಉಪ ಸಭಾಪತಿಯವರ ಸ್ಥಾನ ವಿರೋಧ ಪಕ್ಷದ ನಾಯಕರ ಪಕ್ಕದಲ್ಲಿರುವುದು ಏಕೆ ಎಂಬುದು. ಸಂವಿಧಾನದ ವ್ಯವಸ್ಥೆ ಅಡಿಯಲ್ಲಿದ್ದರೂ ನಮ್ಮ ಆಸೆ ಏನೆಂದರೆ, ಬಹುಶಃ ಉಪ ಸಭಾಪತಿಯವರ ಪ್ರೀತಿ ನಮ್ಮ ಕಡೆ ಜಾಸ್ತಿ ಇರಬೇಕೆಂದು ನಾನು ಭಾವಿಸಿಕೊಂಡಿದ್ದು, ಅದರಲ್ಲಿ ಏನು ತಪ್ಪಿಲ್ಲ ಎಂದುಕೊಂಡಿದ್ದೇನೆ. ಆದರೆ, ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಒಂದು ವಿಚಾರವೇನೆಂದರೆ ಈ ಸದನದಲ್ಲಿ ಸಕಾರಾತ್ಮಕವಾಗಿ ನಾಡಿನ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಬಂದಾಗ ವಿರೋಧ ಪಕ್ಷದವರಿಗೆ ಹೆಚ್ಚಿನ ಅವಕಾಶ ಕಲ್ಪಿಸುವುದು ಮೊದಲನೆಯ ಪದ್ಧತಿ. ಅದನ್ನು ತಾವುಗಳೆಲ್ಲರೂ ವಿಶೇಷವಾಗಿ ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಉಪ ಸಭಾಪತಿಯವರಾದ ಶ್ರೀ ಎಸ್.ಎಲ್.ಧರ್ಮೇಗೌಡರು ಪಾಲನೆ ಮಾಡುತ್ತಾರೆ ಎಂಬ ಭಾವನೆಯನ್ನು ವ್ಯಕ್ತಪಡಿಸಿ ನಿಮ್ಮೆಗೆಲ್ಲರಿಗೂ ಶುಭ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೋರುತ್ತಾ, ನಿಮ್ಮಿಬ್ಬರಿಂದಲೂ ಆ ಸ್ಥಾನದ ಗೌರವ ಹೆಚ್ಚಾಗಲಿ, ಈ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿ ಅವರ ಜೀವನ ಹಸನಾಗುವ ನಿಟ್ಟಿನಲ್ಲಿ ಸಾಗಲಿ ಎಂದು ಶುಭ ಕೋರುತ್ತಾ, ನನ್ನ ಒಂದೆರಡು ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 22 ವರ್ಷಗಳ ನಂತರ ಇವತ್ತು ನನ್ನ ಮನಸ್ಸಿಗೆ ಸ್ವಲ್ಪ ಸಮಾಧಾನವಾಗಿದೆ. ಏಕೆಂದರೆ, ಜನತಾ ದಳ ಪಕ್ಷದಲ್ಲಿದಾಗ ಮಾನ್ಯ ಉಪ ಸಭಾಪತಿಯವರಾದ ಶ್ರೀ ಎಸ್.ಎಲ್.ಧರ್ಮೇಗೌಡರವರ ತಂದೆಯನ್ನು ಮಂತ್ರಿಗಳನ್ನಾಗಿ ಮಾಡಬೇಕೆಂದು ಬಹಳ ಪ್ರಯತ್ನ ಪಟ್ಟಿದ್ದೆನು. ಇವತ್ತು ಪ್ರಥಮವಾಗಿ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಅವರು ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಅವಕಾಶ ಸಿಕ್ಕಿದ್ದರಿಂದ ಶ್ರೀ ಎಸ್.ಎಲ್.ಧರ್ಮೇಗೌಡರವರನ್ನು ಉಪ ಸಭಾಪತಿಗಳಾಗಿ ಆಯ್ಕೆ ಮಾಡಿದ್ದಾರೆ. ಮುಂದಿನ ರಾಜಕೀಯ ನಾಯಕರಿಗೆ ಮಾರ್ಗದರ್ಶನವನ್ನು ಮಾಡಿಕೊಟ್ಟಿದ್ದಾರೆ. ಹಾಗೆಯೇ ತಾವೂ ಸಹ ಮಾರ್ಗದರ್ಶನದಿಂದಲೇ ಸಭಾಪತಿಗಳಾಗಿ ಆಯ್ಕೆಯಾಗಿ ಬಂದಿರುವಂಥದ್ದು. ನಿಮಗೂ ಸಹ ಬಯಸದೇ ಬಂದಂಥ ಭಾಗ್ಯ. ಮಾನ್ಯ ಐವನ್ ಡಿ'ಸೋಜಾರವರು ಬಂದು ಕರೆದಾಗ ತಾವು ಸದನದಲ್ಲಿ ಕುಳಿತುಕೊಂಡು ಪ್ರಶ್ನೆಯನ್ನು ಕೇಳುವುದಕ್ಕೆ ತಯಾರಾಗುತ್ತಿದ್ದಿರಿ. ಹಾಗಾಗಿ ಇವತ್ತು ಮಾನ್ಯ ಎಸ್.ಎಲ್.ಭೋಜೇಗೌಡರು,..

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಧಸ್ಯರೆ ಅವರು ಮಾನ್ಯ ಎಸ್.ಎಲ್.ಭೋಜೇಗೌಡರು ಅಲ್ಲ. ಮಾನ್ಯ ಎಸ್.ಎಲ್.ಧರ್ಮೇಗೌಡರು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಗಲಾಟೆಯ ಆತಂಕದಿಂದಾಗಿ ಹೇಳಿ ಬಿಟ್ಟೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶ್ರೀ ಎಸ್.ಎಲ್.ಭೋಜೇಗೌಡರು ಎಂಬ ಪದವನ್ನು ಬಳಸುತ್ತಿರುವುದರಿಂದ ಯಾಕೋ ಅವರ ಮೇಲೆ ಪ್ರೀತಿ ಜಾಸ್ತಿ ಆದಂತೆ ಇದೆ.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ಸರಳ ಸಜ್ಜನಿಕೆಯುಳ್ಳವರು ಎನ್ನುವ ಮಾತನ್ನು ಮಾನ್ಯ ಸದಸ್ಯರು ವಾಪಸ್ಸು ತೆಗೆದುಕೊಳ್ಳಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಮಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಚುನಾವಣೆಗೆ ನಿಂತಿದ್ದಾಗ ಅವರ ಗೆಲುವು ಆಶ್ಚರ್ಯವೇ ಆಗಿತ್ತು. ಏಕೆಂದರೆ, ಆ ಕ್ಷೇತ್ರದಲ್ಲಿ ಆಯ್ಕೆಗೊಳ್ಳುವುದು ಬಹಳ ಕಷ್ಟ. ಇವತ್ತು ಶ್ರೀ ಎಸ್.ಎಲ್.ಧರ್ಮೇಗೌಡರವರನ್ನು ಉಪ ಸಭಾಪತಿಯಗಳಾಗಿ ನೇಮಕ ಮಾಡಿದ ದಿವಸವೇ ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರಿಗೆ ಬಾರಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಎಂದು ಕರೆಯ ಮೂಲಕ ತಿಳಿಸಿದೆ. ಅದಕ್ಕೆ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರು ಇನ್ನೂ ಹಳೆಯದನ್ನು ಮರೆತ್ತಿಲ್ಲವಲ್ಲ ಎನ್ನುವ ಮಾತನ್ನು ಹೇಳಿದರು. ಅದಕ್ಕೆ ನಾನೂ ಸಹ ಮರೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದೆ. ಇವತ್ತು ಕಾಂಗ್ರೆಸ್ ಪಕ್ಷ, ಜನತಾದಳ, ಭಾರತೀಯ ಜನತಾ ಪಕ್ಷ ಎಂದು ಪಂಗಡಗಳಾಗಿ ವಿಂಗಡಿಸಲಾಗಿದೆ. ಆದರೆ, ನಮ್ಮೆಲ್ಲರ ಒಟ್ಟಾರೆ ಆಶಯವೇನೆಂದರೆ, ಜನ ಕಲ್ಯಾಣವಾಗಬೇಕು ಎಂಬುದಾಗಿದೆ. ನಾವು ಎಷ್ಟು ದಿವಸ ಇರುತ್ತೇವೆ ಎಂಬುದು ಮುಖ್ಯವಲ್ಲ. ನಾವೇನು ಪರಂಪರೆಯನ್ನು ಹಾಕಿ ಹೋಗುತ್ತೇವೆ ಎಂಬುದು ಬಹಳ ಪ್ರಮುಖವಾದಂಥದ್ದು. ನಾನು ಹೆಚ್ಚಾಗಿ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಭಗವಂತ ಅವರಿಗೆ ಒಳ್ಳೆಯ ಆರೋಗ್ಯ ನೀಡಲಿ, ನಿಮ್ಮಿಬ್ಬರ ಸಂಗಮವೇನಿದೆ,... ಈ ಸದನ ಕಳೆದ 9 ದಿವಸದಿಂದ ಬಹಳ ಚೆನ್ನಾಗಿಯೇ ನಡೆದುಕೊಂಡು ಬಂದಿದೆ. ಇಲ್ಲಿ ನಡೆದಿರುವಂಥ ಚರ್ಚೆಗಳನ್ನು ನೋಡಿದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ಹಾಗೂ ವಿರೋಧ ಪಕ್ಷದ ಹಿರಿಯ ಸದಸ್ಯರುಗಳೆಲ್ಲರೂ ಏನಿದ್ದಾರೆ, ನಮ್ಮ ಸಹೋದರಿಯಾದ ಡಾ॥ ತೇಜಸ್ವಿನಿ ಗೌಡರವರಿಗೆ, ಡಾ॥ ವೈ.ಎ.ನಾರಾಯಣಸ್ವಾಮಿಯವರು ಇವರೆಲ್ಲರೂ ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮುಂದೆ ಬರುವಂಥ ಪ್ರಜಾಪ್ರಭುತ್ವ ಉಳಿಯಬೇಕು. ಇದು ಬಹಳ ಮುಖ್ಯವಾದದು. ನಮ್ಮೆಲ್ಲರ ಶಕ್ತಿ ಏನೆಂದರೆ ಪ್ರಜಾಪ್ರಭುತ್ವ ದೇಶವನ್ನು ಉಳಿಸುವುದು. ಇವತ್ತು ನಾವು ಕೊಡುವಂಥ ಸಂದೇಶದಿಂದ ಮುಂದೆ ಬರುವಂಥ ಪ್ರಜೆಗಳೇನು ಇದ್ದಾರೆ ಅವರಿಗೆ ಒಂದು ಶುಭ ಸಂದೇಶ ಸಾರುವುದರಲ್ಲಿ ಸಫಲರಾಗಿದ್ದೇವೆ. ಉಪ ಸಭಾಪತಿಯ ಸ್ಥಾನವನ್ನು ಅಲಂಕರಿಸಿರುವ ಮಾನ್ಯ ಎಸ್.ಎಲ್.ಧರ್ಮೇಗೌಡರು ಒಳ್ಳೆಯ ರೀತಿಯಲ್ಲಿ ಸದನವನ್ನು ನಡೆಸಿಕೊಂಡು ಹೋಗುತ್ತಾರೆ ಎಂಬ ವಿಶ್ವಾಸ ಇದೆ. ಇವತ್ತು ಅವರ ತಂದೆಯವರ ಆತ್ಮಕ್ಕೆ ಸಮಾಧಾನ ಸಿಕ್ಕಿರಬಹುದೆಂದು ಅನಿಸುತ್ತದೆ. ಕಾರಣವೇನೆಂದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾತ್ರವಲ್ಲ. ಬೀರೂರು ತಾಲ್ಲೂಕಿನಲ್ಲಿಯೇ ಅವರ ಜಾತಿಗೆ ಸೇರಿದ ಜನಾಂಗದವರೇ ಇಲ್ಲ. ಬಹುತೇಕ ಕುರುಬ ಜನಾಂಗದವರೇ ಇದ್ದಾರೆ. ಅಲ್ಲಿ ಶ್ರೀಮಾನ್ ಲಕ್ಷ್ಮಯ್ಯನವರು ಆಯ್ಕೆಯಾಗುತ್ತಿದ್ದರು. ನಾನೂ ಸಹ ಖುದ್ದಾಗಿ 3-4 ಸಭೆಗಳನ್ನು ನಡೆಸಿದಾಗ ಶ್ರೀಮಾನ್ ಲಕ್ಷ್ಮಯ್ಯನವರನ್ನು ಹೇಗೆ ಆಯ್ಕೆಯಾಗುವುದಕ್ಕೆ ಸಾಧ್ಯ ಎಂದು ಕೇಳಿದ್ದೆ. ಅದಕ್ಕೆ ಅವರು ಹೆದರುವುದು ಬೇಡ ಚುನಾವಣೆ ಬಂದಾಗ ನೋಡಿಕೊಳ್ಳಿ ಎಂದು ಅಷ್ಟೇ ಹೇಳುತ್ತಿದ್ದರು. ಫಲಿತಾಂಶ ಸಹ ಹಾಗೆಯೇ ಬರುತ್ತಿತ್ತು. ಕಾರಣ ಜನರ ಜೊತೆ ಇರತಕ್ಕಂಥ ಒಂದು ವಿಶ್ವಾಸವಾಗಿತ್ತು. ಅದೇ ರೀತಿ ಇವತ್ತು ಮಾನ್ಯ ಎಸ್.ಎಲ್.ಧರ್ಮೇಗೌಡರು ಆಯ್ಕೆಗೊಂಡಿದ್ದಾರೆ. ಸರ್ವಾನುಮತದಿಂದ ಅವರನ್ನು ಆರಿಸಿರತಕ್ಕಂಥ ನಮ್ಮೆಲ್ಲಾ ಸದಸ್ಯರಿಗೆ ಮತ್ತು ಸದನಕ್ಕೆ ಗೌರವ ಬಂದಿದೆ. ಭಗವಂತ ಅವರಿಗೆ ಒಳ್ಳೆಯದನ್ನು ಮಾಡಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಥಮವಾಗಿ ನನ್ನ ಜಿಲ್ಲೆಯವರಾದ ನನ್ನ ಜೊತೆಗಾರ, ನನ್ನ ಆತ್ಮೀಯರಾಗಿರುವಂಥ ಮಾನ್ಯ ಎಸ್.ಎಲ್.ಧರ್ಮೇಗೌಡರು ಉಪ ಸಭಾಪತಿಯಾಗಿ ಆಯ್ಕೆಯಾಗಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ, ನನ್ನ ಜಿಲ್ಲೆಯವರನ್ನೇ ಉಪ ಸಭಾಪತಿಗಳಾಗಿ ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಹುಶಃ ಮಾನ್ಯ ಎಸ್.ಎಲ್.ಧರ್ಮೇಗೌಡರ ಬಗ್ಗೆ ಹೇಳುವುದಾದರೆ, ಬಹಳ ಹಿಂದಿನಿಂದಲೂ ನೋಡಿದ್ದೇನೆ. ನಾನು ಅವರು ಇಬ್ಬರೂ ಸಹ ಜಿಲ್ಲಾ ಪಂಚಾಯಿತಿಯಲ್ಲಿ ಒಟ್ಟಿಗೆ ಕೆಲಸವನ್ನು ಮಾಡಿದ್ದೇವೆ. ಅವರು ತುಂಬಾ ಸೌಮ್ಯ ಸ್ವಭಾವದವರು. ಯಾವುದಾದರೂ ವಿಚಾರ ಬಂದಂಥ ಸಂದರ್ಭದಲ್ಲಿ ಎಲ್ಲವನ್ನೂ ಗಂಭೀರವಾಗಿ ತೆಗೆದುಕೊಳ್ಳುವಂಥ ಸ್ವಭಾವವನ್ನು ಹೊಂದಿರುವವರು. ತುಂಬಾ ಪರಿಸರ ಪ್ರೇಮಿಗಳು ಹಾಗೂ ಒಳ್ಳೆಯ ಕೃಷಿಕ. ರಾಜಕಾರಣಿ ಎಂದು ಹೇಳುವುದಕ್ಕಿಂತ ಒಬ್ಬ ಒಳ್ಳೆಯ ಕೃಷಿಕನಾಗಿ ಜೀವನವನ್ನು ನಡೆಸಿಕೊಂಡು ಬಂದಿರುವವರು. ಯಾವುದೇ ಗಿಡಗಳು ಅವರ ತೋಟಗಳಲ್ಲಿ ಇಲ್ಲ ಎಂದು ಹೇಳುವ ಹಾಗೆ ಇಲ್ಲ. ಅಡಿಕೆ, ಹಣ್ಣಿನ ಗಿಡಗಳೆಲ್ಲವೂ ಇದೆ. ಆ ರೀತಿಯ ಒಬ್ಬ ಕೃಷಿಕನಾಗಿ ಬೆಳೆದಂಥವರು. ಹಾಗೆಯೇ ಅವರು ಸಹಕಾರಿ ಕ್ಷೇತ್ರದ ದಿಗ್ಗಜ ಎಂದರೂ ತಪ್ಪಾಗುವುದಿಲ್ಲ. ಬಹುಶಃ ಅವರ ರಾಜಕಾರಣ ಜೀವನವನ್ನು ಸಹಕಾರಿ ಕ್ಷೇತ್ರದಿಂದಲೇ ಪ್ರಾರಂಭ ಮಾಡಿದಂಥವರು. ಸಹಕಾರಿ ಕ್ಷೇತ್ರದ ಬಗ್ಗೆ ಸಾಕಷ್ಟು ಹೋರಾಟವನ್ನು ಮಾಡಿದ್ದಾರೆ. ಹಲವಾರು ಸಣ್ಣ ಬೆಳೆಗಾರರಿಗೆ ಸಾಕಷ್ಟು ಸಹಾಯವನ್ನು ಮಾಡಿರುವಂಥದ್ದು ಸಹಾ ನಮ್ಮೆಲ್ಲರಿಗೂ ಗೊತ್ತಿರುವ ವಿಚಾರ. ಹಾಗಾಗಿ ಹೆಚ್ಚಾಗಿ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಬಹುಶಃ ಮಾನ್ಯ ಎಸ್.ಎಲ್.ಧರ್ಮೇಗೌಡರಿಗೆ ಉಪ ಸಭಾಪತಿಯ ಸ್ಥಾನ ಸಿಕ್ಕಿರುವಂಥದ್ದು.... ಯಾವತ್ತೋ ಆ ಸ್ಥಾನ ಸಿಕ್ಕಬೇಕಾಗಿತ್ತು ಎಂದು ಭಾವಿಸಿಕೊಂಡಿದ್ದೇನೆ. ರಾಜಕಾರಣದೊಳಗೆ, ಪಕ್ಷದೊಳಗೆ ನಿಷ್ಠೆಯಿಂದ ಇದ್ದಂಥವರು. ಈಗಾಗಲೇ ಮಾನ್ಯ ಉಸ್ತುವಾರಿ ಸಚಿವರಾದ ಕೆ.ಜೆ.ಜಾರ್ಜ್‌ರವರು ಹೇಳಿದ ಹಾಗೆ ನಮ್ಮ ಜಿಲ್ಲೆಯೊಳಗೆ ವಿವಿಧ ಪಕ್ಷದಿಂದ ಆಯ್ಕೆಗೊಂಡು ಬಂದಿರತಕ್ಕಂಥ ಚುನಾಯಿತ ಪ್ರತಿನಿಧಿಗಳು ಏನಿದ್ದೇವೆ ನಾವುಗಳೆಲ್ಲರೂ ಅಭಿವೃದ್ಧಿ ದೃಷ್ಟಿಯಿಂದ ಅಥವಾ ಯಾವುದಾದರೂ ವಿಚಾರಗಳು ಬಂದಂಥ ಸಂದರ್ಭದಲ್ಲಿ ಒಟ್ಟಾಗಿ ಗಂಭೀರವಾಗಿ ತೆಗೆದುಕೊಂಡು ಸಾಧಿಸುವಂಥ ಕೆಲಸವನ್ನು ಮಾಡಿದ್ದೇವೆ.

(554)19.12.2018,7.10,ಟಿಸಿಹೆಚ್-ಜಿಆರ್

**ಶ್ರೀ ಎಂ.ಕೆ.ಪ್ರಾಣೇಶ್ (ಮುಂದು):-**

ಒಟ್ಟಾಗಿ ಅದನ್ನು ಗಂಭೀರವಾಗಿ ತೆಗೆದುಕೊಂಡು ಸಾಧಿಸುವಂತಹ ಕೆಲಸವನ್ನು ನಾವೆಲ್ಲರೂ ಕೂಡ ಮಾಡಿದ್ದೇವೆ. ಹಾಗಾಗಿ, ಶ್ರೀ ಎಸ್.ಎಲ್.ಧರ್ಮೇಗೌಡರವರ ಬಗ್ಗೆ ಹೇಳಬೇಕೆಂದರೆ, ಇಡೀ ದಿವಸವೇ ಹೇಳಬಹುದು. ಏಕೆಂದರೆ, ಅವರ ವಯಸ್ಸು 60 ವರ್ಷ ಇರಬಹುದು. ಅವರು ಪ್ರಾರಂಭದ ದಿನದಿಂದ ನಡೆದುಕೊಂಡು ಬಂದಿರುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಾರಿಯನ್ನು ನಾನು ಯಾವಾಗಲೂ ನೋಡಿಕೊಂಡು ಬಂದಿದ್ದೇನೆ. ಹಾಗಾಗಿ, ಶ್ರೀ ಎಸ್.ಎಲ್.ಧರ್ಮೇಗೌಡರವರಿಗೆ ಒಳ್ಳೆಯದಾಗಲಿ. ಅವರು ಪ್ರಾಮಾಣಿಕವಾಗಿ ಈ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ ಎನ್ನುವಂತಹ ವಿಶ್ವಾಸ ಕೂಡ ನಮಗಿದೆ. ಶ್ರೀ ಎಸ್.ಎಲ್.ಭೋಜೇಗೌಡ ರವರು ಎಲ್ಲಾ ವಿಚಾರಗಳಲ್ಲಿಯೂ ನಾನು ಮಾತನಾಡುತ್ತೇನೆಂದು, ಎದ್ದುನಿಂತು ಮಾತನಾಡುತ್ತಾರೆ. ಆದರೆ, ಶ್ರೀ ಎಸ್.ಎಲ್ಭೋಜೇಗೌಡರವರಿಗೂ ಕೂಡ ಕಾಳಜಿ ಇದೆ. ಯಾರಾದರೂ ಒಂದು ವಿಚಾರವನ್ನು ಹೇಳಿ, ಇಂತಹ ಕೆಲಸವನ್ನು ಮಾಡಿಕೊಡಿ ಎಂದರೆ ಮಾಡಿಕೊಡುತ್ತಾರೆ. ಇದು ಅವರ ತಂದೆಯವರಿಂದ ಬಂದಿರುವಂತಹ ಗುಣ ಎಂದು ನಾನು ಭಾವಿಸುತ್ತೇನೆ. ನಾನು ಚಿಕ್ಕವನಿದ್ದಾಗ ಅವರ ತಂದೆ ಶ್ರೀ ಲಕ್ಷ್ಮಯ್ಯನವರು ಯಾರ ಹತ್ತಿರವೂ ಆಗದೇ ಇರುವಂತಹ ಕೆಲಸವನ್ನು ಅವರು ಮಾಡಿಸುತ್ತಿದ್ದರು. ನನ್ನ ಸ್ವಂತ ಚಿಕ್ಕಮ್ಮನ ಮಗನಿಗೆ ಒಂದು ಕೆಲಸವನ್ನು ಕೊಡಿಸುವಂತಹ ಸಂದರ್ಭ ಬಂದಿತ್ತು. ಅವೊತ್ತಿನ ದಿವಸ ಸನ್ಮಾನ್ಯ ಶ್ರೀ ಹೆಚ್.ಡಿ.ದೇವೇಗೌಡವರು ಲೋಕೋಪಯೋಗಿ ಇಲಾಖೆ ಸಚಿವರಾಗಿದ್ದರು. ಆಗ ನಾನು ರಾಜಕಾರಣದಲ್ಲಿ ಇರಲಿಲ್ಲ. ಆದರೆ, ನಮ್ಮ ಚಿಕ್ಕಪ್ಪನವರು ಅವರ ಸ್ನೇಹಿತರಾಗಿದ್ದರು. ಮಾನ್ಯ ಸಚಿವರಿಂದ ಹೇಳಿಸಿದರೂ ಕೂಡ ನನ್ನ ಚಿಕ್ಕಮ್ಮನ ಮಗನಿಗೆ ಕೆಲಸ ಆಗಿರಲಿಲ್ಲ. ಆ ಸಂದರ್ಭದಲ್ಲಿ ಅವರು ಕೇವಲ ಎಂ.ಎಲ್.ಎ., ಆಗಿದ್ದಾಗ, ನಾನು ಹುಡಗನಿಗೆ ಕೆಲಸ ಕೊಡಿಸಿ ಆ ಹುಡುಗನ ಭವಿಷ್ಯವನ್ನು ರೂಪಿಸುತ್ತೇನೆಂದು ಕೆಲಸ ಕೊಡಿಸಿರುವಂಥದ್ದು ನನಗೆ ಗೊತ್ತಿದೆ. ಅವರು ಹಿಡಿದ ಕೆಲಸವನ್ನು ಹಠ ಮಾಡಿ ಸಾಧಿಸುವಂತಹ ವ್ಯಕ್ತಿತ್ವವನ್ನು ಹೊಂದಿರುವಂತಹ ಕುಟುಂಬ. ಹಾಗಾಗಿ, ಶ್ರೀ ಎಸ್.ಎಲ್.ಭೋಜೇಗೌಡ ರವರಿಗೂ ಕೂಡ ಅದೇ ವ್ಯಕ್ತಿತ್ವ ಬಂದಿದೆ. ಅದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡರೆ ನಮಗೆಲ್ಲರಿಗೂ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಎಸ್.ಎಲ್.ಧರ್ಮೇಗೌಡರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಸ್.ಎಲ್.ಧರ್ಮೇಗೌಡರವರು ಅಥವಾ ಶ್ರೀ ಲಕ್ಷ್ಮಯ್ಯನವರ ಕುಟುಂಬ ನನಗೆ ಬಹಳ ಹತ್ತಿರದ ಪರಿಚಯ. 24 ವರ್ಷಗಳ ಹಿಂದೆ ಅವರ ತಂದೆ ಶ್ರೀ ಲಕ್ಷ್ಮಯ್ಯನವರು ಮತ್ತು ನಾನು ವಿಧಾನಸಭಾ ಸದಸ್ಯರಾಗಿದ್ದೆವು. ಅಂದರೆ ಕಳೆದ 24 ವರ್ಷಗಳಿಂದ ಆ ಕುಟುಂಬದ ಪರಿಚಯ ನನಗಿದೆ. ಅವರ ತಾಯಿ ಶ್ರೀಮತಿ ಕೃಷ್ಣಮ್ಮನವರು. ಬಹುಶಃ ಲಕ್ಷ್ಮಯ್ಯನವರ ಗುಣವನ್ನು ಶ್ರೀ ಎಸ್.ಎಲ್.ಭೋಜೇಗೌಡರು, ಶ್ರೀಮತಿ ಕೃಷ್ಣಮ್ಮನವರ ಗುಣವನ್ನು ಎಸ್.ಎಲ್.ಧರ್ಮೇಗೌಡರವರು ಹೊಂದಿದ್ದಾರೆ. ಅವರ ತಾಯಿಯವರು ಕೂಡ ಬಹಳ ಸೌಮ್ಯ ಸ್ವಭಾವದವರು. ಹಾಗಾಗಿ, ಆ ಇಡೀ ಕುಟುಂಬ ನನಗೆ ಬಹಳ ಹತ್ತಿರದ ಪರಿಚಯ. ಬಹಳ ದೊಡ್ಡ ವಿಶೇಷ ಮತ್ತು ಅದೃಷ್ಟವೆಂದರೆ, ನಾನು ಅವರ ತಂದೆಯವರ ಜೊತೆಯಲ್ಲಿಯೂ ಶಾಸಕನಾಗಿದ್ದೆನು. ಈಗ ಅವರ ಇಬ್ಬರ ಮಕ್ಕಳ ಜೊತೆಗೂ ಕೂಡ ಶಾಸಕನಾಗಿದ್ದೇನೆ. ಆದರೆ, ಮಾನ್ಯ ಸದಸ್ಯರಾದ ಶ್ರೀ ಭೋಜೇಗೌಡರವರು ನನ್ನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೌಂಟರ್‌ಪಾರ್ಟ್. ನಾನು ನೈರುತ್ಯ ಕ್ಷೇತ್ರದಿಂದ ನಾನು ಪದವೀಧರ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದೇನೆ. ಅವರು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ತಂದೆಯ ಸರ್ವಗುಣಗಳನ್ನು ಶ್ರೀ ಎಸ್.ಎಲ್.ಭೋಜೇಗೌಡರವರು ಹೊಂದಿಕೊಂಡಿದ್ದಾರೆ, ಆದರೆ ಶ್ರೀ ಎಸ್.ಎಲ್.ಧರ್ಮೇಗೌಡವರು ತಂದೆಯ ಸ್ವಲ್ಪ ಗುಣಗಳನ್ನು ಹಂಚಿಕೊಂಡಿದ್ದು, ತಾಯಿಯ ಗುಣಗಳನ್ನು ಹೆಚ್ಚಾಗಿ ಹೊಂದಿದ್ದಾರೆ. ಶ್ರೀ ಎಸ್.ಎಲ್.ಧರ್ಮೇಗೌಡರವರು ವಿಶೇಷವಾಗಿ ಸ್ಥಳೀಯ ಸಂಸ್ಥೆಗಳು ಕೋ-ಅಪರೇಟೀವ್ ಫೀಲ್ಡ್‌ನಲ್ಲಿ ಬಂದಿರುವಂತಹ ಸ್ವಭಾವದವರಾಗಿರುತ್ತಾರೆ. ಹಾಗಾಗಿ, ಎಲ್ಲರ ಜೊತೆಗೂ ಹೊಂದಿಕೊಂಡು ಹೋಗತಕ್ಕಂಥ ವಿಶೇಷವಾದ ಸ್ವಾಭಾವವಿದೆ. ನಾವು ಶ್ರೀ ಎಸ್.ಎಲ್.ಭೋಜೇಗೌಡರವರನ್ನು ಪ್ರೀತಿಯಿಂದ ಚುಡಾಯಿಸುತ್ತೇವೆ ಅಷ್ಟೆ. ಆದರೆ, ಬಹಳ ಕಷ್ಟದ ಅಗ್ನಿಪರೀಕ್ಷೆಗೆ ಶ್ರೀ ಎಸ್.ಎಲ್.ಭೋಜೇಗೌಡರವರು ಒಳಗಾಗಿದ್ದಾರೆ. ಆ ಅಗ್ನಿ ಪರೀಕ್ಷೆಯಿಂದ ಅವರು ಪಾಸ್ ಆಗಬೇಕಾದರೆ, ಪೀಠದಲ್ಲಿ ಮಾನ್ಯ ಸಭಾಪತಿಯವರು ಇಲ್ಲದಿದ್ದಾಗ, ಮಾನ್ಯ ಎಸ್.ಎಲ್.ಧರ್ಮೇಗೌಡರವರು ಆ ಸ್ಥಾನದಲ್ಲಿ ಕುಳಿತುಕೊಂತಹ ಸಂದರ್ಭದಲ್ಲಿ ಮಾನ್ಯ ಎಸ್.ಎಲ್.ಭೋಜೇಗೌಡರವರು ಸದನದಲ್ಲಿ ಬಾಯ್‌ಕಟ್ ಆಗಿರುವುದು ಒಳ್ಳೆಯದು. (ಸದನದಲ್ಲಿ ನಗು) ಇಲ್ಲದಿದ್ದಲ್ಲಿ ಅವರು ಅಲ್ಲಿಂದಲೇ ನಿಮಗೆ ನಿರ್ದೇಶನ ಕೊಡುತ್ತಾರೆ. ಅವರು ತಮ್ಮನ್ನೂ ಕೂಡ ಬಿಡುವುದಿಲ್ಲ. ಆ ರೀತಿಯ ವಿಶೇಷ ಉತ್ಸಾಹದ ಗುಣ ಏನಿದೆ, ಅದು ಒಂದು ರೀತಿಯಾಗಿ ಮಹಾಭಾರತದಲ್ಲಿ 'ಅರ್ಜುನನ್ನು ಕಟ್ಟಿ ಹಾಕುವುದು ಸುಲಭವಲ್ಲ'. ಧರ್ಮರಾಯನ ಮಾತನ್ನು ಮೀರಿಯೇ ಬಹಳಷ್ಟು ಕಾರಣಗಳಿಗಾಗಿ ಅರ್ಜುನ ನಡೆದುಕೊಂಡಿರುತ್ತಾನೆ. ಇಲ್ಲಿ ಈ ಅರ್ಜುನ ಸ್ವಲ್ಪ ಹಿಡಿತಕ್ಕೆ ಸಿಗಬಹುದು. ಇಬ್ಬರೂ ನನ್ನ ಒಳ್ಳೆಯ ಆತ್ಮೀಯ ಸ್ನೇಹಿತರು. ಶ್ರೀ ಎಸ್.ಎಲ್.ಧರ್ಮೇಗೌಡರವರು ಉಪ ಸಭಾಪತಿಯವರ ಸ್ಥಾನದಲ್ಲಿ ಯಶಸ್ಸನ್ನು ಗಳಿಸಲಿ. ಅವರು ಜಿಲ್ಲಾ ಪಂಚಾಯತ್ ಸದಸ್ಯರಾಗಿ ಒಳ್ಳೆಯ ಹೆಸರನ್ನು ಗಳಿಸಿದ್ದಾರೆ. ಆ ಸಂದರ್ಭದಲ್ಲಿ ನಮ್ಮ ಶ್ರೀ ಎಂ.ಕೆ.ಪ್ರಾಣೇಶ್‌ರವರು ಕೂಡ ಜೊತೆಯಲ್ಲಿ ಇದ್ದಂತಹವರು. ನನ್ನ ಆತ್ಮೀಯ ಸ್ನೇಹಿತರು ಹಾಗೂ ನನ್ನ ಆತ್ಮೀಯ ಕುಟುಂಬದ ಒಬ್ಬ ಸದಸ್ಯರು ಇವತ್ತಿನ ದಿವಸ ಉನ್ನತ ಸ್ಥಾನಕ್ಕೆ ಬಂದಿರುವುದು ನನಗೆ ಸಂತೋಷವನ್ನು ಕೊಟ್ಟಿದೆ ಎಂದು ಹೇಳಿ ಅವರಿಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬಹುಶಃ ಈ ಸದನದಲ್ಲಿ 2004ರಲ್ಲಿ ಮಾನ್ಯ ಎಸ್.ಎಲ್.ಧರ್ಮೇಗೌಡರವರು ಕೆಳಮನೆಗೆ ಆಯ್ಕೆಯಾಗಿದ್ದರು. ನಾನು ಸಂಸತ್ತಿಗೆ ಆಯ್ಕೆಯಾದಂತಹ ಸಂದರ್ಭ ಇತ್ತು. ಈ ಸದನದಲ್ಲಿರುವ ಗಣ್ಯರನ್ನು ಹೊರತುಪಡಿಸಿ, ಶ್ರೀ ಎಸ್.ನಿಜಲಿಂಗಪ್ಪನವರಿಂದ ಹಿಡಿದು, ಶ್ರೀ ಜೆ.ಹೆಚ್.ಪಟೇಲ್‌ಜಿಯಿಂದ ಹಿಡಿದು, ಈ ನಾಡಿನ ಎಲ್ಲಾ ದಿಗ್ಗಜರನ್ನೂ ಪತ್ರಿಕೋದ್ಯಮದಲ್ಲಿ ಸಂದರ್ಶನ ಮಾಡುವಂತಹ ಸೌಭಾಗ್ಯ ನಮಗೆ ಒದಗಿ ಬಂದಿತ್ತು. ಬಿ.ಜೆ.ಪಿ., ಪಕ್ಷ ಕರ್ನಾಟಕ ರಾಜ್ಯದಲ್ಲಿ ಶೈಶಾವಸ್ಥೆಯಲ್ಲಿದ್ದಾಗ, ಕಾಂಗ್ರೆಸ್‌ನ ಎದುರು ಪ್ರಖರವಾದಂತಹ ಪಕ್ಷವಾಗಿದ್ದುದು ಭಾರತೀಯ ಜನತಾ ಪಕ್ಷ, ನಂತರ ಜಾತ್ಯಾತೀತ ಜನತಾ ದಳ. ಎಲ್ಲಾ ಸಂದರ್ಭಗಳಲ್ಲಿ ಅನೇಕ

"ನ್ಯಾಯಾಲಯದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿಗ್ಗಜರನ್ನು ನಾವು ನೋಡಿದ್ದೇವೆ. ಅವರೆಲ್ಲರೂ ಒಬ್ಬರಿಗಿಂತ ಒಬ್ಬರು Young Turks ಇದ್ದರು. ಮಾನ್ಯ ಸಿದ್ದರಾಮಯ್ಯನವರು ಇರಬಹುದು, ಶ್ರೀ ಎಂ.ಪಿ.ಪ್ರಕಾಶ್‌ರವರು, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಶ್ರೀ ಸುದರ್ಶನ್‌ರವರು, ಶ್ರೀ ಭೈರೇಗೌಡರವರು ಹೀಗೆ ಒಬ್ಬರಿಗಿಂತ ಒಬ್ಬರು ಉತ್ತಮ ವಾಗ್ಮಿಗಳು, ಉತ್ತಮ ಹೋರಾಟಗಾರ ಗುಣವನ್ನು ಹೊಂದಿರುವಂತಹ ಪರಂಪರೆಯನ್ನು ಹೊಂದಿದವರಾಗಿದ್ದರು. ಈ ಒಂದು ಕೀರ್ತಿ ಕರ್ನಾಟಕ ವಿಧಾನಸಭೆ ಮತ್ತು ವಿಧಾನ ಪರಿಷತ್‌ಗೆ ಸಲ್ಲುತ್ತದೆ. ಶ್ರೀ ಸಿ.ಎಂ.ಇಬ್ರಾಹಿಂರವರದ್ದು ವಿಶೇಷವೇನೆಂದರೆ, ಕೇಂದ್ರದಲ್ಲಿ ವಾರ್ತಾ ಸಚಿವರಾಗಿದ್ದಾಗ, ನಾವು ಸನ್ಮಾನ್ಯ ಹೆಚ್.ಡಿ.ದೇವೇಗೌಡರವರ ವಿರುದ್ಧ ಸ್ಪರ್ಧೆ ಮಾಡುವಂತಹ ಅಗ್ನಿಪರೀಕ್ಷೆ ಇತ್ತು. ಅದಕ್ಕಿಂತ ಮೊದಲು ನಾಲ್ಕು ಬಾರಿ ಸನ್ಮಾನ್ಯ ಹೆಚ್.ಡಿ.ದೇವೇಗೌಡರು ಚುನಾವಣೆಗೆ ನಿಂತಾಗ ಅವರೊಂದಿಗೆ ಸಂದರ್ಶನ ಕೂಡ ಮಾಡಿದ್ದೆನು. ಆದರೆ ಶ್ರೀ ಸಿ.ಎಂ.ಇಬ್ರಾಹಿಂನಂತಹವರೆಲ್ಲಾ ನಮ್ಮ ವಿಶೇಷವಾದ ಗುಣಗಳನ್ನು ಗೌರವಿಸುತ್ತಿದ್ದರು. ನಾವು ಸನ್ಮಾನ್ಯ ಶ್ರೀ ಹೆಚ್.ಡಿ.ದೇವೇಗೌಡರವರು ಎದುರುಗಡೆ ಇದ್ದಾಗಲೇ ಬೆನ್ನುತಟ್ಟಿ ಕಿಚಾಯಿಸುತ್ತಿದ್ದರು. ಒಂದು ರೀತಿಯಲ್ಲಿ ಅವರು ನಮ್ಮ ರಕ್ಷಣೆಗೆ ನಿಲ್ಲುತ್ತಿದ್ದರು. ನಾನು ವಿಧಾನ ಪರಿಷತ್‌ಗೆ ಬಂದಾಗ ಶ್ರೀ ಎಸ್.ಎಲ್.ಧರ್ಮೇಗೌಡರು ಹಾಗೂ ಶ್ರೀ ಎಸ್.ಎಲ್.ಭೋಜೇಗೌಡರ ನಡುವೆ ಸ್ವಭಾವದಲ್ಲಿ ಎಷ್ಟು ವೈವಿಧ್ಯತೆ ಇದೆ, ಇವರಿಬ್ಬರೂ ಅಣ್ಣ-ತಮ್ಮಂದಿರೆಂದು ನಾನು ನಂಬುವುದಕ್ಕೆ ಆಗುತ್ತಿರಲಿಲ್ಲ. ಅದನ್ನು ಮಾನ್ಯ ಆಯನೂರು ಮಂಜುನಾಥ್‌ರವರು ಈಗಾಗಲೇ ಹೇಳಿದ್ದಾರೆ. ಶ್ರೀ ಎಸ್.ಎಲ್.ಭೋಜೇಗೌಡರು ಯಾವಾಗಲೂ ಸೂರ್ಯನಂತೆ ಉರಿಯುತ್ತಲೇ ಇರುತ್ತಾರೆ. ಅದಕ್ಕೆ ಏನು ಮಾಡುವುದಕ್ಕೆ ಆಗುವುದಿಲ್ಲ. ಇದು ತೀಕ್ಷ್ಣತೆ, ಬಿಸಿಲು ಇರತಕ್ಕಂಥದ್ದು ಸೂರ್ಯನ ಗುಣ. ಮಾನ್ಯ ಶ್ರೀ ಎಸ್.ಎಲ್.ಧರ್ಮೇಗೌಡರವರು ಇದಕ್ಕೆ ವ್ಯತಿರಿಕ್ತರಾಗಿದ್ದಾರೆ. ಒಂದು ತಣ್ಣನೆಯ ಬೆಳದಿಂಗಳ ಶಾಂತ ಸ್ವಭಾವವನ್ನು ಹೊಂದಿದ್ದಾರೆ. ಅವರು ನೆಮ್ಮದಿಯ ಸ್ವಭಾವನ್ನು ಹೊಂದಿದ್ದಾರೆ. ನಾನು ಸ್ವಲ್ಪ ಇತರ ಸದಸ್ಯರಿಗಿಂತ ಭಿನ್ನವಾಗಿ ನೋಡುತ್ತೇನೆ. ಶ್ರೀ ಎಸ್.ಎಲ್.ಭೋಜೇಗೌಡರವರ ಸಂವಿಧಾನಿಕ ಹಕ್ಕುಗಳನ್ನು ಯಾರೂ ಕಸಿದುಕೊಳ್ಳುವುದಕ್ಕಾಗುವುದಿಲ್ಲ. ಎಂದ ಮಾತ್ರಕ್ಕೆ ಧರ್ಮರಾಯರಿಗೂ ಗೊತ್ತಿದೆ, ದೃಷ್ಟಿಗಳಲ್ಲಿ ಇಂದಿಗೂ ಕೂಡ ಅದೊಂದು ಪರಂಪರೆ ಇದೆ. ಹಿರಿಯಣ್ಣ ಇದ್ದರೆ, ಭೀಮ, ಅರ್ಜುನರಲ್ಲಿ ಎಷ್ಟೇ ಬಲ ಇದ್ದರೂ ಕೂಡ ಕುಟುಂಬ ವ್ಯವಸ್ಥೆಯ ಪರಂಪರೆಯಲ್ಲಿ ಅಣ್ಣ ಎಂದರೆ ಅವರು ಒಂದು ಚೂರು ಕಣ್ಣು ಬಿಟ್ಟರೆ ಕುಳಿತುಕೊಳ್ಳತಕ್ಕಂಥ ಪದ್ಧತಿ ಇದೆ. ಅದರಲ್ಲೂ ಪೀಠದಲ್ಲಿ ಅವರು ಕುಳಿತುಕೊಂಡಾಗ ನಿಗ್ರಹ ಮಾಡುವಂತಹ ಸಂಸ್ಕಾರ ತಮಗಿದೆ. ಪದ್ಧತಿಯ ಪ್ರಕಾರ ಅವರನ್ನು ನಮ್ಮ ಕಡೆಗೆ ಕೂರಿಸಿದ್ದೀರಿ, ಖಂಡಿತ ನಮಗೆ ಧೈರ್ಯ ಹೆಚ್ಚಾಗಿದೆ. ತಮ್ಮ ಅನುಪಸ್ಥಿತಿಯಲ್ಲಿ ಮಾನ್ಯ ಎಸ್.ಎಲ್.ಧರ್ಮೇಗೌಡರವರು ಆ ಪೀಠದಲ್ಲಿ ಕುಳಿತಾಗಲೂ ಕೂಡ ಅವರ ದೃಷ್ಟಿ ಯಾವಾಗಲೂ ಪೀಠದ ಎಡಭಾಗಕ್ಕೆ ಇರಲಿ. ಸ್ವಲ್ಪ ದೂರದೃಷ್ಟಿ ಕಡಿಮೆ ಆಗಲಿ, ಮಾನ್ಯ ಶ್ರೀ ಎಸ್.ಎಲ್.ಭೋಜೇಗೌಡರವರ ಕಡೆಗೆ ದೃಷ್ಟಿ ಹೋಗದೇ ಇರಲಿ ಎನ್ನುವಂತಹ ಪ್ರಾರ್ಥನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುತ್ತೇನೆ. ಖಂಡಿತ ಅವರು ಆ ಸ್ಥಾನದಲ್ಲಿ ನಮಗೆಲ್ಲಾ ನ್ಯಾಯವನ್ನು ಒದಗಿಸುತ್ತಾರೆ. ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿದಂತಹ ಎಲ್ಲಾ ಮಾನ್ಯ ಸದಸ್ಯರಿಗೂ, ವಿಶೇಷವಾಗಿ ಜನತಾ ದಳದ ಪಕ್ಷದ ಹಿರಿಯರಿಗೆ ಹಾಗೂ ಚುನಾವಣೆಗೆ ನಾಮಿನೇಷನ್ ಪತ್ರ ಸಲ್ಲಿಸಬಾರದೆಂದು ತೀರ್ಮಾನ ತೆಗೆದುಕೊಂಡಂತಹ ನಮ್ಮ ವಿರೋಧ ಪಕ್ಷಕ್ಕೂ ನಾನು ಧನ್ಯವಾದಗಳನ್ನು ಹೇಳಿ, ಈ ಸಂದರ್ಭದಲ್ಲಿ ಅವರಿಗೆ ಶುಭವನ್ನು ಕೋರುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಅಧಿವೇಶನದಲ್ಲಿ ಎರಡು ಬಾರಿ ಅಭಿನಂದನೆಯ ಮಾತುಗಳನ್ನಾಡುವಂತಹ ಒಂದು ಅವಕಾಶ ಸಿಕ್ಕಿದೆ. ಮಾನ್ಯ ಸಭಾಪತಿಯವರಿಗೆ ಅಭಿನಂದನೆಗಳನ್ನು ಹೇಳಿದ ನಂತರ ಮಾನ್ಯ ಉಪ ಸಭಾಪತಿಯಾಗಿ ಆಯ್ಕೆಯಾದವರಿಗೆ ಅಭಿನಂದನೆಯ ಮಾತುಗಳನ್ನಾಡಲು ಅವಕಾಶ ಸಿಕ್ಕಿದೆ. ಉಪ ಸಭಾಪತಿಯಾಗಿ ಆಯ್ಕೆ ಆಗಬೇಕಾದರೆ, ಅದಕ್ಕೆ ತನ್ನದೇ ಆದಂತಹ ಕೆಲವು ಗುಣಗಳು ಇರಬೇಕು. ನಾನು ಸರ್ಕಾರದ ಮುಖ್ಯ ಸಚೇತಕ ಆಗುವುದಕ್ಕಿಂತ ಮುಂಚೆ, ಶ್ರೀ ನಾರಾಯಣ ಸ್ವಾಮಿಯವರು ಕುಳಿತುಕೊಳ್ಳುತ್ತಿರುವ ಜಾಗದಲ್ಲಿ ಕುಳಿತುಕೊಳ್ಳುತ್ತಿದ್ದೆನು. ಆಗ ನಾನು ಹೆಚ್ಚು ಪ್ರಶ್ನೆಗಳನ್ನು ಕೇಳಿ, ಹೆಚ್ಚು ಮಾತನಾಡುತ್ತಿದ್ದೆನು. ಆಗ ನನ್ನನ್ನು ಸರ್ಕಾರದ ಮುಖ್ಯ ಸಚೇತಕರನ್ನಾಗಿ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಐವನ್ ಡಿ'ಸೋಜಾರವರ ಹಾವಭಾವಗಳಲ್ಲಿ ಹಾಗೂ ಮಾತುಗಳಲ್ಲಿ ಬದಲಾವಣೆ ಮಾಡಿಕೊಂಡು ಕಡಿಮೆ ಮಾತುಗಳನ್ನು ಆಡಬೇಕೆಂದು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ ಹೇಳಿದ್ದರು. ಬಹುಶಃ ನಾನು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನಮಗೆ ಆ ಮಾತುಗಳನ್ನು ಹೇಳಲೇ ಇಲ್ಲ.

**(ಸದನದಲ್ಲಿ ನಗು)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಬಹುಶಃ ನನಗೆ ಗೊತ್ತಿಲ್ಲದೆಯೇ ನಾನು ಮಾತನ್ನು ಕಡಿಮೆ ಮಾಡಿಕೊಂಡು, ಸುಮಾರು 16 ತಿಂಗಳ ಕಾಲ ಕಡಿಮೆ ಮಾತನಾಡಿ, ಆ ಹುದ್ದೆಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕೋ ಅದೇ ರೀತಿ ನಡೆದುಕೊಳ್ಳುತ್ತಿದ್ದೆನು. ಇವತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷಕ್ಕೆ ಧನ್ಯವಾದಗಳನ್ನು ಹೇಳಬೇಕು. ಏಕೆಂದರೆ, ಒಂದು ವೇಳೆ ಮಾನ್ಯ ಎಸ್.ಎಲ್.ಧರ್ಮೇಗೌಡರವರು ಉಪ ಸಭಾಪತಿಯಾಗಿ ಆಯ್ಕೆಯಾಗಿಯಾಗುವ ಬದಲು ಮಾನ್ಯ ಎಸ್.ಎಲ್.ಭೋಜೇಗೌಡರವರು ಕುಳಿತುಕೊಂಡಿದ್ದರೆ, ನಿಮ್ಮ ಪರಿಸ್ಥಿತಿ ಏನಾಗುತ್ತಿತ್ತು ಎಂದು ತಾವೇ ಆಲೋಚನೆ ಮಾಡಿಕೊಳ್ಳಬೇಕು. ನೀವೇನಾದರೂ ಸದನದಲ್ಲಿ ಎದ್ದು ನಿಂತು ಹೇಳಲು ಪ್ರಯತ್ನಿಸಿದರೆ, ಅವರು ಅಲ್ಲಿಯೇ ಕೈ ಹಿಡಿದು ಕೂರಿಸುತ್ತಿದ್ದರು. ನಿಮಗೆ ಅವರು ಹೇಳುವುದಕ್ಕೆ ಬಿಡುತ್ತಿರಲಿಲ್ಲ, ವಿರೋಧ ಪಕ್ಷದವರು ಆಡಳಿತ ಪಕ್ಷಕ್ಕೆ ಧನ್ಯವಾದಗಳನ್ನು ಹೇಳಬೇಕು. ಇವತ್ತಿನ ದಿವಸ ಶ್ರೀ ಎಸ್.ಎಲ್.ಧರ್ಮೇಗೌಡರವರ ರಾಜಕೀಯ ಜೀವನದ ಬಗ್ಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುವುದಾದರೆ, ಅವರು 1986–87ರಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಂಡಲ ಪ್ರಧಾನ ಆಗಿದ್ದರು. ನಾನು ಕೂಡ ಆ ಸಂದರ್ಭದಲ್ಲಿ ಕುತ್ತೇರು ಮಂಡಲ ಪ್ರಧಾನ ಆಗಿದ್ದೆನು, ನಾನು ಕೂಡ ಆ ಮೂಲಕ ಬಂದಂತಹವನು. ಸಹಕಾರ ಸಂಘದಲ್ಲಿ ಅತ್ಯಂತ ಒಳ್ಳೆಯ ಹೆಸರನ್ನು ಗಳಿಸಿದವರಾಗಿರುತ್ತಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಸಹಕಾರಿ ರಂಗವನ್ನು ಪ್ರತಿನಿಧಿಸಿದವರಾಗಿದ್ದಾರೆ. ಹಾಗಾಗಿ, ಅವರು ಕೆಳ ಮನೆಯಲ್ಲೂ ಕೂಡ ಮಾನ್ಯ ಶಾಸಕರಾಗಿ ಕೆಲಸ ಮಾಡಿದ್ದಾರೆ. ಅವರು ಮೇಲ್ಮನೆಗೆ ಬಂದಾಗ ಸ್ವಲ್ಪ ದಿವಸಗಳಲ್ಲೇ ಉಪ ಸಭಾಪತಿಗಳಾಗಿ ಆಗತಕ್ಕಂಥ ಅವಕಾಶ ಅವರ ಪಾಲಿಗೆ ಒದಗಿ ಬಂತು. ಮಾನ್ಯ ಉಪ ಸಭಾಪತಿಯವರ ಹುದ್ದೆಗೆ ಸೌಮ್ಯತೆಯ ಗುಣ ಇರಬೇಕು, ಕಡಿಮೆ ಮಾತನಾಡತಕ್ಕಂಥವರು ಆಗಿರಬೇಕು ಮತ್ತು ಆ ಧರ್ಮಪೀಠದಲ್ಲಿ ಕುಳಿತುಕೊಂಡು ನ್ಯಾಯ ಕೊಡತಕ್ಕಂಥ ಚಾಣಾಕ್ಷತನ ಇರಬೇಕು.

(555)19-12-2018(12-00)mm-md

**ಶ್ರೀ ಐವನ್ ಡಿ'ಸೋಜಾ (ಮುಂದು):–**

ಉಪಸಭಾಪತಿ ಹುದ್ದೆಗೆ ಆಯ್ಕೆಯಾಗುವವರಿಗೆ ಸೌಮ್ಯತೆಯ ಗುಣ ಇರಬೇಕು, ಕಡಿಮೆ ಮಾತನಾಡುವವರಾಗಿರಬೇಕು ಮತ್ತು ಧರ್ಮ ಪೀಠದಲ್ಲಿ ಕುಳಿತುಕೊಂಡು ನ್ಯಾಯ ಕೊಡುವಂತಹ ಚಾಣಾಕ್ಷತನ ಇರಬೇಕು. 'ಉಪಸಭಾಪತಿ' ಮತ್ತು 'ಸಭಾಪತಿ' ಸ್ಥಾನ ಎಂದರೆ, ಅದು ನ್ಯಾಯ ಕೊಡುವಂತಹ ಒಂದು ಸ್ಥಾನ. ಎಲ್ಲಾ ಕಡೆಯವರನ್ನೂ ಒಂದೇ ರೀತಿಯಾಗಿ ನೋಡುವವರಾಗಿರುತ್ತಾರೆ. ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಟ್ಟು ಹೆಚ್ಚು ಒಳ್ಳೆಯ ಕೆಲಸಗಳು ಈ ಸದನದ ಮೂಲಕ ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಡುವುದಾಗಿರುತ್ತದೆ. ಮಾನ್ಯ ಧರ್ಮೇಗೌಡರ ರಾಜಕೀಯ ಜೀವನ, ಕುಟುಂಬ ಮತ್ತು ಬೇರೆ ಬೇರೆ ವಿಚಾರಗಳೆಲ್ಲವೂ ಉಪ ಸಭಾಪತಿ ಸ್ಥಾನಕ್ಕೆ ಸರಿಯಾಗಿ ಕೆಲಸ ಮಾಡುವಂತಹ ಎಲ್ಲಾ ಗುಣಗಳು ಮಾನ್ಯ ಧರ್ಮೇಗೌಡರಲ್ಲಿದೆ, ಅವರಿಗೆ ನಾನು ಅಭಿನಂದಿಸುತ್ತೇನೆ. ಅವರ ಅಧಿಕಾರಾವಧಿ ಇನ್ನೂ ಐದೂವರೆ ವರ್ಷಗಳು ಇರಬಹುದು. ಅದರ ಉದ್ದಕ್ಕೂ ಮುಂದುವರಿಯುವ ಅವಕಾಶಗಳಾಗಲಿ ಮತ್ತು ಅವರ ಎಲ್ಲಾ ಕೆಲಸ ಕಾರ್ಯಗಳೂ ಉಪಸಭಾಪತಿ ಸ್ಥಾನಕ್ಕೆ ಗೌರವ ತಂದುಕೊಡಲಿ ಎಂದು ಶುಭವನ್ನು ಕೋರುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ನನಗೆ ಬಹಳಷ್ಟು ಸಂತೋಷ ಮತ್ತು ಸಮಾಧಾನವಾಗಿದೆ. ಏಕೆಂದರೆ, ಮಾನ್ಯ ಧರ್ಮೇಗೌಡರು ಉಪಸಭಾಪತಿಯಾಗಿ ಆರಿಸಿ ಬಂದಿದ್ದಕ್ಕೆ ನಮಗೆ ಬಹಳಷ್ಟು ಅಭಿಮಾನವೆನಿಸುತ್ತದೆ. 2004ರಲ್ಲಿ ನಾನು ಮಂತ್ರಿಯಾಗಿದ್ದೆ. ನಮ್ಮದು ಒಂದು ಸ್ನೇಹಕೂಟ ಇತ್ತು. ಶ್ರೀ ಧರ್ಮೇಗೌಡರು, ಶ್ರೀ ಬಾಲಚಂದ್ರ ಜಾರಕಿಹೊಳಿಯವರು, ಶ್ರೀ ಹನುಮಂತ ಅಲ್ಕೋಡ್ ಅವರು ಮತ್ತು ಗಂಗಾವತಿ ಎಂ.ಎಲ್.ಎ. ಆಗಿದ್ದ ಶ್ರೀ ಇಕ್ಬಾಲ್ ಅನ್ಸಾರಿಯವರು ಸೇರಿದಂತೆ 4–5 ಜನರ ಗ್ರೂಪ್ ಇತ್ತು. ಅದು ಹೇಗಿತ್ತು ಎಂದರೆ, ಅಂತಹ ಸ್ನೇಹಿತರು ಇರುವುದು ಅಪರೂಪ. ಆದರೆ ನೋವಿನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಗತಿ ಎಂದರೆ, ಒಬ್ಬೊಬ್ಬರು ಒಂದೊಂದು ಪಕ್ಷಕ್ಕೆ ಹೋದರು. ಆದರೆ ಇವತ್ತಿನವರೆಗೂ ನಮ್ಮ ಸ್ನೇಹ ಮಾತ್ರ ಬದಲಾಗಿಲ್ಲ, ಅದು ಹಾಗೇ ಇದೆ. ಮಾನ್ಯ ಧರ್ಮೇಗೌಡರು ಯಾವಾಗಲೂ ನಮ್ಮ ಬಗ್ಗೆ ಅತ್ಯಂತ ಕಾಳಜಿ, ಗೌರವವನ್ನು ಕೊಡುವಂತಹ ಸರಳ ಸಜ್ಜನ ರಾಜಕಾರಣಿ ಎಂದು ಹೇಳಿದರೆ ತಪ್ಪಾಗಲಾರದು. ಅವರು ಬಹಳ ಮೃದು ಸ್ವಭಾವದವರು, ಬಹಳ ಒಳ್ಳೆಯ ರೀತಿಯಿಂದ ನಡೆದುಕೊಳ್ಳುವಂತಹ ವ್ಯಕ್ತಿಯಾಗಿದ್ದಾರೆ. ಚಿಕ್ಕಮಗಳೂರಿನ ಒಂದು ಸಮಾರಂಭದಲ್ಲಿ ಮಾನ್ಯ ಧರ್ಮೇಗೌಡರು ಮತ್ತು ಮಾನ್ಯ ಭೋಜೇಗೌಡರಿಬ್ಬರೂ ಕುಳಿತಿದ್ದರು. ಆಗ ಅವರಿಗೆ ಇವರಿಬ್ಬರಲ್ಲಿ ಅತ್ಯಂತ ಪ್ರೀತಿಯಿಂದ ನೋಡುವುದಾದರೆ ಅದು ಮಾನ್ಯ ಧರ್ಮೇಗೌಡ ಎಂದು ಹೇಳಿದೆ. ಈಗಲೂ ಹೇಳುತ್ತೇನೆ ಇವರಿಗಿಂತ ನನಗೆ ಅವರ ಮೇಲೆಯೇ ಬಹಳ ಪ್ರೀತಿ, ಗೌರವ. ಒಮ್ಮೆ ತಮ್ಮ ಛೇಂಬರಿನಲ್ಲಿ ಕುಳಿತಾಗ ಸದನದಲ್ಲಿ ಯಾವಾಗಲೂ ಬಿಲ್ಲು, ಬಾಣಗಳ ಹೋರಾಟ ನಡೆಯುತ್ತಿರುತ್ತದೆ ಎಂದು ಹೇಳಿದೆ. ಆಗ ಮಾನ್ಯ ಕೆ.ಎಸ್. ಈಶ್ವರಪ್ಪನವರು ಮತ್ತು ಮಾನ್ಯ ಉಗ್ರಪ್ಪನವರು ಇದ್ದರು. ಈಗ ಮಾನ್ಯ ಈಶ್ವರಪ್ಪನವರ ಜಾಗವನ್ನು ಡಾ: ವೈ.ಎ. ನಾರಾಯಣಸ್ವಾಮಿಯವರು ತೆಗೆದುಕೊಂಡಿದ್ದಾರೆ, ಮಾನ್ಯ ಉಗ್ರಪ್ಪನವರ ಜಾಗವನ್ನು ಮಾನ್ಯ ಭೋಜೇಗೌಡರು ತೆಗೆದುಕೊಂಡಿದ್ದಾರೆ. ಅಷ್ಟಿಲ್ಲ, ಸ್ವಲ್ಪ dilute ಆಗಿದೆ. ಉಗ್ರಪ್ಪನವರು ಕಾನೂನಿನ ಪುಸ್ತಕವನ್ನು ಹಿಡಿದುಕೊಳ್ಳುತ್ತಿದ್ದರು, ಆದರೆ ಇವರು ಅದನ್ನು ಕಿಸೆಯಲ್ಲಿಯೇ ಇಟ್ಟುಕೊಂಡಿರುತ್ತಾರೆ. ನನಗೆ ಸಭಾಪತಿ ಸ್ಥಾನದಿಂದ ಬೇಗ ಇಳಿದದ್ದು ಒಳ್ಳೆಯದಾಯಿತು ಎಂದು ಅನಿಸುತ್ತಿದೆ. ಏಕೆಂದರೆ, ಅವರು ನನ್ನ ಮೇಲೆ ಒಂದು ದೊಡ್ಡ ಗುರಿಯನ್ನು ಇಟ್ಟಿದ್ದರು. ಅವರಿಗೆ ಯಾವುದೋ ಶಬ್ಧವನ್ನು ನನ್ನ ಕಡೆ ಹೇಳಿ, ಇಡೀ ದೇಶದ ದೂರದರ್ಶನದಲ್ಲಿ ಬರಬೇಕೆನ್ನುವ ಆಸೆ ಇತ್ತು, ಅದೇನೆಂದು ಆಮೇಲೆ ಹೇಳುತ್ತೇನೆ. ನಮ್ಮೆಲ್ಲರ ಸೌಭಾಗ್ಯವೆಂದರೆ ಇಡೀ ಭಾರತ ದೇಶದಲ್ಲಿಯೇ ಅತ್ಯಂತ ಹೆಮ್ಮೆ ಪಡುವಂತಹ ಸದನ ಎಂದರೆ ಅದು ನಮ್ಮ ವಿಧಾನ ಪರಿಷತ್ತು. ಇಲ್ಲಿ ನಡೆಯುವಂತಹ ಚರ್ಚೆ, ಇಲ್ಲಿ ಎಲ್ಲಾ ರಂಗದಿಂದ ಬಂದಂತಹ ದೊಡ್ಡ ದೊಡ್ಡ ಜನರಿದ್ದಾರೆ. ನಾನು ವಿಧಾನ ಪರಿಷತ್ ಸದಸ್ಯನಾಗಿ ಈಗಾಗಲೇ ಇಲ್ಲಿ ಕುಳಿತು 16 ಜನ ಮುಖ್ಯಮಂತ್ರಿ, 12 ಜನ ಸಭಾಪತಿಯನ್ನು ಮತ್ತು 14 ಜನ ಉಪ ಸಭಾಪತಿಗಳನ್ನು ನೋಡಿದ್ದೇನೆ. ಇಲ್ಲಿಯವರೆಗೆ ನಡೆದುಕೊಂಡು ಬಂದಂತಹ ದಾರಿ ಎಂದರೆ, ಎಲ್ಲರೂ ಎಷ್ಟೇ ವಿವಾದವನ್ನು, ವಾದವನ್ನು ಮಾಡಿದರೂ ಈ ಸದನದಲ್ಲಿ ಎಲ್ಲರೂ ಸ್ನೇಹದಿಂದ ಇರುತ್ತಾರೆ. ಅಂತಹದ್ದರಲ್ಲಿ ಇಂದು ತಾವು ಚುನಾಯಿತರಾದಿರಿ, ಮಾನ್ಯ ಧರ್ಮೇಗೌಡರು ಉಪಸಭಾಪತಿಯಾದರು ಮತ್ತು ಡಾ: ವೈ.ಎ. ನಾರಾಯಣಸ್ವಾಮಿಯವರು ಉಪನಾಯಕರಾದರು, ಇದನ್ನು ಮರೆತಿದ್ದೆವು. ಒಟ್ಟಿನಲ್ಲಿ ಬೆಳಗಾವಿ ಅಧಿವೇಶನದಲ್ಲಿ ಇದೊಂದು ಹೊಸ ಸಂಪ್ರದಾಯವಾದಂತಾಯಿತು. ನಮಗೆ ಬಹಳ ಅಭಿಮಾನವಾಗುತ್ತಿದೆ. ಬಹಳ ಸೂಕ್ಷ್ಮವಾದಂತಹ ಸಭೆ ನಡೆದಾಗ ಮಾನ್ಯ ಧರ್ಮೇಗೌಡರಿಗೆ ತಮ್ಮದೇ ಆದ ನಿರ್ಣಯಗಳನ್ನು ತೆಗೆದುಕೊಳ್ಳುವಂತಹ ಶಕ್ತಿ ಇದೆ. ತಮ್ಮ ಮಾರ್ಗದರ್ಶನ ಅವರಿಗೆ ಇರಬೇಕು. ಮಾನ್ಯ ಧರ್ಮೇಗೌಡರಿಗೆ ನಾವೆಲ್ಲರೂ ಎಲ್ಲಾ ರೀತಿಯಿಂದಲೂ ಸಹಕಾರ ಕೊಡುತ್ತೇವೆ, ಒಟ್ಟಾರೆ ಈ ಸದನವು ಉತ್ತಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ನಡೆಯಲಿ ಎಂಬ ಸದುದ್ದೇಶ ಹೊಂದಿ, ಮುಂದಿನ ದಿನಗಳಲ್ಲಿ ಮಾನ್ಯ ಧರ್ಮೇಗೌಡರಿಗೆ ಎಲ್ಲಾ ರೀತಿಯಿಂದಲೂ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ. ಅವರ ತಂದೆಯವರು ಮತ್ತು ನಾನು Subordinate Legislation Committee members ಆಗಿದ್ದೆವು. ಆಗ ಮಾನ್ಯ ಧರ್ಮೇಗೌಡರು ಬೇರೆ ಕಮಿಟಿಯಲ್ಲಿದ್ದರು. ಮಾನ್ಯ ಮಂಜುನಾಥರವರು ಮತ್ತು ಶ್ರೀ ಧರ್ಮೇಗೌಡರ ತಂದೆ ಲಕ್ಷ್ಮಯ್ಯನವರ ಬಗ್ಗೆ ಹೇಳಿದರು. ಅವರದೇನೂ ಇವರಿಗೆ ಬಂದಿಲ್ಲ. ಅವರೇನೇ ಹೇಳಿದರೂ ನಾನದನ್ನು ಒಪ್ಪುವುದಿಲ್ಲ. ಅವರದ್ದು ಬೇರೆ ರೀತಿಯಾದರೆ ಇವರು ಬೇರೆ ನಮೂನೆಯವರು. ಅದನ್ನೆಲ್ಲಾ ಕೆಲವು ಸಲ ಹೇಳುವ ಹಾಗಿಲ್ಲ. ಮಾನ್ಯ ಧರ್ಮೇಗೌಡರ ಬಗ್ಗೆ ಮಾತನಾಡಿದವರು ಮಾನ್ಯ ಭೋಜೇಗೌಡರ ಬಗ್ಗೆಯೂ ಮಾತನಾಡಿದರು. ಇನ್ನೂ ಆರು ವರ್ಷದಲ್ಲಿ ಎಷ್ಟೆಷ್ಟು ಮಾತನಾಡುತ್ತಾರೋ ಗೊತ್ತಿಲ್ಲ. ಅದಕ್ಕೇ ಮಾನ್ಯ ಧರ್ಮೇಗೌಡರಿಗೆ ಅವರ ಬಗ್ಗೆ ಸ್ವಲ್ಪ ಕಾಳಜಿ ಇರಲಿ ಎಂದು ಹೇಳುತ್ತಾ ಅವರಿಗೆ ಶುಭವನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಧರ್ಮೇಗೌಡರು ಉಪಸಭಾಪತಿಯಾಗಿ ಆಯ್ಕೆಯಾಗಿರುವುದಕ್ಕೆ ಹೃತ್ಪೂರ್ವಕ ಅಭಿನಂದನೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೇಲ್ಮನೆಗೆ ಬರುವುದಕ್ಕೆ ಅವರು ಯಾವತ್ತೂ ಪ್ರಯತ್ನ ಪಟ್ಟಿರಲಿಲ್ಲ. ಅವರು ಮನೆಯಲ್ಲಿ ಮಲಗಿಕೊಂಡಿದ್ದರು. ದೊಡ್ಡವರು ಯಾವಾಗಲೂ ಅವರ ತಂದೆಯವರಿಗೆ ಒಂದು ಮಾತನ್ನು ಕೊಟ್ಟಿದ್ದಾರೆ ಅವರ ತಂದೆಯವರ ಋಣ ತೀರಿಸುವುದು ನಮ್ಮ ಮೇಲಿದೆ ಎಂದು ಹೇಳುತ್ತಿದ್ದರು. ಮಂಜಣ್ಣನವರು ಒಂದು ಮಾತು ಹೇಳಿದರು. ಮಾನ್ಯ ಭೋಜೇಗೌಡರನ್ನು ಅರ್ಜುನನಿಗೆ ಹೋಲಿಸುತ್ತಿದ್ದರು. ಅವರನ್ನು ಅರ್ಜುನನಿಗೆ ಹೋಲಿಸಬಾರದು, ಅವರನ್ನೇನಿದ್ದರೂ ಶ್ರೀ ಕೃಷ್ಣ ಪರಮಾತ್ಮನಿಗೆ ಹೋಲಿಸಬೇಕಾಗಿದೆ. ಏಕೆಂದರೆ, ಇವರಿಗೆ ಶ್ರೀ ಕೃಷ್ಣ ಪರಮಾತ್ಮನಿಗೆ ಎಷ್ಟೊಂದು ವಿದ್ಯೆಗಳಿದ್ದವು ಅದಕ್ಕಿಂತ ಸ್ವಲ್ಪ ಜಾಸ್ತಿಯೇ ವಿದ್ಯೆಗಳಿವೆ. ಮೇಲ್ಮನೆಗೆ ಬರುವುದಕ್ಕೆ ಬಹಳ ಪ್ರಯತ್ನ ಪಡುತ್ತಿದ್ದವರು ಮಾನ್ಯ ಭೋಜೇಗೌಡರು. ಆದರೆ ಧರ್ಮೇಗೌಡರು ಮನೆಯಲ್ಲಿ ಮಲಗಿಕೊಂಡಿದ್ದರು. 12.00 ಗಂಟೆ ರಾತ್ರಿಯಲ್ಲಿ ಮಾನ್ಯ ಸಚಿವರಾದ ರೇವಣ್ಣನವರು ಕರೆ ಮಾಡಿ, ಅವರೇ affidavit ready ಮಾಡಿ, ಬೆಳಿಗ್ಗೆ ಅವರಿಂದ nomination file ಮಾಡಿಸಿದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ರಮೇಶಗೌಡರೇ, ಅವರು ಇಲ್ಲಿಗೆ ಬರುವಾಗ ನೀವು ಎಲ್ಲಿದ್ದಿರಿ?

**(ಸದನದಲ್ಲಿ ನಗು)**

**ಶ್ರೀ ಹೆಚ್.ಎಂ. ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಈ ಸದನದ ಇನ್ನೊಂದು ವಿಶೇಷತೆಯೇನೆಂದರೆ, ನಾಲ್ಕು ಜನರೆಲ್ಲರೂ ಕರಾವಳಿ ಭಾಗದವರೇ ಆದರು.

**ಶ್ರೀ ಐವನ್ ಡಿ'ಸೋಜಾ:–** ಕರಾವಳಿ ಅಲ್ಲ, ಮಲೆನಾಡು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ. ರಮೇಶ ಗೌಡ:-** ಕರಾವಳಿ, ಮಲೆನಾಡು ಎಲ್ಲಾ ಒಂದೇ ಅಲ್ಲವೇ? ಮಾನ್ಯ ಧರ್ಮೇಗೌಡರು ಯಾವಾಗಲೂ ನನ್ನ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದರು, ಅವರನ್ನು 'ಧರ್ಮಣ್ಣ' ಎಂದು ಕರೆಯುತ್ತಿದ್ದೆವು. ಈಗ ಅವರು ಅಲ್ಲಿ ಕುಳಿತುಕೊಂಡಿದ್ದಾರೆ. ಹಾಗಾಗಿ ನನ್ನ ಪಕ್ಕದ ಸೀಟು ಖಾಲಿಯಾಗಿದೆ.

**ಸಭಾಪತಿಯವರು:-** ನಿಮಗೊಂದು promotion ಬೇಕಿತ್ತಾ?

**(ಸದನದಲ್ಲಿ ನಗು)**

**ಶ್ರೀ ಹೆಚ್.ಎಂ. ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಗುರುಗಳಾದ ಮಾನ್ಯ ಬಸವರಾಜ ಹೊರಟ್ಟಿಯವರು ಅವರು ಇಲ್ಲಿಗೆ ಬರುವಾಗ 'ನೀನು ಎಲ್ಲಿದ್ದೆ' ಎಂದು ಹೇಳುತ್ತಿದ್ದರು. ಮೊನ್ನೆ ದಿವಸ ಭಾಷಣ ಮಾಡುವಾಗಲೂ ಕೂಡ; ಅವರು ಮೇಲ್ಮನೆಯನ್ನು ಪ್ರವೇಶ ಮಾಡಬೇಕಾದರೆ ನಾವೆಲ್ಲಾ ಇನ್ನೂ ಹುಟ್ಟಿಯೇ ಇರಲಿಲ್ಲ. ಅವರಿಗೆ ಮೇಲ್ಮನೆಯಲ್ಲಿ ಎಷ್ಟು ವರ್ಷ service ಆಗಿದೆಯೋ ಅಷ್ಟು ವಯಸ್ಸೂ ನಮಗೆ ಆಗಿಲ್ಲ. ಮಾನ್ಯ ಬಸವರಾಜ ಹೊರಟ್ಟಿಯವರು ಯಾವಾಗಲೂ ಒಂದು ಮಾತನ್ನು ಹೇಳುತ್ತಿದ್ದರು. 'ಏನೇ ಮಾತನಾಡಿದರೂ ಪರವಾಗಿಲ್ಲ, ತಪ್ಪೋ ಸರಿಯೋ ಮಾತನಾಡಿ, ಮಾತನಾಡಿದರೆ ಕಲಿಯುತ್ತೀರಿ' ಎಂದು ಸ್ಫೂರ್ತಿದಾಯಕ ಮಾತುಗಳನ್ನು ಹೇಳಿ ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದರು. ತಾವು ಕೂಡ ಅದೇ ಕೆಲಸವನ್ನು ನಮಗೆ ಮಾಡುತ್ತಿದ್ದೀರಿ. ನಾವೆಲ್ಲಾ Junior Members ಗಳಾಗಿದ್ದೇವೆ. ನಾವೇನಾದರೂ ತಪ್ಪು ಮಾಡಬಹುದು, ತಪ್ಪು ಮಾಡಿದರೆ ತಿದ್ದಿಕೊಳ್ಳುತ್ತೇವೆ. ಮಾನ್ಯ ಸಿ.ಎಂ. ಇಬ್ರಾಹಿಂರವರು ಇರಬಹುದು, ಬಹಳಷ್ಟು ಹಿರಿಯರು ಮೇಲ್ಮನೆ ಸದಸ್ಯರಾಗಿದ್ದಾರೆ. ಅವರಿಂದ ಕಲಿಯುವುದು ನಮಗೆ ಬಹಳಷ್ಟಿದೆ. ಉಪಸಭಾಪತಿಯಾಗಿ ಆಯ್ಕೆಯಾಗಿರುವ ಮಾನ್ಯ ಧರ್ಮೇಗೌಡರಿಗೆ ಮತ್ತೊಮ್ಮೆ ಹೃತ್ಪೂರ್ವಕ ಧನ್ಯವಾದಗಳನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಸಭಾಪತಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ಎಲ್.ಧರ್ಮೇಗೌಡರು ಅವಿರೋಧವಾಗಿ ಉಪಸಭಾಪತಿಯಾಗಿ ಆಯ್ಕೆಯಾಗಿರುವುದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಾ, ಎಲ್ಲಾ ಹಿರಿಯ ಶಾಸಕರು ಧರ್ಮೇಗೌಡರ ಬಗ್ಗೆ ಮತ್ತು ಅವರ ಕುಟುಂಬದ ಹಿನ್ನೆಲೆಯ ಬಗ್ಗೆ ಸುದೀರ್ಘವಾಗಿ ಮಾತನಾಡಿದ್ದಾರೆ.

(556) 19-12-2018/12-10/ಕೆಹೆಚ್-ಎಂಡಿ

**ಶ್ರೀ ಎನ್.ಅಪ್ಪಾಜಿಗೌಡ (ಮುಂದು):-** ಇದರ ಜೊತೆಗೆ ಮಾನ್ಯ ಧರ್ಮೇಗೌಡರವರು ಉಪಸಭಾಪತಿಯವರಾಗಿ ಆಯ್ಕೆಯಾಗುವುದಕ್ಕೆ ನಮ್ಮ ಪಕ್ಷದ ಸರ್ವೋಚ್ಚ ನಾಯಕರಾದ ಸನ್ಮಾನ್ಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದೇವೇಗೌಡರವರು ಮತ್ತು ನಮ್ಮ ನೆಚ್ಚಿನ ನಾಯಕರು ಹಾಗೂ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರು, ಉಪಮುಖ್ಯಮಂತ್ರಿಯವರು, ಈ ಸರ್ಕಾರದ ಎಲ್ಲಾ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಧರ್ಮೇಗೌಡರವರು ಬಹಳ ಚಿಕ್ಕ ವಯಸ್ಸಿನಲ್ಲಿ ಅಂದರೆ ಸುಮಾರು 25 ವರ್ಷ ವಯಸ್ಸಿನಲ್ಲಿಯೇ ಸಹಕಾರ ರಂಗದಲ್ಲಿ ಪ್ರವೇಶ ಮಾಡಿ, ಸುಮಾರು 3 ಬಾರಿ ಗೆದ್ದು ಚಿಕ್ಕಮಗಳೂರು DCC (*District Central Cooperative) Bank* ನ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಈಗಲ್ಲೂ ಕೂಡ DCC Bank ನ ಹಾಲಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಜನತಾದಳ, ಬಿ.ಜೆ.ಪಿ., ಮತ್ತು ಕಾಂಗ್ರೆಸ್ ಈ ಮೂರು ಪಕ್ಷಗಳು ಕೂಡ ಬಹಳ ಪ್ರಬಲವಾಗಿವೆ. ಆದ್ದರೂ ಕೂಡ ಎಲ್ಲಾ ಪಕ್ಷದವರಿಗೆ ಸಹಕಾರಿ ಬ್ಯಾಂಕಿನಲ್ಲಿ ಕೆಲಸವನ್ನು ಕೊಟ್ಟಿದ್ದಾರೆ ಮತ್ತು ಕೆಲಸವನ್ನು ಮಾಡುತ್ತಿದ್ದಾರೆ. ಅದರ ಜೊತೆಗೆ KMF (Karnataka Milk Federation) ಮತ್ತು ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾಗಿ ಸಹಕಾರ ಮಹಾಮಂಡಲದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಇವರು 2004ನೇ ಸಾಲಿನಲ್ಲಿ ಶಾಸಕರಾಗಿ ಆಯ್ಕೆಯಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇಂತಹ ಮಾನ್ಯ ಧರ್ಮೇಗೌಡರವರನ್ನು ಈ ಚಿಂತಕರ ಚಾವಡಿಯ ಒಂದು ಮೇಲ್ಮನೆಗೆ ಉಪಸಭಾಪತಿ ಸ್ಥಾನಕ್ಕೆ ಸೂಕ್ತವಾಗಿ ಎಲ್ಲಾ ಪಕ್ಷದವರು ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿ, ಮಾನ್ಯ ಧರ್ಮೇಗೌಡರವರು ಆ ಪೀಠದಲ್ಲಿ ಅವರ ಉಪಸ್ಥಿತಿಯಲ್ಲಿ ತಮ್ಮ ಅನುಭವ ಏನಿದೆ, ಅದನ್ನು ಎಲ್ಲಾ ಪಕ್ಷದವರಿಗೂ ಕೂಡ ನ್ಯಾಯ ಕೊಡಿಸುವಂತಹ ಕೆಲಸ ಮಾಡುತ್ತಾರೆಂದು ಆಶಯವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ನಮ್ಮ ನಾಯಕರಾದ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದು ಆರು-ಏಳು ತಿಂಗಳುಗಳಾಗಿವೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಡೆದಿರುವಂತಹ ಈ ಬೆಳಗಾವಿ ಅಧಿವೇಶನದಲ್ಲಿ ಸಭಾಪತಿಯವರ ಹಾಗೂ ಉಪ ಸಭಾಪತಿಯವರ ಒಂದು ಉತ್ತಮವಾದಂತಹ ಆಯ್ಕೆಯ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದವರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇದರ ಜೊತೆಗೆ ಯಾವುದೇ ಚುನಾವಣಾ ಪ್ರಕ್ರಿಯೆ ನಡೆಯದೇ ಅವಿರೋಧವಾಗಿ ಸಭಾಪತಿ ಮತ್ತು ಉಪಸಭಾಪತಿಯವರ ಆಯ್ಕೆಯ ವಿಚಾರ ತುಂಬಾ ಚೆನ್ನಾಗಿ ನಡೆದಿದೆ. ಬಹುಶಃ ಇಲ್ಲಿರುವಂತಹ ಎಲ್ಲಾ ಸದಸ್ಯರಿಗೂ ಕೂಡ ನಾನು ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ಇವತ್ತಿನ ದಿವಸ ಉಪಸಭಾಪತಿಗಳಾದಂತಹ ಮಾನ್ಯ ಧರ್ಮೇಗೌಡರವರು ಬಹುಶಃ ಮಹಾಭಾರತದಲ್ಲಿ ಧರ್ಮರಾಯ ಯಾವ ರೀತಿಯಲ್ಲಿ ಧರ್ಮವನ್ನು ಎತ್ತಿ ಹಿಡಿದು ಪರಿಪಾಲನೆ ಮಾಡುವಂತಹ ಒಂದು ವ್ಯವಸ್ಥೆಯನ್ನು ಮಾಡಿಕೊಂಡು ಬಂದಿದ್ದಾರೋ, ಅದೇ ರೀತಿ ಮಾನ್ಯ ಧರ್ಮೇಗೌಡರವರು ಇವತ್ತಿನ ದಿವಸ ಈ ಸದನದ ಪೀಠಕ್ಕೆ ಹೆಚ್ಚಿನ ಒಂದು ಮಹತ್ವವನ್ನು ಕೊಡಬೇಕು ಮತ್ತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರ ಆಯ್ಕೆ ವಿಚಾರವು ತುಂಬಾ ಚೆನ್ನಾಗಿ ನಡೆದಿದೆ ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಮ್ಮ ಪಕ್ಷದ ವರಿಷ್ಠರಾದಂತಹ ಸನ್ಮಾನ್ಯ ದೇವೇಗೌಡರವರು, ನಮ್ಮ ನಾಯಕರಾದಂತಹ ಕುಮಾರಸ್ವಾಮಿಯವರು ಮತ್ತು ಸಚಿವರಾದಂತಹ ಮಾನ್ಯ ಹೆಚ್.ಎಂ.ರೇವಣ್ಣನವರು ಎಲ್ಲರೂ ಕೂಡ ಸೇರಿ ಈ ಆಯ್ಕೆಯನ್ನು ಮಾಡಿದ್ದಾರೆ. ಒಬ್ಬ ಉತ್ತಮವಾದಂತಹ ವ್ಯಕ್ತಿಗೆ ಉಪಸಭಾಪತಿಯವರ ಸ್ಥಾನವನ್ನು ಕೊಟ್ಟಿದ್ದಾರೆ. ಅವರಿಗೂ ಕೂಡ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಜೊತೆಗೆ ಮಾನ್ಯ ಧರ್ಮೇಗೌಡರವರು ಈ ಒಂದು ಸಹಕಾರ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದಾರೆ ಎಂಬುದರ ಬಗ್ಗೆ ನಾನು ಕೇಳಿದ್ದೇನೆ. ಮಾನ್ಯ ಧರ್ಮೇಗೌಡರವರು ಈ ಸಹಕಾರ ಕ್ಷೇತ್ರದ ದಿಗ್ಗಜರು ಎಂದು ಹೇಳಬಹುದು. ಜೊತೆಗೆ ಎಲ್ಲೋ ಒಂದು ಕಡೆ ಮಾನ್ಯ ಭೋಜೇಗೌಡರವರು ಕೂಡ ಅಣ್ಣನ ವಿಚಾರದಲ್ಲಿ ಎಲ್ಲೂ lobby ಮಾಡದೇ, ಅವರು ಈ ಒಂದು ವಿಚಾರದಲ್ಲಿ ಮಾನ್ಯ ಧರ್ಮೇಗೌಡರವರನ್ನು ಆಯ್ಕೆ ಮಾಡಿದ್ದಾರೆ. ಬಹುಶಃ ಎಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

**ಶ್ರೀ ಎಸ್.ಎಲ್. ಧರ್ಮೇಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯ ಮೇರೆಗೆ ಈ ಸಂದರ್ಭದಲ್ಲಿ ನನ್ನನ್ನು ಉಪಸಭಾಪತಿಗಳಾಗಿ ಆಯ್ಕೆಯಾಗುವುದಕ್ಕೆ ಸಹಕರಿಸಿದಂತಹ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ. ಪ್ರಪಥಮವಾಗಿ ಈ ಸದನದಲ್ಲಿ ಎಲ್ಲರೂ ಮಾತನಾಡುವಂತಹ ಸಂದರ್ಭದಲ್ಲಿ ಹಿರಿಯರು-ಕಿರಿಯರು ಹಾಗೂ ವಿರೋಧ ಪಕ್ಷ-ಆಡಳಿತ ಪಕ್ಷದ ಎಲ್ಲಾ ಸದಸ್ಯರು ಮಾತನಾಡುವ ಸಂದರ್ಭವನ್ನು ಗಮನಿಸಿದಾಗ, ಇದರಲ್ಲಿ ಯಾರು ವಿರೋಧ ಪಕ್ಷದವರು, ಯಾರು ಆಡಳಿತ ಪಕ್ಷದವರು ಎಂದು ಗೊತ್ತಾಗದ ರೀತಿಯಲ್ಲಿ ಬಹಳಷ್ಟು ಅಕ್ಕರೆಯ, ಪ್ರೀತಿಯ, ನಲ್ಮೆಯ ಮಾತುಗಳನ್ನು ಆಡಿದ್ದಾರೆ. ನಮ್ಮ ದಾರಿ ಏನು? ನಮ್ಮ ಗುರಿಯೇನು? ನಾವು ಹೇಗೆ ಇರಬೇಕೆಂಬುದನ್ನು ಮೇಲ್ಮನೆಯಲ್ಲಿ ಅರ್ಥಗರ್ಭಿತವಾಗಿ ಸಂಪೂರ್ಣ ಘನತೆ, ಗೌರವಗಳನ್ನು ಎತ್ತಿ ಹಿಡಿಯುವಂತಹ ನಿಟ್ಟಿನಲ್ಲಿ ಮಾನ್ಯ ಸಚಿವರಾದಿಯಾಗಿ, ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ, ಮಾನ್ಯ ಉಪ ನಾಯಕರಾದಿಯಾಗಿ, ಮಾನ್ಯ ಸದಸ್ಯರಾದಿಯಾಗಿ ತುಂಬಾ ಮನಮಿಡಿಯುವಂತೆ ಮಾತನಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಎಂತಹ ಕಠೋರವಾದಂತಹ ವ್ಯಕ್ತಿ ಮತ್ತು ವಿರೋಧ ಮಾಡುವಂತಹ ವ್ಯಕ್ತಿ ಇದ್ದರೂ ಸಹ ಅವರ ಮನವನ್ನು ಗೆಲ್ಲುವಂತಹ ರೀತಿಯಲ್ಲಿ ಪ್ರಶಂಸೆ ಮಾತನ್ನು ಆಡಿದ್ದಾರೆ. ಮಾತನಾಡುವ ದಾಟಿ, ಒಂದು ರೀತಿಯಲ್ಲಿ ಹಾಸ್ಯ ಮಾತನಾಡುತ್ತಾ ಈ ಸದನದ ಗೌರವವನ್ನು ಹೇಗೆ ಎತ್ತಿ ಹಿಡಿಯಬೇಕು, ಸಭಾಪತಿಯವರ ಮತ್ತು ಉಪಸಭಾಪತಿಯವರ ಕರ್ತವ್ಯಗಳು ಹೇಗೆ ಸಾಗಬೇಕಾಗುತ್ತದೆ, ಎನ್ನುವ ವಿಚಾರವನ್ನು ತುಂಬಾ ಚೆನ್ನಾಗಿ ಮಾನ್ಯ ಸದಸ್ಯರುಗಳು ಹೇಳಿದ್ದಾರೆ ಎನ್ನುವ ಮಾತನ್ನು ನಾನಾದರೂ ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಹೊಸ ರೀತಿಯ ಬೆಳಕು ಚೆಲ್ಲುವಂತಹ ಅನುಭವವಾಯಿತು. ಅಲ್ಲಿ ಮೇಲೆ ಕುಳಿತು ಮಾತನಾಡಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪ ನಾಯಕರು ಮಾತನಾಡುವಂತಹ ಮಾತುಗಳು "ಗುಣಕ್ಕೆ ಮತ್ಸರ ಉಂಟೆ" ಎನ್ನುವಂತಹದ್ದಾಗಿದೆ. ಮಾನ್ಯ ಸದಸ್ಯರುಗಳು ಹೃದಯ ತುಂಬಿದ ಮಾತುಗಳನ್ನು ಆಡಿದ್ದಾರೆ. ನನಗೆ ತುಂಬಾ ಸಂತೋಷವಾಯಿತು. ಈ ಸಂದರ್ಭದಲ್ಲಿ ಇದು ಅನಿರೀಕ್ಷಿತ, ಇದನ್ನು ನಾನು ನಿರೀಕ್ಷೆಯನ್ನೇ ಮಾಡಿರಲಿಲ್ಲ. ನಾನು ಯಾವತ್ತೂ ಸಹ ಕನಸು–ಮನಸ್ಸಿನಲ್ಲಿಯೂ ಸಹ ಮೇಲ್ಮನೆಗೆ ಬರುತ್ತೇನೆಂದು ನಿರೀಕ್ಷೆ ಮಾಡಿರಲಿಲ್ಲ. ಉಪ ಸಭಾಪತಿಯಾಗುತ್ತೇನೆಂದು ಸಹ ಗೊತ್ತಿರಲಿಲ್ಲ. ಇದರೊಳಗೆ ಪಾದಾರ್ಪಣೆ ಮಾಡುತ್ತೇನೆಂದು ಸಹ ಗೊತ್ತಿರಲಿಲ್ಲ. ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ಇಬ್ರಾಹಿಂರವರಾದಿಯಾಗಿ, ಮಾನ್ಯ ಆಯನೂರು ಮಂಜುನಾಥ್‌ರವರಾದಿಯಾಗಿ, ನಮ್ಮ ಸಹೋದರಿ ಮಾನ್ಯ ಜಯಮಾಲರವರಾದಿಯಾಗಿ, ನಮ್ಮ ತಂದೆ–ತಾಯಿಯವರ ಹೆಸರನ್ನು ಪ್ರಸ್ತಾಪ ಮಾಡುತ್ತಾ ಮಾತನಾಡಿದರು. ನಮ್ಮ ತಂದೆ–ತಾಯಿಯವರು ಮಾಡಿದ ಪುಣ್ಯದ ಫಲವಾಗಿ, ನಮ್ಮ ನಾಯಕರು ಮತ್ತು ಹಿರಿಷ್ಠರಾದಂತಹ ಮಾನ್ಯ ದೇವೇಗೌಡರು ಮತ್ತು ನಮ್ಮ ಕುಟುಂಬದವರ ಸಂಬಂಧ ಬಹಳ ವರ್ಷಗಳದ್ದಾಗಿದೆ. ಆವತ್ತಿನಿಂದ ರಾಜಕೀಯ ಕ್ಷೇತ್ರಕ್ಕೆ ನಾವು ಪಾದಾರ್ಪಣೆ ಮಾಡಿದ ಮೇಲೆ ಬೇರೆ ಕಡೆ ತಿರುಗಿ ನೋಡಲಿಲ್ಲ. ಅದೇ ಮನೆಯಲ್ಲಿ ಇದ್ದೇವೆ. ಅದನ್ನು ಗುರುತಿಸಿ, ನಮ್ಮ ಮೇಲೆ ಅಪಾರವಾದಂತಹ ಪ್ರೀತಿಯನ್ನಿಟ್ಟು, ನಮ್ಮ ಪಕ್ಷದ ವರಿಷ್ಠರಾದಂತಹ ಮಾನ್ಯ ದೇವೇಗೌಡರವರು ಮತ್ತು ಈ ನಾಡಿನ ಮುಖ್ಯಮಂತ್ರಿಗಳಾದಂತಹ ಕುಮಾರಸ್ವಾಮಿಯವರು, ಮಾನ್ಯ ಸಚಿವರಾದಂತಹ ರೇವಣ್ಣನವರು ಬಹಳ ಪ್ರೀತಿಯಿಂದ ನನ್ನನ್ನು ಆಯ್ಕೆ ಮಾಡಿದ್ದಾರೆ. ನಾನು ಯಾವತ್ತೂ ಸಹ ಅವರನ್ನು ಏನೂ ಕೇಳಲಿಲ್ಲ? ಮಾನ್ಯ ರಮೇಶ್‌ರವರು ಹೇಳಿದ ಹಾಗೆ ನಾನು ಮನೆಯಲ್ಲಿ ಮಲಗಿದ್ದೆ. ನನಗೆ 12–45 ಗಂಟೆಗೆ ದೂರವಾಣಿ ಕರೆಯನ್ನು ಮಾಡಿ, ಬೆಳಿಗ್ಗೆ ಊರಿಗೆ ಬಾ ಎಂದು ಕರೆದು, nomination file ಮಾಡಿಸಿ, ಇಲ್ಲಿಗೆ ಕರೆದುಕೊಂಡು ಬಂದರು. ಈ ಸಂದರ್ಭದಲ್ಲಿ ನಾನು ಹೃದಯಪೂರ್ವಕವಾಗಿ ಮತ್ತು ಎಂದೆಂದೂ ಮರೆಯಲಾಗದಂತಹ ಹೃದಯ ತುಂಬಿದ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಇದು ಅನಿರೀಕ್ಷಿತ, ಇದನ್ನು ನಿರೀಕ್ಷೆ ಮಾಡದೇ ಇರುವಂತಹದ್ದು ಎಂದು ಹೇಳಿದೆ. ಇದರ ಜೊತೆಯಲ್ಲಿ ಘನತೆ–ಗೌರವದ ಬಗ್ಗೆ ಬಹಳಷ್ಟು ಜನ ಮಾನ್ಯ ಹಿರಿಯ ಸದಸ್ಯರೆಲ್ಲಾ ಒಳ್ಳೆಯ ಮಾತುಗಳನ್ನು ಹೇಳಿದರು. ಮಾನ್ಯ ಸಚಿವರು ಮತ್ತು ನಮ್ಮ ಸಹೋದರಿಯಾದಂತಹ ಜಯಮಾಲರವರು ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ರಾಜಧರ್ಮವನ್ನು ಪಾಲನೆ ಮಾಡಬೇಕೆಂದು ಹೇಳಿದರು. ಶಾಸನದ ಆಧಾರದ ಮೇಲೆ ಸದನವನ್ನು ನಡೆಸಬೇಕೆಂದು ಔಚಿತ್ಯಾಪೂರ್ಣವಾದ ಮಾತುಗಳನ್ನು ಮತ್ತು ಈ ಸದನದ ಗೌರವವನ್ನು ಕಾಪಾಡಬೇಕೆಂದು ಸಹ ಹೇಳಿದ್ದಾರೆ. ಈ ಪೀಠದ ಮೇಲೆ ಕುಳಿತಿರುವವರು ನಮ್ಮ ಹಿರಿಯರು 7 ಬಾರಿ ಸತತವಾಗಿ ಮೇಲ್ಮನೆ ಮತ್ತು ಕೆಳಮನೆಯಲ್ಲಿ ಶಾಸಕರಾಗಿ ಕೆಲಸವನ್ನು ಮಾಡಿದಂತಹ ಅಪಾರವಾದ ಅನುಭವ ಇರುವ ಅಧ್ಯಕ್ಷರು ಈ ಕಡೆಯಲ್ಲಿ ಇದ್ದಾರೆ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಜನಿಕರು ಮತ್ತು ಈ

ರಾಜ್ಯದ ಜನತೆ ಈ ಕಡೆ ಗಮನವನ್ನಿಟ್ಟು ನಮ್ಮನ್ನು ನೋಡುತ್ತಿರುತ್ತಾರೆ. ಇವತ್ತಿನ ದಿವಸ ನಮ್ಮ ನಡವಳಿಕೆಗಳು ಮತ್ತು ಚಟುವಟಿಕೆಗಳ ಬಗ್ಗೆ ಬಹಳ ಅಪಾರವಾದ ಗೌರವವನ್ನಿಟ್ಟಿದ್ದಾರೆ. ವಿಧಾನಸೌಧದ ಮೇಲ್ಮನೆಯಲ್ಲಿ ಏನೇನು ನಡೆಯುತ್ತದೆ ಮತ್ತು ನಮ್ಮ ಬಗ್ಗೆಯೂ ಸಹ ಬಹಳಷ್ಟು ಪ್ರಜ್ಞಾವಂತರು, ಜವಾಬ್ದಾರಿಯುಳ್ಳಂತಹ ಸಚಿವರುಗಳು, ಶಾಸಕರುಗಳು ಕೆಲಸ ಮಾಡುವುದಕ್ಕೆ ಮಹತ್ತರವಾದಂತಹ ಶಕ್ತಿಯಿದೆ ಎಂದು ಭಾವಿಸಿದ್ದಾರೆ. ಅದನ್ನು ಉಳಿಸಿಕೊಂಡು ಹೋಗುವಂತಹ ಕೆಲಸವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಮಾಡಬೇಕಾಗುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರು ಯಾವುದೇ ವಿಷಯದ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಅವರು ಮಾತನಾಡುವುದನ್ನು ಆ ಸ್ಥಾನದಲ್ಲಿ ಕುಳಿತು ನೋಡಿದ್ದೇನೆ.

**(557) 19-12-2018 (12-20) ಎಸ್‌ಪಿಆರ್-ಎಕೆ**

**ಶ್ರೀ ಎಸ್.ಎಲ್.ಧರ್ಮೇಗೌಡ(ಮುಂದು):-**

ಈ ಸದನದ ಉಪನಾಯಕರೂ ಸಹ ತುಂಬಾ ಮೇಧಾವಿಗಳು. ಅವರ ಬಗ್ಗೆ ಎರಡು ಮಾತಿಲ್ಲ. ಅವರು ಆಡಳಿತ ಪಕ್ಷಕ್ಕೆ ಚಾಟಿಯನ್ನು ಬೀಸಬೇಕಾಗುತ್ತದೆ. ಆಡಳಿತ ಪಕ್ಷವು ತಪ್ಪು ಹೆಜ್ಜೆಗಳನ್ನಿಟ್ಟರೆ, ಎಲ್ಲಿ ಎಡವುತ್ತದೆ, ಹೇಗೆ ನಡೆಯಬೇಕು ಎನ್ನುವುದನ್ನು ವಿರೋಧ ಪಕ್ಷದವರು ತೋರಿಸುತ್ತಾರೆ. ಇದಕ್ಕೆ ಆಡಳಿತ ಪಕ್ಷದವರು ಬೇಸರ ಮಾಡಿಕೊಳ್ಳಬಾರದು. ಆಡಳಿತ ಪಕ್ಷದವರು ಎಲ್ಲಿ ಎಡವುತ್ತಾರೆ, ಅದನ್ನು ವಿರೋಧ ಪಕ್ಷದವರು ತಿದ್ದುತ್ತಾರೆ. ಅದನ್ನು ಅವರು ಮಾಡಲೇ ಬೇಕಾಗುತ್ತದೆ. ಶಾಲೆಯಲ್ಲಿನ ವಿದ್ಯಾರ್ಥಿಗಳನ್ನು ಶಿಕ್ಷಕರು ಹೆಚ್ಚು ಹೊಡೆದರು ಎಂದು ನಾವು ಬೇಸರ ಮಾಡಿಕೊಳ್ಳಬಾರದು. ಕೆಲವೊಂದು ಬಾರಿ ಪ್ರೀತಿಯಿಂದ ಹಾಗೂ ಮತ್ತೊಂದು ಬಾರಿ ಜೋರಾಗಿ ಹೇಳಬೇಕಾಗುತ್ತದೆ. ಇದು ಸ್ವಾಭಾವಿಕವಾದುದು. ಇಂತಹ ಸಂದರ್ಭಗಳಿಂದಲೇ ಮಗವು ನಾಳೆಯ ದಿನ ಉತ್ತಮ ಪ್ರಜೆಯಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಹೀಗಾಗಿ ಎಲ್ಲಾ ಸದಸ್ಯರ ಹಿತವನ್ನು ಕಾಪಾಡಬೇಕು. ನಾವುಗಳೆಲ್ಲರೂ ಸಾರ್ವಜನಿಕರ, ರೈತಾಪಿ ವರ್ಗದವರ, ಕಾರ್ಮಿಕರ ಹಾಗೂ ದಲಿತರ ಪರವಾಗಿ ಬಂದಿದ್ದೇವೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಹ ನ್ಯಾಯ ದೊರೆಯಬೇಕು. ಸಮಾಜದ ಒಳಿತಿಗಾಗಿ ಹಾಗೂ ಆರೋಗ್ಯಕರವಾದ ಸಮಾಜವನ್ನು ನಿರ್ಮಾಣ ಮಾಡಬೇಕೆನ್ನುವ ದೃಷ್ಟಿ ಹಾಗೂ ಉದ್ದೇಶ ಎಲ್ಲರದ್ದೂ ಆಗಿದೆ. ಈ ನಿಟ್ಟಿನಲ್ಲಿ ಎಲ್ಲಾ ರೀತಿಯ ಆಚಾರ-ವಿಚಾರ, ವಾಗ್ವಿವಾದ, ಆರೋಪ-ಪ್ರತ್ಯಾರೋಪ ಇತ್ಯಾದಿಗಳು ಬರುತ್ತವೆ. ಆಡಳಿತ ಪಕ್ಷದ ನಡವಳಿಕೆಯನ್ನು ವಿರೋಧ ಪಕ್ಷದವರು ತಿದ್ದಬೇಕು. ನನಗೆ ತುಂಬಾ ಕಡಿಮೆ ಅನುಭವವಿರುವುದರಿಂದ ಇಲ್ಲಿರುವ ಸದಸ್ಯರಿಗೆ ಹೇಳುವ ಶಕ್ತಿ ನನಗೆ ಇಲ್ಲ. ಸದನದಲ್ಲಿ ಪೀಠಾಧಿಪತಿಗಳು ಆಸೀನರಾಗಿರುವ ಸಂದರ್ಭದಲ್ಲಿ, ಸದನದಲ್ಲಿ ಆರೋಗ್ಯ ಪೂರ್ಣವಾದ ರೀತಿಯಲ್ಲಿ ವಿಚಾರಗಳ ಚರ್ಚೆಯಾಗಬೇಕು. ಹೀಗಾಗಿ ವಿಚಾರವಂತರಾಗಿರುವ ಈ ಸದನದ ಎಲ್ಲಾ ಸದಸ್ಯರುಗಳಿಗೆ ಎಲ್ಲಾ ರೀತಿಯ ಅರ್ಹತೆಗಳಿವೆ. ಅವಕಾಶ ದೊರೆತರೆ ಅವರುಗಳು ಸಚಿವರಾಗಿ ಕೆಲಸ ನಿರ್ವಹಿಸುವಂತಹ ಚಾಕಚಕ್ಯತೆಗಳು ಅವರಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೆ. ಯಾವುದೇ ಇಲಾಖೆಯನ್ನು ನಿಭಾಯಿಸುವ ಸಕಲ ರೀತಿಯಾದ ಜ್ಞಾನ ಮತ್ತು ಶಕ್ತಿ ಅವರುಗಳಲ್ಲಿದೆ. ಅವಕಾಶ ದೊರೆತಿರುವವರು ಮಂತ್ರಿಗಳಾಗುತ್ತಾರೆ. ಸದನದ ಸದಸ್ಯರುಗಳ ಪೈಕಿ ಯಾರು ಹೆಚ್ಚು, ಯಾರು ಕಡಿಮೆ ಎಂದು ನಾನು ಹೇಳಲಿಚ್ಛಿಸುವುದಿಲ್ಲ. ಎಲ್ಲಾ ಸದಸ್ಯರುಗಳು ವಿಚಾರವಂತರಾಗಿದ್ದಾರೆ. ಈ ಸದನದ ಪೀಠಕ್ಕೆ ತನ್ನದೇ ಆದ ಘನತೆ ಗೌರವಗಳಿವೆ. ಹೀಗಾಗಿ ಅದರನ್ವಯ ನಾವು ನಡೆಯಬೇಕು. ಸಂವಿಧಾನ ಬದ್ಧವಾಗಿ ನಾವು ರಚನೆ ಮಾಡಿರುವ ಕಾನೂನಿಗೆ ಬದ್ಧವಾಗಿ ಸದನವನ್ನು ನಡೆಸಬೇಕು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳನ್ನು ನಾವು ಅಧ್ಯಯನ ಮಾಡಿಕೊಂಡು ಅದರನ್ವಯ ಸದನವನ್ನು ನಡೆಸಬೇಕು. ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರುಗಳು ನೀಡುವ ಸಲಹೆ, ಸಹಕಾರಗಳಿಂದ ಸದನವನ್ನು ನಡೆಸುವ ತನ್ಮೂಲಕ ಆರೋಗ್ಯಕರವಾದ ಸಮಾಜ ನಿರ್ಮಾಣವಾಗುವ ನಿಟ್ಟಿನಲ್ಲಿ ಎಲ್ಲರೂ ಸಹ ಕೆಲಸಗಳನ್ನು ಮಾಡಬೇಕು. ಸದನ ನಡೆಸುವುದಕ್ಕೆ ನಾನು ಎಲ್ಲಾ ಸದಸ್ಯರ ಸಲಹೆಗಳನ್ನು ಅಪೇಕ್ಷಿಸುತ್ತೇನೆ. ಮಾನ್ಯ ಸಭಾಪತಿಗಳಿಗೆ ಅಪಾರವಾದ ಅನುಭವವಿದೆ ಹೀಗಾಗಿ ಅವರು ಬಹಳ ಜವಾಬ್ದಾರಿಯಿಂದ ಸದನವನ್ನು ನಡೆಸುತ್ತಾರೆ. ರಾಜಕೀಯದಲ್ಲಿ ನನಗೆ ಅಲ್ಪ ಅನುಭವವಿದೆ, ಆದಾಗ್ಯೂ ಸಹ ನನಗೆ ಈ ಸದನದಲ್ಲಿ ಹೊಸ ಅನುಭವವಾಗಿದೆ. ಮಾನ್ಯ ಸದಸ್ಯರುಗಳು ನೀಡುವ ಸಲಹೆ-ಸೂಚನೆಗಳನ್ನು ನಾನು ಪಾಲಿಸುತ್ತೇನೆ. ನನ್ನ ಸಹೋದರಿ ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿ ಗೌಡ ರವರು ನನ್ನ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. ಅವರನ್ನು ದೂರದರ್ಶನದಲ್ಲಿ ನೋಡಿದಾಗ ಅವರು ಬಹಳ ಪ್ರಚಂಡವಾಗಿ ಪ್ರಶ್ನೆಗಳನ್ನು ಮಾಡುತ್ತಾರೆ. ಅವರಿಗೆ ಬಹಳ ವಾಕ್ಚಾತುರ್ಯವಿದೆ. ಮಾನ್ಯ ಆಯನೂರು ಮಂಜುನಾಥ್‌ರವರಂತಹ ಬಹಳ ಅನುಭವಿ ಸದಸ್ಯರ ಮುಂದೆ ನಾನು ಏನೆಂದು ಮಾತನಾಡಲಿ? ಅವರಿಗಿಂತ ನಾನು ಹೆಚ್ಚು ತಿಳಿದವನಲ್ಲ. ಈ ಸದನದ ದೊಡ್ಡವರು ಹಾಗೂ ಚಿಕ್ಕವರಾದಿಯಾಗಿ ನನಗೆ ತಿಳಿದಿರುವ ವಿಚಾರಗಳಲ್ಲಿ ತುಂಬಾ ಮಾರ್ಪಾಡನ್ನು ಮಾಡುವ ದಿಕ್ಕಿನಲ್ಲಿ ನನ್ನ ಬಗ್ಗೆ ಸದಸ್ಯರು ಹೊಗಳಿಕೆಯ ಮಾತುಗಳನ್ನಾಡಿದ್ದಾರೆ. ಇದರಿಂದ ನನಗೆ ತುಂಬಾ ಸಂತೋಷವಾಗಿದೆ. ಇದರ ಜೊತೆಗೆ ನನ್ನ ಮೇಲೆ ಮಾನ್ಯ ಸದಸ್ಯರುಗಳು ಅಪಾರವಾದ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ನನ್ನ ಹಾಗೂ ನನ್ನ ಸಹೋದರರ ನಡುವೆ ಆಗಿಂದಾಗ್ಗೆ ಹೋಲಿಕೆಗಳನ್ನು ಮಾಡಿದ್ದಾರೆ. ಈ ಭಾಗದಿಂದ ಎಂಟು ಬಾರಿ ಶಾಸಕರಾಗಿ ಆಯ್ಕೆಗೊಂಡ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನನ್ನನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯ ಹುದ್ದೆಗೆ ಚುನಾಯಿಸಬೇಕೆಂದು ಸೂಚನೆ ನೀಡಿದ್ದಾರೆ. ನಮ್ಮ ಪಕ್ಷದ ಸದಸ್ಯರುಗಳಾದ ಶ್ರೀಯುತ ಚೌಡರೆಡ್ಡಿ ತೂಪಲ್ಲಿ, ಶ್ರೀಕಂಠೇಗೌಡ ಹಾಗೂ ಅಪ್ಪಾಜಿಗೌಡರವರುಗಳು ನನ್ನ ಪರವಾಗಿ ಸೂಚನೆಗಳನ್ನು ನೀಡಿ ಅನುಮೋದಿಸಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ನಾನು ಉಪ ಸಭಾಪತಿ ಹುದ್ದೆಗೆ ಅವಿರೋಧವಾಗಿ ಆಯ್ಕೆಗೊಂಡು, ಸದರಿ ಹುದ್ದೆಯಲ್ಲಿ ಕೆಲಸ ನಿರ್ವಹಿಸುವ ದೃಷ್ಟಿಯಲ್ಲಿ ದಾರಿಯನ್ನು ಸುಗಮಗೊಳಿಸಿದ್ದಾರೆ. ಹೀಗಾಗಿ ಅವರನ್ನೂ ಸಹ ನಾನು ಶ್ಲಾಘಿಸುತ್ತೇನೆ. ಈ ಸದನದಲ್ಲಿರುವ ಸಚಿವರಾದಿಯಾಗಿ



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ ಸದಸ್ಯರುಗಳಿಗೆ ನಾನು ಹೃದಯಪೂರ್ವಕವಾಗಿ ಅಭಿನಂದನೆಗಳನ್ನು ಪುನಃ ಹೇಳುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬರುವ ಪತ್ರಿಕಾ ರಂಗ ಹಾಗೂ ಅಧಿಕಾರಿ ವರ್ಗ ಎಲ್ಲರೂ ಒಟ್ಟಾಗಿ ಜನರಿಗೆ ಒಳಿತನ್ನು ಮಾಡುವ ನಿಟ್ಟಿನಲ್ಲಿ ಸಾಗೋಣ. ಇದು ಸರಿಯೋ ಅಥವಾ ತಪ್ಪೋ ನನಗೆ ಗೊತ್ತಿಲ್ಲ. ಇದನ್ನು ಹೇಳಬೇಕೋ ಅಥವಾ ಬೇಡವೋ ನನಗೆ ತಿಳಿದಿಲ್ಲ. ಈ ಸದನದ ಮಾನ್ಯ ಸಭಾಪತಿಗಳು ಹಾಗೂ ಉಪಸಭಾಪತಿಗಳು ಸದನದ ಘನತೆ ಗೌರವಗಳನ್ನು ಉಳಿಸಿಕೊಂಡು ಸಂವಿಧಾನ ಬದ್ಧವಾಗಿ ಹಾಗೂ ನಿಯಮಗಳನ್ನು ಪಾಲಿಸಲು ಬದ್ಧರಾಗಿದ್ದಾರೆ. ಇದಕ್ಕೆ ಪೂರಕವಾಗಿ ಅವಶ್ಯವಾದ ಸಲಹೆ ಸಹಕಾರಗಳನ್ನು ಪಕ್ಷಾತೀತವಾಗಿ ಮಾನ್ಯ ಸದಸ್ಯರುಗಳೆಲ್ಲರಿಂದಲೂ ಅಪೇಕ್ಷಿಸುತ್ತೇನೆ. ಇದು ಎಲ್ಲಾ ಸದಸ್ಯರ ಧರ್ಮವಾಗಿದೆ. ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ ನಾನು ರಾಜಧರ್ಮವನ್ನು ಪಾಲಿಸಬೇಕೆಂಬುದಾಗಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ನಾನು ಪ್ರಯತ್ನ ಪಡುತ್ತೇನೆ. ಎಲ್ಲರಿಗೂ ನಮಸ್ಕಾರಗಳನ್ನು ತಿಳಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 37**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ರೈತರ ಮೇಲೆ ಆನೆ ದಾಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು ಎಂಬುದಾಗಿ ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಸಾಕಷ್ಟು ವಿಸ್ತಾರವಾಗಿ ಲಿಖಿತ ಉತ್ತರವನ್ನು ನೀಡಿದೆ. ಆದರೆ ಸದರಿ ಉತ್ತರದಲ್ಲಿ ಸತ್ಯಾಂಶಗಳಿಲ್ಲ. ನಾನು ಆ ಭಾಗದಿಂದ ಬಂದಿರುವವನಾಗಿರುವುದರಿಂದ ಅಲ್ಲಿನ ಸತ್ಯಾಸತ್ಯತೆಗಳು ನನಗೆ ತಿಳಿದಿವೆ. ಚಿಕ್ಕಮಗಳೂರಿನ ಮೂಡಿಗೆರೆ ತಾಲ್ಲೂಕಿನಲ್ಲಿ ರೈತರ ಜಮೀನಿನಲ್ಲಿ ಒಂಟಿ ಸಲಗವೊಂದು ದಾಳಿ ನಡೆಸಿದ್ದು, ಸದರಿ ಆನೆಯನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಾಚರಣೆಗೆ ಸಕ್ರೆಬೈಲು ಆನೆ ಬಿಡಾರದಿಂದ ಎರಡು ಸಾಕಾನೆಗಳನ್ನು ನಿಯೋಜಿಸಲಾಗಿದ್ದು, ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂಬುದಾಗಿ ತಿಳಿಸಿದ್ದಾರೆ. ನಾನು ಈಗಷ್ಟೆ ಚಿಕ್ಕಮಗಳೂರು ಅರಣ್ಯ ಇಲಾಖೆಗೆ ಪುನಃ ದೂರವಾಣಿ ಕರೆಯನ್ನು ಮಾಡಿದ್ದೇನೆ. ಆಗ ಸಕ್ರೆಬೈಲು ಬಿಡಾರದಿಂದ ಒಂದು ಆನೆಯನ್ನು ತಂದು ಅದನ್ನು ಒಂದು ದಿನದವರೆಗೆ ಸದರಿ ಪ್ರದೇಶದಲ್ಲಿ ಓಡಾಡಿಸಿ, ಬಿಡಾರಕ್ಕೆ ವಾಪಸ್ಸು

ಕಳುಹಿಸಿದ್ದಾರೆ. ಲಿಖಿತ ಉತ್ತರದಲ್ಲಿ ಎರಡು ಆನೆ ಎಂದು ಹೇಳಿದ್ದಾರೆ ಆದರೆ ಅಲ್ಲಿಗೆ ಕರೆತಂದದ್ದು ಕೇವಲ ಒಂದು ಆನೆ ಮಾತ್ರವೇ ಅದೂ ಸಹ ಒಂದು ದಿನದ ಮಟ್ಟಿಗೆ ಮಾತ್ರವೇ. ಮುಂದುವರೆದು ಪ್ರಾಣಿಗಳಿಂದ ಉಂಟಾಗುವ ತೊಂದರೆಯನ್ನು ತಡೆಯಲು ಸರ್ಕಾರ ಯಾವ ಕ್ರಮಕೈಗೊಂಡಿದೆ ಎಂಬುದಾಗಿ ಕೇಳಿದ ಪ್ರಶ್ನೆಗೆ ಪ್ರತ್ಯುತ್ತರವಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆಗಳ ದಾಳಿಯನ್ನು ತಡೆಗಟ್ಟಲು 2017-18 ನೇ ಸಾಲಿನಲ್ಲಿ ಆನೆ ನಿರೋಧಕ ಕಂದಕ, ಸೋಲಾರ್ ಫೆನ್ಸಿಂಗ್‌ಗಳ ನಿರ್ಮಾಣ ಹಾಗೂ ನಿರ್ವಹಣೆ ಮತ್ತು ಆನೆ ಹಿಮ್ಮೆಟ್ಟಿಸುವ ಕ್ಯಾಂಪ್‌ಗಳ ಬಗ್ಗೆ ವಿಭಾಗವಾರು ಮಾಹಿತಿಯನ್ನು ನೀಡಿದ್ದಾರೆ. ಮೂಡಿಗೆರೆ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಪಾಯವಿದೆ ಹೀಗಾಗಿ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ, ಸರ್ಕಾರವು ಜಿಲ್ಲೆಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ನೀಡಿದೆ. ಇದು ಸಂತೋಷದ ಸಂಗತಿಯಾಗಿದೆ. ಇದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಲಿಖಿತವಾಗಿ ಮಾಡಿರುವ ಮಾಹಿತಿಯನ್ನು ಎಲ್ಲಿ ಅಳವಡಿಸಲಾಗಿದೆ? ಮುಂದುವರೆದು, 2017-18 ನೇ ಸಾಲಿಗಿಂತ ಹಿಂದಿನ ಹಳೆಯ 21.6 ಕಿಲೋಮೀಟರ್ ಆನೆ ನಿರೋಧಕ ಕಂದಕಗಳು ಹಾಳಾಗಿರುವ ಸ್ಥಳಗಳಲ್ಲಿ ಅನುದಾನದ ಲಭ್ಯತೆಯ ಆಧಾರದ ಮೇಲೆ ನಿರ್ವಹಣೆ ಮಾಡಲಾಗಿರುತ್ತದೆ ಮತ್ತು 15 ಕಿಲೋಮೀಟರ್ ಸೋಲಾರ್ ಫೆನ್ಸಿಂಗ್ ನಿರ್ಮಾಣ ಮಾಡಲಾಗಿರುತ್ತದೆ ಎಂಬುದಾಗಿ ಸರ್ಕಾರವು ತಿಳಿಸಿದೆ. ಆದರೆ ಇದನ್ನು ಎಲ್ಲಿ ಮಾಡಲಾಗಿದೆ? ಲಿಖಿತ ಉತ್ತರದಲ್ಲಿ ಮಾಹಿತಿ ನೀಡಲಾಗಿದೆ ಆದರೆ ಅದನ್ನು ಮಂತ್ರಿಗಳು ಖುದ್ದಾಗಿ ಪರಿಶೀಲನೆ ಮಾಡಿದ್ದಾರೆಯೇ? ಕೇವಲ ಹೇಳಿಕೆಗಳನ್ನು ಮಾತ್ರವೇ ಪಡೆದುಕೊಂಡಿದ್ದಾರೆ. ಇದು ಬಹಳ ದಿನಗಳ ಹೋರಾಟವಾಗಿದೆ ಹಾಗೂ ಇದು ಸ್ವಂತಕ್ಕಾಗಿಯೂ ಸಹ ಅಲ್ಲ. ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ಅವರು ನಮ್ಮ ಜಿಲ್ಲೆಗೆ ಪ್ರತಿ ಬಾರಿಯೂ ಭೇಟಿ ನೀಡಿದ ಸಂದರ್ಭದಲ್ಲಿ ಈ ವಿಚಾರವಾಗಿ ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಅರಣ್ಯ ಮಂತ್ರಿಗಳೊಂದಿಗೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುತ್ತೇನೆ ಎಂಬುದಾಗಿ ಹೇಳಿದ್ದಾರೆ. ಇಷ್ಟೆಲ್ಲಾ ಆದರೂ ಸಹ ಸರ್ಕಾರ ಈ ಸಮಸ್ಯೆಗೆ ಎಲ್ಲಿಯೂ ಸಹ ಪರಿಹಾರವನ್ನು ಕಂಡುಕೊಂಡಿಲ್ಲ. ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಷ್ಟು ಜನರ ಮೇಲೆ ಆನೆಗಳು ದಾಳಿ ಮಾಡಿವೆ ಎಂಬ ಪ್ರಶ್ನೆಗೆ ಕಡೂರು ತಾಲ್ಲೂಕಿನ ಪ್ರಕರಣವೊಂದನ್ನು ಸರ್ಕಾರ ಉಲ್ಲೇಖ ಮಾಡಿದೆ. ಇತ್ತೀಚೆಗೆ ನಾನು ಹಾಗೂ ನಮ್ಮ ವಿರೋಧ ಪಕ್ಷದ ನಾಯಕರೆಲ್ಲರೂ ಹೋಗಿ ಸರ್ಕಾರ ಮಂಜೂರು ಮಾಡಿರುವ ಐದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ನೀಡಿ, ವಿಚಾರಣೆ ಮಾಡಿದ ಪ್ರಕರಣವನ್ನು ಸರ್ಕಾರ ಉಲ್ಲೇಖಿಸಿದ್ದಾರೆ. ಬಣಕಲ್ ಮತ್ತು ಫಲ್ಗುಣಿ ಗ್ರಾಮಗಳಿಗೆ ನಾವುಗಳು ಭೇಟಿ ನೀಡಿದ್ದೇವೆ ಹಾಗೂ ಅಲ್ಲಿ ಸರ್ಕಾರದಿಂದ ಪರಿಹಾರ ಧನವನ್ನು ನೀಡುವ ಕೆಲಸವೂ ಸಹ ಆಗಿದೆ. ಅದನ್ನು ಸರ್ಕಾರವು ಏಕೆ ಉಲ್ಲೇಖ ಮಾಡಿಲ್ಲ? ಬಣಕಲ್ ಗ್ರಾಮದಲ್ಲಿ ಊರಿನ ಮಧ್ಯದಲ್ಲಿ ಆನೆ ಬಂದು ಒಬ್ಬರನ್ನು ತುಳಿದು ಸಾಯಿಸಿತು. ಆ ಸಂದರ್ಭದಲ್ಲಿ ಶ್ರೀಯುತ ರಮಾನಾಥ್ ರೈ ರವರು ಅರಣ್ಯ ಮಂತ್ರಿಗಳಾಗಿದ್ದರು. ಇದೇ ವಿಚಾರವಾಗಿ ನಾನು

ಸದನದಲ್ಲಿ ಪ್ರಸ್ತಾಪ ಮಾಡಿದಾಗ, ಸದರಿಯವರು ಈ ಈ ವಿಚಾರದ ಬಗ್ಗೆ ಗಮನವನ್ನು ಹರಿಸೋಣ ಮತ್ತು ಸಂದರ್ಭ ಬಂದಾಗ ಆನೆಯನ್ನು ಹಿಡಿಯೋಣ ಎನ್ನುವಂತಹ ಬೇಜವಾಬ್ದಾರಿ ಹೇಳಿಕೆಯನ್ನು ಅಂದಿನ ಮಂತ್ರಿಗಳು ನೀಡಿದ್ದರು. ಅರಣ್ಯ ಇಲಾಖೆಯು ಈ ರೀತಿಯ ಬೇಜವಾಬ್ದಾರಿತನದಿಂದ ಏಕೆ ಕೆಲಸ ಮಾಡುತ್ತಿದೆ? ಅಲ್ಲಿ ವಾಸಿಸುವ ಜನರ ಬದುಕಿಗೆ, ಜೀವಕ್ಕೆ ಬೆಲೆಯಿಲ್ಲವೇ? ಈ ರೀತಿಯ ಪ್ರಕರಣವು ಬಣಕಲ್‌ನಲ್ಲಿ ಸಂಭವಿಸಿತು. ಫಲ್ಗುಣಿ ಗ್ರಾಮದಲ್ಲಿ ಮುಸಲ್ಮಾನ ಸಮುದಾಯಕ್ಕೆ ಸೇರಿದ ವ್ಯಕ್ತಿಯೋರ್ವರು ನಡೆದು ಕೊಂಡು ಹೋಗುತ್ತಿದ್ದಾಗ, ಆನೆ ಬಂದು ಅವರನ್ನು ಮೆಟ್ಟಿ ಸಾಯಿಸಿತು. ಆಗ ಆ ವ್ಯಕ್ತಿಯ ಮೃತ ದೇಹವನ್ನು ತೆಗೆದುಕೊಂಡು ಮರದಡಿ ಮುಚ್ಚಿಡುವಂತಹ ಕೆಲಸವಾಯಿತು. ಈ ಪ್ರಕರಣದ ಬಗ್ಗೆಯೂ ಸಹ ಲಿಖಿತ ಉತ್ತರದಲ್ಲಿ ಉಲ್ಲೇಖಿಸಿಲ್ಲ. ಸರ್ಕಾರ ಯಾವ ರೀತಿಯಾಗಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತಿದೆ ಎಂಬುದನ್ನು ಇಲ್ಲಿ ತೋರಿಸಿ ಕೊಡುತ್ತಿದೆ. ಇದು ಬೇಜವಾಬ್ದಾರಿಯ ಪರಮಾವಧಿಯೋ ಅಥವಾ ಸರ್ಕಾರ ಈ ವಿಚಾರದ ಬಗ್ಗೆ ಎಲ್ಲಿಯೋ ಒಂದು ಕಡೆ ನಿರ್ಲಕ್ಷ್ಯ ಮಾಡಿದೆಯೋ ಎಂದು ನನಗೆ ಅನ್ನಿಸುತ್ತಿದೆ. ಇತ್ತೀಚೆಗೆ ಆನೆಯೊಂದನ್ನು ಹಿಡಿಯಲಾಗಿದೆ. ಚಿಕ್ಕಮಗಳೂರಿನ ರಾಮೇನಹಳ್ಳಿ ಎಂಬ ಗ್ರಾಮದ ಬಳಿಯಿರುವ ಮಲ್ಲೇನಹಳ್ಳಿ ಎನ್ನುವ ಪ್ರದೇಶದ ಬರಣಗೋಡು ಎಂಬಲ್ಲಿ ಎರಡು ಆನೆಗಳಿವೆ ಎಂಬುದಾಗಿ ಸರ್ಕಾರವು ಗುರುತು ಮಾಡಿದೆ.

(558) 19-12-2018 12:30 ಸಿಎಸ್/ಎಕೆ

**ಶ್ರೀ ಎಂ.ಕೆ.ಪ್ರಾಣೇಶ್(ಮುಂದು):-**
ಎರಡು ಆನೆಗಳು ಇವೆ ಎಂದು ನೀವು ಗುರುತು ಮಾಡಿದ್ದೀರಿ. ಆದರೆ ಇದೊಂದೆ ಪ್ರಶ್ನೆಯಲ್ಲ, ಕೃಷಿಕರ ಜಮೀನನ್ನು ಹಾಳು ಮಾಡುವುದರ ಜೊತೆಗೆ ಜನರ ಜೀವವನ್ನು ತೆಗೆಯುತ್ತಿದೆ. ಈ ಆನೆಯನ್ನು ಯಾವಾಗ ಸ್ಥಳಾಂತರ ಮಾಡುತ್ತೀರಿ, ಮನುಷ್ಯನ ಬದುಕಿಗೆ ಯಾವಾಗ ನೀವು ಆಸರೆಯಾಗಿ ನಿಲ್ಲುತ್ತೀರಿ ಎನ್ನುವುದು ನಮ್ಮ ಪ್ರಶ್ನೆ.

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣ್ಯ:-**ಮಾನ್ಯ ಸಭಾಪತಿಗಳೇ, ಶಾಲೆಗೆ ನುಗ್ಗಿದ ಕಾಡಾನೆಗಳು ಮತ್ತು ತೋಟದಲ್ಲಿ ಮರಿ ಹಾಕಿದ ಕಾಡಾನೆಗಳು ಎನ್ನುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಅರಣ್ಯ ಸಚಿವರು ನಮ್ಮ ಕ್ಷೇತ್ರಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ನಾವು ನಮ್ಮ ಕಷ್ಟವನ್ನು ಸಚಿವರಿಗೆ ಹೇಳಿಕೊಳ್ಳಬೇಕೆಂದು ಹೋದಾಗ ಮಂತ್ರಿಗಳು ನಮಗೆ ಸಿಗುವುದೇ ಇಲ್ಲ. ಅವರು ಮತ್ತೆ ಯಾರಿಗೆ ಸಿಗುತ್ತಾರೆ ಎನ್ನುವುದು ನಮಗೆ ಗೊತ್ತಿಲ್ಲ. ಈ ರೀತಿ ಮಾಡಿದರೆ ಹೇಗೆ? ಅಲ್ಲಿ ಕೆಲಸ ಮಾಡುವವರು ತೋಟದ ಕಾರ್ಮಿಕರು, ಅವರಿಗೂ ರಕ್ಷಣೆ ಇಲ್ಲ, ಶಾಲಾ ಮಕ್ಕಳಿಗೂ ಸಹ ರಕ್ಷಣೆ ಇಲ್ಲ. ಇದಕ್ಕೆ ಸರ್ಕಾರವೇ ಉತ್ತರವನ್ನು ನೀಡಬೇಕು.

**ಶ್ರೀ ಆರ್.ಶಂಕರ್:-** ಮಾನ್ಯ ಸಭಾಪತಿಗಳೇ, ಈಗಾಗಲೇ ಕಾಟ ಕೊಡುತ್ತಿದ್ದ ಒಂಟಿ ಸಲಗವನ್ನು ಆ ಜಾಗದಿಂದ ಹಿಮ್ಮೆಟ್ಟಿಸಲಾಗಿದೆ. ಕಾಡಾನೆಯ ತುಳಿತದಿಂದ ಒಬ್ಬರು ಸತ್ತಿರುವುದಾಗಿ ಮಾನ್ಯ ಸದಸ್ಯರು ಹೇಳಿದರು ಆದರೆ ನಾಲ್ಕು ಜನರು ಕಾಡಾನೆಯ ತುಳಿತದಿಂದ ತೀರಿಕೊಂಡಿದ್ದಾರೆ. ಅವರ ಕುಟುಂಬಕ್ಕೆ ಪರಿಹಾರವನ್ನು ಕೂಡ ನೀಡಲಾಗಿದೆ. ಹಾಗೆಯೇ ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಪರಿಗಣಿಸುವುದಕ್ಕೆ ನಮ್ಮ ಇಲಾಖೆಯು ಬದ್ಧವಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಗಳೇ, ನನಗೆ ತಿಳಿದಿರುವ ಹಾಗೆ ನನ್ನ ಭಾಗದಲ್ಲಿ ಆನೆ ತುಳಿತದಿಂದ 4 ಜನರು ಸತ್ತಿದ್ದಾರೆ, ಅದರ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಎರಡನೆಯದಾಗಿ ಆನೆ ಇರುವಂತಹ ಸ್ಥಳಗಳೆಂದರೆ ಒಂದು ಹಳ್ಳಿಬಯಲು, ಒಂದು ಕೆಂಜಿಗೆ, ಒಂದು ಬಿದರಹಳ್ಳಿ, ಪ್ರದೇಶಗಳು. ಇಲ್ಲಿ ಬಿಟ್ಟು ಯಾವುದೋ ಒಂದು ಪ್ರದೇಶದಲ್ಲಿ ಬಂದಿದ್ದ ಆನೆಯನ್ನು ಹಿಮ್ಮೆಟ್ಟಿಸಿದ ವಿಚಾರವನ್ನು ಮಾನ್ಯ ಸಚಿವರು ಇಲ್ಲಿ ಹೇಳುತ್ತಿದ್ದಾರೆ. ಮೂಡಿಗೆರೆ ನಗರದ ಹತ್ತಿರದಲ್ಲಿಯೇ 10-12 ಆನೆಗಳು ಅಲ್ಲಿಯೇ ಇವೆ. ಕೆಂಜಿಗೆ ಗ್ರಾಮ ಮೂಡಿಗೆರೆಯಿಂದ 4 ಕಿ.ಮೀ ದೂರದಲ್ಲಿದೆ. ಹಳ್ಳಿಬಯಲು 15 ಕಿ.ಮೀ, ಹಾಗೆಯೇ ಬಿದರಹಳ್ಳಿ ಮೂಡಿಗೆರೆಯಿಂದ 3 ಕಿ.ಮೀ ದೂರದಲ್ಲಿದೆ. ಇದರ ಬಗ್ಗೆ ನಮ್ಮ ಡಿಎಫ್‌ಓ ಗೆ ಫೋನ್ ಮಾಡಿ ಕೇಳಿದಾಗ ಸಕ್ಕರೆ ಬಯಲಿನಿಂದ ಒಂದು ಆನೆ ಬಂದಿತ್ತು, ಅದನ್ನು ವಾಪಸ್ಸು ಕಳುಹಿಸಲಾಗಿದೆ ಎಂದು ಹೇಳಿದ್ದಾರೆ. ಮೇಘೂರು ಎನ್ನುವ ಜಾಗಕ್ಕೆ ಅದನ್ನು ಇಲಾಖೆಯವರು ಕಳುಹಿಸಿದ್ದಾರೆ. ಏಕೆಂದರೆ ಮೊನ್ನೆ ಆ ಜಾಗಕ್ಕೆ ಬಂದ ಆನೆ ಅಲ್ಲಿನ ಜನರನ್ನು ಓಡಾಡಿಸಿತ್ತು. ಆ ಭಾಗಕ್ಕೆ ಬಂದಿದ್ದ ಆನೆ ವಾಪಸ್ಸು ಹೋಗಿದೆಯೇ ಎನ್ನುವಂತಹ ಮಾಹಿತಿಯನ್ನು ಸಚಿವರು ಅಧಿಕಾರಿಗಳಿಂದ ಪಡೆದು ಸದನಕ್ಕೆ ನೀಡದೇ ಹೋದರೆ ಮತ್ತು ಈ ಸಮಸ್ಯೆಗೆ ಸರ್ಕಾರ ಒಂದು ಶಾಶ್ವತ ಪರಿಹಾರವನ್ನು ನೀಡದೇ ಹೋದರೆ ನಾನು ಮತ್ತು ಮಾನ್ಯ ಸದಸ್ಯರಾದ ಸುನೀಲ್ ಸುಬ್ರಮಣ್ಯರವರು ಸರ್ಕಾರದ ಉತ್ತರವನ್ನು ವಿರೋಧಿಸಿ, ಧರಣಿಯನ್ನು ಮಾಡಬೇಕಾಗುತ್ತದೆ. ಏಕೆಂದರೆ ಮಾನ್ಯ ಸಚಿವರು ನೀಡಿರುವ ಉತ್ತರ ಸಮಂಜಸವಾಗಿಲ್ಲ. ನಮ್ಮ ಭಾಗದ ಜನರು ನಾವು ಇದಕ್ಕೆ ಪರಿಹಾರ ಕಂಡುಕೊಳ್ಳುವ ತನಕ ಊರಿಗೆ ನಮ್ಮನ್ನು ಬರಬಾರದೆಂದು ಹೇಳಿದ್ದಾರೆ.

**ಶ್ರೀ ಆರ್.ಶಂಕರ್:-** ಮಾನ್ಯ ಸಭಾಪತಿಗಳೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಆನೆ ದಾಳಿ ಹಾಗೂ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಇಡೀ ರಾಜ್ಯದಲ್ಲಿರುವ ಕಾಡಾನೆಗಳ ಪ್ರದೇಶದಲ್ಲಿ railway barricade ಗಳನ್ನು ಅಳವಡಿಸಬೇಕೆನ್ನುವ ನಿಲುವನ್ನು ತೆಗೆದುಕೊಳ್ಳಲಾಗಿದೆ. ಆನೆ ಹಾವಳಿಗಳನ್ನು ತಪ್ಪಿಸಲು ಹಲವಾರು ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಲೈನ್‌ಗಳನ್ನು ಅಳವಡಿಸುತ್ತಿದ್ದೇವೆ. Tentacle fencing, E.P.T (Elephant Proof Trench) ಮಾಡುತ್ತಿದ್ದೇವೆ, ಹೀಗೆ ಹಲವಾರು ಕ್ರಮಗಳನ್ನು ಕೈಗೊಂಡಿದ್ದರೂ ಸಹ ಆನೆ ಬಹಳ ಬುದ್ಧಿವಂತ ಜೀವಿಯಾಗಿದ್ದು, ಅದನ್ನೆಲ್ಲ ದಾಟುತ್ತಿದೆ. ಹೀಗಾಗಿ ಇವತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಡು ಕಡಿಮೆಯಾಗುತ್ತಿದ್ದು, ಊರಿಗೆ ಬರುವ ಪ್ರಾಣಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದ್ದರಿಂದ ಒಂದು ದೂರದೃಷ್ಟಿಯನ್ನಿಟ್ಟುಕೊಂಡು ಇದಕ್ಕೆ ಒಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನಾನೇ ಅಲ್ಲ ಬೇರೆ ಯಾರೇ ಮಂತ್ರಿಯಾಗಿದ್ದರೂ ಸಹ ಇಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ. ನಾವು ಅರಣ್ಯ ಸಚಿವನಾದ ಹೊಸದರಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳಿಗೆ 1100 ಕೋಟಿ ರೂಪಾಯಿಗಳ ಹೆಚ್ಚು ಅನುದಾನವನ್ನು ನೀಡಿದರೆ, ನಾನು ಇಲಾಖೆಯಲ್ಲಿ ಚೆನ್ನಾಗಿ ಕೆಲಸ ಮಾಡುತ್ತೇನೆಂದು ಹೇಳಿದರು. ಈ ವಿಚಾರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ಬಂದಿದೆ. ನಮ್ಮ ಹಾಸನ, ಚಿಕ್ಕಮಗಳೂರು, ಮಲೆನಾಡ ಪ್ರದೇಶದಲ್ಲಿ ಆನೆಗಳ ಹಾವಳಿ ಜಾಸ್ತಿಯಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಕೊಡಿ.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಮತ್ತು ಶ್ರೀ ಎಂ.ಪಿ.ಸುನೀಲ್ ಸುಬ್ರಮಣ್ಯರವರು ಸರ್ಕಾರದ ಉತ್ತರವನ್ನು ವಿರೋಧಿಸಿ, ಸದನದ ಬಾವಿಗೆ ಬಂದು ಧರಣಿ ನಿರತರಾದರು.)**

**ಸಭಾಪತಿಯವರು:-** ಮಾನ್ಯ ಸದಸ್ಯರು ಪೂರ್ವಬಾವಿಯಾಗಿ ನಿರ್ಧರಿಸಿ, ಬಾವಿಗೆ ಬಂದ ಹಾಗೆ ಇದೆ. ಮೊದಲು ಸಚಿವರು ಉತ್ತರವನ್ನು ಸಂಪೂರ್ಣ ಉತ್ತರವನ್ನು ಕೊಡುವ ತನಕ ಕೇಳಬೇಕು. ಸರ್ಕಾರವನ್ನು ಒತ್ತಾಯಿಸಬೇಕು, ಹಾಗೂ ಸಮಸ್ಯೆ ಪರಿಹಾರವಾಗದಿದ್ದಲ್ಲಿ ಮಾತ್ರ ಬಾವಿಗೆ ಬರಬೇಕು.

**(ಗೊಂದಲ)**

ನಿಮ್ಮ ಒಂದು ಧರಣಿಯಿಂದ ಪ್ರಶ್ನೋತ್ತರ ಅವಧಿ ಹಾಳಾಗುತ್ತಿದೆ. ತಮ್ಮ ಸ್ಥಾನಗಳಿಗೆ ತೆರಳಿ, ಸರ್ಕಾರಕ್ಕೆ ಒತ್ತಾಯ ಮಾಡಿ ಉತ್ತರವನ್ನು ಪಡೆಯಿರಿ. ಧರಣಿಯಲ್ಲಿ ಇರುವವರು ಮಾತನಾಡಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಸರ್ಕಾರ ನಮ್ಮ ಸಮಸ್ಯೆಗಳಿಗೆ ಸ್ಪಂದಿಸದಿದ್ದಾಗ ಧರಣಿ ಮಾಡಬೇಕೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮೊದಲಿಗೆ ಆ ಹಳ್ಳಿಯ ಜನರ ಪ್ರಾಣವನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿ. ನೀವು ರೈಲ್ವೆ ಹಳಿಗಳ ಮೂಲಕ ಬೇಲಿಯನ್ನು ಹಾಕಲಾಗುವುದು ಎನ್ನುವುದು ಸರ್ಕಾರದ ಭರವಸೆ. ನಾನು ಕೂಡ ಆ ಜಾಗವನ್ನು ನೋಡಿ ಬಂದಿದ್ದೇನು. ಸತ್ತವರಿಗೆ ಪರಿಹಾರ ಕೊಡುವ ಸಂದರ್ಭದಲ್ಲಿ ನಾನು ಕೂಡ ಇದ್ದೆನು. ಸರ್ಕಾರ ನನಗೆ ಈ ಪುಂಡಾನೆಗಳನ್ನು ಯಾವ ದಿವಸದಲ್ಲಿ ಸ್ಥಳಾಂತರ ಮಾಡಲಾಯಿತು ಎನ್ನುವುದನ್ನು ಹೇಳಬೇಕು. ಅರಣ್ಯ ಇಲಾಖೆಯಲ್ಲಿ ಸಾವಿರಾರು ಜನ ಸಿಬ್ಬಂದಿ ಇರುತ್ತಾರೆ, ಒಂದು ಆನೆಯನ್ನು ಹಿಡಿದು ಸ್ಥಳಾಂತರ ಮಾಡಲು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅನೆ ಹಿಡಿಯುವ ಪ್ರಕ್ರಿಯೆಯಲ್ಲಿಯೂ ಭ್ರಷ್ಟಾಚಾರ ನಡೆದರೆ ಏನು ಮಾಡಬೇಕೆನ್ನುವುದನ್ನು ಸಚಿವರು ತಿಳಿಸಬೇಕು. ಸರ್ಕಾರದ ಉತ್ತರ ಮುಗಿದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ ಅವರು ಧರಣಿಗೆ ಬರಬೇಕಾಗಿತ್ತು, ಅದಕ್ಕೆ ಮೊದಲೇ ಬಂದಿದ್ದಾರೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವರು ಕೇಳಿದಂತಹ ಪ್ರಶ್ನೆಯಲ್ಲಿ ನ್ಯಾಯವಿದೆ. ಈ ಪುಂಡಾನೆಗಳನ್ನು ಯಾವಾಗ ಸ್ಥಳಾಂತರ ಮಾಡಲಾಗುವುದು ಎನ್ನುವುದನ್ನು ಸರ್ಕಾರ ತಿಳಿಸಬೇಕು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಮತ್ತು ಶ್ರೀ ಎಂ.ಪಿ.ಸುನೀಲ್ ಸುಬ್ರಮಣ್ಯರವರು ಧರಣಿಯನ್ನು ನಿಲ್ಲಿಸಿ, ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.)**

**ಡಾ॥ತೇಜಸ್ವಿನಿ ಗೌಡ:-**ಮಾನ್ಯ ಸಭಾಪತಿಗಳೇ, ಕೊಡಗು ಮಲೆನಾಡಿನ ರೈತರು ಈಗಾಗಲೇ ಮಳೆ ಹಾಗೂ ಅತಿವೃಷ್ಟಿಯಿಂದ ಕಷ್ಟಕ್ಕೆ ಈಡಾಗಿದ್ದಾರೆ. ಶಾಲೆಗೆ ಆನೆಗಳು ನುಗ್ಗಿವೆ, ಆನೆಗಳ ಹಾವಳಿಯಿಂದ ಸತತವಾಗಿ ಜೀವ ಹಾನಿಯಾಗುತ್ತಿವೆ. ಮಲೆನಾಡಿನ ಜನಪ್ರತಿನಿಧಿಗಳಿಗೆ ಅಲ್ಲಿನ ಜನರು ನೀವು ಈ ಹಾನಿಗಳ ಹಾವಳಿಗೆ ಶಾಶ್ವತ ಪರಿಹಾರ ಕಂಡುಕೊಂಡ ಮೇಲೆ ನಮ್ಮ ಕ್ಷೇತ್ರಕ್ಕೆ ಬರಬೇಕೆಂದು ಹೇಳುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ನಾವು ಸಚಿವರ ಪ್ರಯತ್ನಗಳ ಬಗ್ಗೆ ನಾವು ಶಂಕೆಯನ್ನು ವ್ಯಕ್ತಪಡಿಸುತ್ತಿಲ್ಲ. ಆದರೆ ಈಗ ಫೆನ್ಸ್ ಹಾಕಬೇಕಾದ ತುರ್ತು ಸಂದರ್ಭ ಇದೆ. ಇವತ್ತು ಅನೆಗಳು ಕೂಡ ತುಂಬ ಬುದ್ದಿವಂತವಾಗಿದ್ದು, ಸೋಲಾರ್ ಫೆನ್ಸ್‌ಗಳನ್ನು, ಕಲ್ಲುಕುಂಚಗಳನ್ನು ಕಾಲಿನಲ್ಲಿ ತುಳಿದು ಬರುವ ಹಲವಾರು ದೃಶ್ಯಾವಳಿಗಳನ್ನು ನಾವು ನೋಡಿದ್ದೇವೆ. ಇತ್ತೀಚೆಗೆ ಒಂದು ಆನೆ ರೈಲ್ವೆ ಕಂಬಿಯನ್ನು ದಾಟಲು ಹೋಗಿ, ಅದನ್ನು scale ಮಾಡಲಿಕ್ಕೆ ಆಗದೇ ಮೃತ ಪಟ್ಟಿದೆ. ಇದು ಎರಡೂ ರೀತಿಯಲ್ಲಿಯೂ ದುಃಖ ಪಟ್ಟುಕೊಳ್ಳುವ ಸಂಗತಿ. Priority ಮತ್ತು speed ಯಾವುದು ಬೇಕೆಂದರೆ, ಆನೆ ಏಕೆ ದಾಳಿಯನ್ನು ಮಾಡುತ್ತಿದೆ, ಏಕೆಂದರೆ ಅದಕ್ಕೆ ಆಹಾರ ಪದಾರ್ಥಗಳ ಲಭ್ಯತೆ ಕಡಿಮೆ ಆಗಿದೆ. 5 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಿದರೆ ಹೋದ ಪ್ರಾಣ ಮತ್ತೆ ಬರುವುದಿಲ್ಲ. ಇವತ್ತು ಮೂಡಿಗೆರೆ, ಸಕಲೇಶಪುರ, ಮಲಂದೂರು ಭಾಗಗಳಲ್ಲಿ ಆನೆಗಳು ಬರುತ್ತಿರುತ್ತವೆ. ಒಂದು particular season ನಲ್ಲಿ ಈ ಆನೆಗಳು ಬರುತ್ತವೆ. ನಮ್ಮ ಅರಣ್ಯ ಅಧಿಕಾರಿಗಳಿಗೆ ಇದರ ಬಗ್ಗೆ ಪರಿಣಿತಿ ಅಥವಾ ಶಕ್ತಿ ಇಲ್ಲವೆಂದು ಹೇಳುವುದಿಲ್ಲ. ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಮುಂತಾದ ತೊಂದರೆಗಳಿವೆ. ಇಂತಹ ಮೂಲಭೂತ ಸಮಸ್ಯೆಗಳನ್ನು ಇಲಾಖೆ ಪರಿಹರಿಸಿಕೊಳ್ಳದಿದ್ದರೆ, ಹಾಗೆಯೇ ವನ್ಯಜೀವಿ ಹಾಗೂ ಮಾನವ ಸಂಘರ್ಷವನ್ನು ತಡೆಯಬೇಕಾದರೆ ಸರ್ಕಾರ ಇದಕ್ಕೆಲ್ಲ ಶಾಶ್ವತ ಪರಿಹಾರಗಳನ್ನು ಮಾಡಬೇಕು. ಹಾಗೆಯೇ ಇದಕ್ಕಾಗಿ ಹೆಚ್ಚಿನ ಅನುದಾನವನ್ನು ಕೂಡ ಸರ್ಕಾರ ಇಲಾಖೆಗೆ ನೀಡಬೇಕು. ಆನೆಗಳಿಗೆ ವಿಫುಲವಾಗಿ ಆಹಾರ ಸಿಗುವಂತಾಗಬೇಕು. ಮತ್ತು ನಮ್ಮ ರೈತರ ಜಮೀನುಗಳಲ್ಲಿ ಆನೆ ಕಂದಕಗಳನ್ನು ಮಾಡುತ್ತೀರಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(559) 19-12-2018 12-40 ಎಲ್‌ಎಂ/ಆರ್‌ಎನ್

**ಡಾ:ತೇಜಸ್ವಿನಿ ಗೌಡ(ಮುಂದು):-** 42 ಕಿ.ಮೀ solar fencing ಮಾಡಿದ್ದೀರಿ, ಕಂದಕಗಳನ್ನು ಸಹ ನಿರ್ಮಾಣ ಮಾಡಿದ್ದೀರಿ. ಆದರೆ ಕಾಲಿನಿಂದ ಮಣ್ಣನ್ನೂ ಹಾಕಿ ಕಂದಕಗಳನ್ನು ಮುಚ್ಚಿ ಬರುವಂತಹ ಬುದ್ಧಿವಂತ ಆನೆಗಳು ಇವೆ. ಬದುಕಿನ ಸಂಘರ್ಷದಲ್ಲಿ ಅದು ಹಾಗೆ ಮಾಡುತ್ತದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಪ್ರಾಣೇಶ್‌ರವರೆ ನೀವು ಪ್ರಶ್ನೆಗಳನ್ನು ಕೇಳಿ, ಹಾಗೆಯೇ ಸಲಹೆಗಳನ್ನು ಕೊಡಿ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಗಳೆ, ನಾನು ಕೇಳಿರುವುದು ಒಂದು ಪ್ರಶ್ನೆಯಾದರೆ ಅದಕ್ಕೆ ಸರ್ಕಾರ ಕೊಟ್ಟಿರುವ ಉತ್ತರ ಇನ್ನೊಂದು. ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಡದಿದ್ದರೆ ಹೇಗೆ? ನಾಲ್ಕು ಜನ ಸತ್ತಿರುವಲ್ಲಿ ಒಬ್ಬರು ಸತ್ತಿದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ನ್ಯಾಯವೇ? ಸದನಕ್ಕೆ ಈ ರೀತಿ ಉತ್ತರ ಕೊಡುವುದು ಸಮಂಜಸವೆ? ಅದಕ್ಕಾಗಿ ನಾನು ಬಾವಿಗೆ ಹೋಗಿದ್ದು. ಸಲಹೆ ಕೊಡಿ ಎಂದು ಮಾನ್ಯ ಸಭಾಪತಿಯವರು ಹೇಳಿದರು, ಆದರೆ ಉತ್ತರವೇ ಸರಿ ಇಲ್ಲದಿರುವಾಗ ಏನು ಸಲಹೆಗಳನ್ನು ಕೊಡಬೇಕು. ಆನೆಗಳನ್ನು ಕೂಡಲೇ ಸ್ಥಳಾಂತರ ಮಾಡಬೇಕು ಎನ್ನುವುದು ನಮ್ಮ ಪ್ರಶ್ನೆ. ಅರಣ್ಯ ಇಲಾಖೆಯವರನ್ನು ಕೇಳಿದರೆ ಸರ್ಕಾರದಿಂದ ಆದೇಶ ಮಾಡಿಸಿ ಎಂದು ಹೇಳುತ್ತಾರೆ. ಸರ್ಕಾರದಿಂದ ಮೊದಲು ಆದೇಶವನ್ನು ಹೊರಡಿಸಿ, ನಂತರ ಅದರ ಮೇಲೆ ನಾವು ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ, ಆದರೆ ನಾವಾಗಿ ಆನೆಗಳನ್ನು ಓಡಿಸಲು ಬರುವುದಿಲ್ಲ ಎಂದು ಹೇಳುತ್ತಾರೆ. ಒಂದು ದಿನಕ್ಕೆ ದೊಡ್ಡ ಆನೆ ಇದ್ದರೆ ನಾಲ್ಕು ಕಿ.ಮೀ ಓಡಿಸಬೇಕು. ಸಣ್ಣ ಆನೆ ಇದ್ದರೆ ಒಂದು ಕಿ.ಮೀ. ಓಡಿಸಬೇಕು ಎಂದು ಕಾನೂನಿನಲ್ಲಿ ಇದೆ. ಅಲ್ಲಿ ಇರುವುದೆ sorrounding ನಾಲ್ಕು ಕಿ.ಮೀ. ಇಲ್ಲಿ ಏನು ಮಾಡಲು ಬರುವುದಿಲ್ಲ. ಅದಕ್ಕಾಗಿ ಸರ್ಕಾರ ಏನಾದರೂ ಯೋಚನೆ ಮಾಡಬೇಕು. ಮನುಷ್ಯನ ಜೀವ ಮುಖ್ಯವೇ ಅಥವಾ ಆನೆಯನ್ನು ಓಡಿಸುವುದು ಮುಖ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಆನೆಗಳನ್ನು ಓಡಿಸಿದರೆ ಮನುಷ್ಯನ ಜೀವ ಉಳಿಯುತ್ತದೆ. ನಮ್ಮಲ್ಲಿ ಈಗಾಗಲೇ ಅತಿವೃಷ್ಟಿ ಉಂಟಾಗಿ ಆರ್ಥಿಕವಾಗಿ ಸಂಕಷ್ಟಕ್ಕೊಳಗಾಗಿದ್ದೇವೆ. ಇವತ್ತು ಯಾವ ಬೆಳೆಯು ಇಲ್ಲ. ಮುಂದಿನ ವರ್ಷವಾದರೂ ಬೆಳೆ ತೆಗೆಯಬೇಕು ಎಂದು ಯೋಚನೆ ಮಾಡಿದ್ದರೆ ಆನೆಗಳು ಅಡಕೆ ಗಿಡಗಳನ್ನು, ಕಾಫೀ ಗಿಡಗಳನ್ನು, ಗದ್ದೆಗಳನ್ನು ಸಂಪೂರ್ಣವಾಗಿ ಹಾಳು ಮಾಡಿವೆ. ಒಂದೆರಡು ಆನೆಗಳು ಬಂದಿವೆ ಎಂದು ಸರ್ಕಾರ ಹೇಳುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಖುದ್ದಾಗಿ ಬಂದು ನೋಡಬೇಕು. ಹಿಂದೆ ಮಾಜಿ ಅರಣ್ಯ ಸಚಿವರಾದ ಮಾನ್ಯ ರಮಾನಾಥ್ ರೈ ರವರು ಅಲ್ಲಿಗೆ ಬಂದಿದ್ದರು. ಬಂದಾಗ ಇನ್ನೊಂದು ವಾರದಲ್ಲಿ ಎಲ್ಲವನ್ನು ಸ್ಥಳಾಂತರ ಮಾಡುತ್ತೇವೆ ಎಂದು ನಮಗೆ ಆಶ್ವಾಸನೆ ಕೊಟ್ಟು ಹೋದರು. ಆದರೆ ದೇವರ ದಯೆಯಿಂದ ಅವರು ಬರಲು ಇಲ್ಲ, ಅದರ ಬಗ್ಗೆ ಆಸಕ್ತಿಯನ್ನೂ ವಹಿಸಲಿಲ್ಲ. ಯಾವುದೊ ಒಂದು ಪಾಪದ ಆನೆಯನ್ನು ಹಿಡಿದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪುಂಡಾನೆಯನ್ನು ಹಿಡಿಯಲಾಗಿದೆ ಎಂದು ಹೇಳಿದರು. ಆನೆ ಒಣಕಲ್ಲ ಪೇಟೆಯೊಳಗೆ ಬಂದು ಒಬ್ಬನನ್ನು ಕಾಲಿನಿಂದ ತುಳಿದು ಸಾಯಿಸಿತು. ಈ ಘಟನೆ ನಡೆದು ಎರಡು ವರ್ಷವಾದರೂ ಅದರ ಬಗ್ಗೆ ಸರ್ಕಾರ ಏನನ್ನೂ ಹೇಳಲಿಲ್ಲ. ಈ ರೀತಿ ಸದನದಲ್ಲಿ ಸರ್ಕಾರ ತಪ್ಪು ಮಾಹಿತಿಯನ್ನು ಕೊಟ್ಟಾಗ ನಾವು ಧರಣಿಯನ್ನು ಮಾಡಬೇಕೆ, ಬೇಡವೆ ನೀವೆ ಹೇಳಿ. ಈಗ ನಾನು ಕೇಳುವುದು, ದಯಮಾಡಿ ಆನೆಯನ್ನು ಸ್ಥಳಾಂತರ ಮಾಡಲು ಯಾವ ದಿನಾಂಕವನ್ನು ಸರ್ಕಾರ ನಿಗದಿ ಮಾಡುತ್ತದೆ ಎನ್ನುವುದನ್ನು ಹೇಳಬೇಕು. ನಿಮ್ಮ ಇಲಾಖೆಗೆ ಆನೆಗಳನ್ನು ಸ್ಥಳಾಂತರ ಮಾಡಲು ಅಧಿಕಾರವಿದೆ. ಸ್ಥಳಾಂತರ ಮಾಡಿ ಎಂದರೆ, ಅವುಗಳನ್ನು ಎಲ್ಲಿಗೆ ಬಿಡುತ್ತೀರಿ, ಆನೆಗಳಿಂದ ಇನ್ನು ಮುಂದೆ ಮನುಷ್ಯನ ಬದುಕಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಮಾನ್ಯ ಅರಣ್ಯ ಸಚಿವರು ದಿನಾಂಕವನ್ನು ನಿಗದಿ ಮಾಡಿ ಹೇಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಪ್ರಾಣೇಶ್‌ರವರು ಬಹಳ ಗಂಭೀರವಾದ ಪ್ರಶ್ನೆಯನ್ನು ಕೇಳಿದ್ದಾರೆ. ಇದು ಜೀವದ ವಿಚಾರ. ಇಲ್ಲಿ ಯಾವುದೇ ಪಕ್ಷದ ವಿಚಾರ ಬರುವುದಿಲ್ಲ. ಮಾನ್ಯ ಸದಸ್ಯರು ಉತ್ತರ ಸಮಂಜಸವಾಗಿಲ್ಲ ಎಂದು ಬಾವಿಗೆ ಹೋಗಿದ್ದರು. ಅವರಿಗೆ ಮಾತ್ರವಲ್ಲ ನಮಗೂ ಕೂಡಾ ಸರ್ಕಾರದ ಉತ್ತರ ಸಮಂಜಸವಾಗಿರುವುದಿಲ್ಲ. ಅರಣ್ಯ ಸಚಿವರಿಗೆ ಆನೆಗಳ ಹಾವಳಿ ಬಗ್ಗೆ ಅಷ್ಟೊಂದು ಗೊತ್ತಿಲ್ಲ. ಅವರ ಪಕ್ಕದಲ್ಲಿ ನಮ್ಮ ಜಿಲ್ಲಾ ಸಚಿವರಾದ ಮಾನ್ಯ ಕೆ.ಜೆ.ಜಾರ್ಜ್‌ರವರು ಕುಳಿತಿದ್ದಾರೆ, ಅವರು ಅರಣ್ಯದಲ್ಲಿಯೇ ಹುಟ್ಟಿ ಬೆಳೆದವರು, ಅವರು ತಮ್ಮ ತೋಟವನ್ನು ತುಂಬಾ ಚೆನ್ನಾಗಿ ಬೆಳೆಸಿದ್ದಾರೆ. ಪರಿಸರ ಪ್ರೇಮಿಗಳು, ಅರಣ್ಯದ ಬಗ್ಗೆ ತುಂಬಾ ಅನುಭವ ಇರುವಂತಹ ಮಂತ್ರಿಗಳು ಅವರು. ಅಂತಹ ಮಂತ್ರಿಗಳಿಂದ ಮಾನ್ಯ ಅರಣ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಆನೆ ಕಾರಿಡಾರ್ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ತುಂಬಾ ಶ್ಲಾಘಿಸಬೇಕಾಗುತ್ತದೆ. ಎಲ್ಲಾ ಅಧಿಕಾರಿಗಳನ್ನು ಮತ್ತು ಜಿಲ್ಲೆಯ ಎಲ್ಲಾ ಪದಾಧಿಕಾರಿಗಳನ್ನು ಕರೆದು ಈ ವಿಚಾರದಲ್ಲಿ ಸುಧೀರ್ಘವಾಗಿ ಚರ್ಚೆ ಮಾಡಿದ್ದಾರೆ. ಇದರಲ್ಲಿ ಕಾನೂನಿನ ತೊಡಕುಗಳು ಇವೆ. ಒಂದು ಕಾರಿಡಾರ್‌ನಿಂದ ಇನ್ನೊಂದು ಕಾರಿಡಾರ್‌ಗೆ ಎರಡು ಆನೆಗಳಿಗಿಂತ ಹೆಚ್ಚು ಹಿಡಿಯಬಾರದು ಎಂದು ಸುಪ್ರಿಮ್ ಕೋರ್ಟ್ ಹೇಳುತ್ತದೆ. ಆದರೆ 22 ಆನೆಗಳು ದಾಳಿ ಮಾಡುತ್ತವೆ. ಅಧಿಕಾರಿಗಳಿಂದ ಮಾಹಿತಿ ತರಿಸಿಕೊಳ್ಳಬೇಕು. ಇದಕ್ಕೆ ನಾವು ಕೂಡಾ ಕಾರಣರಾಗಿದ್ದೇವೆ. ಹತಾಶೆಯಿಂದ ಆಗುವುದಿಲ್ಲ, ಹಣಕಾಸಿನ ತೊಂದರೆ ಇದೆ ಎಂದು ಸಚಿವರು ದಯಮಾಡಿ ಉತ್ತರ ಕೊಡಬಾರದು ಎಂದು ವಿನಂತಿಸುತ್ತೇವೆ.

**ಶ್ರೀ ಆರ್.ಶಂಕರ್:-** ಹಣಕಾಸಿನ ತೊಂದರೆ ಇದೆ ಎಂದು ನಾನು ಹೇಳಿರುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಹಣಕಾಸಿನ ತೊಂದರೆ ಇಲ್ಲ ಎಂದರೆ ಒಳ್ಳೆಯದಾಯಿತು. ನಿಮಗೆ ತಿಳಿ ಹೇಳುವಷ್ಟು ಬುದ್ಧಿವಂತ ನಾನೇನಲ್ಲ. ಆದರೆ ಆ ಭಾಗದಲ್ಲಿ ವಾಸ ಮಾಡುವವನಾಗಿರುವುದರಿಂದ ನನ್ನ ಅನುಭವದ ಮಾತುಗಳನ್ನು ಹೇಳುತ್ತಿದ್ದೇನೆ. ಕಂಬಿಯ ವಿಚಾರದಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಚರ್ಚೆಯಾಗಿದೆ. 15,000ಕ್ಕೆ ಒಂದು ಟನ್ ಕಬ್ಬಿಣ ಇದೆ, ಅದಕ್ಕಾಗಿ ಕಂಬಿ ಕಟ್ಟಲು ತೊಂದರೆಯಾಗುತ್ತದೆ, ಇದನ್ನು ಕೇಂದ್ರ ಸರ್ಕಾರದಿಂದ ಕೊಡಿಸಿ ಎಂದು ಅಧಿಕಾರಿಗಳು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈಗಾಗಲೇ ಮನವಿ ಮಾಡಿಕೊಂಡಿದ್ದಾರೆ. ಬ್ಯಾರಿಕೆಡ್ ಹಾಕುವಾಗ ಪೈಪ್ ಹಾಕಲಾಗುತ್ತದೆ. ದನಗಳು ತೋಟದ ಒಳಗೆ ಬರದೆ ಇರಲಿ ಎಂದು ಪೈಪ್ ಹಾಕಲಾಗುತ್ತದೆ. ಅದೇ ರೀತಿ ಆನೆಗಳು ಒಳಗೆ ಬರಬಾರದು ಎಂದು ರೈಲ್ವೆ ಕಂಬಿಗಳನ್ನು ಅಳವಡಿಸಲಾಗುತ್ತದೆ. ಆದರೆ ರೈಲ್ವೆ ಕಂಬಿಗಳನ್ನು ಅಳವಡಿಸಿದರೆ ಅದು ಸರಿಯಾಗಿ ಆಗುವುದಿಲ್ಲ, ಇದರಿಂದ ಆನೆಗಳ ಹಾವಳಿಯನ್ನು 50% ಕಂಟ್ರೋಲ್ ಮಾಡಬಹುದು ಎಂದು ಅಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ. ಇದರ ಬಗ್ಗೆ ನನಗೆ ಗೊತ್ತಿಲ್ಲ. ನಿಮ್ಮ ಅಧಿಕಾರಿಗಳು ಇಲ್ಲಿ ಕುಳಿತಿದ್ದಾರೆ, ದಯಮಾಡಿ ತಿಳಿದುಕೊಳ್ಳಿ. Ibex ಹಾಕುವುದು ಅವೈಜ್ಞಾನಿಕ. ಏಕೆ ಎಂದರೆ, ಒಂದು ಬಾರಿ ಕಾಡುಹಂದಿ Ibex ಮೇಲೆ ನುಗ್ಗಿದರೆ ಆ Ibex ಇರುವುದಿಲ್ಲ, ಏನೂ ಇರುವುದಿಲ್ಲ. ಪ್ರಾಣಿಗಳು ತುಂಬಾ ಬುದ್ಧಿವಂತಿಕೆ ವಹಿಸುತ್ತದೆ. ಅವುಗಳು ಒಂದು ಬಾರಿ ಮುಟ್ಟಿ ನೋಡುತ್ತವೆ, ಏನಾದರೂ ಆದರೆ ಹಿಂದಕ್ಕೆ ಸರಿಯುತ್ತವೆ. ಏನೂ ಆಗುವುದಿಲ್ಲ ಎಂದಾದರೆ, ಮುಂದಕ್ಕೆ ನುಗ್ಗಿ ಬರುತ್ತವೆ. Ibex 100 ಕ್ಕೆ 100 ಅವೈಜ್ಞಾನಿಕ. ಹಾಕಿರುವುದನ್ನು ನೋಡಿದ್ದೇನೆ, ಕೋಟ್ಯಂತರ ರೂಪಾಯಿಗಳು ಇದರಿಂದ ವ್ಯಯವಾಗಿದೆ. ಆದರೆ ಇದರಿಂದ ಪ್ರಯೋಜನವಾಗಿರುವುದಿಲ್ಲ. ನಾನು ಮುಖ್ಯವಾಗಿ ಹೇಳುವುದು ಕಾನೂನು ತೊಡಕು ಇದ್ದರೂ ಕೂಡಾ, ಕಾನೂನು ತೊಡಕನ್ನು ಮೀರಿ ಸಾರ್ವಜನಿಕವಾಗಿ ಜನರ ಹಿತರಕ್ಷಣೆಗೋಗೊಸ್ಕರ ಕ್ರಮ ತೆಗೆದುಕೊಳ್ಳಬೇಕು. ಸುಪ್ರೀಂಪ್ರಿಮ್ ಕೋರ್ಟ್ ಆದೇಶವನ್ನು ಪಾಲನೆ ಮಾಡಬೇಕು, ಅದರಲ್ಲಿ ಎರಡು ಮಾತಿಲ್ಲ. ಆದರೆ practical difficulty ನೋಡಬೇಕಾಗುತ್ತದೆ. ಸುಪ್ರೀಪ್ರಿಂಮ್ ಕೋರ್ಟ್ ಆದೇಶ ಪಾಲನೆ ಮಾಡುತ್ತೇವೆ ಎನ್ನುವುದಾದರೆ ಜನರಿಗೆ ಒಳ್ಳೆಯದನ್ನು ಮಾಡಲು ಸಾಧ್ಯವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಆನೆಗಳನ್ನು ಹಿಡಿದು ಜನರಿಗೆ ರಕ್ಷಣೆಯನ್ನು ಕೊಡುತ್ತೇವೆ ಎಂದು ಈಗಾಗಲೇ ಹೇಳಿದ್ದಾರೆ. ಆ ಕೆಲಸಕ್ಕೆ ಮುಂದಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ನರಹಂತಕ, ಜನರ ಪ್ರಾಣವನ್ನು ತೆಗೆದುಕೊಳ್ಳುವಂತಹ ಎರಡು ಪುಂಡಾನೆಗಳನ್ನು ಅರಣ್ಯ ಇಲಾಖೆ ಗುರುತಿಸಿದೆ. ಈ ಪುಂಡಾನೆಯನ್ನು ಎಷ್ಟು ದಿನಗಳಲ್ಲಿ ಹಿಡಿಯಲಾಗುತ್ತದೆ ಎಂದು ದಿನಾಂಕವನ್ನು ನಿಗದಿಗೊಳಿಸಬೇಕು. ಈಗಾಗಲೇ ಆ ಆನೆಗಳನ್ನು ಗುರುತಿಸಿ ಅವುಗಳನ್ನು ಸ್ಥಳಾಂತರಗೊಳಿಸಬೇಕು ಎಂದು ಅರಣ್ಯ ಇಲಾಖೆ ಆಲೋಚನೆ ಮಾಡಿದೆ. ಅವುಗಳು ಈಗ ಪೇಟೆಯವರೆಗೆ ಬಂದಿವೆ. ಈ ಎರಡು ನರಹಂತಕ ಆನೆಗಳನ್ನು ಎಷ್ಟು ದಿನಗಳಲ್ಲಿ ಹಿಡಿದು ಸ್ಥಳಾಂತರ ಮಾಡಲಾಗುತ್ತದೆ ಮತ್ತು ಮಂತ್ರಿಗಳು ಯಾವಾಗ ಅಲ್ಲಿಗೆ ಭೇಟಿ ಕೊಡುತ್ತಾರೆ ಎನ್ನುವುದನ್ನು ಅವರು ತಿಳಿಸಬೇಕು.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:-** ಮಾನ್ಯ ಸಭಾಪತಿಗಳೆ, ಅರಣ್ಯ ಸಚಿವರು ಮಡಿಕೇರಿಗೆ ಭೇಟಿ ಕೊಡುತ್ತಾರೆ ಎನ್ನುವ ಮಾಹಿತಿ ಬರುತ್ತದೆ. ನಾವು ಅಧಿಕಾರಿಗಳಿಗೆ ಕರೆ ಮಾಡಿ ವಿಚಾರಿಸಿದಾಗ ಮಂತ್ರಿಗಳು ಯಾರನ್ನು ಭೇಟಿ



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುವುದಿಲ್ಲ ಎಂದು ಹೇಳುತ್ತಾರೆ. ಭೇಟಿ ಮಾಡದೆ ಇರುವಂತಹವರು ಏಕೆ ನಮಗೆ ಅರಣ್ಯ ಸಚಿವರಾಗಿರಬೇಕು? ಅವರು ನಮ್ಮನ್ನುನ್ನು ಭೇಟಿ ಮಾಡಿ ಚರ್ಚೆ ಮಾಡಬೇಕು. ನಾವು ಯಾರ ಹತ್ತಿರ ಕಷ್ಟ ಹೇಳಿಕೊಳ್ಳಬೇಕು. ಜನರು ನಮ್ಮ ಜೊತೆ ಗಲಾಟೆ ಮಾಡುತ್ತಾರೆ. ಅಲ್ಲಿ ಜನರಿಗೆ ರಕ್ಷಣೆ ಇಲ್ಲ, ಮಕ್ಕಳಿಗೆ ರಕ್ಷಣೆ ಇಲ್ಲ, ಕಾರ್ಮಿಕರಿಗೆ ರಕ್ಷಣೆ ಇಲ್ಲ. ನಾವು ಇಬ್ಬರು ಮೇಲ್ಮನೆ ಸದಸ್ಯರಿದ್ದೇವೆ, ಇಬ್ಬರು ಕೆಳಮನೆ ಸದಸ್ಯರಿದ್ದೇವೆ ಆದರೂ ಮಂತ್ರಿಗಳು ನಮ್ಮನ್ನು ಕರೆದು ಮಾತನಾಡುವುದಿಲ್ಲ. ನಮ್ಮ ಕಷ್ಟವನ್ನು ಯಾರ ಹತ್ತಿರ ಹೇಳಿಕೊಳ್ಳಬೇಕು.

**ಶ್ರೀ ಆರ್.ಶಂಕರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರ ಅಹವಾಲುಗಳನ್ನು ಖಂಡಿತವಾಗಿ ಪರಿಗಣಿಸಿ ಆದಷ್ಟು ಬೇಗ ಮೂಡಿಗೆರೆ ಗೆ ಹೋಗಿ ಎಲ್ಲ ಸದಸ್ಯರನ್ನು ಕರೆದು ಚರ್ಚೆ ಮಾಡುತ್ತೇನೆ. ಮುಂದಿನ ವಾರದಲ್ಲಿ ಮಡಿಕೇರಿ ಗೆ ಹೋಗುತ್ತೇನೆ. ಮಾನ್ಯ ಸದಸ್ಯರಿಗೆ ಮಾಹಿತಿ ಕೊಟ್ಟೆ ಬರುತ್ತೇನೆ.

**ಡಾ:ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಮಂತ್ರಿಗಳು ದಿನಾಂಕವನ್ನು ಸ್ಪಷ್ಟಪಡಿಸಬೇಕು.

**ಶ್ರೀ ಆರ್.ಶಂಕರ್:-** ಮಾನ್ಯ ಸಭಾಪತಿಗಳೆ, 22 ತಂಡಗಳ ಆನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸಿದರೂ ಕೂಡಾ ಮತ್ತೆ 32 ಆನೆಗಳು ಬಂದಿರುವುದು ಕಂಡುಬಂದಿದೆ. ಅದಕ್ಕಾಗಿ ಮೂಡಿಗೆರೆಗೆ ಭೇಟಿ ಕೊಟ್ಟು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ಇದಕ್ಕೆ ಪರಿಹಾರವನ್ನು ಕಂಡುಹಿಡಿಯುತ್ತೇನೆ.

**ಡಾ: ವೈ.ಎ.ನಾರಾಯಣ ಸ್ವಾಮಿ:-** ಇಂತಹ ದಿನಾಂಕದಂದು ಬರುತ್ತೇನೆ ಎಂದು ದಿನಾಂಕವನ್ನು ನಿಗದಿಗೊಳಿಸಿ ಹೇಳಬೇಕು.

**ಶ್ರೀ ಆರ್.ಶಂಕರ್:-** ಮುಂದಿನ ವಾರ ಅಂದರೆ ಇದೇ ತಿಂಗಳ 25 ಅಥವಾ 26ನೇ ತಾರೀಖಿನಂದು ಬರುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ. ಆನೆಗಳನ್ನು ಸ್ಥಳಾಂತರ ಮಾಡಲು ಯಾವಾಗ ಆದೇಶ ಮಾಡುತ್ತಾರೆ ಎನ್ನುವುದನ್ನು ದಯಮಾಡಿ ಮಂತ್ರಿಗಳು ತಿಳಿಸಬೇಕು.

**ಶ್ರೀ ಆರ್.ಶಂಕರ್:-** ಮುಂದಿನ ವಾರ 26ನೇ ತಾರೀಖಿನಂದು ಬರುತ್ತೇವೆ. ಆನೆಗಳನ್ನು ಸ್ಥಳಾಂತರಿಸಲು ಆದಷ್ಟು ಬೇಗ ನಾನು ಆದೇಶವನ್ನು ಮಾಡುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಗಳೆ, ಇದರ ಜವಾಬ್ದಾರಿಯನ್ನು ನಾನು ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಕೊಡುತ್ತೇನೆ. ಸಂಬಂಧಪಟ್ಟ ಮಂತ್ರಿಗಳನ್ನು ನಮ್ಮ ಜಿಲ್ಲೆಗೆ ಯಾವಾಗ ಕರೆದು ಈ ಆನೆಗಳನ್ನು ಸ್ಥಳಾಂತರ ಮಾಡುತ್ತಾರೆ ಎನ್ನುವುದನ್ನು ಅವರಿಗೆ ಬಿಟ್ಟಿದ್ದೇವೆ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:-** ಮಾನ್ಯ ಸಭಾಪತಿಗಳೆ, ನಾನು ಕೊಡಗಿನ ಬಗ್ಗೆ ಮಾತನಾಡಿದ್ದೇನೆ. ಮಂತ್ರಿಗಳು ಕೊಡಗಿನ ಬಗ್ಗೆ ಏನು ಪ್ರಸ್ತಾಪ ಮಾಡಲಿಲ್ಲ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(560)19–12–2018(12–40)ಬಿಎಸ್‌ಡಿ–ಆರ್‌ಎನ್

**ಶ್ರೀ ಕೆ. ಜಾರ್ಜ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಸಮಸ್ಯೆ ನಿನ್ನೆ–ಮೊನ್ನೆ ಹುಟ್ಟಿಕೊಂಡಿಲ್ಲ. ವನ್ಯ ಜೀವಿಗಳನ್ನು ಸಂರಕ್ಷಣೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ಇವತ್ತು ಎರಡು ಆನೆ ಹಿಡಿಯಿರಿ, ಮತ್ತೊಂದು ಮಾಡಿ ಎಂದು ನಿರ್ದೇಶನ ಕೊಡುತ್ತಾರೆ. ನನಗೆ ಗೊತ್ತಿರುವಂತೆ ಕಾಡಿನಲ್ಲಿ ಸಾಕಷ್ಟು ಆಹಾರವನ್ನು ಉತ್ಪಾದನೆ ಮಾಡುವ ಕೆಲಸ ಮಾಡಬೇಕು. ಒಂದೊಂದು ಸಾರಿ ಬಿದಿರು 40 ವರ್ಷಗಳಲ್ಲಿ ಪೂರ್ಣವಾಗಿ ಹಾಳಾಗುತ್ತದೆ. ಆನೆಗಳು ಬಿದಿರಿನ ಮೇಲೆ ಅವಲಂಬಿಸಿದ್ದು, ತೇಗ, ನೀಲಗಿರಿ ಇತ್ಯಾದಿಗಳು ಪ್ರಾಣಿಗಳಿಗೆ ಆಹಾರವಾಗುವುದಿಲ್ಲ. ಅದಕ್ಕೆ ಪ್ರಾಣಿಗಳಿಗೆ ಆಹಾರವನ್ನು ಬೆಳೆಸಬೇಕಾಗುತ್ತದೆ. ಇದಲ್ಲದೇ ನೀರಿಗಾಗಿ ಚೆಕ್‌ಡ್ಯಾಂ, ಬೋರ್‌ವೆಲ್ ಇತ್ಯಾದಿಗಳ ಮೂಲಕ ನೀರನ್ನು ಕೊಡಬೇಕಾಗುತ್ತದೆ. ಒಂದು ಸರಿ ಕಾಡು ಪ್ರಾಣಿಗಳು ರೈತರ ಕಾಫಿ ತೋಟಗಳಿಗೆ ನುಗ್ಗಿದರೆ ಮತ್ತೊಮ್ಮೆ ಬಿಡುವುದಿಲ್ಲ. ಏಕೆಂದರೆ ಅವುಗಳಿಗೆ ಸುಲಭವಾಗಿ ಆಹಾರ ಪದಾರ್ಥ ಸಿಗುತ್ತದೆ. ಕೆಲವು ಕಡೆ ದಾಳಿಗಳು ಜಾಸ್ತಿಯಾಗಿದ್ದು, ಅದನ್ನು ಸ್ಥಳಾಂತರ ಮಾಡಬೇಕಾಗಿದೆ. ಸುಪ್ರೀಂಕೋರ್ಟ್ ನಿರ್ದೇಶನದಂತೆ ಬೇರೆ ರಾಜ್ಯಗಳು ಅಥವಾ ಬೇರೆ ಜಾಗಗಳಿಗೆ ಕಳುಹಿಸಲು ಸಾಧ್ಯವಿಲ್ಲ. ಆನೆ ಅಥವಾ ಹುಲಿಯನ್ನು ಬೇರೆ ಸ್ಥಳಕ್ಕೆ ಕಳುಹಿಸುತ್ತಾರೆ ಎಂದಾಗ ಅಲ್ಲಿನ ಸ್ಥಳೀಯ ಜನರು ಸಹ ವಿರೋಧ ಮಾಡುತ್ತಾರೆ. ಇದರ ಬಗ್ಗೆ ಎಲ್ಲರೂ ಕುಳಿತು ತೀರ್ಮಾನ ಮಾಡಬೇಕು. ಈಗ ಅವರು ಆದೇಶ ಕೊಟ್ಟು ಪಾಲಿಸಿ ಮಾಡಬಹುದು. ಹಿರಿಯ ಅಧಿಕಾರಿಗಳು ತಕ್ಷಣ ಪ್ರಾಣಿಗಳನ್ನು ವಾಪಸ್ಸು ಕಳುಹಿಸಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಮಾನ್ಯ ಸಚಿವರು ಪಾಲಿಸಿ ಡಿಸಿಷನ್ ಮಾಡಬೇಕಾಗುತ್ತದೆ. ಆದರೆ ಹಿರಿಯ ಹಾಗೂ ಉನ್ನತ ಮತ್ತು ಸ್ಥಳೀಯ ಅಧಿಕಾರಿಗಳು ತಕ್ಷಣದ ಕ್ರಮ ಕೈಗೊಳ್ಳಬೇಕಾಗುತ್ತದೆ. ಆ ಅಧಿಕಾರಿಗಳು ತಕ್ಷಣ ಆ ಕೆಲಸ ಮಾಡಲಿ ಎಂದು ಹೇಳುತ್ತಾ, ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕಾಗುತ್ತದೆ. ಸರ್ಕಾರವು ಸುಪ್ರೀಂಕೋರ್ಟ್‌ನಲ್ಲಿ ಇದರ ಬಗ್ಗೆ ಒಂದು ಅರ್ಜಿ ಹಾಕಿ ಪ್ರಾಯೋಗಿಕ ಕಷ್ಟಗಳನ್ನು ಹೇಳಿ ಮನವರಿಕೆ ಮಾಡಿಕೊಡಬೇಕಾಗಿದೆ. ಅಲ್ಲದೇ ವನ್ಯಜೀವಿ ಸಂರಕ್ಷಕ ಎನ್.ಜಿ.ಓ ಗಳು ಇದ್ದು, ಅವರುಗಳು ಒಂದೇ ದಿಕ್ಕಿನಲ್ಲಿ ಯೋಚನೆ ಮಾಡುತ್ತಾರೆ. ವನ್ಯ ಜೀವಿಗಳಿಗೆ ರಕ್ಷಣೆ ಕೊಡಬೇಕೆಂದು ಎಲ್ಲರೂ ಒಪ್ಪುತ್ತಾರೆ. ಇದು ಪ್ರತಿಯೊಬ್ಬರ ಕರ್ತವ್ಯವಾದರೂ, ಇದರಿಂದ ಜನರು ಮತ್ತು ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ. ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿ ಹೇಳುವುದೇನೆಂದರೆ, ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಪುಂಡಾನೆಗಳನ್ನು ಹಿಡಿದು ವರ್ಗಾಯಿಸುವ ಕೆಲಸ ಮಾಡಬೇಕು ಎಂದು ಹೇಳಬಯಸುತ್ತೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಅಧಿಕಾರಿಗಳು ಬೆಂಗಳೂರು ಬಿಟ್ಟು ಹೋಗುವುದಿಲ್ಲ, ಎ.ಸಿ ಕೊಠಡಿಯಲ್ಲಿ ಕುಳಿತಿರುತ್ತಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆಗೆ ಒಂದೂವರೆ ಗಂಟೆ ಸಮಯವನ್ನು ತೆಗೆದುಕೊಂಡರೆ ಹೇಗೆ? ಇದನ್ನು ಬೇರೆ ನಿಯಮದಡಿ ತೆಗೆದುಕೊಳ್ಳಬಹುದಲ್ಲವೇ? ಇದು ಸದನ, ಬೇಕಾದ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ನಾನು ಒಪ್ಪಿಕೊಳ್ಳುವುದಿಲ್ಲ, ನಾವು ಇಲ್ಲಿ ಕುಳಿತುಕೊಂಡು ಕೇಳುವುದಿಲ್ಲವೇ?

(ಗೊಂದಲ)

**ಸಭಾಪತಿಯವರು:–** ಅವರ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಹೇಳುತ್ತಾರೆ.

**ಶ್ರೀ ಐವನ್ ಡಿ'ಸೋಜಾ:–** ನಮಗೂ ಅವಕಾಶ ಕೊಡಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ಬೇರೆಯವರಿಗೆ ಸಮಸ್ಯೆ ಇಲ್ಲವಲ್ಲ; ಸಮಸ್ಯೆ ಆ ಸದಸ್ಯರಿಗೆ ಇದೆ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಸಮಸ್ಯೆ ಪ್ರಶ್ನೆ ಅಲ್ಲ, ಒಂದು ಪ್ರಶ್ನೆಗೆ ಮುಕ್ಕಾಲು ಗಂಟೆ ತೆಗೆದುಕೊಂಡಿದ್ದೀರಿ. ಇದನ್ನು ನಿಯಮ 330ರಡಿ ಅಥವಾ ಅರ್ಧ ಗಂಟೆಯ ಚರ್ಚೆಗೆ ತೆಗೆದುಕೊಳ್ಳಿ.

**ಸಭಾಪತಿಯವರು:–** ಕೆಲವು ಸಂದರ್ಭದಲ್ಲಿ ಆಗುತ್ತದೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ವಿಷಯ ಗಂಭೀರವಾಗಿದ್ದರೆ ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಿ.

(ಗೊಂದಲ)

**ಶ್ರೀ ಆರ್. ಶಂಕರ್:–** ಮಾನ್ಯ ಸಭಾಪತಿಯವರೇ, ಮಡಿಕೇರಿಗೆ ಹೋಗುತ್ತೇನೆ, ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದಂತೆ ಶಾಶ್ವತವಾದ ಪರಿಹಾರದ ಅಗತ್ಯ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸವಿಸ್ತಾರವಾಗಿ ಚರ್ಚೆ ಆಗಿದೆ. ಇದರ ಬಗ್ಗೆ ಹೆಚ್ಚಿನ ಗಮನಹರಿಸಲು ಮಾನ್ಯ ಮುಖ್ಯಮಂತ್ರಿಗಳಿಂದ ಆದೇಶವೂ ಆಗಿದೆ. ನಾನು ಇಲಾಖೆಯಿಂದ ಹೆಚ್ಚಿನ ಗಮನಹರಿಸಿ ಮಡಿಕೇರಿ ಮತ್ತು ಚಿಕ್ಕಮಗಳೂರಿಗೆ ದಿನಾಂಕ 26 ಅಥವಾ 27ನೇ ತಾರೀಖು ಬರುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಆನೆಯ ಸಂಘರ್ಷ ತಡೆಗೆ ಸರ್ಕಾರದಿಂದ ಶಾಶ್ವತ ಕ್ರಮ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಇಷ್ಟಾದರೂ ಮತ್ತೆ ಈ ರೀತಿ ಆದರೆ ಹೇಗೆ?

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್. ಶಂಕರ್:-** ಇದರ ಬಗ್ಗೆ ಸಭೆ ನಡೆದು ಮಾನ್ಯ ಮುಖ್ಯಮಂತ್ರಿಗಳು ಹಣ ಒದಗಿಸಲು ತಯಾರಿರುವ ಬಗ್ಗೆ ಹೇಳಿದ್ದಾರೆ. ಇದು ದಿನನಿತ್ಯ ನಡೆಯುತ್ತಿರುವ ಸಂಘರ್ಷವಾಗಿದ್ದು, ಇದಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯದಿದ್ದರೆ ನಿರಂತರವಾಗಿರುತ್ತದೆ. ಆದ್ದರಿಂದ ನಾವು-ನೀವು ಕೂಡಿಕೊಂಡು ಶಾಶ್ವತ ಪರಿಹಾರ ಕಂಡು ಹಿಡಿಯೋಣ, ಶಾಶ್ವತ ಪರಿಹಾರ ರೂಪಿಸಲು ನಾನು ಕಟಿಬದ್ಧನಾಗಿದ್ದೇನೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಕಂದಾಯ ಇಲಾಖೆಯಿಂದ ಸಹಕಾರ ಇಲಾಖೆಗೆ ವರ್ಗಾವಣೆಯಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಶುಕ್ರವಾರ ಸಹಕಾರ ಇಲಾಖೆಯ ಪ್ರಶ್ನೆಗಳು ಪ್ರಸ್ತಾಪವಾಗುತ್ತಿದ್ದು, ಆ ದಿವಸ ದಯವಿಟ್ಟು ಉತ್ತರ ಬರುವಂತೆ ಮಾಡಬೇಕು.

**ಸಭಾಪತಿಯವರು:-** ಆಯಿತು.

**ಪ್ರಶ್ನೆ ಸಂಖ್ಯೆ: 987**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಉತ್ತರ ಒದಗಿಸಿದ್ದು, ನಾನು ಮಾನ್ಯ ಸಚಿವರ ಬಗ್ಗೆ ಮಾತನಾಡುವುದಿಲ್ಲ. ಆದರೆ ಅಧಿಕಾರಿಗಳು ಯಾವರೀತಿ ತಪ್ಪು ದಾರಿಗೆ ಎಳೆಯುತ್ತಾರೆ ಎಂಬುದಕ್ಕೆ ಇದೊಂದು ನಿದರ್ಶನ. ಇಲ್ಲಿ ಸಂಬಂಧಪಟ್ಟ ಯಾವ ಅಧಿಕಾರಿ ಇದ್ದರೋ ಗೊತ್ತಿಲ್ಲ. ಕೆಳಗಡೆಯಿಂದ ಬರುವ ಉತ್ತರಕ್ಕೆ ಕಾರ್ಯದರ್ಶಿಯವರು ಸಹಿ ಹಾಕುತ್ತಾರೆ. ಮಾನ್ಯ ಮಂತ್ರಿಗಳು ಉತ್ತರವನ್ನು ಬದಲಾವಣೆ ಮಾಡುವುದಿಲ್ಲ. ಈ ರೀತಿ ಉತ್ತರ ಮುಜರಾಯಿ ಸಚಿವಾಲಯದಿಂದ ಬಂದಿರುವಾಗ ನಾವು ಇಲ್ಲಿ ಏಕೆ ಮಾತನಾಡಬೇಕು? ಸದನದಲ್ಲಿ ಪಾರದರ್ಶಕ ಇದೆಯೋ ಇಲ್ಲವೋ? ಸಾರ್ವಜನಿಕರ ಹಿತವನ್ನು ಕಾಪಾಡುವುದಕ್ಕೆ ನಾವು ಬರುತ್ತೇವೆ. ಆ ನಿಟ್ಟಿನಲ್ಲಿ ಸರ್ಕಾರದಿಂದ ಕೆಲಸ-ಕಾರ್ಯಗಳು ಆಗುತ್ತಿದೆಯೋ ಎಂಬ ಸಂಶಯ ಈ ಸದನಕ್ಕೆ ಮಾತ್ರವಲ್ಲ, ಹೊರಗಡೆಯ ಜನರಿಗೂ ಬರುವಂತೆ ಆಗುತ್ತದೆ.

ಬೆಂಗಳೂರು ನಗರದಲ್ಲಿ ಧರ್ಮರಾಯನ ದೇವಸ್ಥಾನ ಬಹಳ ಪುರಾತನ ಕಾಲದ್ದಾಗಿದೆ. ಇವತ್ತು ಕಬ್ಬನ್ ಪಾರ್ಕ್‌ನಲ್ಲಿ ನಾಲ್ಕು ಎಕರೆ ಕರಗದ ಕುಂಟೆ ಎಂಬ ಜಾಗವನ್ನು ಉಳಿಸಿಕೊಳ್ಳಲಾಗಿದೆ. ನಮ್ಮ ಬಿಬಿಎಂಪಿ ಕಛೇರಿಯನ್ನು ಈ ದೇವಸ್ಥಾನಕ್ಕೆ ಸಂಬಂಧಪಟ್ಟ ಜಾಗದಲ್ಲಿ ಕಟ್ಟಲಾಗಿದೆ. ಈ ರೀತಿ ದೇವಸ್ಥಾನದ ಜಾಗಗಳು ಚಿಕ್ಕಪೇಟೆ, ಗಾಂಧಿನಗರ ಸೇರಿದಂತೆ ಹಲವಾರು ಕಡೆ ಇದೆ. ಆದರೆ ದೇವಸ್ಥಾನದ ಜನರಿಗೆ ಇವತ್ತಿಗೂ ಒಂದು ವಿದ್ಯಾ ಸಂಸ್ಥೆ ಇಲ್ಲ ಮತ್ತು ಸರ್ಕಾರದವರು ಒಂದು ಜಾಗವನ್ನು ಕೊಟ್ಟಿಲ್ಲ.

~~(ಮುಂದು)~~

Formatted: Font: Bold
Formatted: Font: Bold
Formatted: Left

(561)19-12-2018(1-00)ಹೆಚ್‌ವಿ:ವಿಕೆ

~~(ಸಭಾಪತಿಯವರ ಉಪಸ್ಥಿತಿ)~~

**ಶ್ರೀ ಪಿ.ಆರ್.ರಮೇಶ್(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಇರುವಂತಹ ಜಾಗವನ್ನು ಉಳಿಸಿಕೊಳ್ಳುವುದಕ್ಕೂ ನಮ್ಮ ಕೆಲವು ಅಧಿಕಾರಿಗಳು ಅಡಚಣೆಯನ್ನುಂಟು ಮಾಡುತ್ತಿದ್ದಾರೆ. ಮಾನ್ಯ ಸಚಿವರಿಗೆ. 'ಬೆಂಗಳೂರು ನಗರ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ಅಡಿಯಲ್ಲಿ ಬರುವ ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನದ ಒಟ್ಟು ಸ್ವತ್ತುಗಳು ಎಷ್ಟು' ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ನೀಡಿರುವ ಉತ್ತರದ ಕ್ರಮಸಂಖ್ಯೆ:01ರಲ್ಲಿ ಸದರಿ ದೇವಸ್ಥಾನದ ಪಕ್ಕ ಇರುವಂತಹ ಅಂಗಡಿಗಳ ವಿವರಗಳನ್ನು ನೀಡಿದ್ದಾರೆ. ಕ್ರಮಸಂಖ್ಯೆ:02ರಲ್ಲಿ ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79ರಲ್ಲಿ 15 ಎಕರೆ 12 ಗುಂಟೆ ಸ್ವತ್ತು ಇರುತ್ತದೆ ಎನ್ನುವ ಮಾಹಿತಿಯನ್ನು ನೀಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿರುವ 3ನೇ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರು ಉತ್ತರದಲ್ಲಿ ಉಲ್ಲೇಖ ಮಾಡಿರುವ ಜಾಗಗಳಲ್ಲದೇ ಇನ್ನೂ ಕೆಲವು ಜಾಗಗಳಿವೆ ಅವುಗಳನ್ನು ಇಲ್ಲಿ ಉಲ್ಲೇಖ ಮಾಡಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಹೊಂಗಸಂದ್ರ ಗ್ರಾಮದಲ್ಲಿ ಸುಮಾರು 33 ಎಕರೆ ಜಾಗವಿದೆ ಅದನ್ನು ಇಲ್ಲಿ ನಮೂದು ಮಾಡಿಲ್ಲ. ಸರ್ಕಾರಿ ಜಾಗಗಳನ್ನು ಒತ್ತುವರಿ ಮಾಡಿರುವುದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಕರ್ನಾಟಕ ವಿಧಾನ ಮಂಡಲದ ಜಂಟಿ ಸದನ ಸಮಿತಿಯನ್ನು ರಚನೆ ಮಾಡಲಾಗಿತ್ತು. ಇದರಲ್ಲಿ ಮೇಲ್ಮನೆ ಮತ್ತು ಕೆಳಮನೆಯ ಶಾಸಕರು ಸದಸ್ಯರಾಗಿದ್ದರು. ಈ ಸಮಿತಿಯ ಅಧ್ಯಕ್ಷತೆಯನ್ನು ಮಾನ್ಯ ಎ.ಟಿ.ರಾಮಸ್ವಾಮಿಯವರು ವಹಿಸಿದ್ದರು. ನಾನು ತಮಗೆ ಆ ಸಮಿತಿಯ ವರದಿ ಪ್ರತಿಯನ್ನು ಸಹ ಕಳುಹಿಸಿ ಕೊಡುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಈ ಹಂತದಲ್ಲಿ ಮಾನ್ಯ ಸದಸ್ಯರು ಶ್ರೀ ಎ.ಟಿ.ರಾಮಸ್ವಾಮಿ ವರದಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಟ್ಟರು)**

ಸನ್ಮಾನ್ಯ ಸಭಾಪತಿಯವರೇ, "ಹೊಂಗಸಂದ್ರ ಗ್ರಾಮದಲ್ಲಿ ಸುಮಾರು 7-8 ಸರ್ವೆ ನಂಬರ್‌ಗಳು ಬರುತ್ತವೆ. ಅದರಲ್ಲಿ ಸುಮಾರು 63 ಎಕರೆ 36 ಗುಂಟೆ ಮತ್ತು ನೀಲಸಂದ್ರ ಗ್ರಾಮದಲ್ಲಿ 40 ಎಕರೆ 30 ಗುಂಟೆ ಭೂಮಿಯು ಸರ್ಕಾರಕ್ಕೆ ಸೇರಿರುತ್ತದೆ. ಸದರಿ ಭೂಮಿಗೆ ಸಂಬಂಧಪಟ್ಟಂತೆ ವಿವಾದಗಳು ಮತ್ತು ವ್ಯಾಜ್ಯಗಳು ನ್ಯಾಯಾಲಯದಲ್ಲಿ

ನಡೆದಿರುತ್ತದೆ. ಕೆಲವು ಸಂದರ್ಭಗಳಲ್ಲಿ ಭೂಮಿಯನ್ನು ಪರಭಾರೆ ಮಾಡದಂತೆ ಮತ್ತು ಯಾವುದೇ ಕಟ್ಟಡಗಳನ್ನು ನಿರ್ಮಿಸದಂತೆ ನ್ಯಾಯಾಲಯದಿಂದ ಸ್ಪಷ್ಟ ಸೂಚನೆಗಳು ಇದ್ದಾಗ್ಯೂ ಸಹ ಪರಭಾರೆ ಮತ್ತು ಕಟ್ಟಡ ನಿರ್ಮಾಣ ನಿರಂತರವಾಗಿ ನಡೆಯುತ್ತಿರುವುದನ್ನು ಸಮಿತಿಯು ದಿನಾಂಕ:22.11.2006ರಂದು ಗಮನಿಸಿರುತ್ತದೆ." ಎಂದು ವರದಿಯಲ್ಲಿ ಅತ್ಯಂತ ಸ್ಪಷ್ಟವಾಗಿ ನಮೂದು ಮಾಡಲಾಗಿದೆ. ಅಂದರೆ, ಆ ವರದಿಯನ್ನು ಸಲ್ಲಿಸಿ ಇಲ್ಲಿಗೆ ಸುಮಾರು 12 ವರ್ಷಗಳು ಕಳೆದಿವೆ. ಈ ಸಮಿತಿಯು ಸರ್ಕಾರಕ್ಕೆ ಕೊಟ್ಟಿರುವಂತಹ ವರದಿಯ ಆಧಾರದ ಮೇಲೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನೀಲಸಂದ್ರ ಗ್ರಾಮಕ್ಕೆ ಸಂಬಂಧಪಟ್ಟಂತೆ ಮುಜರಾಯಿ ಇಲಾಖೆಗೆ ಸೇರಿದ 15 ಎಕರೆ 12 ಗುಂಟೆ ಜಾಗಕ್ಕೆ ಸಂಬಂಧಪಟ್ಟ ವ್ಯಾಜ್ಯವು ಸುಪ್ರೀಂ ಕೋರ್ಟಿನಲ್ಲಿ ಸುಮಾರು 5 ಬಾರಿ ವಜಾಗೊಂಡಿದೆ. ಇತ್ತೀಚೆಗೆ 2017ರಲ್ಲಿ ಈ ಜಾಗದ ಬಗ್ಗೆ ಯಾರೋ ಒಬ್ಬರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯನ್ನು ಸಲ್ಲಿಸಿದಾಗ, ಆ ಅರ್ಜಿಯನ್ನು ಸಹ ವಜಾಗೊಳಿಸಲಾಗಿದೆ. ಸುಪ್ರೀಂಕೋರ್ಟಿನ ಆದೇಶಗಳು ನಮ್ಮ ಪರವಾಗಿದ್ದರೂ ಸಹ ಇವತ್ತಿನವರೆವಿಗೂ ಆ ಸ್ವತ್ತನ್ನು ಮುಜರಾಯಿ ಇಲಾಖೆ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡದೇ ಇರುವುದು ಬಹಳ ಗಂಭೀರವಾಗಿರುವ ವಿಚಾರವಾಗಿದೆ. ಇಲ್ಲಿ lawful and unlawful possession ಎಂದು ಎರಡು ವರ್ಗವಿದೆ. ಕೆಲವೊಮ್ಮೆ unlawful possession ಇದ್ದಾಗ, ಯಾವುದೇ ಜಾಗವನ್ನು ಇನಾಂ ರದ್ಧಿಯಾತಿ ಕಾಯ್ದೆಯಡಿಯಲ್ಲಿ ಖಾಸಗಿಯವರಿಗೆ ಕೊಡುವುದಕ್ಕೆ ಬರುವುದಿಲ್ಲ. ರೆವಿನ್ಯೂ ಆಕ್ಟ್‌ನಲ್ಲಿ, ನಗರ ಪ್ರದೇಶಕ್ಕೆ ಸೀಮಿತವಾಗಿ ಸುಮಾರು 18 ಕಿಲೋಮೀಟರ್ ವ್ಯಾಪ್ತಿಯೊಳಗಿರುವಂತಹ ಯಾವುದೇ ಜಾಗವನ್ನು ಸರ್ಕಾರ ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ, ಈ ಪ್ರಕರಣದಲ್ಲಿ ಮುಜರಾಯಿ ಇಲಾಖೆಯ ಡೆಪ್ಯುಟಿ ಕಮೀಶನರ್ ಹಂತದಲ್ಲಿ ಕೆಲವು ಜಾಗಗಳನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ. ಅದನ್ನು ಅದೇ ಇಲಾಖೆಯ ಕೆಲವು ಅಧಿಕಾರಿಗಳು ಚಾಲೆಂಜ್ ಮಾಡಿರುವಂತಹ ಪ್ರಕರಣಗಳೂ ಇವೆ. ಇವುಗಳಲ್ಲಿ ಕೆಲವು ಪ್ರಕರಣಗಳು ಕಳೆದ 10 ವರ್ಷಗಳಿಂದ ಇತ್ಯರ್ಥವಾಗದೇ ಕೋರ್ಟ್ ಮುಂದೆ ಬಾಕಿ ಉಳಿದಿವೆ. ಸರ್ಕಾರದ ಜಾಗಗಳು ಒತ್ತುವರಿಯಾಗುವುದನ್ನು ತಪ್ಪಿಸಬೇಕೆನ್ನುವ ಪ್ರಯತ್ನಗಳು ಇಲ್ಲಿಯವರೆಗೆ ನಡೆದಿಲ್ಲ.

ಸನ್ಮಾನ್ಯ ಸಭಾಪತಿಯವರೇ, 2014-15ನೇ ಸಾಲಿನಲ್ಲಿ ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79ಕ್ಕೆ ಸಂಬಂಧಿಸಿದ ಮುಜರಾಯಿ ಇಲಾಖೆಯ ಸ್ವತ್ತಿಗೆ ಕಾಂಪೌಂಡ್ ನಿರ್ಮಿಸಲು ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು. ಅದರಲ್ಲಿ 25 ಲಕ್ಷ ರೂಪಾಯಿಗಳನ್ನು ಕರಗ ಉತ್ಸವ ನಡೆಸುವುದಕ್ಕೆ ಬಳಸಿಕೊಳ್ಳಲಾಯಿತು. ಉಳಿದ 75 ಲಕ್ಷ ರೂಪಾಯಿಗಳನ್ನು ಕಾಂಪೌಂಡ್ ನಿರ್ಮಾಣಕ್ಕಾಗಿ ತೆಗೆದಿರಿಸಲಾಗಿದೆ. ಆದರೆ, ಮಾನ್ಯ ಸಚಿವರು ನೀಡಿರುವ



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Formatted: Indent: First line: 0 cm

Formatted: Indent: First line: 0 cm

ಲಿಖಿತ ರೂಪದ ಉತ್ತರದಲ್ಲಿ, 'ಸದರಿ ಜಮೀನಿಗೆ ಕಾಂಪೌಂಡ್ ನಿರ್ಮಾಣ ಮಾಡುವುದಕ್ಕೆ 26 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ' ಎನ್ನುವ ಮಾಹಿತಿಯನ್ನು ನೀಡಲಾಗಿದೆ. ಸರ್ಕಾರ ನೀಡಿರುವ 26 ಲಕ್ಷ ರೂಪಾಯಿಗಳನ್ನು ಬಳಸಿಕೊಂಡು ಇವತ್ತಿನವರೆವಿಗೂ ಕಾಂಪೌಂಡ್ ನಿರ್ಮಾಣ ಮಾಡುವ ಕೆಲಸವನ್ನು ಪ್ರಾರಂಭ ಮಾಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಈ ದೇವಸ್ಥಾನದ ಸ್ವತ್ತುಗಳನ್ನು ಉಳಿಸಿಕೊಳ್ಳುವುದಕ್ಕೆ ನಮ್ಮ ಹಿರಿಯರು ತಮ್ಮ ಸ್ವಂತ ಹಣದಲ್ಲಿ ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಅವರಲ್ಲಿ ಕೆಲವರು ಮೃತ ಹೊಂದಿದ್ದಾರೆ. ಕೆಲವರು ಇನ್ನೂ ಜೀವಂತವಾಗಿದ್ದಾರೆ. ಲಕ್ಷಾಂತರ ರೂಪಾಯಿಗಳಷ್ಟು ಸ್ವಂತ ಹಣವನ್ನು ಖರ್ಚು ಮಾಡಿದರೂ ಸಹ ಆ ಜಾಗವನ್ನು ಉಳಿಸಿಕೊಳ್ಳುವುದಕ್ಕೆ ಅವರಿಂದ ಸಾಧ್ಯವಾಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ಇಲ್ಲಿಯವರೆಗೆ ಮುಜರಾಯಿ ಇಲಾಖೆಗೆ ಸೇರಿದ ನೀಲಸಂದ್ರ ಸ್ವತ್ತಿನ ಬಗ್ಗೆ ಮಾತನಾಡಿದ್ದೇನೆ. ಈಗ ಹೊಂಗಸಂದ್ರ ಸ್ವತ್ತಿನ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೊಂಗಸಂದ್ರ ಬೆಂಗಳೂರಿಗೆ ಹತ್ತಿರವಾಗಿರುವ ಪ್ರದೇಶವಾಗಿದೆ. ಇಲ್ಲಿ ಸುಮಾರು 63 ಎಕರೆಗೂ ಹೆಚ್ಚಿನ ಮುಜರಾಯಿ ಇಲಾಖೆಗೆ ಸೇರಿದ ಜಾಗವಿದೆ. ಇದರಲ್ಲಿ ಸುಮಾರು 17 ಎಕರೆ 33 ಗುಂಟೆಗೆ 'ತಸ್ತೀಕ್' ಕೊಟ್ಟಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ, 'ಸುಮಾರು 17 ಎಕರೆ 33 ಗುಂಟೆ ಜಮೀನು ಈ ದೇವಸ್ಥಾನಕ್ಕೆ ಸೇರಿದೆ. ಕರ್ನಾಟಕ ಇನಾಂ ರದ್ಧಿಯಾತಿ ಕಾಯ್ದೆ 1955ರನ್ವಯ ಸರ್ಕಾರಕ್ಕೆ ವಿತಗೊಂಡಿದೆ.' ಎಂದು ಹೇಳಿದ್ದಾರೆ. 'ವಿತಗೊಂಡಿದೆ' ಎಂದರೆ ಸರ್ಕಾರಕ್ಕೆ ಸೇರ್ಪಡೆಯಾಗಿದೆ ಎಂದು ಅರ್ಥ. ಇದನ್ನು ನಾವು 'ತಸ್ತೀಕ್' ಎಂದು ಕರೆಯುತ್ತೇವೆ. ಕಳೆದ 25 ದಿನಗಳ ಹಿಂದೆ ಒಂದು 'ತಸ್ತೀಕ್' ಆರ್ಡರ್ ಅನ್ನು ಮಾಡಿಕೊಟ್ಟಿದ್ದಾರೆ. 'ತಸ್ತೀಕ್' ಅನ್ನು ಯಾರು ಮಾಡಬಹುದು ಎಂದರೆ, ಆ ಜಾಗವನ್ನು ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಂಡು ಸಾರ್ವಜನಿಕ ಹಿತವನ್ನು ಕಾಪಾಡುವ ದೃಷ್ಟಿನಲ್ಲಿ ಇರುವಂತಹ ಉದ್ದೇಶಗಳಿಗೆ 'ತಸ್ತೀಕ್' ಕೊಡುವುದಕ್ಕೆ ಬರುತ್ತದೆ. ಆದರೆ, ಈ ಜಾಗಗಳಲ್ಲಿ ಮನೆಗಳನ್ನು, ದೊಡ್ಡ ದೊಡ್ಡ ಕಟ್ಟಡಗಳನ್ನು ಮತ್ತು ಕಮರ್ಷಿಯಲ್ ಮಾಲ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಕಳೆದ 40 ವರ್ಷಗಳಿಂದ ಈ ಜಾಗವನ್ನು ಮುಜರಾಯಿ ಇಲಾಖೆ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡದೇ, ಮಾನಸಿಕವಾಗಿ ನಮ್ಮನ್ನು ಸುಮ್ಮನಾಗಿಸುವುದಕ್ಕಷ್ಟೇ ಈ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಈ ವಿಚಾರವನ್ನು ಇಲ್ಲಿಗೆ ಮರೆತುಬಿಡಿ. ಈ ವಿಚಾರವನ್ನು ಮತ್ತೊಮ್ಮೆ ಈ ಸದನದ ಮುಂದೆ ತರಬೇಡಿ ಎನ್ನುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಹಲವಾರು ಪ್ರಕರಣಗಳು ನ್ಯಾಯಾಲಯದ ಮುಂದೆ ವಿಚಾರಣಾ ಹಂತದಲ್ಲಿವೆ ಎಂದು ಉತ್ತರದಲ್ಲಿ ಉಲ್ಲೇಖಿಸಿದ್ದಾರೆ. ಆದರೆ, ಎಲ್ಲ ಪ್ರಕರಣಗಳು ಸುಪ್ರೀಂ ಕೋರ್ಟಿನಲ್ಲಿ ವಜಾಗೊಂಡಿವೆ, ಕೆಲವು ಕೆ.ಎ.ಟಿ. ಮುಂದೆ ಬಾಕಿ ಉಳಿದಿವೆ. ಆದರೆ, ಕಳೆದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

8-9 ವರ್ಷಗಳಿಂದ ಕೆ.ಎ.ಟಿ. ಮುಂದೆ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದಕ್ಕೆ ಮುಜರಾಯಿ ಇಲಾಖೆಯ ಅಧಿಕಾರಿಗಳು ಯಾವುದೇ ರೀತಿಯ ಪ್ರಯತ್ನಗಳನ್ನು ಮಾಡುತ್ತಿಲ್ಲವೆನ್ನುವ ಮಾಹಿತಿ ನನಗೆ ಬಂದಿದೆ. ಇವುಗಳನ್ನೆಲ್ಲ ಸರಿಪಡಿಸುವ ನಿಟ್ಟಿನಲ್ಲಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಎ.ಸಿ.ಬಿ ಅಥವಾ ಲೋಕಾಯುಕ್ತ ಸಂಸ್ಥೆಗಳಿಂದ ಸಂಪೂರ್ಣವಾಗಿರುವ ತನಿಖೆ ನಡೆಸಬೇಕೆಂದು ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ರಾಜಶೇಖರ ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತೆ ಬೆಂಗಳೂರು ನಗರ ತಿಗಳರಪೇಟೆಯಲ್ಲಿರುವ ಧರ್ಮರಾಯಸ್ವಾಮಿ ದೇವಸ್ಥಾನವನ್ನು ಪ್ರವರ್ಗ 'ಬಿ' ದೇವಾಲಯವೆಂದು ಗುರುತಿಸಲಾಗಿದೆ. ಈಗಾಗಲೇ ಮಾನ್ಯ ಸದಸ್ಯರು ಮಾನ್ಯ ಎ.ಟಿ.ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಕರ್ನಾಟಕ ವಿಧಾನ ಮಂಡಲದ ಜಂಟಿ ಸದನ ಸಮಿತಿಯ ವರದಿಯ ಬಗ್ಗೆ ಉಲ್ಲೇಖಿಸಿದ್ದಾರೆ. ಅಧಿಕಾರಿಗಳು ತಪ್ಪು ಮಾಹಿತಿಗಳನ್ನು ನೀಡುತ್ತಿದ್ದಾರೆ ಎನ್ನುವ ವಿಚಾರವನ್ನು ಸಹ ಪ್ರಸ್ತಾಪ ಮಾಡಿದ್ದಾರೆ. ಎಲ್ಲಿ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದಾರೆ ಎಹೊವುದನ್ನು ನಾನು ಪರಿಶೀಲಿಸುತ್ತೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಈಗಾಗಲೇ ಲಿಖಿತ ರೂಪದ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಎ.ಸಿ.ಬಿ ಅಥವಾ ಲೋಕಾಯುಕ್ತ ಸಂಸ್ಥೆಯಿಂದ ತನಿಖೆ ನಡೆಸಬೇಕೆನ್ನುವ ಒತ್ತಾಯ ಮಾಡುತ್ತಿದ್ದಾರೆ. ಹಿರಿಯ ಅಧಿಕಾರಿಗಳ ಒಂದು ಸಮಿತಿಯನ್ನು ರಚನೆ ಮಾಡಿ ಅಲ್ಲಿಗೆ ಕಳುಹಿಸಿಕೊಟ್ಟು, ವಾಸ್ತವಾಂಶವನ್ನು ಪರಿಶೀಲಿಸಿ, ಸೂಕ್ತವಾದ ಕ್ರಮವನ್ನು ಆದಷ್ಟು ಬೇಗನೇ ತೆಗೆದುಕೊಳ್ಳಲಾಗುವುದು.

ಸನ್ಮಾನ್ಯ ಸಭಾಪತಿಯವರೇ, ನೀಲಸಂದ್ರ ಸ್ವತ್ತಿಗೆ ಸಂಬಂಧಪಟ್ಟಂತೆ ಕಾಂಪೌಂಡ್ ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕಾಂಪೌಂಡ್ ಗೋಡೆ ನಿರ್ಮಾಣ ಮಾಡುವುದಕ್ಕೆ 80 ಲಕ್ಷ ರೂಪಾಯಿಗಳ ಅನುದಾನ ನಮ್ಮ ಬಳಿ ಇದೆ. ಅದರಲ್ಲಿ 26 ಲಕ್ಷ ರೂಪಾಯಿಗಳನ್ನು ಕೆ.ಆರ್.ಐ.ಡಿ.ಎಲ್.ನವರಿಗೆ ನೀಡಲಾಗಿದೆ. ಅವರು ಈಗಾಗಲೇ ಕೆಲಸ ಪ್ರಾರಂಭ ಮಾಡಬೇಕಾಗಿತ್ತು. ಆದರೆ, ಇಲ್ಲಿಯವರೆವಿಗೆ ಕೆಲಸ ಪ್ರಾರಂಭ ಮಾಡಿಲ್ಲವೆನ್ನುವ ಅಂಶ ನನ್ನ ಗಮನಕ್ಕೂ ಬಂದಿದೆ. ನಮ್ಮ ಆಯುಕ್ತರಿಗೆ ಹೇಳಿ ತಕ್ಷಣವೇ ಕಾಂಪೌಂಡ್ ಗೋಡೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುವಂತೆ ತಿಳಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:-** ಸನ್ಮಾನ್ಯ ಸಭಾಪತಿಯವರೇ, ಕಾಂಪೌಂಡ್ ಗೋಡೆ ನಿರ್ಮಾಣಕ್ಕಾಗಿ 26 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಸುಮಾರು 4 ವರ್ಷಗಳು ಕಳೆದಿವೆ. ಇವತ್ತಿನವರೆವಿಗೂ ಅಲ್ಲಿ ಕೆಲಸ ಪ್ರಾರಂಭವಾಗಿಲ್ಲ.

**ಶ್ರೀ ರಾಜಶೇಖರ ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಕಾಂಪೌಂಡ್ ಗೋಡೆ ನಿರ್ಮಾಣ ಕಾರ್ಯ ತಡವಾಗಿದೆ ಎನ್ನುವ ಅಂಶವನ್ನು ನಾನೇ ಒಪ್ಪಿಕೊಂಡಿದ್ದೇನೆ. ಜರೂರಾಗಿ ಆ ಕೆಲಸಕ್ಕೆ ಚಾಲನೆ ಕೊಡುವಂತಹ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಅವರ ಇಲಾಖೆಯ ವ್ಯಾಪ್ತಿಗೆ ಬರುವಂತಹ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡುವಂತಹ ಜವಾಬ್ದಾರಿ ಅವರ ಮೇಲಿದೆ. ಸರ್ಕಾರದ ಬಳಿ ಇರುವ 80 ಲಕ್ಷ ರೂಪಾಯಿಗಳ ಪೈಕಿ 26 ಲಕ್ಷ ರೂಪಾಯಿಗಳನ್ನು ಆವರಣ ಗೋಡೆ ನಿರ್ಮಾಣ ಮಾಡುವುದಕ್ಕೆ ಕೊಟ್ಟು ಸುಮಾರು 4 ವರ್ಷಗಳು ಕಳೆದಿವೆ. ಇಲ್ಲಿಯವರೆವಿಗೂ ಆ ಕೆಲಸ ಪ್ರಾರಂಭವಾಗಿಲ್ಲ ಎನ್ನುವ ಅಂಶವನ್ನು ಮಾನ್ಯ ಸದಸ್ಯರು ಸದನದಲ್ಲಿ ಉಲ್ಲೇಖ ಮಾಡುತ್ತಿದ್ದಾರೆ. ಇಷ್ಟು ವರ್ಷಗಳಾದರೂ ಕೆ.ಆರ್.ಐ.ಡಿ.ಎಲ್.ನವರು ಆ ಕೆಲಸವನ್ನು ಪ್ರಾರಂಭಿಸಿಲ್ಲವೆಂದರೆ, ಅವರ ಬದಲಿಗೆ ಲೋಕೋಪಯೋಗಿ ಇಲಾಖೆಯವರಿಗೆ ಟೆಂಡರ್ ಕರೆದು ಆ ಕೆಲಸವನ್ನು ವಹಿಸಿಕೊಡಿ.

**ಶ್ರೀ ರಾಜಶೇಖರ ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಈ ಇಲಾಖೆಯ ಜವಾಬ್ದಾರಿ ವಹಿಸಿಕೊಂಡ ಮೇಲೆ ಅವರಿಗೆ ಆ ಕೆಲಸವನ್ನು ವಹಿಸಿ ಕೊಟ್ಟಿಲ್ಲ. ಹಿಂದಿನ ಸರ್ಕಾರದಲ್ಲಿದ್ದವರೇ ಆ ಕೆಲಸವನ್ನು ಕೆ.ಆರ್.ಐ.ಡಿ.ಎಲ್.ನವರಿಗೆ ವಹಿಸಿಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಕೆ.ಆರ್.ಐ.ಡಿ.ಎಲ್., ಭೂಸೇನಾ ನಿಗಮ ಮತ್ತು ನಿರ್ಮಿತಿ ಕೇಂದ್ರಗಳಿಗೆ ಅವರ ಕೆಲಸವನ್ನು ಮಾಡುವುದಕ್ಕೆ ಶಕ್ತಿ ಇಲ್ಲ. ಅವರು ಹೊರಗುತ್ತಿಗೆಗೆ ಕೊಡುತ್ತಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾಜಿ ಮುಜರಾಯಿ ಸಚಿವರಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ಅವರಿಗೆ ಇವೆಲ್ಲದರ ಬಗ್ಗೆ ಗೊತ್ತಿದೆ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Formatted: Indent: First line: 0 cm
Formatted: Indent: First line: 0 cm

**ಡಾ:ತೇಜಸ್ವಿನಿಗೌಡ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಮಾತುಗಳನ್ನು ಯಾರೂ ತಪ್ಪು ತಿಳಿದುಕೊಳ್ಳಬಾರದು. ಹಿಂದೂ ದೇವಸ್ಥಾನಗಳ ಬಗ್ಗೆ ಪ್ರಶ್ನೆ ಬಂದಾಗ, ಸರ್ಕಾರಕ್ಕೆ ಎಲ್ಲೋ ಒಂದು ರೀತಿಯಲ್ಲಿ ಅಳುಕುಂಟಾಗುತ್ತಿರುವುದನ್ನು ನಾವು ಮತ್ತೇಮತ್ತೇ ನೋಡುತ್ತಿದ್ದೇವೆ. ಇದು ಸರಿಯಲ್ಲ.

~~(ಮುಂದುವರಿದಿದೆ)~~

Formatted: Right

(562) 19.12.2018 1.10 ಪಿಕೆ:ವಿಕೆ

Formatted: Indent: First line: 1.27 cm, Right: -0.17 cm

~~(ಸಭಾಪತಿಗಳ ಉಪಸ್ಥಿತಿ)~~

**ಶ್ರೀ ರಾಜಶೇಖರ ಬಿ.ಪಾಟೀಲ:–** 2013–14ರಲ್ಲಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ರೂ. 26 ಲಕ್ಷಗಳನ್ನು ಕೆ.ಆರ್.ಐ.ಡಿ.ಎಲ್ ಅವರಿಗೆ deposit ಕೂಡ ಮಾಡಿದ್ದಾರೆ. ಒಂದು ವೇಳೆ ಅವರು ಕೆಲಸ ಪ್ರಾರಂಭ ಮಾಡದೇ ಇದ್ದರೆ ಆ ಹಣವನ್ನು ವಾಪಸ್ಸು ತೆಗೆದುಕೊಂಡು ತಕ್ಷಣ ಬೇರೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕೆಲಸ ಪ್ರಾರಂಭಿಸಲು 4 ವರ್ಷ ವಿಳಂಬ ಮಾಡಿದ್ದಾರೆ. ಅವರಿಂದ ವಾಪಸ್ಸು ತೆಗೆದುಕೊಂಡು ಪಿ.ಡಬ್ಲ್ಯೂ.ಡಿ. ಅವರಿಗೆ ಈ ಕೆಲಸವನ್ನು ವಹಿಸಿ; ಅವರು 3 ತಿಂಗಳಲ್ಲಿ ಕೆಲಸ ಮುಗಿಸಿಕೊಡುತ್ತಾರೆ.

**ಶ್ರೀ ರಾಜಶೇಖರ ಬಿ.ಪಾಟೀಲ:–** ಅವರಿಗೆ 15 ದಿವಸಗಳ ಕಾಲಾವಧಿ ಕೊಡೋಣ. ಕೆ.ಆರ್.ಐ.ಡಿ.ಎಲ್. ಅವರು ಕೆಲಸ ಪ್ರಾರಂಭ ಮಾಡದೇ ಇದ್ದರೆ ಹಣವನ್ನು ವಾಪಸ್ಸು ತೆಗೆದುಕೊಂಡು ಪಿ.ಡಬ್ಲ್ಯೂ.ಡಿ. ಮುಖಾಂತರ ತಕ್ಷಣ ಟೆಂಡರ್ ಪ್ರಕ್ರಿಯೆ ಮಾಡಿಸಿ ಕೆಲಸ ಪ್ರಾರಂಭ ಮಾಡಿಸುತ್ತೇವೆ.

**ಡಾ: ತೇಜಸ್ವಿನಿ ಗೌಡ:–** 4 ವರ್ಷಗಳ ಕಾಲ ಏಕೆ ಕೆಲಸ ಪ್ರಾರಂಭ ಮಾಡಿಲ್ಲ ಎನ್ನುವ ಕಾರಣವನ್ನೂ ಕೂಡ ತಿಳಿಸಬೇಕಾಗುತ್ತದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಯಾವ ಅಧಿಕಾರಿಗಳು ಈ ತಪ್ಪಿಗೆ ಕಾರಣರಾಗಿದ್ದಾರೋ ಅವರ ವಿರುದ್ಧ ಕಠಿಣವಾದ ಕ್ರಮ ಕೈಗೊಳ್ಳಲು ತಾವು ಆದೇಶ ಕೊಡಬೇಕಾಗುತ್ತದೆ. ಈ ಕುರಿತು ಸಂಪೂರ್ಣ ತನಿಖೆ ಮಾಡುವಂತಹ ಕೆಲಸ ಕೂಡಲೇ ಆಗಬೇಕು. ಈಗಿರುವ Legal Cell ಏನಿದೆ ಅದನ್ನು ಬಿಟ್ಟು, ಬೇರೆ ಒಳ್ಳೆಯ ವಕೀಲರನ್ನು ನೇಮಿಸಿ, ಸಂಪೂರ್ಣವಾಗಿ ಇದರ ಬಗ್ಗೆ ಟಿಪ್ಪಣಿ ತಯಾರು ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಸಚಿವರು ಅನುವು ಮಾಡಿಕೊಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಸಚಿವರೇ, ಈ ಉತ್ತರದ ಜೊತೆ ಕೊಟ್ಟಿರುವ ಅನುಬಂಧ–1 ಅನ್ನು ದಯವಿಟ್ಟು ಗಮನಿಸಿ. ಅಷ್ಟು ಚಿಕ್ಕದಾದ ಅಕ್ಷರಗಳಿದ್ದಾರೆ ಓದುವುದಕ್ಕಾಗುತ್ತದೆಯೇ? ಬಹುಶಃ, ಅದನ್ನು ಓದಬಾರದು, ಗೊತ್ತಾಗಬಾರದು ಎನ್ನುವ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ. ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಿ.

**ಪ್ರಶ್ನೆ ಸಂಖ್ಯೆ : 984**

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಕಸ್ತೂರಿ ರಂಗನ್ ವರದಿ ಬಗ್ಗೆ ಪ್ರಶ್ನೆ ಕೇಳಿದ್ದೆ. ರಾಜ್ಯದ 10 ಜಿಲ್ಲೆಗಳ ಸುಮಾರು 40 ತಾಲ್ಲೂಕುಗಳಲ್ಲಿ, 1576 ಗ್ರಾಮಗಳಲ್ಲಿ ಬರುವ ಸುಮಾರು 20,662 ಚದರ ಕಿಲೋ ಮೀಟರ್ ಭೂಪ್ರದೇಶವನ್ನು ಸೂಕ್ಷ್ಮ ಭೂಪ್ರದೇಶ ಎಂದು ಕಸ್ತೂರಿರಂಗನ್ ವರದಿಯಲ್ಲಿ ಕಾಣಿಸಲಾಗಿದೆ. ಶೇಕಡ 20ಕ್ಕಿಂತ ಜಾಸ್ತಿ ಅರಣ್ಯ ಎಲ್ಲಿ ಇದೆಯೋ ಆ ಭಾಗವನ್ನು ಸೂಕ್ಷ್ಮ ಪ್ರದೇಶ (Ecologically Sensitive Area) ಎಂದು ಮಾಡಿದ್ದಾರೆ. ಇದರಿಂದ ಆ ಭಾಗದಲ್ಲಿ ಕಟ್ಟಡ ಕಟ್ಟುವುದಕ್ಕೆ ಆಗುತ್ತಿಲ್ಲ ಮತ್ತು ಇತರ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ. ಕೈಗಾರಿಕೆಗಳು ಬರುವ ಹಾಗಿಲ್ಲ. ಈ ಎಲ್ಲಾ ನಿಷಿದ್ಧಗಳನ್ನು ಹಾಕುತ್ತಿರುವ ಈ ವರದಿ, ಒಂದು ರೀತಿ ಅಭಿವೃದ್ಧಿಗೆ ಶಾಪವಾಗಿದೆ. ಹಾಗಾಗಿ ಈ ವರದಿಯನ್ನು ತಾವು ಸಂಪೂರ್ಣವಾಗಿ ನಿರಾಕರಿಸಬೇಕು (reject) ಮಾಡಬೇಕು. ಸರ್ಕಾರದ ಆಕ್ಷೇಪಣೆಗಳನ್ನು ಸುಪ್ರಿಂ ಕೋರ್ಟ್ ಮುಂದೆ ಮತ್ತು ಟ್ರಿಬ್ಯುನಲ್ ಮುಂದೆ ಫೈಲ್ ಮಾಡಬೇಕು. ಈ ಕುರಿತು ನಾನು ಇದೇ ಸದನದಲ್ಲಿ ಅನೇಕ ಬಾರಿ ವಿನಂತಿ ಮಾಡಿಕೊಂಡಿದ್ದೇನೆ. ಆದರೆ ಇವತ್ತಿನವರೆಗೂ ಇದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ. ಈಗ ಮಾನ್ಯ ಸಚಿವರು, ದಿನಾಂಕ: 3.1.2019ರವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕೊಡಲಾಗಿದೆ; ಹಾಗಾಗಿ ನಾವು ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಕೊಡುತ್ತೇವೆ ಎಂದು ತಿಳಿಸಿದ್ದಾರೆ. ಮಾನ್ಯ ಸಭಾಪತಿಯವರೇ, ನನ್ನ ಎರಡನೆಯ ಪ್ರಶ್ನೆಯಲ್ಲಿ, ಅರಣ್ಯ ಭಾಗದಲ್ಲಿ ವಾಸ ಮಾಡುತ್ತಿರುವ ಸರ್ಕಾರಿ ಮತ್ತು ಖಾಸಗಿ ಸ್ಥಳಗಳಲ್ಲಿ ಅಭಿವೃದ್ಧಿ ಕುಂಠಿತವಾಗಿರುವುದರಿಂದ ಈ ವರದಿಯನ್ನು ತಿರಸ್ಕರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ಎಂದು ಕೇಳಿರುವುದಕ್ಕೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ, ಈ ವರದಿಯನ್ನು ಅನುಷ್ಠಾನಗೊಳಿಸುವುದರಿಂದ ಪಶ್ಚಿಮಘಟ್ಟ ಪ್ರದೇಶದಲ್ಲಿನ ಕೈಗಾರಿಕಾ ಮತ್ತು ಇತರ ಚಟುವಟಿಕೆಗಳ ಮೇಲೆ ಗಂಭೀರವಾದ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಈ ವಿಷಯವು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಮಾನ್ಯ ಸಚಿವರಿಗೆ ಇದರ ಗಂಭೀರತೆ ಬಗ್ಗೆ ಗೊತ್ತಿದೆ, ಇದು ಮಾರಕ ಎನ್ನುವುದೂ ಗೊತ್ತಿದೆ, ಇದು ಜನಜೀವನವನ್ನು ತೊಂದರೆಗೆ ಒಳಪಡಿಸುತ್ತದೆ ಎನ್ನುವುದೂ ಗೊತ್ತಿದೆ. ಶೇಕಡ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

20ರಷ್ಟು ಅರಣ್ಯ ಇರುವಂಥದ್ದು Ecologically Sensitive Area ಎಂಬುದನ್ನು ನೀವು ತೆಗೆದುಕೊಂಡರೆ, ದಕ್ಷಿಣ ಕನ್ನಡದ ವಿಟ್ಲ, ಪುತ್ತೂರು, ಬೆಳ್ತಂಗಡಿ ಮತ್ತು ಈಗ ಹೊಸದಾಗಿ ಸೇರ್ಪಡೆಯಾಗಿರುವ ಕಡಬ ತಾಲ್ಲೂಕುಗಳಲ್ಲಿರುವ ಸುಮಾರು 45 ಗ್ರಾಮಗಳ ಜನ ನಿದ್ದೆ ಮಾಡುವ ಸ್ಥಿತಿ ಉಂಟಾಗಿದೆ. ಅಲ್ಲಿರುವ ರಬ್ಬರ್ ತೋಟಗಳನ್ನು ಮತ್ತು ಅಡಿಕೆ ತೋಟಗಳನ್ನು ಇವರು ಸೂಕ್ಷ್ಮ ಪ್ರದೇಶಗಳೆಂದು ಘೋಷಣೆ ಮಾಡಿದ್ದಾರೆ. ಇವರು aerial survey ಮಾಡುವಾಗ ಈ ಎಲ್ಲಾ ಪ್ರದೇಶಗಳು ಅರಣ್ಯವಾಗಿಯೇ ಕಂಡುಬಂದು, ಇದು ಸೂಕ್ಷ್ಮ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಇದು ನಮ್ಮ ಜನಜೀವನದ ಮೇಲೆ ತೊಂದರೆ ಉಂಟು ಮಾಡುವಂಥದ್ದಾಗಿದೆ. ಮತ್ತೆ ಸರ್ಕಾರದವರೇ, ಇದನ್ನು ಅನುಷ್ಠಾನಗೊಳಿಸುವುದರಿಂದ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಈ ರಾಜ್ಯದ 10 ಜಿಲ್ಲೆಗಳ ಜನರು ತೊಂದರೆಗೆ ಒಳಗಾಗಿದ್ದಾರೆ. ನೀವು, ಇದು ಪರಿಶೀಲನೆಯಲ್ಲಿದೆ, ಅನುಷ್ಠಾನಗೊಳಿಸುವುದರಿಂದ ತೊಂದರೆಯಾಗುತ್ತದೆ ಎಂದು ಸರ್ಕಾರದವರು ಹೇಳಿರುವ ಹಿನ್ನೆಲೆಯಲ್ಲಿ ಸಂಪೂರ್ಣವಾಗಿ ಸದರಿ ವರದಿಯನ್ನು ತಿರಸ್ಕಾರ ಮಾಡಬೇಕು. ಈ ವರದಿಯನ್ನು ತಿರಸ್ಕಾರ ಮಾಡುವ ಸಂಬಂಧ ಸರ್ಕಾರದ ಅಭಿಪ್ರಾಯ ಏನು ಎಂಬುದನ್ನು ಕೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ವರದಿಯಿಂದ ನಿರಾಶ್ರಿತರಾದ ಜನರ ಸಂಖ್ಯೆ ಎಷ್ಟು ಮತ್ತು ವರದಿಯನ್ನು ಅನುಷ್ಠಾನಗೊಳಿಸುವುದರಿಂದ ಆ ಜನರಿಗೆ ಆಗುವ ತೊಂದರೆಗಳ ಬಗ್ಗೆ ನಿಮ್ಮ ವಿಚಾರವೇನು ಎಂದು ಕೇಳಿದ ಪ್ರಶ್ನೆಗೆ, ನಾವು ಅದರ ಬಗ್ಗೆ ಚಿಂತನೆ ಮಾಡಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ಕೂಡ ಸರ್ಕಾರ ಉತ್ತರ ಕೊಡಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ:-**ಮಾನ್ಯ ಸಭಾಪತಿಯವರೇ, ಕೇರಳ ಸರ್ಕಾರ ಈ ವರದಿಯನ್ನು ಸಂಪೂರ್ಣ ತಿರಸ್ಕಾರ ಮಾಡಿದೆ. ಆದರೆ ನಮ್ಮಲ್ಲಿನ ಅರಣ್ಯ ಇಲಾಖೆಯ ಅಧಿಕಾರಿಗಳು ಭಾರೀ ದೊಡ್ಡ loyalty ಯನ್ನು Central Forest Department, National Green Tribunalಗೆ ತೋರಿಸುತ್ತಿದ್ದಾರೆ. ಎಲ್ಲಿ ಅಡಿಕೆ ತೋಟ ಇದೆ, ಎಲ್ಲಿ ತೆಂಗಿನ ತೋಟ ಇದೆ ಎಂಬುದನ್ನು ಕೇಂದ್ರದ ಅಧಿಕಾರಿಗಳು ಬಂದಾಗ ಇವರೇ ಕರೆದುಕೊಂಡು ಹೋಗಿ ತೋರಿಸಿ ಕೊಟ್ಟರು. ಮಾನ್ಯ ಕಸ್ತೂರಿರಂಗನ್‌ರವರು ಮನೆಯಲ್ಲಿ ಕುಳಿತುಕೊಂಡು ರಿಪೋರ್ಟ್ ತಯಾರು ಮಾಡಿ ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ. ಇವತ್ತು ನಾವು ಸದರಿ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸದೇ ಹೋದರೆ ಉದ್ದೇಶಿತ ಪ್ರದೇಶ ಬಂಜರಾಗಿಬಿಡುತ್ತದೆ. ಸರ್ಕಾರ ಈ ವರದಿಯನ್ನು ಸಚಿವ ಸಂಪುಟದ ಮುಂದೆ ಇಟ್ಟು ತಿರಸ್ಕಾರ ಮಾಡಬೇಕು.

ಮಾನ್ಯ ಸಭಾಪತಿಯವರೇ, ಕೇರಳ ಮತ್ತು ಕೊಡಗು ಪ್ರದೇಶವನ್ನು ಕೂಡಿಸುವ ಕೂಟುಪಯಾ ಎನ್ನುವ ಒಂದು ಸೇತುವೆ ಇದೆ. ಈ ಸೇತುವೆಯನ್ನು ದುರಸ್ತಿ ಮಾಡಲು ಅವಕಾಶ ಕೊಡುತ್ತಿಲ್ಲ. 1936ರಲ್ಲಿ ನಿರ್ಮಾಣಗೊಂಡಿರುವ ಈ ಸೇತುವೆ ಬಿದ್ದು ಹೋದರೆ ಕರ್ನಾಟಕಕ್ಕೂ ಕೇರಳಕ್ಕೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಪರ್ಕವೇ ಇರುವುದಿಲ್ಲ. ಆ ಸೇತುವೆ ಕೆಲಸ ಅರ್ಧಕ್ಕೆ ನಿಂತು ಬಿಟ್ಟಿದೆ. ಹಾಗಾಗಿ ಈ ವರದಿಯನ್ನು ತಿರಸ್ಕರಿಸುವ ಕೆಲಸ ಮಾಡಬೇಕು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-ಮಾನ್ಯ** ಸಭಾಪತಿಯವರೇ, ನಾನು ಕೂಡ ಆ ಭಾಗದಿಂದಲೇ ಬಂದಿರುವುದರಿಂದ ಒಂದು ಸಲಹೆ ಕೊಡಬಯಸುತ್ತೇನೆ. ಈ ವಿಚಾರವಾಗಿ ಉತ್ತರ ಕೊಡಲು ಮಾನ್ಯ ಸಚಿವರಿಗೆ ಸಹಾಯ ಮಾಡುತ್ತೇನೆ.

**ಸಭಾಪತಿಯವರು:-** ಯಾರು ಮೂಲ ಪ್ರಶ್ನೆಯನ್ನು ಕೇಳಿದ್ದಾರೋ ಅವರಿಗೆ ಮೊದಲು ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ನಂತರ ತಮಗೂ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಆರ್.ಶಂಕರ್:-** ಮಾನ್ಯ ಸಭಾಪತಿಯವರೇ, ಕಸ್ತೂರಿರಂಗನ್ ವರದಿಯನ್ನು ಉಪಸಮಿತಿಯಲ್ಲಿ ನಾವು ಈಗಾಗಲೇ ತಿರಸ್ಕಾರ ಮಾಡಿದ್ದೇವೆ. ಇದನ್ನು ಕ್ಯಾಬಿನೆಟ್‌ನಲ್ಲೂ ತಂದು ಸಾರಾಸಗಟಾಗಿ ತಿರಸ್ಕಾರ ಮಾಡಿ ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಆದರೆ ಕೇಂದ್ರ ಸರ್ಕಾರದವರು ಮತ್ತೆ ಮತ್ತೆ ಇದನ್ನು ವಾಪಸ್ಸು ಕಳುಹಿಸುತ್ತಿದ್ದಾರೆ. ಈ ವರದಿಯನ್ನು ನಾವು ಹಿಂದೆಯೂ ಒಪ್ಪಿಲ್ಲ, ಮುಂದೆ ಒಪ್ಪಿಕೊಳ್ಳುವ ಪ್ರಮೇಯವೇ ಇಲ್ಲ. ಮಾನ್ಯ ಸದಸ್ಯರು ಮಾತನಾಡುತ್ತಾ, ಕರ್ನಾಟಕ ಮತ್ತು ಕೇರಳ ನಡುವೆ ಇರುವ ಸೇತುವೆ ಬಗ್ಗೆ ಪ್ರಸ್ತಾಪ ಮಾಡಿದರು. ಸಿಗಂದೂರು ಸೇತುವೆ ನಿರ್ಮಾಣ ಹಾಗೂ ಕೇಂದ್ರದ ಮಂತ್ರಿಗಳು ಬಂದು ಭೂಮಿ ಪೂಜೆ ನೆರವೇರಿಸಿದರು. ಇದಕ್ಕೆ ನಮ್ಮ ಅರಣ್ಯ ಇಲಾಖೆಯ ಅನುಮತಿ ಬೇಕಾಗುತ್ತದೆ ಎಂಬುದನ್ನು ನನ್ನ ಗಮನಕ್ಕೆ ತಂದಾಗ ನಾನು ಕೂಡಲೇ, ಒಂದು ವಾರದಲ್ಲೇ ನನ್ನ ಮತ್ತು ಮುಖ್ಯಮಂತ್ರಿಗಳ ಸಹಿಯನ್ನು ಮಾಡಿಸಿ, ಕೇಂದ್ರದೊಡನೆ ವಿಡಿಯೋ ಕಾನ್‌ಫರೆನ್ಸ್ ಮುಖಾಂತರ ಪ್ರಕ್ರಿಯೆ ನಡೆಸಿ ಆದಷ್ಟು ಶೀಘ್ರವಾಗಿ ಮುಂದುವರೆಯಲು ತಯಾರಾದೆವು. ಇದೇ ಮಾದರಿಯಲ್ಲಿ ಕೇರಳ ಮತ್ತು ಕೊಡಗಿನ ನಡುವೆ ಇರುವ ಸೇತುವೆಯ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲು ವ್ಯವಸ್ಥೆ ಮಾಡುತ್ತೇವೆ. ನಮ್ಮಲ್ಲಿ web portal ವ್ಯವಸ್ಥೆ ಏನಿದೆ, ಇದರ ಮೂಲಕ ಅಳವಡಿಸಿಕೊಳ್ಳಬೇಕಾಗಿದೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲಾ ಕಾರ್ಯಗಳನ್ನು ಕಾನೂನಿನ ಅಡಿಯಲ್ಲೇ ಕೆಲಸ ಮಾಡಬೇಕಾಗಿರುವ ಅನಿವಾರ್ಯತೆ ಇದೆ. ಮಾನ್ಯ ಸದಸ್ಯರು ಏನು ಇಂತಹ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದರೋ ಅದನ್ನು web portal ಮುಖಾಂತರ upload ಮಾಡುವುದಕ್ಕೆ ಅವಕಾಶ ಇದೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಮಾಹಿತಿ ಬೇಕಿದ್ದರೆ ನಾನು ಒದಗಿಸಿ ಕೊಡುತ್ತೇನೆ. ಸೇತುವೆಗಳಿರಬಹುದು, ರಸ್ತೆ ಅಗಲೀಕರಣ ಇರಬಹುದು ಅಥವಾ ಕುಡಿಯುವ ನೀರಿನ ಸಮಸ್ಯೆಗಳಿರಬಹುದು, ಈ ನಿಟ್ಟಿನಲ್ಲಿ ಸಾಕಷ್ಟು ಸಮಸ್ಯೆಗಳು ಕೇಳಿ ಬರುತ್ತಿವೆ. ಈ ಸಮಸ್ಯೆಗಳನ್ನು ಪರಿಹಾರ ಮಾಡಬಹುದಾಗಿದೆ. ಇಂಥದ್ದನ್ನು ಕಾನೂನಿನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಡಿಯಲ್ಲಿ ತಂದು ಕೆಲಸ ಮಾಡುವುದಕ್ಕೆ ನಮ್ಮ ಇಲಾಖೆ ಬದ್ಧತೆಯನ್ನು ಹೊಂದಿದೆ. ಯಾವುದೇ ಸಮಸ್ಯೆ ಇದ್ದರೂ ಅದರ ಪರಿಹಾರಕ್ಕೆ ನಾವು ಸಿದ್ಧರಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಮುಂದು . . .)

(563) 19–12–2018 ಡಿಎಸ್–ಬಿಎನ್ಎಸ್ 1.20

**ಚುಕ್ಕೆ ಪ್ರಶ್ನೆ ಸಂಖ್ಯೆ:962**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎಂ.ಸಿ.ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು 2002ರ ನಿಯಮಗಳು ದಿನಾಂಕ:01.05.2003 ರಿಂದ ಜಾರಿಗೆ ಬಂದಿದ್ದು, ತದನಂತರ 2011ರ ತಿದ್ದುಪಡಿ ಅಧಿನಿಯಮವು ದಿನಾಂಕ:27.01.2012 ರಿಂದ ಜಾರಿಗೆ ಬಂದಿರುತ್ತದೆ. ಈಗ 1,111 ನೌಕರರು ವೇತನ ಶ್ರೇಣಿಯನ್ನು ಪಡೆಯುತ್ತಿದ್ದಾರೆ. ಉಳಿದ 2,568 ನೌಕರರು ಈ ವೇತನ ಶ್ರೇಣಿಯನ್ನು ಪಡೆಯುತ್ತಿಲ್ಲ. ಈ ವಿಷಯದಲ್ಲಿ ನಾನು ಹೇಳುವುದೇನೆಂದರೆ, ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ ಎಂಬ ಹಾಗೆ ಆಯಿತು. ಇಲ್ಲಿ ನಾಲ್ಕು ವರ್ಗಗಳಿವೆ. ದೇವಸ್ಥಾನದಲ್ಲಿ ಕೆಲಸ ಮಾಡತಕ್ಕಂಥವರು ಮುಜರಾಯಿ ಇಲಾಖೆಯಿಂದ ಸರ್ಕಾರಿ ವೇತನ ಪಡೆಯುತ್ತಾರೆ. ಆದರೆ ದೇವಸ್ಥಾನದ ಆದಾಯಕ್ಕನುಗುಣವಾಗಿ ಶೇಕಡಾ 35 ರಷ್ಟು ಮೀರದಂತೆ ದೇವಸ್ಥಾನದಲ್ಲಿ ಕೆಲಸ ಮಾಡುವಂತಹ ಉದ್ಯೋಗಿಗಳು ಇರುತ್ತಾರೆ. ಅವರಲ್ಲಿ 4 ಕ್ಯಾಟಗರಿಗಳನ್ನು ಮಾಡಿದ್ದಾರೆ. ಆ ಕ್ಯಾಟಗರಿಯಲ್ಲಿ ಇನ್ನು 2,568 ನೌಕರರಿಗೆ ವೇತನ ಶ್ರೇಣಿ ಆಗಬೇಕಾಗಿದೆ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ 2017 ರಲ್ಲಿ ಸಮಿತಿ ರಚನೆ ಮಾಡಿದ್ದು, ಆ ಸಮಿತಿಯು 2018 ರಲ್ಲಿ ವರದಿ ಕೊಟ್ಟಿದೆ. ಅದನ್ನು ಎರಡು ತಿಂಗಳಿನಲ್ಲಿ ಪೂರ್ಣ ಮಾಡಿ ತಕ್ಷಣವೇ 2,568 ನೌಕರರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಮತ್ತೊಂದು ಮನವಿ ಏನೆಂದರೆ, ಈ ದೇವಸ್ಥಾನದಲ್ಲಿ ಪೂಜಾರಿಯವರು ದೇವರ ಕಾರ್ಯವನ್ನು ಮಾಡುತ್ತಿರುತ್ತಾರೆ, ಅದರ ಜೊತೆಗೆ ದೇವರ ಪೂಜೆ ಮಾಡುವಂತಹ ಸಂದರ್ಭದಲ್ಲಿ ಸವಿತಾ ಸಮಾಜದ ಕಲಾವಿದರು ಸಂಗೀತವನ್ನು ನುಡಿಸುತ್ತಿರುತ್ತಾರೆ. ಇವರನ್ನು 'ಡಿ' ಗ್ರೂಪ್ ಗೆ ಸೇರಿಸಿರುತ್ತಾರೆ. ನನ್ನ ಮನವಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಏನೆಂದರೆ, ದೇವರ ಕಾರ್ಯದಲ್ಲಿ ನಾದಸ್ವರ, ಡೋಲನ್ನು ಬಾರಿಸತಕ್ಕಂಥ ಕಲಾವಿದರನ್ನು 'ಸಿ' ಗ್ರೂಪ್‌ಗೆ ಸೇರಿಸಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಮುಜರಾಯಿ ಇಲಾಖೆಯಿಂದ ಕೆಲಸ ಮಾಡತಕ್ಕಂಥವರಿಗೆ ಸರ್ಕಾರಿ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಆದರೆ ದೇವಸ್ಥಾನದಲ್ಲಿ ಕೆಲಸ ಮಾಡುವವರಿಗೆ ಏಕೆ ತಾರತಮ್ಯವನ್ನು ಮಾಡುತ್ತಿದ್ದಾರೆ ಎಂದು ಮಾನ್ಯ ಸಚಿವರಿಗೆ ಕೇಳಬಯಸುತ್ತಿದ್ದೇನೆ.

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ 1,111 ನೌಕರರಿಗೆ ಸರ್ಕಾರದಿಂದ ವೇತನವನ್ನು ಕೊಡುತ್ತಿದ್ದೇವೆ. ಇನ್ನು 2,568 ನೌಕರರಿಗೆ ಸರ್ಕಾರದಿಂದ ವೇತನವನ್ನು ಕೊಡಬೇಕು. ದೇವಾಲಯದ ವಾರ್ಷಿಕ ಆದಾಯದಲ್ಲಿ ಸಿಬ್ಬಂದಿ ವೆಚ್ಚವು ಶೇಕಡಾ 35 ರಷ್ಟು ಮೀರದಂತೆ ವೇತನ ಇನ್ನಿತರೆ ಸವಲತ್ತುಗಳನ್ನು ನೀಡಬೇಕಾಗಿರುತ್ತದೆ. ಅಂದರೆ, ದೇವಾಲಯಗಳ ಆದಾಯವನ್ನು ಗಮನದಲ್ಲಿರಿಸಿಕೊಂಡು ಸಿಬ್ಬಂದಿ ವೆಚ್ಚವು ಶೇಕಡಾ 35 ರಷ್ಟನ್ನು ಮೀರದಂತೆ ವೇತನ ಸವಲತ್ತುಗಳನ್ನು ಕಲ್ಪಿಸಬೇಕಾಗಿರುತ್ತದೆ. 2,568 ನೌಕರರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಆ ಸಮಿತಿಯು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. ಆದಷ್ಟು ಬೇಗ ಆ ವರದಿಯನ್ನು ಪರಿಶೀಲಿಸಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೆ, 2568 ಕ್ಕೂ ಅಧಿಕ ಮಂದಿ ಇರುತ್ತಾರೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ಅಧಿಕ ಮಂದಿಯನ್ನು ಸೇರಿಸಿಕೊಂಡವರು ಯಾರು, ಏಕೆ ಸೇರಿಸಿಕೊಂಡಿದ್ದಾರೆ? ಅವಶ್ಯಕತೆ ಇರುವಷ್ಟು ಸಿಬ್ಬಂದಿಯನ್ನು ಮಾತ್ರ ಸೇರಿಸಿಕೊಳ್ಳಬೇಕಾಗಿತ್ತು. ವಾರ್ಷಿಕ ಆದಾಯಕ್ಕೆ ಅನುಗುಣವಾಗಿ ನಾವು ನೌಕರರನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅಧಿಕವಾಗಿ ಸೇರಿಸಿಕೊಂಡಿರುವವರು ಯಾರು? ಈ ರೀತಿ ಏಕೆ ಸೇರಿಸಿಕೊಂಡಿದ್ದಾರೆ? ಅವರು ಇಷ್ಟು ವರ್ಷ ಕೆಲಸ ಮಾಡಿಕೊಂಡು ಬಂದಿರುವವರಿಗೆ ವೇತನ ಶ್ರೇಣಿಯನ್ನು ನಿಗದಿ ಮಾಡದಿದ್ದರೆ ಅವರಿಗೆ ಅನ್ಯಾಯವಾಗುತ್ತದೆ. ನಾನು ಮತ್ತೊಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ, essential services ಏನಿದೆ ಆಸ್ಪತ್ರೆಯಾಗಬಹುದು, ಪೊಲೀಸ್ ಇಲಾಖೆ ಆಗಿರಬಹುದು, ಈಗ ನಾವು ದೇವಸ್ಥಾನಕ್ಕೆ ಏಕೆ ಹೋಗುತ್ತೇವೆ? 'ದೇವರೇ, ನಮಗೆ ಆಶೀರ್ವಾದ ಮಾಡು' ಎಂದು ಪ್ರಾರ್ಥಿಸುತ್ತೇವೆ. ಚಾಮುಂಡಿ ಬೆಟ್ಟದಲ್ಲಿ ಪೂಜಾರಿಗಳು ಮುಷ್ಕರ ಮಾಡುತ್ತಿದ್ದ ಸಂದರ್ಭದಲ್ಲಿ ಪೊಲೀಸ್‌ರು ಅವರನ್ನು ಎಳೆದಾಡುತ್ತಿದ್ದರು. ಇದು ಏನಾಗುತ್ತದೆಂದರೆ, ಆ ದೇವಸ್ಥಾನ ಎನ್ನುವ ಮನೋಭಾವನೆ positive vibration ಏನಿರುತ್ತದೆ, ಈ ದೇವಸ್ಥಾನದ ಪವಿತ್ರತೆ ಹೋಗಿಬಿಡುತ್ತದೆ. ಆದ್ದರಿಂದ ಅಲ್ಲಿ ಈ ತರಹ ಮುಷ್ಕರ ಮಾಡುವುದಕ್ಕೆ ಅವಕಾಶವೇ ಕೊಡಬಾರದು. ನಾನು ಇದರ ಬಗ್ಗೆ ಏಕೆ ಹೇಳುತ್ತಿದ್ದೇನೆಂದರೆ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಷ್ಕರ ಮಾಡಿದರೆ ಕಾನೂನು ಸುವ್ಯವಸ್ಥೆ ಹದಗೆಡುವುದರ ಜೊತೆಗೆ ದೇವಸ್ಥಾನ ಎನ್ನುವ ಭಕ್ತಿ ಯಾತ್ರಿಕರಲ್ಲಿ ಏನಿರುತ್ತದೆ, ಆ ಭಾವನೆ ಹೋಗಿಬಿಡುತ್ತದೆ. ಇದರಿಂದ ದೇವಸ್ಥಾನಕ್ಕೆ ಬರುವ ಆದಾಯವೂ ಕಡಿಮೆಯಾಗಿಬಿಡುತ್ತದೆ. ಮಾನ್ಯ ಸಚಿವರು ಇದರ ಬಗ್ಗೆ ಬಹಳ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಜೊತೆಗೆ ಮುಜರಾಯಿ ಇಲಾಖೆಯ ಬಗ್ಗೆಯೂ ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳಬೇಕು.

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಚಾಮುಂಡಿ ಬೆಟ್ಟದ ಬಗ್ಗೆ ಪ್ರಸ್ತಾಪ ಮಾಡಿದರು. ಈಗಾಗಲೇ ಇರತಕ್ಕಂಥ 175 ಜನರಲ್ಲಿ 71 ಜನರಿಗೆ 5ನೇ ವೇತನ ಶ್ರೇಣಿಯನ್ನು ಕೊಡುತ್ತಿದ್ದೇವೆ. ಇನ್ನುಳಿದವರಿಗೆ ಇದು ಆಗಿಲ್ಲವೆಂದು ಮುಷ್ಕರ ಮಾಡುತ್ತಿದ್ದರು. ಕೆಳಮನೆಯಲ್ಲೂ ಮಾನ್ಯ ರಾಮದಾಸ್‌ರವರ ಪ್ರಶ್ನೆಗೆ ನಾನು ಉತ್ತರ ಹೇಳಿದ್ದೇನೆ. 24ನೇ ತಾರೀಖಿನ ನಂತರ ನಾನು ಅಲ್ಲಿಗೆ ಭೇಟಿ ಕೊಡುತ್ತೇನೆ. ಈ ಸಮಸ್ಯೆ ರಾಜ್ಯ ಮಟ್ಟದಲ್ಲೂ ಇದೆ. ಇದು ಚಾಮುಂಡಿ ಬೆಟ್ಟದಲ್ಲಿ ಮಾತ್ರ ಇರುವಂತಹ ಸಮಸ್ಯೆಯಲ್ಲ. 'ಎ' ದರ್ಜೆಯಲ್ಲಿರುವಂತಹ ಎಲ್ಲಾ ದೇವಸ್ಥಾನಗಳಲ್ಲೂ ಇದೆ. ಶೇಕಡಾ 35 ರಷ್ಟು ಆದಾಯದೊಳಗೆ ಬರತಕ್ಕಂಥದ್ದರಲ್ಲಿ ನಾವು ಸವಲತ್ತುಗಳನ್ನು ನೀಡಬೇಕಾಗಿದೆ. ನಾವು ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಾನು ಸಹ ನೋಟಿಸ್ ಕೊಟ್ಟಿದ್ದೇನೆ. ಆದ್ದರಿಂದ ಒಂದು ನಿಮಿಷ ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಿ.

**ಸಭಾಪತಿಯವರು:-** ಈಗಾಗಲೇ ಸಮಯವಾಗಿದೆ, ಮಾನ್ಯ ಶರಣಪ್ಪ ಮಟ್ಟೂರ್‌ರವರೆ, ತಾವು ಪ್ರಶ್ನೆಯನ್ನು ಕೇಳಿ.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿ ಸದನ ನಡೆಸಿದರೆ ಬಹಳ ಕಷ್ಟವಾಗುತ್ತದೆ. ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾದ ಪ್ರಶ್ನೋತ್ತರ ಕಲಾಪ ಮಧ್ಯಾಹ್ನ 1.30 ಗಂಟೆಯಾದರೂ ಮುಗಿಯಲಿಲ್ಲವೆಂದರೆ, ಸದನದ ನಿಯಮಗಳನ್ನು ಇಟ್ಟುಕೊಳ್ಳುವ ಬದಲು ಬಿಸಾಡುವುದು ಒಳ್ಳೆಯದು. ನಾವೇ ಈ ರೀತಿ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿದ್ದರೆ, what does it mean? ತಾವು ಬಹಳ ಸ್ಟ್ರಿಕ್ಟ್ ಆಗಿ ನಿಯಮಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Formatted: Indent: First line: 0 cm
Formatted: Indent: First line: 0 cm
Formatted: Indent: First line: 0 cm

ಪಾಲಿಸಬೇಕಾಗುತ್ತದೆ. ಈ ರೀತಿ ನಿಯಮಗಳನ್ನು ಉಲ್ಲಂಘನೆ ಮಾಡಿ ಸದನವನ್ನು ನಡೆಸುವುದರಲ್ಲಿ ಅರ್ಥವಿಲ್ಲ, ನಮ್ಮನ್ನು ನೋಡಿ ಜನರು ನಗುತ್ತಾರೆ.

**ಚುಕ್ಕೆ ಪ್ರಶ್ನೆ ಸಂಖ್ಯೆ:1078**
**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಶರಣಪ್ಪ ಮಟ್ಟೂರು(ಶಿಕ್ಷಕರ ಕ್ಷೇತ್ರ)(ಮಾನ್ಯ ರಿಜ್ವಾನ್ ಅರ್ಷದ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಇದನ್ನು ಭೂಗಳ್ಳರಿಂದ ಭೂಮಿಯನ್ನು ರಕ್ಷಣೆ ಮಾಡಬೇಕೆನ್ನುವ ಉದ್ದೇಶದಿಂದ ಸರ್ವೆ ಇಲಾಖೆ ವತಿಯಿಂದ ಸರ್ಕಾರಿ, ಖಾಸಗಿ ಸಂಸ್ಥೆಗಳು ಮತ್ತು ಸಾರ್ವಜನಿಕರ ಜಾಗವನ್ನು ರಕ್ಷಿಸಲು, Property Registration Card, U.P.O.R. (Urban Property Ownership Records) ಎನ್ನುವ ಯೋಜನೆಯನ್ನು ಯಾವ ಯಾವ ನಗರದಲ್ಲಿ ಅನುಷ್ಠಾನಗೊಳಿಸಲಾಗಿದೆ ಎಂದು ಪ್ರಶ್ನೆಯನ್ನು ಕೇಳಲಾಗಿದೆ. ಮೈಸೂರು, ಶಿವಮೊಗ್ಗ, ಮಂಗಳೂರು ಭಾಗಗಳಲ್ಲಿ ಮಾಡಿದ್ದೇವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ದಯಮಾಡಿ ಇದನ್ನು expeditious ಆಗಿ ಅಂದರೆ, ತುರ್ತಾಗಿ ಮಾಡಬೇಕೆಂದು ನನ್ನ ಕಳಕಳಿಯಾಗಿದೆ. ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಈ ಸಮಸ್ಯೆ ಇದೆ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಬೆಂಗಳೂರಿನಲ್ಲೂ ಕೂಡ ಡ್ರೋನ್ ಮುಖಾಂತರ ಸರ್ವೆ ಕಾರ್ಯ ಪ್ರಾರಂಭವಾಗಿದೆ. ಈಗ ಮೊದಲ ಹಂತದಲ್ಲಿ 60 ವಾರ್ಡ್‌ಗಳಲ್ಲಿ ಸರ್ವೆ ಕೆಲಸ ಪ್ರಾರಂಭ ಮಾಡಿದ್ದೇವೆ. ದಿನಾಂಕ:07-11-2018ಕ್ಕೆ ಇಡೀ ಬೆಂಗಳೂರು ನಗರದ 198 ವಾರ್ಡ್‌ಗಳಲ್ಲಿ Phase-wise ಡ್ರೋನ್ ಮುಖಾಂತರ ಸರ್ವೆ ಕಾರ್ಯ ನಡೆಯಬೇಕೆಂದು ಸರ್ಕಾರ ನಿರ್ಣಯ ಮಾಡಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಚುಕ್ಕೆ ಪ್ರಶ್ನೆ ಸಂಖ್ಯೆ:113**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ರೂ.413.08 ಕೋಟಿ ಮೊತ್ತ ಏನಿದೆ, ಇದು ಆದಾಯ ಅಲ್ಲ. ಈ ಹಣ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸ, ವಸತಿ, ಕಾರ್ಮಿಕರ ಕಲ್ಯಾಣಕ್ಕೆ, ಆಸ್ಪತ್ರೆ ಖರ್ಚು, ಈ ಎಲ್ಲ ವಿಷಯಗಳಿಗೋಸ್ಕರ ಖರ್ಚು ಮಾಡುವುದಕ್ಕಾಗಿ ಇರತಕ್ಕಂಥ ನಿಧಿ. It is not an income. ಆದರೆ ಈ 413.08 ಕೋಟಿ ರೂಪಾಯಿಗಳನ್ನು ಆದಾಯ ಎಂದು ಪರಿಗಣಿಸಿ ಆದಾಯ ತೆರಿಗೆ ಇಲಾಖೆ ಈಗಾಗಲೇ ಹಣವನ್ನು ತೆಗೆದುಕೊಂಡಿದೆ. ಇದರ ಪರಿಣಾಮವಾಗಿ ಕಾರ್ಮಿಕ ಇಲಾಖೆಗೆ ಬಹಳ ದೊಡ್ಡ ಆಘಾತ, ಹಿನ್ನಡೆಯಾಗಿದೆ. ಇದು ಮಾನ್ಯ ಸಚಿವರ ಹಿನ್ನಡೆಯಾಗಿದೆಯೋ ಅಥವಾ ಇಲಾಖೆಯ ಅಧಿಕಾರಿಗಳ ಹಿನ್ನಡೆಯೋ ಗೊತ್ತಿಲ್ಲ. ಏಕೆ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲವೆಂದು ಪ್ರಶ್ನೆ ಕೇಳಿದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ.

~~(ಮುಂದು)~~

**(564)19-12-2018(1-30)ಬಿಕೆಪಿ-ಬಿಎನ್ಎಸ್**

**ಶ್ರೀ ಎನ್.ರವಿಕುಮಾರ್(ಮುಂದು.. . )**

ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂತಹ ಇಲಾಖೆ ಇದಾಗಿದೆ. ಇದು ಆದಾಯವಲ್ಲ, ಇದು ನಿಧಿಯಾಗಿದೆ. ಇದು ಕಾರ್ಮಿಕರ ಮಕ್ಕಳಿಗೆ, ಕಾರ್ಮಿಕರ ಕಲ್ಯಾಣಕ್ಕೋಸ್ಕರವೇ ಈ ನಿಧಿಯನ್ನು ಉಪಯೋಗಿಸುವಂತಹದ್ದಾಗಿದೆ. ಈ ಹಣವನ್ನು ಬೇರೆ ಇಲಾಖೆ ಹೇಗೆ ತೆಗೆದುಕೊಳ್ಳುತ್ತದೆ? ಇದು ಕಾರ್ಮಿಕ



Formatted: Font: Bold

ಇಲಾಖೆಯ ಅಸಹಾಯಕತೆಯೇ? ಇದಕ್ಕೆ ಕಾರಣಕರ್ತರಾದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲವೆಂದು ಕೇಳಿದರೆ, ಕ್ರಮ ತೆಗೆದುಕೊಳ್ಳುವಂತಹ ಪ್ರಮೇಯ ಬಂದಿರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಸಚಿವರ ಬಗ್ಗೆ ನಾನು ಬಹಳ ಖೇದವನ್ನು ವ್ಯಕ್ತಪಡಿಸುತ್ತೇನೆ. ಏತಕ್ಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ? ಕಾರ್ಮಿಕ ಇಲಾಖೆಯ ಕಾರ್ಮಿಕರು ಬಹಳ ಕಷ್ಟದಲ್ಲಿದ್ದಾರೆ. ಅವರ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಓದುತ್ತಾರೆ, ಸರ್ಕಾರಿ ಅಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ ಮತ್ತು ಸರ್ಕಾರಿ ಹಾಸ್ಟೆಲ್‌ಗಳಲ್ಲಿ ವಸತಿ ಪಡೆಯುತ್ತಾರೆ. ಅವರ ಕಲ್ಯಾಣಕ್ಕೆ ಹಣ ಬೇಕಾಗಿದೆ. ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲವೆಂದರೆ ಏನು ಅರ್ಥ? ಇದರ ಬಗ್ಗೆ ನಾನು ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ಕಾರ್ಮಿಕ ಇಲಾಖೆಯ 413.08 ಕೋಟಿ ರೂಪಾಯಿಗಳ ಬಗ್ಗೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಕಾರ್ಮಿಕ ಇಲಾಖೆಯಲ್ಲಿ ಏನು ಸಾವಿರಾರು ಕೋಟಿ ರೂಪಾಯಿಗಳ ಹಣ ಇದೆ, ಆ ಸಂಬಂಧದ ತೆರಿಗೆ ಹಣ ನಮ್ಮ ಆದಾಯ ತೆರಿಗೆ ಇಲಾಖೆಗೆ ಬರಬೇಕೆಂದು ಕೇಳಿದ್ದಾರೆ. Cess ನಿಂದ ಬಂದಂತಹ ಹಣ ಇದಾಗಿದ್ದು, ಈ ಹಣಕ್ಕೆ ವಿನಾಯಿತಿ ಇದೆ. ಇದಕ್ಕೆ ಆದಾಯ ತೆರಿಗೆ ಇಲ್ಲ. ಅದರಿಂದ ಬಡ್ಡಿ ಏನು ಬರುತ್ತದೆ, ಅದು ಆದಾಯ ತೆರಿಗೆಗೆ ಬರುತ್ತದೆ. Cess ನಿಂದ ಬರತಕ್ಕಂತಹ ಹಣಕ್ಕೆ ಆದಾಯ ತೆರಿಗೆ ಬರುವುದಿಲ್ಲ. ಅವರುಗಳು ತಪ್ಪು ಮಾಹಿತಿಯಿಂದ ಆದಾಯ ತೆರಿಗೆಯವರು ನೋಟೀಸ್ ಕೊಟ್ಟಾಗ ತಕ್ಷಣ ನಮ್ಮ ಅಧಿಕಾರಿಗಳು ಈ ವಿಚಾರದಲ್ಲಿ ಲಾಯರ್ ಇಟ್ಟು ಕೇಸ್ ಹಾಕಿದ್ದಾರೆ. ಈ ಹಣ ತಮ್ಮ ಇಲಾಖೆಗೆ ಬರುವುದಿಲ್ಲ, ತಪ್ಪು ಮಾಹಿತಿಯಿಂದ ಈ ಹಣವನ್ನು ಏನು ಮುಟ್ಟುಗೋಲು ಹಾಕಿಕೊಂಡಿದ್ದೀರಿ, ಆ ಹಣವನ್ನು ನಮಗೆ ವಾಪಸ್ಸು ಕೊಡಬೇಕೆಂದು ಹೇಳಿ, ಅದಕ್ಕೆ ಲಾಯರ್ ಇಟ್ಟು ಅವರಿಗೆ ಹೇಳಿದ್ದೇವೆ. ಇದು ನಿಜವಾಗಿಯೂ ಸಹ ಕಾರ್ಮಿಕರಿಗೆ ಉಪಯೋಗಿಸುವಂತಹ ಹಣವೇ ಆಗಿದೆ. ಕಾರ್ಮಿಕರ ಮಕ್ಕಳ ಶಿಕ್ಷಣ, ಮದುವೆ ಇತ್ಯಾದಿಗೆ ಉಪಯೋಗಿಸುವಂತಹ ಹಣ ಇದಾಗಿದೆ. ಬೇರೆಯದಕ್ಕೆ ಉಪಯೋಗಿಸುವಂತಹ ಹಣ ಇದಾಗಿರುವುದಿಲ್ಲ. ತಪ್ಪು ಮಾಹಿತಿಯಿಂದ ಆದಾಯ ತೆರಿಗೆ ಇಲಾಖೆಯವರು ಈ ಹಣವನ್ನು ಮುಟ್ಟುಗೋಲು ಹಾಕಿರುವುದಕ್ಕೆ ಆ ಹಣವನ್ನು ನಮಗೆ ವಾಪಸ್ಸು ಕೊಡಿ, ಇದು ಆದಾಯ ತೆರಿಗೆಗೆ ಬರತಕ್ಕಂತಹ ಹಣವಲ್ಲ, ಇದಕ್ಕೆ ಆದಾಯ ತೆರಿಗೆಯಿಂದ ವಿನಾಯಿತಿ ಇದೆ ಎಂದು ಹೇಳಿ ನಾವು ಲಾಯರ್ ಕಡೆಯಿಂದ ಅಪೀಲು ಹಾಕಿದ್ದೇವೆ. ಆ ಹಣ ವಾಪಸ್ಸು ಬರುತ್ತದೆ. ಅದಕ್ಕೆ ಏನೂ ಅನುಮಾನ ಪಡಬೇಕಾಗಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದರಿಂದಾಗಿ ಕಾರ್ಮಿಕ ಇಲಾಖೆಗೆ ಬಹಳ ತೊಂದರೆಯಾಗಿದೆ. ಕಾರ್ಮಿಕರಿಗೆ ಮತ್ತು ಅವರ ಮಕ್ಕಳಿಗೆ ತೊಂದರೆಯಾಗಿದೆ. ಅನೇಕ ವರ್ಷಗಳ ಕಾಲ ಇದ್ದಂತಹ ಹಣ ಆದಾಯ ತೆರಿಗೆ ಇಲಾಖೆಗೆ ಏತಕ್ಕೆ ಹೋಗಬೇಕು? ಇದು ಅಧಿಕಾರಿಗಳ ನಿರ್ಲಕ್ಷ್ಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಧೋರಣೆಯಿಂದ ಈ ಹಣ ಹೋಗಿರುವುದಾಗಿದೆ ಅಲ್ಲವೆ? ಆದಾಯ ತೆರಿಗೆ ಇಲಾಖೆ ಏಕೆ ರೈಡ್ ಮಾಡುತ್ತದೆ? ಸಚಿವರು ಈ ರೀತಿಯಲ್ಲಿ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೇಟು ಹಾಕಬಾರದು ಎಂದು ಹೇಳಿ ಸದನದಲ್ಲಿ ಆಗ್ರಹ ಪಡಿಸುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಆದಾಯ ತೆರಿಗೆ ಇಲಾಖೆಯವರು ಇವರಿಗೆ ನೋಟೀಸ್ ಕೊಡಲಿಲ್ಲವೇ? ಹಣವನ್ನು ಮುಟ್ಟುಗೋಲು ಹಾಕುವ ಮೊದಲು ಅವರು ಇವರಿಗೆ ಒಂದು ನೋಟೀಸ್ ಕೊಟ್ಟಿರುತ್ತಾರೆ. ಇವರಿಗೆ ಅವರು ಯಾವಾಗ ನೋಟೀಸ್ ಕೊಟ್ಟಿದ್ದರು, ಇವರು ಎಷ್ಟು ಬಾರಿ ಉತ್ತರಿಸಿದ್ದಾರೆ, ಎಷ್ಟು ದಿವಸಗಳಲ್ಲಿ ಅವರು ಹಣವನ್ನು ಮುಟ್ಟುಗೋಲು ಹಾಕಿದ್ದಾರೆನ್ನುವ ವಿಚಾರದಲ್ಲಿ ಒಂದು ದೊಡ್ಡ process ಇದೆ. ಆದಾಯ ತೆರಿಗೆ ಇಲಾಖೆಯವರು ಏಕಾಏಕಿ ಹಣವನ್ನು ಮುಟ್ಟುಗೋಲು ಹಾಕುವುದಿಲ್ಲ. ಅವರು ಈ ವಿಚಾರದಲ್ಲಿ ನೋಟೀಸ್ ಕೊಟ್ಟಿರುತ್ತಾರೆ. ಅದಕ್ಕೆ ಇವರು ಉತ್ತರವನ್ನು ಕೊಡಬೇಕಾಗಿತ್ತು. ಎಷ್ಟು ವರ್ಷಗಳಲ್ಲಿ ಈ process ಆಗಿದೆ ಎನ್ನುವುದನ್ನು ಸಚಿವರು ತಿಳಿಸಬೇಕು.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಕಾರ್ಮಿಕ ಕಲ್ಯಾಣ ಮಂಡಳಿಯೊಳಗೆ ಎಷ್ಟು ಹಣ ಇದೆ, ಅದಕ್ಕೆ ಎಷ್ಟು ಬಡ್ಡಿ ಬಂದಿತ್ತು ಎಂದು ಹೇಳಿ ಮಾನ್ಯ ಸದಸ್ಯರು ತಮ್ಮ ಎರಡನೆ ಪ್ರಶ್ನೆಯಲ್ಲಿ ಕೇಳಿದ್ದಾರೆ. ತಮಗೆ ನೋನೊಟೀಸ್ ಯಾವಾಗ ಬಂತು, ಆ ನೋನೊಟೀಸ್ ವಿಚಾರವಾಗಿ ತಾವು ಯಾವಾಗ ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಾವು ಹೇಳಬೇಕು. ಮತ್ತೆ ಯಾವ ಒಂದು ಅರ್ಥದಲ್ಲಿ ಅವರು ಮುಟ್ಟುಗೋಲು ಹಾಕಿಕೊಂಡಿದ್ದಾರೆಂದು ಮಾನ್ಯ ಸಚಿವರು ದಯವಿಟ್ಟು ವಿಷದೀಕರಿಸಬೇಕು.

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ಆದಾಯ ತೆರಿಗೆ ಇಲಾಖೆಯವರು 2014-15ನೇ ಅವಧಿಯಲ್ಲಿ assessment ಮಾಡಲು ಪರಿಗಣಿಸಿದರು. ತದನಂತರ 18ನೇ ಸೆಪ್ಟೆಂಬರ್ 2017 ರಂದು ಸೂಚನೆ ಜಾರಿಯಾದ ಮೇಲೆ ಕೂಡಲೇ ಮಂಡಳಿಯವರು ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದಾಯ ತೆರಿಗೆ ಇಲಾಖೆಯಿಂದ ನೋಟೀಸ್ ಬಂದ ತಕ್ಷಣ ನಮ್ಮ ಈ ಹಣ ನಿಮಗೆ ಸಂದಾಯವಾಗುವುದಿಲ್ಲ, ಈ ಹಣದ ಸಂಬಂಧ ನಿಮಗಿಲ್ಲ, ಈ ಹಣವನ್ನು ಮುಟ್ಟುಗೋಲು ಹಾಕಿರುವುದು ತಪ್ಪು, ಆ ಹಣವನ್ನು ನಮಗೆ ವಾಪಸ್ಸು ಕೊಡಿ ಎಂದು ಹೇಳಿ ನಾವು ದಿನಾಂಕ: 18-12-2017 ಕ್ಕೆ ನಾವು ಅಪೀಲು ಹಾಕಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದು ನಮಗೆ ಸ್ಪಷ್ಟವಾಗಲಿಲ್ಲ. ತಮಗೆ ಈ ಬಗ್ಗೆ ನೊಟೀಸ್ ಯಾವಾಗ ಬಂತು, ಅದಕ್ಕೆ ತಾವು ಯಾವಾಗ reply ಮಾಡಿದ್ದೀರಿ, ಆನಂತರವೇ ಮುಟ್ಟುಗೋಲು ಹಾಕಿಕೊಳ್ಳುವಂತಹ ಪ್ರಶ್ನೆ ಉದ್ಭವಿಸುವುದಾಗಿದೆ.

**ಸಭಾಪತಿಯವರು:-** ಈಗ ಆ ಮಾಹಿತಿ ಅವರ ಹತ್ತಿರ ಇಲ್ಲವೆಂದು ಕಾಣುತ್ತದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಬೆಳಿಗ್ಗೆಯಿಂದ ನಾವು ಗಮನಿಸುತ್ತಿದ್ದೇವೆ. ಒಂದು ಪ್ರಶ್ನೋತ್ತರ 2-3 ಗಂಟೆ ನಡೆಯಲಿಕ್ಕೆ ಕಾರಣ ಸಚಿವರುಗಳು update ಆಗಿ ಬರುವುದಿಲ್ಲ. ಇಲ್ಲಿ ಕುಳಿತುಕೊಂಡು ಅಧಿಕಾರಿಗಳು ಕೊಟ್ಟಂತಹ ಚೀಟಿ ಆಧಾರದ ಮೇಲೆ ಚರ್ಚೆ ಮಾಡುವುದರಿಂದ ಅದು ಗಂಟೆಗಟ್ಟಲೆ ಚರ್ಚೆಯಾಗುತ್ತಿದೆ. ಆ ಪ್ರಶ್ನೆಗೆ ತಕ್ಕಂತೆ ಉತ್ತರಕ್ಕೆ ಸಚಿವರು ಹೋಮ್‌ವರ್ಕ್ ಮಾಡಿಕೊಂಡು ಬರಲಿಕ್ಕೆ ತೊಂದರೆ ಏನಿದೆ? ಇದರಿಂದಾಗಿ ಇಲ್ಲಿ ಸಮಯ ವ್ಯರ್ಥವಾಗುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಚಿವರು ಈ ಬಗ್ಗೆ ಅಧಿಕಾರಿಗಳಿಂದ briefing ಪಡೆದುಕೊಳ್ಳುತ್ತಾರೋ ಇಲ್ಲವೋ ಎಂದು ನಮಗೆ ಸಂಶಯ ಬರುತ್ತದೆ. ಇವರು precise ಆಗಿ to the point ಅಧ್ಯಯನ ಮಾಡಿಕೊಂಡು ಬರಬೇಕು. ಒಂದು ಗಂಟೆಯಲ್ಲಿ ಪ್ರಶ್ನೋತ್ತರ ಅವಧಿ ಮುಗಿಯಬೇಕು.

**ಶ್ರೀ ಆಯನೂರು ಮಂಜುನಾಥ್:-** ಪ್ರಶ್ನೋತ್ತರ ಅವಧಿಯನ್ನು ಎರಡೂವರೆ ಗಂಟೆ ಕೊಟ್ಟರೂ ಸಹಿತ ಸರಿಯಾಗಿ ಉತ್ತರ ಕೊಡಲಿಕ್ಕೆ ಆಗಲಿಲ್ಲವೆಂದರೆ ಯಾವ ಸುಖಕ್ಕಾಗಿ ಅವರು ಮಂತ್ರಿಗಳಾಗಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಸಚಿವರು ಉತ್ತರ ಕೊಡಬೇಕು.

**ಶ್ರೀ ಕೆ.ಜೆ.ಜಾರ್ಜ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ. ಏನು ಉತ್ತರ ಕೊಟ್ಟಿದ್ದಾರೆಂದರೆ ಆದಾಯಕ್ಕೆ ಏನು ಬಡ್ಡಿ ಬರುತ್ತದೆ, ಅದಕ್ಕೆ ಆದಾಯ ತೆರಿಗೆ ಬರುತ್ತದೆ. Cess ಮೂಲಕ ಬಂದಿರುವುದಕ್ಕೂ ಸಹ ಆದಾಯ ತೆರಿಗೆಯವರು ಇವತ್ತು ನೊಟೀಸ್ ಕೊಟ್ಟಿದ್ದಾರೆ. ಕಾರ್ಮಿಕ ಇಲಾಖೆಗೆ ಆದಾಯ ತೆರಿಗೆ ಇಲಾಖೆಯವರು ಯಾವ ದಿವಸ ನೊಟೀಸ್ ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ವಿವರವನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ವಿವರವನ್ನು ತರಿಸಿ ಕೊಡಬೇಕಾಗುತ್ತದೆ. ಈಗ ನಾವು ಏನು ಮಾಡುತ್ತೇವೆಂದರೆ ಆದಾಯ ತೆರಿಗೆ ಇಲಾಖೆಯವರಿಗೆ ಅಪೀಲು ಮಾಡುತ್ತೇವೆ. Cess ಗೆ ಅವರು ಆದಾಯ ತೆರಿಗೆಯನ್ನು ಹಾಕಲಿಕ್ಕೆ ಆಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆಯನೂರು ಮಂಜುನಾಥ್:-** ಮುಟ್ಟುಗೋಲು ಎಂದು ಹೇಳಿದ್ದಾರೆ. ಮುಟ್ಟುಗೋಲು ಹಾಕುವಾಗ, there is a long process.

**ಶ್ರೀ ಕೆ.ಜೆ.ಜಾರ್ಜ್:-**ಮಾನ್ಯ ಸಭಾಪತಿಯವರೇ, ಮುಟ್ಟುಗೋಲು ಹಾಕುವಾಗ ಆದಾಯ ತೆರಿಗೆ ಇಲಾಖೆಯವರು ನೇರವಾಗಿ ಮುಟ್ಟುಗೋಲು ಹಾಕಿಕೊಳ್ಳುವಂತಹ ಕೆಲಸವನ್ನು ಮಾಡುತ್ತಾರೆ. ನೀವು ಹೇಳಿದ ಹಾಗೆ ಅವರು ಇವರಿಗೆ ನೋಟೀಸ್ ಕೊಟ್ಟಿದ್ದಾರೆಯೇ ಇಲ್ಲವೇ ಎಂದು ಅವರು ತಿಳಿಸುತ್ತಾರೆ.

**ಶ್ರೀ ಎನ್. ಅಪ್ಪಾಜಿಗೌಡ:-** ಆ ರೀತಿಯಲ್ಲಿ ಹಾಕಿರುವುದಿಲ್ಲ.

**ಶ್ರೀ ಕೆ.ಜೆ.ಜಾರ್ಜ್:-** ಈಗ ಸರ್ಕಾರದಿಂದ ಕ್ರಮ ತೆಗೆದುಕೊಂಡಿದ್ದೇವೆ. ಮುಟ್ಟುಗೋಲು ಹಾಕಿಕೊಂಡಿರುವಂತಹ ಹಣವನ್ನು ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಅದಕ್ಕೆ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅಧಿಕಾರಿಗಳ ಬೇಜವಾಬ್ದಾರಿಯೇ ಕಾರಣ. ಆ ರೀತಿಯ ಬೇಜವಾಬ್ದಾರಿಯ ಕಾರಣದಿಂದ ಆ ಹಣ ಮುಟ್ಟುಗೋಲು ಆಗಿದ್ದಲ್ಲಿ ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? ಅದು ಕಾರ್ಮಿಕರ ಹಣವಾಗಿದೆ.

(ಗೊಂದಲ)

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಶ್ರೀ ಆಯನೂರು ಮಂಜುನಾಥ್‌ರವರು ಒಂದು ನಿಮಿಷ ಕೇಳಬೇಕು. ಇದರ ವಿಚಾರವಾಗಿ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಯಾರು ತಪ್ಪು ಮಾಡಿದ್ದಾರೆಂದು ಸಂಬಂಧಪಟ್ಟವರನ್ನು ಮಂತ್ರಿಗಳು ವಿಚಾರಿಸಿಕೊಂಡು ಹೇಳುತ್ತಾರೆ. ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಆದಾಯ ತೆರಿಗೆ ಇಲಾಖೆಯವರಿಗೆ ನಾವು ಅಪೀಲು ಹಾಕಿದ್ದೇವೆ. ನೀವು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೇವೆ. ಆದಾಯ ತೆರಿಗೆ ಇಲಾಖೆಯವರು ತಪ್ಪು ಮಾಡಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಆದರೆ, ಈ ಬಗ್ಗೆ ನೋಟೀಸ್ ಬಂದಾಗ ಏತಕ್ಕೆ ಸಮರ್ಥವಾಗಿ defend ಮಾಡಿಕೊಳ್ಳಲಿಲ್ಲ? ಮುಟ್ಟುಗೋಲು ಹಾಕಿಕೊಳ್ಳುವ ತನಕ ಏತಕ್ಕೆ ಅಧಿಕಾರಿಗಳು ಬಿಟ್ಟಿದ್ದಾರೆ?

**ಸಭಾಪತಿಯವರು:** ಆಯಿತು, ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ವೆಂಕಟರಮಣಪ್ಪ-**ಮಾನ್ಯ ಸಭಾಪತಿಯವರೇ, ದಿನಾಂಕ: 18-09-2017 ಕ್ಕೆ ಒಂದು ನೋಟೀಸ್ ಕೊಟ್ಟಿದ್ದಾರೆ. ಮಂಡಳಿಗೆ ದಿನಾಂಕ: 21-9-2017 ಕ್ಕೆ ಮತ್ತೊಂದು ನೋಟೀಸ್ ಕೊಡುತ್ತಾರೆ. ಅಂದರೆ 18ನೇ ತಾರೀಖಿನಿಂದ 21ನೇ ತಾರೀಖಿಗೆ ಎರಡು ನೋಟೀಸ್ ಕೊಟ್ಟಿದ್ದಾರೆ. ಅದೇ ತಿಂಗಳು 27ನೇ ತಾರೀಖಿನಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಂಡಳಿಯಿಂದ ಬಂದ ತಕ್ಷಣ 9-10-2017ಕ್ಕೆ ಕೊನೆಯ ದಿನಾಂಕವಾದ್ದರಿಂದ advocate ಅನ್ನು ನೇಮಕ ಮಾಡಲಾಗುತ್ತದೆ. ಈ ಸಂಬಂಧ ವಕೀಲರನ್ನು ಇಟ್ಟಿದ್ದೇವೆ.

**ಸಭಾಪತಿಯವರು:-** ತಾವು ಸದನಕ್ಕೆ ಬರುವಾಗ ಸಂಬಂಧಪಟ್ಟ ಪ್ರಶ್ನೆಗೆ ತಯಾರಾಗಿ ಬರಬೇಕು.

**ಶ್ರೀ ವೆಂಕಟರಮಣಪ್ಪ:-** ದಿನಾಂಕ: 27-10-2017ಕ್ಕೆ ನಾವು ನಮ್ಮ ವಕೀಲರನ್ನಿಟ್ಟು, ನಮ್ಮ ಹಣವನ್ನು ವಾಪಸ್ಸು ಕೊಡಿ, ನೀವು ನಮ್ಮ ಹಣವನ್ನು ಮುಟ್ಟುಗೋಲು ಹಾಕಿರುವುದು ತಪ್ಪು, ಅದು ಆದಾಯ ತೆರಿಗೆಗೆ ಸಂಬಂಧಪಟ್ಟಂತೆ ಬರುವುದಿಲ್ಲವೆಂದು ಹೇಳಿದ್ದೇವೆ. ಹೀಗಾಗಿ ಈ ಹಣವನ್ನು ನಾವು ಪ್ರಾಮಾಣಿಕವಾಗಿ ವಾಪಸ್ಸು ತರಿಸುತ್ತೇವೆ.

**ಡಾ|| ವೈ.ಎ. ನಾರಾಯಣಸ್ವಾಮಿ:-** ಉತ್ತರ ಸರಿ ಇದೆ. ಆದರೆ, ಏತಕ್ಕೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ? ಮೊದಲು ಅಧಿಕಾರಿಗಳ ಮೇಲೆ ದಯವಿಟ್ಟು ಕ್ರಮ ಕೈಗೊಳ್ಳಬೇಕು.

**ಸಭಾಪತಿಯವರು:-** ಆಯಿತು, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಯಾರು ತಪ್ಪಿತಸ್ಥ ಅಧಿಕಾರಿಗಳಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕಾರ್ಮಿಕರ ಕಲ್ಯಾಣವಾಗಬೇಕು. ಕಾರ್ಮಿಕ ಇಲಾಖೆ ಏತಕ್ಕೆ ಹಿಂದುಳಿಯುತ್ತಿದೆ ಎನ್ನುವುದನ್ನು ಯೋಚನೆ ಮಾಡಬೇಕು.

(ಗೊಂದಲ)

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳಿಂದ ತಪ್ಪಾಗಿದ್ದರೆ ಪರಿಶೀಲನೆ ಮಾಡಿ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 969**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ್ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಈ ವರ್ಷ ಬೀದರ್ ಜಿಲ್ಲೆಯಲ್ಲಿ ಬರಗಾಲ ಇದೆ. ಇದರಿಂದ ರೈತರಿಗೆ ಬಹಳ ಕಷ್ಟವಾಗಿದೆ. ಜೊತೆಗೆ ಕಬ್ಬಿನ ಬೆಳೆಯೂ ಸಹ ಬಹಳ ಕಡಿಮೆಯಾಗಿದೆ.

—ಮುಂದು...

(565) 19.12.2018 01.40 SV-KS

~~(ಸಭಾಪತಿಯವರ ಉಪಸ್ಥಿತಿ)~~

**ಶ್ರೀ ವಿಜಯ್ ಸಿಂಗ್ (ಮುಂದು):-**



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾರಂಜಾ ಕಾರ್ಖಾನೆಯಿಂದ ರೂ.5,85,000/– ಬಾಕಿಯಿದೆ. ಭಾಲ್ಕೇಶ್ವರ್ ಶುಗರ್ಸ್‌ನಿಂದ ರೂ.6,15,000/– ಬಾಕಿಯಿದೆ. ಅದನ್ನು ಡಿಸೆಂಬರ್ 31ರ ಒಳಗಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ಸ್ವಲ್ಪ ತ್ವರಿತವಾಗಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೇ, ಆರು ಸಕ್ಕರೆ ಕಾರ್ಖಾನೆಗಳವರಲ್ಲಿ ಎರಡು ಸಕ್ಕರೆ ಕಾರ್ಖಾನೆಗಳವರು ಮಾತ್ರ ಬಾಕಿ ಇರಿಸಿಕೊಂಡಿದ್ದಾರೆ. ಆ ಎರಡೂ ಸಕ್ಕರೆ ಕಾರ್ಖಾನೆಗಳಿಗೂ ಈಗಾಗಲೇ ನೋಟಿಸ್ ಕೊಟ್ಟು seize ಮಾಡಲಾಗಿದೆ. ಹರಾಜಿಗೂ ಸಹ ಕ್ರಮ ಕೈಗೊಂಡಿದ್ದೇವೆ. ಕೇಂದ್ರ ಸರ್ಕಾರದಿಂದ ರೂ.29/–ಕ್ಕಿಂತಲೂ ಕಡಿಮೆ ದರದಲ್ಲಿ ಹರಾಜು ಮಾಡಬಾರದೆಂದು ದರವನ್ನು ನಿಗದಿಗೊಳಿಸಲಾಗಿದೆ. ನಾವು ಹರಾಜು ಮಾಡಿದಾಗ ಕಡಿಮೆ ಬಂದದ್ದರಿಂದ ಮತ್ತೊಮ್ಮೆ ಹರಾಜು ಮಾಡಲು ರಿ–ಟೆಂಡರ್ ಅನ್ನು ಮಾಡಲಾಗುವುದು. ಅಷ್ಟರಲ್ಲಿ ನಾರಂಜಾ ಸಕ್ಕರೆ ಕಾರ್ಖಾನೆಯವರು 31ನೇ ತಾರೀಖಿನೊಳಗಾಗಿ ತಾವೇ ಹಣವನ್ನು ಕೊಡುವುದಾಗಿ ಹೇಳಿದ್ದಾರೆ. ಭಾಲ್ಕೇಶ್ವರ್ ಸಕ್ಕರೆ ಕಾರ್ಖಾನೆಯನ್ನೂ ಸಹ seize ಮಾಡಿ ವಸೂಲು ಮಾಡಲು ಕ್ರಮವನ್ನು ಕೈಗೊಳ್ಳಲಾಗಿದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಹಣ ಬಾಕಿ ಇರುವುದು 2016–17ನೇ ಇಸವಿಯದ್ದಾಗಿದೆ. ಈಗಿನದ್ದಲ್ಲ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೇ, 2016–17ರಲ್ಲಿ ಯಾವುದೇ ಸಕ್ಕರೆ ಕಾರ್ಖಾನೆಯವರಿಂದಲೂ ಬಾಕಿ ಇರುವುದಿಲ್ಲ. 2017–18ರಲ್ಲಿ ಎರಡು ಸಕ್ಕರೆ ಕಾರ್ಖಾನೆಗಳಿಂದ ಬಾಕಿ ಬರಬೇಕಾಗಿದೆ. ಅದನ್ನು ವಸೂಲಿ ಮಾಡಲಿಕ್ಕೆ ಕ್ರಮವನ್ನು ಕೈಗೊಳ್ಳಲಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Formatted: Centered

**ಪ್ರಶ್ನೆ ಸಂಖ್ಯೆ: 1000**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸಂರಕ್ಷಿತ ಪ್ರದೇಶದಲ್ಲಿ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ ನೇರವಾಗಿ ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂಬುದನ್ನು ಹೇಳಿರುವುದಿಲ್ಲ. ಇದು ನನ್ನ ಮೊದಲನೆಯ ಪ್ರಶ್ನೆ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು. ಎರಡನೆಯದು ಪ್ರಸ್ತುತ ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿ ಗಣಿ ಚಟುವಟಿಕೆ ಸ್ಥಗಿತಗೊಂಡಿದೆ ಎಂದು ಹೇಳಿರುತ್ತಾರೆ. ಯಾವುದನ್ನು ಅಧಿಕೃತವಾಗಿ ಗುತ್ತಿಗೆ ನೀಡಲಾಗಿದೆಯೋ ಅಲ್ಲಿ ಸ್ಥಗಿತಗೊಂಡಿರುವುದು ಸರಿಯಷ್ಟೆ. ಅನಧಿಕೃತವಾಗಿ ಗಣಿಗಾರಿಕೆ ನಡೆಯುತ್ತಿದೆ ಎನ್ನುವುದಕ್ಕೆ ನನ್ನ ಬಳಿ ದಾಖಲೆ ಇದೆ. ಮಾಧ್ಯಮದವರೂ ಸಹ ಸಾಕಷ್ಟು ಸಂಗತಿಗಳನ್ನು ಮಾಧ್ಯಮಗಳ ಮುಖಾಂತರ ಬಿಂಬಿಸಿದ್ದಾರೆ. ಇಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆಯುತ್ತಿದೆ. ಈಗಲೂ ಕೂಡ ಅವ್ಯಾಹತವಾಗಿ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿದ್ದಾರೆ. ಅದರ ವೀಡಿಯೋ ರೆಕಾರ್ಡಿಂಗ್ ನನ್ನ ಬಳಿಯಿದ್ದು, ತಾವು ಅನುಮತಿಯನ್ನು ನೀಡಿದರೆ ನಾನು ಇಲ್ಲಿಯೇ ಪ್ರದರ್ಶಿಸುತ್ತೇನೆ. ಇಲ್ಲವಾದಲ್ಲಿ ನಂತರ ತಮ್ಮ ಮೂಲಕ ಅದನ್ನು ಸದನದ ದಾಖಲೆಯಾಗಿ ಮಂತ್ರಿಗಳಿಗೆ ನೀಡಲು ತಯಾರಿದ್ದೇನೆ. ಈಗಲೂ ಕೂಡ ಅಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆಯುತ್ತಿದೆ. ವರದಿ ಮಾಡಲು ಹೋದಂತಹ ಟಿ.ವಿ. ವರದಿಗಾರರ ಮೇಲೆ ದಬ್ಬಾಳಿಕೆ ಮಾಡಿ, ಹೆದರಿಸಲಾಗಿದೆ. ಈ ರೀತಿಯಾದ ಪ್ರಕರಣಗಳು ನಡೆಯುತ್ತಿರುವುದು ತಮ್ಮ ಗಮನಕ್ಕೂ ಸಹ ಬಂದಿರುತ್ತದೆ. ಮಾನ್ಯ ಸಚಿವರು ಅಧಿಕಾರಿಗಳನ್ನು ನೆಚ್ಚಿಕೊಂಡು ಅಲ್ಲಿಗೆ ಕಳುಹಿಸಿ, ಅವರು ನೀಡುವ ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದರೆ ಆಗುವುದಿಲ್ಲ. ಇದಕ್ಕೆ ಸಚಿವರ ಉತ್ತರವೇನು ಎಂಬುದನ್ನು ನೇರವಾಗಿ ಹೇಳಲಿ. ಅದಾದ ನಂತರ ನಾನು ನ್ಯಾಯಾಲಯದ ಆದೇಶದ ವಿಷಯಕ್ಕೆ ಬರುತ್ತೇನೆ.

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾಧ್ಯಮದ ಬಗ್ಗೆ ಹೇಳಿದಂತೆ ಅಲ್ಲಿ ವೀಕ್ಷಣೆಗೆ ಹೋಗಿರುವುದನ್ನು ನಾನೂ ಸಹ ಮಾಧ್ಯಮದ ಮೂಲಕ ನೋಡಿರುತ್ತೇನೆ. ನನಗೂ ಸಹ ಮಾಧ್ಯಮದವರು ದೂರವಾಣಿಯ ಮೂಲಕ ಮಾತನಾಡಿಸಿದ್ದಾರೆ. ಹೇಳಿದ ತಕ್ಷಣ ಅಲ್ಲಿಗೆ ಜಿಲ್ಲಾಧಿಕಾರಿಗಳನ್ನು, ಅರಣ್ಯಾಧಿಕಾರಿಗಳನ್ನು ಕಳುಹಿಸಿದ್ದೇನೆ. ಎಲ್ಲಾ ಅಧಿಕಾರಿಗಳೂ ಸಹ ಅಲ್ಲಿಗೆ ಹೋಗಿ ವೀಕ್ಷಣೆಯನ್ನು ಮಾಡಿದ್ದಾರೆ. ಅಂದು ಜಿಲ್ಲಾಧಿಕಾರಿಗಳು ವರದಿಯನ್ನು ಸಲ್ಲಿಸಿರುವಂತೆ ಅಲ್ಲಿ ಯಾವುದೇ ಗಣಿಗಾರಿಕೆ ನಡೆಯುತ್ತಿಲ್ಲ. ಅದು ಮಾಧ್ಯಮದಲ್ಲಿ ಪುನಃ ಬಂದಿತು. ಸದರಿ ವೀಡಿಯೋದಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆಯುತ್ತಿದೆಯೆಂದು ಹಾಗೂ ಮಾಧ್ಯಮ ವ್ಯಕ್ತಿಗಳ ಮೇಲೆ ಹಲ್ಲೆಯನ್ನು ನಡೆಸಲು

ಪ್ರಯತ್ನಿಸಲಾಗಿದೆಯೆಂದು ಟಿ.ವಿ.ಯಲ್ಲಿ ಬಂದಿತು. ಅದಾದ ನಂತರ ಸದರಿ ಕಲ್ಲು ಕ್ವಾರಿಯ ಬನ್ನೇರುಘಟ್ಟ ಉದ್ಯಾನವನ default Eco-sensitive Zone (ESZ) ನ 10 ಕಿ.ಮೀ. ವ್ಯಾಪ್ತಿಯಲ್ಲಿ ಬರುವುದರಿಂದ ನವೀಕರಣಗೊಳ್ಳದೆ ಕಳೆದ ಒಂದು ವರ್ಷದಿಂದ ಸ್ಥಗಿತಗೊಳಿಸಲಾಗಿದೆ. ಕ್ರಷರ್‌ಗಳನ್ನು ಕಳೆದ ಜುಲೈ ತಿಂಗಳಿನಿಂದ ಸ್ಥಗಿತಗೊಳಿಸಲಾಗಿದೆ. ಸದರಿ ಕ್ವಾರಿಯು ಬನ್ನೇರುಘಟ್ಟ ಉದ್ಯಾನವನ ESZ 2 ಕಿ.ಮೀ. ದೂರದಲ್ಲಿರುತ್ತದೆ. ಮಾಧ್ಯಮಗಳ ವರದಿಗಳ ನಂತರ ದಿ:07.11.2018ರಂದು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಬೆಂಗಳೂರು ದಕ್ಷಿಣ ವಿಭಾಗದ ಉಪವಿಭಾಗಾಧಿಕಾರಿಗಳು, ಅರಣ್ಯ ಇಲಾಖೆ, ಸರ್ವೆ ಇಲಾಖೆ, ಪರಿಸರ ಇಲಾಖೆಯ ಹಾಗೂ ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿಯನ್ನು ನೀಡಿ, ಪರಿಶೀಲಿಸಿದ್ದಾರೆ. ಅದರ ಜೊತೆಯಲ್ಲಿ ಜಿಲ್ಲಾಧಿಕಾರಿಗಳು ನೀಡಿರುವ ಮಾಹಿತಿಯಂತೆ ಸದರಿ ಸ್ಥಳದಲ್ಲಿ ಯಾವುದೇ quarrying ಕೆಲಸ ನಡೆದಿರುವುದಿಲ್ಲ. ಆದರೆ ಮಾಧ್ಯಮದಲ್ಲಿ ವರದಿಯಾದಂತೆ ಕ್ರಷರ್ ಕೆಲಸ ನಡೆದಿರಬಹುದೆಂದು ತಿಳಿಸಿರುತ್ತಾರೆ. ಈ ಬಗ್ಗೆ ವಾಸ್ತವಾಂಶದ ವರದಿಯನ್ನು ನೀಡಲು ಉಪವಿಭಾಗಾಧಿಕಾರಿಗಳ ತಂಡಕ್ಕೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿರುತ್ತಾರೆ. ಅಲ್ಲದೆ ತಕ್ಷಣವೇ ಸದರಿ ಕ್ರಷರ್ ಅನ್ನು seize ಮಾಡಿ ಯಾವುದೇ ಗಣಿಗಾರಿಕೆಯನ್ನು ನಡೆಸದಂತೆ ಬೋರ್ಡ್ ಅನ್ನು ಹಾಕಲಾಗಿದೆ. ಹಾಗಾಗಿ ಸದರಿ ಗಣಿ ಪ್ರದೇಶದಲ್ಲಿ ಕ್ರಷಿಂಗ್ ಕೆಲಸ ನಡೆಸಿದಂತೆ ಕಂಡು ಬಂದರೆ ಉಪವಿಭಾಗಾಧಿಕಾರಿಗಳು ವರದಿಯನ್ನು ನೀಡಿದ ತಕ್ಷಣ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಉಪವಿಭಾಗಾಧಿಕಾರಿಗಳು ಅಲ್ಲಿಗೆ ಹೋಗಿ ತನಿಖೆಯನ್ನು ಮಾಡುತ್ತಿದ್ದಾರೆ. ವರದಿ ಬಂದ ತಕ್ಷಣ ಅನುಮತಿಯಿಲ್ಲದ ಕ್ರಷರ್ ಕಾರ್ಯದ ಪರವಾನಗಿಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಗಣಿಗಾರಿಕೆ ನಡೆದಿಲ್ಲ ಎಂಬುದಾದರೆ ಕ್ರಷರ್ ಹೇಗೆ ನಡೆಯುತ್ತದೆ? ಕ್ರಷರ್ ನಡೆಯಬೇಕೆಂದರೆ ಅಲ್ಲಿ ಗಣಿಗಾರಿಕೆ ನಡೆಯಲೇ ಬೇಕು. ಅಲ್ಲಿ ವರದಿಯನ್ನು ಕೊಟ್ಟಿರುವುದರಲ್ಲಿಯೇ ಗೊತ್ತಾಗುತ್ತದೆ. ಮೇಲ್ನೋಟಕ್ಕೆ ನಾನು ಮಾನ್ಯ ಸಚಿವರನ್ನು convince ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅಧಿಕಾರಿಗಳು ಮೇಲ್ನೋಟಕ್ಕೆ ಗಣಿಗಾರಿಕೆ ನಡೆದಿರುವುದಕ್ಕೆ ಸಾಕ್ಷ್ಯವಿಲ್ಲ, ಆದರೆ ಕ್ರಷರ್ ನಡೆದಿರಬಹುದು ಎಂದು ಹೇಳುತ್ತಾರೆಂದರೆ ಅಡುಗೆಯನ್ನೇ ಮಾಡಿರುವುದಿಲ್ಲ, ಊಟ ಮಾಡಿರುವುದು ಸಾಧ್ಯ ಎಂಬಂತಾಗುತ್ತದೆ. ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ಅಧಿಕಾರಿಗಳನ್ನು ನೆಚ್ಚಿಕೊಳ್ಳಬಾರದು. ಆ ಹಂತದಲ್ಲಿ ಇದು ಆಗುವುದಿಲ್ಲ. ಇಂದು ಅಧಿಕಾರಿಗಳು ಹೇಗಿದ್ದಾರೆಂದರೆ ಅವರು ಕುಳಿತಿರುವ ಹಡಗನ್ನು ಹಣಕ್ಕಾಗಿಯೇ ಮುಳುಗಿಸಲಿಕ್ಕೆ ತಯಾರಾಗಿದ್ದಾರೆ. ಮಾನ್ಯ ಸಚಿವರು ವೈಯಕ್ತಿಕವಾಗಿ ಆಸಕ್ತಿಯನ್ನು ತೆಗೆದುಕೊಳ್ಳಬೇಕು. ಮಾಧ್ಯಮದವರು ಇಷ್ಟೆಲ್ಲಾ ಹೊಡೆದಾಡಿರುವುದರಿಂದ ಇಷ್ಟಾದರೂ ಕಂಡು ಬರುತ್ತಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದನ್ನು ಗಂಭೀರವಾಗಿ ಪರಿಗಣಿಸಿ, ದೊಡ್ಡ ಮಟ್ಟದ ತನಿಖೆಯನ್ನು ಮಾಡಲು ಮಾನ್ಯ ಸಚಿವರು ಮುಂದಾಗಬೇಕು. ಮೇಲಧಿಕಾರಿಗಳ ನೇತೃತ್ವದಲ್ಲಿ ಇದರ ತನಿಖೆಯನ್ನು ಮಾಡಬೇಕೆಂಬ ಆಗ್ರಹವನ್ನು ನಾನು ಮಾಡುತ್ತೇನೆ.

**ಶ್ರೀ ರಾಜಶೇಖರ ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಾಕಷ್ಟು ಮಾಧ್ಯಮಗಳಲ್ಲಿ ಬಂದಾಗ ನಾನು ಕೂಡ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ಅರಣ್ಯ ಇಲಾಖೆ ಅಧಿಕಾರಿಗಳು ಹೀಗೆ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಕಳುಹಿಸಿದ್ದೇನೆ. ಕೆಲವು ವಾಹಿನಿಯವರು ನನಗೂ ಸಹ ಭೇಟಿಯನ್ನು ನೀಡಬೇಕೆಂದು ಕೇಳಿದವು. ಸದನ ನಡೆಯುತ್ತಿರುವ ಕಾರಣ ನನಗೆ ಹೋಗಲಿಕ್ಕಾಗಲಿಲ್ಲ. ಇದು ಬಹಳ ಸೂಕ್ಷ್ಮವಾದ ವಿಚಾರವಾಗಿದ್ದು, ನಾನೇ ಖುದ್ದಾಗಿ ಅಲ್ಲಿಗೆ ಭೇಟಿಯನ್ನು ನೀಡುತ್ತೇನೆ. ನನಗೂ ಕೂಡ ಮಾಹಿತಿ ಇದೆ. ಅಲ್ಲಿ ಗಣಿಗಾರಿಕೆ ನಡೆಯುತ್ತಿಲ್ಲ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಆದರೂ ಕೂಡ ಮಾನ್ಯ ಸದಸ್ಯರು ಹೇಳಿರುವುದರಿಂದ ಅಧಿಕಾರಿಗಳಲ್ಲದೆ ನಾನೇ ಸ್ವತಃ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಏನೇ ತಪ್ಪು ಕಂಡು ಬಂದರೂ ಸಹ ಅವರ ಮೇಲೆ ಕ್ರಮ ಕೈಗೊಳ್ಳುವಂತಹ ಕೆಲಸವನ್ನು ನಾನು ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 979**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ನೀಡಿದ್ದಾರೆ. ಅನುದಾನಿತ ಐ.ಟಿ.ಐಗಳಲ್ಲಿ ಕೆಲಸ ಮಾಡತಕ್ಕಂತಹ ಸಿಬ್ಬಂದಿಗಳಿಗೆ ಶೇ.100ರಷ್ಟು ವೇತನಾನುದಾನವನ್ನು ಕೊಟ್ಟ ನಂತರ 2014ರಲ್ಲಿ ಇತರೆ ಇಲಾಖೆಯ ಸರ್ಕಾರಿ ನೌಕರರಿಗೆ, ಅನುದಾನಿತ ಇಲಾಖೆಯ ನೌಕರರಿಗೆ ಕೊಡುವಂತಹ ಎಲ್ಲಾ ಸೇವಾ ಸವಲತ್ತುಗಳ ಬಗ್ಗೆ 2014ರಲ್ಲಿ ಮತ್ತು 2016ರಲ್ಲಿ ಎರಡು ಸರ್ಕಾರಿ ಆದೇಶಗಳಾಗಿವೆ. ಆದರೆ ಇದುವರೆವಿಗೂ 1997ರ ಅನುದಾನ ಸಂಹಿತೆಯನ್ನು ಪರಿಷ್ಕರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ ಆದರೆ ಇನ್ನೂ ಸಹ ಮಾಡಿರುವುದಿಲ್ಲ. ಅನುದಾನಿತ ಐ.ಟಿ.ಐ.ಗಳಲ್ಲಿ ಬಡವರ ಮಕ್ಕಳು ಗುಣಾತ್ಮಕವಾದಂತಹ ಶಿಕ್ಷಣವನ್ನು ಪಡೆಯುತ್ತಿದ್ದು, ಅವರಿಗೆ ಶಿಕ್ಷಣ ನೀಡುತ್ತಿರುವ ಶಿಕ್ಷಕರು, ನೌಕರರು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅವರಿಗೆ 15-20 ವರ್ಷದ ಕಾಲಮಿತಿ ಬಡ್ತಿ ಸಿಗುತ್ತಿಲ್ಲ. ಮಹಿಳಾ ನೌಕರರಿಗೆ ಹೆರಿಗೆ ರಜೆಯ ಸೌಲಭ್ಯಗಳು ಸಿಗುತ್ತಿಲ್ಲ. ನಿವೃತ್ತರಾದಂತಹ ನೌಕರರಿಗೆ ನಿವೃತ್ತಿಗೊಂಡು ಎರಡು ವರ್ಷಗಳಾದರೂ ಪಿಂಚಣಿ ದೊರೆಯುತ್ತಿಲ್ಲ. ಆಕಸ್ಮಿಕವಾಗಿ ಮರಣ ಹೊಂದಿದವರ ಕುಟುಂಬಗಳಿಗೆ ಯಾವುದೇ ಆರ್ಥಿಕ ಸವಲತ್ತುಗಳು ಸಿಗುತ್ತಿಲ್ಲ. ವಿದ್ಯಾರ್ಥಿಗಳ ಅನುಪಾತ ಕಡಿಮೆ ಇದ್ದಂತಹ ಕಡೆ ಅಲ್ಲಿನ ನೌಕರರನ್ನು ಬೇರೆ ಕಡೆಗೆ ನಿಯೋಜನೆ ಮಾಡಿ ಆ ನೌಕರರಿಗೆ ಆರು ತಿಂಗಳು-ವರ್ಷ ಕಳೆದಿದ್ದರೂ ವೇತನ ಸಿಗದಂತಹ ಪರಿಸ್ಥಿತಿ ಉಂಟಾಗಿದೆ. ಈ ರೀತಿಯಾಗಿ 2014ರಲ್ಲಿಯೇ ಈ ಸೇವಾ ನಿಯಮಗಳನ್ನು ರೂಢಿಸಲಿಕ್ಕೆ ಸರ್ಕಾರ ಆದೇಶ ಮಾಡಿದ್ದರೂ ಕೂಡ 1997ರ ಅನುದಾನ ನೀತಿ ಸಂಹಿತೆಯನ್ನು ಇನ್ನೂ ಕೂಡ ಪರಿಷ್ಕರಿಸಲಾಗಿರುವುದಿಲ್ಲ. ಈ ಪರಿಷ್ಕರಣೆ ಮಾಡದಿರುವುದರಿಂದ ಅನುದಾನಿತ ಐ.ಟಿ.ಐ.ನಲ್ಲಿ ಕೆಲಸ ಮಾಡತಕ್ಕಂತಹ ಸಿಬ್ಬಂದಿಗಳು ಬಹಳ ತೊಂದರೆಗೆ ಒಳಗಾಗಿದ್ದಾರೆ. ಮಾನ್ಯ ಸಚಿವರು ಬಹಳ ಅನುಭವಿಗಳು, ದಕ್ಷರಾಗಿದ್ದಾರೆ. ಎಲ್ಲಾ ಇಲಾಖೆಗಳಲ್ಲಿಯೂ ಬಹಳ ಸುಧಾರಣೆಯನ್ನು ತರತಕ್ಕಂತಹ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಈ ಪರಿಷ್ಕರಣೆಯನ್ನು ಯಾವ ಕಾಲಮಿತಿಯೊಳಗೆ ಮಾಡಲಾಗುವುದು ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಇದನ್ನು 2014ರಿಂದಲೂ ಮಾಡಲಾಗಿರುವುದಿಲ್ಲ. ಇದು ಅತ್ಯಂತ ಶೋಚನೀಯವಾದ ಸಂಗತಿ.

**(...ಮುಂದು)**

(566) 19.12.2018 ಕೆಜಿ.ಕೆಎಸ್ 1.50

**ಶ್ರೀ ಮರಿತಿಬ್ಬೇಗೌಡ (ಮುಂದು...):-**

ಈ ಪರೀಕ್ಷರಣೆಯನ್ನು 2014 ರಿಂದ ಮಾಡುವುದಕ್ಕೆ ಆಗಲಿಲ್ಲ. ಇದು ಬಹಳ ಅತ್ಯಂತ ಶೋಚನಿಯವಾದಂತಹ ಸಂಗತಿ. ಇಲಾಖೆಯಲ್ಲಿ ಇರುವಂತಹ ಆಯುಕ್ತರು ಮತ್ತು ಕಾರ್ಯದರ್ಶಿಯವರು ಯಾವ ರೀತಿ ಕೆಲಸವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ ಎಂಬುದನ್ನು ತಾವು ಗಮನಿಸಬಹುದು. ದಯಮಾಡಿ ಯಾವ ಸಮಯದೊಳಗೆ 1997ರ ಅನುದಾನಿತ ಪರೀಕ್ಷರಣೆಯನ್ನು ಮಾಡಿ ಈ ಸೌಲಭ್ಯಗಳನ್ನು ನೌಕರರಿಗೆ ಒದಗಿಸುತ್ತಾರೆ ಎಂಬುದನ್ನು ಹಾಗೂ ಜೊತೆಗೆ 6ನೇ ವೇತನ ಆಯೋಗದ ಶಿಫಾರಸ್ಸು ಎಲ್ಲಾ ಇಲಾಖೆಗಳಿಗೂ ಈಗಾಗಲೇ ಜಾರಿಯಾಗಿ ಅವರೆಲ್ಲರೂ ಹೊಸ ವೇತನವನ್ನು ತೆಗೆದುಕೊಳ್ಳುತ್ತಿದ್ದಾರೆ ಸರ್ಕಾರಿ ಐ.ಟಿ.ಐ. I.T.I (Industrial Training Institute) ಸಿಬ್ಬಂದಿಯವರು ಸಹ ಹೊಸ ವೇತನವನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಅನುದಾನಿತ ಐ.ಟಿ.ಐ. ಸಿಬ್ಬಂದಿಯವರಿಗೆ ಇನ್ನೂ 6ನೇ ವೇತನ ಆಯೋಗದ ಶಿಫಾರಸ್ಸಿನ ವೇತನ ನಿಗದಿಯಾಗಿಲ್ಲ. ಆದ್ದರಿಂದ. ದಯಮಾಡಿ ಈ ಹೊಸ ವೇತನವನ್ನು ಯಾವ ಸಮಯದೊಳಗೆ ಒದಗಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ ಎಂಬ ಈ ಎರಡೂ ವಿಷಯಗಳಿಗೆ ಸಂಬಂಧಪಟ್ಟಂತೆ ಸ್ಪಷ್ಟವಾದ ಉತ್ತರವನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತೆ, 2014-2016 ನೇ ಸಾಲಿನಲ್ಲಿ ಸರ್ಕಾರ ಆದೇಶ ಮಾಡಿ ಹಲವಾರು ಸವಲತ್ತುಗಳನ್ನು ಸುಮ್ಮಾರು 196 ಅನುದಾನಿತ ಐ.ಟಿ.ಐ. ಗಳಿಗೆ ಕೊಟ್ಟಿದೆ. ನಾನು ಮಾನ್ಯ ಸದಸ್ಯರು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇನೆ. 2014 ಮತ್ತು 2016ರಲ್ಲಿ ಆದೇಶವಾದ ನಂತರ ಇದನ್ನು revision ಮಾಡಬೇಕಾದರೆ ಇಷ್ಟು ಸಮಯದ ಅವಶ್ಯಕತೆ ಇಲ್ಲ. ಬರುವ ಮೂರು ತಿಂಗಳ ಒಳಗೆ ಇದನ್ನು revision ಮಾಡುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಈಗಾಗಲೇ ಸಾಕಷ್ಟು ರಿಯಾಯಿತಿಗಳು ಸಿಗುತ್ತಿವೆ. ಅದಕ್ಕೆ, ಕೆಲವು ರಿಯಾಯಿತಿಗಳಾದ maternal benefits, ಆ ಕೆಲಸವನ್ನು ಮಾಡುತ್ತೇವೆ. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 6ನೇ ವೇತನ ಆಯೋಗದ ಬಗ್ಗೆ ಕೇಳಿದ್ದಾರೆ. ಅದರ ಬಗ್ಗೆ ಪರಿಶೀಲಿಸಿ ಅದಕ್ಕೆ ಉತ್ತರ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ 1002+1001**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದಂತಹ ಉತ್ತರವನ್ನು ಹಾಗೂ ನನಗೆ ಬೇಕಾದ ಅಂಕಿ-ಅಂಶಗಳ ವಿವರಗಳನ್ನು ನೀಡಿದ್ದಾರೆ. ಧನ್ಯವಾದಗಳು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 991**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಬಿ.ಎಂ.ಫಾರೂಖ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಸ್ವಲ್ಪ clarification ಕೇಳಬೇಕಾಗಿದೆ. ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಸುಮಾರು ಐದು ಸಾವಿರ ಅರ್ಜಿಗಳು ಬಾಕಿ ಇವೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ ಮತ್ತು 1,104 ಅರ್ಜಿಗಳು ಭೂಮಾಪನ ಶಾಖೆಯಲ್ಲಿ ಬಾಕಿ ಇರುತ್ತವೆ ಎಂದು ತಿಳಿಸಿರುತ್ತಾರೆ. ಇದು ಇಷ್ಟು ತಡವಾಗುವುದಕ್ಕೆ ಏನು ಕಾರಣ? ಈ ಹಿಂದೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಒಂದು ವಿಶೇಷವಾದಂತಹ ಭೂ ಪರಿವರ್ತನೆ ಬಗ್ಗೆ ವಿನಾಯಿತಿ ಇತ್ತು. ಈ ಸರ್ಕಾರ ಬಂದ ನಂತರ ಒಂದು software ಅನ್ನು develop ಮಾಡಿ ಭೂ ಪರಿವರ್ತನೆಯನ್ನು ಸುಲಭವಾಗಿ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸುವ ದೃಷ್ಟಿಯಿಂದ ಮಾಡಿದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ, ಸಣ್ಣ ಸಣ್ಣ ನಿವೇಶನಗಳು i.e., either 5 or 10 cents ಇರಬಹುದು, ಇದನ್ನು conversion ಮಾಡುವುದಕ್ಕೆ ಬಹಳ ಕಷ್ಟದಲ್ಲಿದ್ದಾರೆ. ಯಾರೋ ಒಬ್ಬ ಬಡವ education loan ತೆಗೆದುಕೊಳ್ಳಬೇಕಾದರೂ ಸಹ ಅಥವಾ ಬ್ಯಾಂಕ್‌ಗೆ funding ಮಾಡಬೇಕಾದರೂ ಅದಕ್ಕೆ conversion ಆಗಿರಬೇಕು. ಈ 1,104 ಅರ್ಜಿಗಳು ಬಾಕಿ ಆಗುವುದಕ್ಕೆ ಕಾರಣ ಏನು? ಅದಲ್ಲದೇ, ನನಗೆ ತಿಳಿದ ಮಟ್ಟಿಗೆ ಸುಮಾರು ಮೂರು ಸಾವಿರದಿಂದ ನಾಲ್ಕು ಸಾವಿರ ಅರ್ಜಿಗಳನ್ನು ಈ ಸಮಸ್ಯೆಯಿಂದ ಅವರು ಅದನ್ನು ಫೈಲ್ ಮಾಡುವುದಕ್ಕೆ ಆಗುತ್ತಿಲ್ಲ. ಈ ಸಮಸ್ಯೆಯಿಂದ ಸ್ವಲ್ಪ

ಮಟ್ಟಿಗಾದರೂ ಪಾರಾಗುವುದಕ್ಕೆ ಈ ಹಿಂದೆ ಯಾವುದು ಚಾಲ್ತಿಯಲ್ಲಿತ್ತು, at least for time-being ಅದನ್ನಾದರೂ ಸಹ ಮುಂದುವರಿಸಬೇಕು. ಆಕಾರ್‌ಬಂದ್ ಮತ್ತು RTC (Records of rights, Tenancy and Crops information) ಗೆ ಅದು match ಆಗುತ್ತಿಲ್ಲ. ಇದನ್ನು Software ತೆಗೆದುಕೊಳ್ಳುತ್ತಿಲ್ಲ. At least, till this problem is rectified, ಹಳೆಯ ಪದ್ಧತಿಯನ್ನು ಮುಂದುವರಿಸಿ ಅದನ್ನು ಮಾಡಬೇಕು.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಇದು ಏನು ಆಗುತ್ತಿದೆ ಎಂದರೆ, 11e sketch ಸಿಗಬೇಕಾದರೆ ಆಕಾರ್‌ಬಂದ್ ಮತ್ತು ಪಹಣಿ 3 ಮತ್ತು 9 ರಲ್ಲಿ, if there is any difference in extend of land and ownership, ಈ ತೊಂದರೆ ಬರುತ್ತದೆ. ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಂಗಲ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಇತ್ತು. ಅದು ಯಾವಾಗ ಎಂದರೆ, ಅವರಿಗೆ Madras Province ನಲ್ಲಿ ಈ benefit ಇತ್ತು. ಆದರೆ, the Karnataka Land Revenue Act, 1964 ಬಂದ ನಂತರ ಈ ಅಡಂಗಲ್‌ನ್ನು ಯಾರು ನೋಡುತ್ತಿಲ್ಲ. ಏಕೆಂದರೆ, it has become redundant. ಅದಕ್ಕೆ ಕೆಲವು ಬಾರಿ records verify ಮಾಡುವುದಕ್ಕೆ ಅದರ ಉಪಯೋಗವನ್ನು ನಾವು ತೆಗೆದುಕೊಳ್ಳುತ್ತೇವೆ. ಹಾಗಾಗಿ, ಮುಖ್ಯವಾಗಿ ನಾವೀಗ ಮಂಗಳೂರು, ಶಿವಮೊಗ್ಗ ಮತ್ತು ಮೈಸೂರಿನಲ್ಲಿ UPOR (Urban Property Ownership Records) ಎಂದು ತಂದಿದ್ದೇವೆ. ಅದರಲ್ಲಿ ಈಗ ಸರ್ವೇ ಕೆಲಸ ನಡೆಯುತ್ತಿದೆ. ಈಗಾಗಲೇ ಮಂಗಳೂರಿನಲ್ಲಿ 19,274 final PR cards ರೆಡಿ ಇದೆ. ಜನವರಿ 01ರ ನಂತರ, without PR cards property registration ಮಾಡುವುದಕ್ಕೆ ಕಷ್ಟ ಆಗುತ್ತದೆ. ಇದು ಇದ್ದರೆ 11E sketchನ ಅವಶ್ಯಕತೆ ಇಲ್ಲ. 11E sketch ಬೇಕಾದರೆ, ಅದು mismatch ಆಗಬಾರದು. ಅದಕ್ಕೆ ಒಂದು ತಂಡವನ್ನು ಮಾಡಿದ್ದೇವೆ, war footing ನಲ್ಲಿ ಕೆಲಸ ಮಾಡುವುದಕ್ಕೆ Assistant Commissioner, ADLR (Assistant Director Land Records) Tahsildar. ಅಷ್ಟೇ ಅಲ್ಲ, ಪಹಣಿಗಳಲ್ಲಿ mismatch ಇದ್ದರೆ, ಅದನ್ನು ಸರಿಪಡಿಸುವ ಅಧಿಕಾರವನ್ನು ತಹಶೀಲ್ದಾರ್‌ಗೆ ಕೊಟ್ಟಿದ್ದೇವೆ. ಹಾಗಾಗಿ, ಈ mismatch ನಿಂದ ಮಾಡುವುದಕ್ಕೆ ಆಗುತ್ತಿಲ್ಲ. ಉದಾಹರಣೆಗೆ 6 ಎಕರೆ ಲ್ಯಾಂಡ್ ಇರುತ್ತದೆ, ಅದಕ್ಕೆ 10 ಜನ ಮಾಲೀಕರು ಇರುತ್ತಾರೆ, ನಾವು 'first come, first serve' ಎಂದು ಕೊಡುತ್ತಾ ಹೋದರೆ, ಕೊನೆಯಲ್ಲಿ ಇರುವವರ ಪರಿಸ್ಥಿತಿ ಏನು? ಜಮೀನು 5 ಎಕರೆ 30 ಗುಂಟೆಯಾದರೆ, ಉಳಿದ 10 ಗುಂಟೆ ಜಮೀನನ್ನು ಎಲ್ಲಿಂದ ತರಬೇಕು? ಹಾಗಾಗಿ, 11E sketch ಅವಶ್ಯಕತೆ ಇದೆ. ಆದರೆ, ಈ UPOR

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಜಾರಿಗೆ ಬಂದ ನಂತರ ಈ ಸಮಸ್ಯೆ ಮಂಗಳೂರಿನಲ್ಲಿ ಇರುವುದಿಲ್ಲ. ಮಂಗಳೂರು ಮತ್ತು 32 ಹಳ್ಳಿಗಳಲ್ಲಿ ಇದನ್ನು ಜಾರಿಗೆ ತರುತ್ತಿದ್ದೇವೆ.

**ಪ್ರಶ್ನೆ ಸಂಖ್ಯೆ ~~119~~ ~~(~~995~~)~~**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಕೊಡಗು ವಿಕೋಪಕ್ಕೆ ತುತ್ತಾದಂತಹ ಸಂದರ್ಭದಲ್ಲಿ ಕೊಡಗು ಜನರ ಪರವಾಗಿ ನಿಂತು ಕೆಲಸ ಮಾಡಿದ್ದಾರೆ. ನಾನು ಅದಕ್ಕೆ ಮಾನ್ಯ ಸಚಿವರಿಗೆ ಸದನದ ಮುಖಾಂತರ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜೊತೆಗೆ ಮಾನ್ಯ ಸಚಿವರು ತಾತ್ಕಾಲಿಕವಾಗಿ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಿಕೊಟ್ಟಿದ್ದಾರೆ. ಮಾನ್ಯ ಸಚಿವರು 840 ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದಾರೆ. ಅದು ತೀರ್ಮಾನವೂ ಸಹ ಆಗಿದೆ. ಅದನ್ನು ಅದಷ್ಟು ಬೇಗ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಜೂನ್ ತಿಂಗಳಿನಲ್ಲಿಯೇ ಮಳೆ ಪ್ರಾರಂಭವಾಗುತ್ತದೆ. ಇನ್ನೊಂದು ವಿಷಯವೆಂದರೆ, ಭೂ ಕುಸಿತದಿಂದ ಕೃಷಿ ಭೂಮಿ ಹಾನಿಗೆ ಪ್ರತಿ ಹೆಕ್ಟೇರ್‌ಗೆ ರೂ.37,500/- ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದು ಬಹಳ ಕಡಿಮೆ ಆಗುತ್ತದೆ, ಆದ್ದರಿಂದ, ಹೇಗಾದರೂ ಮಾಡಿ ಅದನ್ನು ಹೆಚ್ಚು ಮಾಡುವಂತಹ ವ್ಯವಸ್ಥೆ ಮಾಡಿ ಕೊಡಬೇಕೆಂದು ಅಥವಾ ಪರ್ಯಾಯವಾಗಿ ತುಂಬಾ ಪೈಸಾರಿ ಜಾಗಗಳು ಇವೆ. ಹಾಗೂ ಜಾಗಗಳನ್ನು occupy ಮಾಡಿಕೊಂಡಿರುವಂಥದ್ದು ಇವೆ. ಅದನ್ನು ಬಡವರಿಗೆ ಹಂಚಿದರೆ ಒಳ್ಳೆಯದು. ಏಕೆಂದರೆ, ಕಾಫಿ ತೋಟವನ್ನು ಕಳೆದು ಕೊಂಡವರಿಗೆ ಆ ಜಾಗವನ್ನು ಕೊಟ್ಟರೆ ಮತ್ತೆ ಅವರು ಅವರ ಜೀವನೋಪಾಯವನ್ನು ಕಂಡುಕೊಳ್ಳುತ್ತಾರೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಬಂದು ಅದಕ್ಕೆ ಅಡಿಗಲ್ಲು ಹಾಕಿದ್ದಾರೆ. ಪ್ರತಿ ಮನೆಗೆ ರೂ.9.85 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸುಮಾರು 840 ಮನೆಗಳನ್ನು ನಿರ್ಮಾಣ ಮಾಡಲಾಗುವುದು. ಇದಕ್ಕೆ ಬೇಕಾದಂತಹ ಜಮೀನನ್ನು ಕೊಟ್ಟಿದ್ದೇವೆ. ಹಾಗಾಗಿ, ಆದಷ್ಟು ಬೇಗನೆ ಗುಣಮಟ್ಟದ ಕೆಲಸದ ಆಗಬೇಕು. ಇದು ನಮ್ಮ ಇಲಾಖೆಯ ಮೂಲಕ ಕೆಲಸ ಆಗುತ್ತಿದೆ. ಈ ಪರಿಹಾರ NDRF

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(National Disaster Relief Fund) ಗೆ ಬರುತ್ತದೆ. ಅದಕ್ಕೆ ಭಾರತ ಸರ್ಕಾರದ guidelines ಸಹ ಇದೆ.

(567)19-12-2018(2-00)ಎಂವಿ-ಜಿಆರ್

~~(ಸಭಾಪತಿಯವರ ಉಪಸ್ಥಿತಿ)~~

**ಶ್ರೀ ಆರ್.ವಿ.ದೇಶಪಾಂಡೆ (ಮುಂದು...):-**

ಈಗ ಒಂದು ಎಕರೆ ಕಾಫಿ ಪ್ಲಾಂಟೇಶನ್‌ಗೆ 18,000/- ರೂಪಾಯಿಗಳು. ಅದನ್ನು ಎರಡು ಎಕರೆಗೆ ಮಾತ್ರವೆಂದು ನಿರ್ಬಂಧಿಸಲಾಗಿದೆ. ಆದರೆ, ಮಾನ್ಯ ಸದಸ್ಯರು 37,500/- ರೂಪಾಯಿಗಳು ಎಂದು ಹೇಳಿದ್ದಾರೆ. ನಾವು ಈ ವಿಷಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು, ಇದರ ಸ್ಕೇಲ್ ಅನ್ನು ಹೆಚ್ಚು ಮಾಡಬೇಕೆಂದು ಕೇಳಿದ್ದೇವೆ. ಬಹುತೇಕ ಕೇಂದ್ರ ಸರ್ಕಾರ 1546 ಕೋಟಿ ರೂಪಾಯಿಗಳನ್ನು ಕೊಡಗು ಮತ್ತು ಮಲೆನಾಡು ಜಿಲ್ಲೆಗಳಿಗೆ ಅತಿವೃಷ್ಟಿಯಿಂದ ನಿರ್ಮಾಣವಾಗಿರುವ ಸಮಸ್ಯೆಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಸರ್ಕಾರ ಸಹ ಜಿಲ್ಲಾಧಿಕಾರಿಗಳ ಕಡೆಯಿಂದ ಹಣವನ್ನು ಬಿಡುಗಡೆ ಮಾಡುತ್ತಿದೆ. ಯಾವ್ಯಾವ ಕಾಫಿ ಪ್ಲಾಂಟೇಶನ್‌ಗೆ ಮತ್ತು ತೋಟಗಾರಿಕೆಗೆ ಹಾನಿಯಾಗಿದೆ ಎಂದು ನೋಡಿಕೊಂಡು, ಮುಂದಿನ ಏಳು ದಿನಗಳಲ್ಲಿ ಅವರ ಖಾತೆಗೆ D.B.T., (Direct Benefit Transfer) ಮುಖಾಂತರ ಹಣ ಜಮಾ ಆಗುತ್ತದೆ. ಅದು ಈಗಾಗಲೇ ಪ್ರಾರಂಭವಾಗಿದೆ. ಅದನ್ನು ಏಳು ದಿವಸಗಳಲ್ಲಿ ಮುಗಿಸುತ್ತೇವೆ. ಈಗಾಗಲೇ ಡೇಟಾ ಎಂಟ್ರಿ ಮಾಡುವ ಕಾರ್ಯ ಪ್ರಾರಂಭವಾಗಿದೆ. ಅಲ್ಲಿ ಮತ್ತೆ ಇನ್ನೇನಾದರೂ ಸಮಸ್ಯೆಗಳಿದ್ದಲ್ಲಿ, ಅದನ್ನು ನಮ್ಮ ಗಮನಕ್ಕೆ ತಂದರೆ, ಅದಕ್ಕೆ ನಾವು ಪರಿಹಾರವನ್ನು ಕಂಡುಹಿಡಿಯುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಚುಕ್ಕೆ ಪ್ರಶ್ನೆ ಸಂಖ್ಯೆ: 1080)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಕೇಳಿರುವ ಪ್ರಶ್ನೆಗೆ ಉತ್ತರ ನೀಡಲು ಸರ್ಕಾರವು ಸಮಯಾವಕಾಶವನ್ನು ಕೋರಿದೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಚುಕ್ಕೆ ಪ್ರಶ್ನೆ ಸಂಖ್ಯೆ: 164)**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೆ, ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ, ಅಲ್ಲಿನ ಎಷ್ಟು ಕಾಫಿ ಪ್ಲಾಂಟೇಶನ್‌ಗೆ ಹಾನಿಯಾಗಿದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್., ಅಡಿಯಲ್ಲಿ 128.00 ಕೋಟಿ ರೂಪಾಯಿಗಳನ್ನು ಕಾಫಿ ಪ್ಲಾಂಟೇಶನ್‌ಗೆ ಪರಿಹಾರ ಕೊಡುವುದಕ್ಕೆ ಮನವಿ ಮಾಡಿದ್ದೆವು. ಆದರೆ, ಕೇಂದ್ರ ಸರ್ಕಾರ 126.71 ಕೋಟಿ ಹಣವನ್ನು ಮಂಜೂರು ಮಾಡಿದೆ. ಬಹುತೇಕ ಶೇಕಡಾ 90ರಷ್ಟು ಹಣ ಕೇಂದ್ರ ಸರ್ಕಾರದಿಂದ ಮಂಜೂರಾಗಿದೆ. ಈಗ ಅಲ್ಲಿನ ನಷ್ಟ ಶೇಕಡಾ 33ರ ಮೇಲೆ ಇರಬೇಕು. ಅದರಲ್ಲಿ ಕೊಡಗು ಜಿಲ್ಲೆಗೆ 60 ಕೋಟಿ ರೂಪಾಯಿ ಬರುತ್ತಿದೆ. ಒಟ್ಟು ಹಣ ಬರುವುದು 99.76 ಕೋಟಿ ರೂಪಾಯಿಗಳು. ಆದರೆ, ಕಾಫಿ ಪ್ಲಾಂಟ್‌ಗೆ

ಬರುವುದು 64 ಕೋಟಿ ರೂಪಾಯಿಗಳು. ಈಗಾಗಲೇ ಡೇಟಾ ಎಂಟ್ರಿ ಪ್ರಾರಂಭವಾಗಿದೆ ಮತ್ತು ಸ್ವಲ್ಪ ಹಣವನ್ನು D.B.T., ಮುಖಾಂತರ ಬಿಡುಗಡೆ ಮಾಡಿದ್ದೇವೆ. ಬರುವ ಏಳು ದಿನಗಳಲ್ಲಿ ಎಲ್ಲಾ ಎಂಟು ಜಿಲ್ಲೆಗಳಲ್ಲಿ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಏನು ರೈತರಿಗೆ ಪರಿಹಾರ ಸಿಗಬೇಕು, ಈಗಾಗಲೇ ಆ ಹಣವನ್ನು D.B.T., ಮುಖಾಂತರ ನೀಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಎಲ್ಲೆಲ್ಲಿ ಡೇಟಾ ಎಂಟ್ರಿ ಆಗಿಲ್ಲ, ಅಲ್ಲಿ ಡೇಟಾ ಎಂಟ್ರಿ ಮಾಡಿ, ಇನ್ನು ಏಳು ದಿನಗಳಲ್ಲಿ ಸಂಪೂರ್ಣ ಹಣವನ್ನು ಪಾವತಿಸಲಾಗುವುದು.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅಂಕಿ-ಅಂಶವನ್ನು ಕೊಟ್ಟಿದ್ದಾರೆ. ಈಗ ಸಂಕಷ್ಟಕ್ಕೀಡಾಗಿರುವ ಕಾಫಿ ತೋಟದ ಮಾಲೀಕರಿಗೆ ಪರಿಹಾರ ನೀಡಲಾಗಿದೆಯೇ ಎಂದು ಕೇಳಿರುವುದಕ್ಕೆ, ಮಾನ್ಯ ಸಚಿವರು ಎನ್.ಡಿ.ಆರ್.ಎಫ್., ಅಡಿಯಲ್ಲಿ 128.00 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಸಲ್ಲಿಸಿರುವುದಕ್ಕೆ, ಕೇಂದ್ರ ಸರ್ಕಾರದಿಂದ 126.71 ಕೋಟಿ ಅನುದಾನ ಬಿಡುಗಡೆಯಾಗಿದೆ. ಆ ಹಣ ಇತರೇ ಜಿಲ್ಲೆಗಳಿಗೂ ಕೂಡ ಇದೆ ಎಂದು ಹೇಳಿದ್ದಾರೆ. ನಾನು ನಿನ್ನೆಯ ದಿವಸ ಕೂಡ ಇದರ ಬಗ್ಗೆ ಮಾತನಾಡಿದ್ದೇನೆ. ಇಲ್ಲಿ ಏನಾಗಿದೆ ಎಂದರೆ, ಭೂಕುಸಿತದಿಂದ ಹಾನಿಗೊಳಗಾದ ಪ್ರದೇಶಗಳು ಫಲವತ್ತತೆಯನ್ನು ಕಳೆದುಕೊಂಡಿದ್ದು, ಮುಖ್ಯವಾಗಿ ಮಣ್ಣಿನ ಸವಕಳಿ ಹಾಗೂ ಭೂಮಿಯ ಮೇಲ್ಪದರದ ಹಾನಿಯಿಂದ ಕಾಫಿ ಕೃಷಿ ಅಸಾಧ್ಯವೆನಿಸುವ ಪರಿಸ್ಥಿತಿಯಲ್ಲಿದ್ದು, ಕನಿಷ್ಟ ಮುಂದಿನ ಹತ್ತು ವರ್ಷಗಳ ಕಾಲ ಇಲ್ಲಿ ಇಳುವರಿ ಪಡೆಯುವುದು ಕಷ್ಟಸಾಧ್ಯವಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ತಾವು ಉಪ ಪ್ರಶ್ನೆ ಕೇಳಿ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೆ, ಕೊಡಗು ಜಿಲ್ಲೆಯಲ್ಲಿ ಇನ್ನು ಹದಿನೈದು ವರ್ಷದವರೆಗೆ ಏನನ್ನೂ ಬೆಳೆಯುವುದಕ್ಕೆ ಆಗುವುದಿಲ್ಲ. ಕನಿಷ್ಟ ಎಂದರೆ ಒಂದು ಎಕರೆಯಲ್ಲಿ 50 ಕೆಜಿಯ ಸುಮಾರು 30 ರಿಂದ 40 ಚೀಲ ಕಾಫಿ ಬೆಳೆಯನ್ನು ಪಡೆಯುತ್ತಿದ್ದೇವೆ. ಈಗಿನ ದರದ ಪ್ರಕಾರ ಒಂದು ಎಕರೆಗೆ 95,000 ರೂಪಾಯಿಗಳು ಬರುತ್ತಿತ್ತು. ಈಗ ಆ 95,000 ರೂಪಾಯಿಗಳು ಹೋಗಿ, ನಮ್ಮ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್.ನಲ್ಲಿ ನಮಗೆ ಸಿಗುವ ಹಣ ಸುಮಾರು 37,000 ರೂಪಾಯಿಗಳು ಎಂದು ಹೇಳಿದರೆ, ಒಂದು ಎಕರೆಗೆ ಕೇವಲ 15,000 ದಿಂದ 16,000 ರೂಪಾಯಿಗಳು ಸಿಗುತ್ತದೆ. ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ, ಬಹುಶಃ ಆರು ಪಂಚಾಯಿತಿಗಳಲ್ಲಿ ಕೆಲವರಿಗೆ 10, 20, 30 ಎಕರೆಯಷ್ಟು ತೋಟ ಹಾಳಾಗಿ ಹೋಗಿದೆ. ಇದರ ಪ್ರಕಾರ ಅವರಿಗೆ ಒಂದು ಎಕರೆಗೆ 15,000 ರೂಪಾಯಿಗಳಂತೆ 37,000 ರೂಪಾಯಿಗಳನ್ನು ಕೊಟ್ಟರೆ ಅದು ಯಾವುದಕ್ಕೂ ಸಹ ಸಾಕಾಗುವುದಿಲ್ಲ. ಹಾಗಾಗಿ ನಾನು ಆ ಬೆಳೆಗಾರರ ಪರವಾಗಿ, ಮಾನ್ಯ ಮಂತ್ರಿಗಳಿಗೆ ಹೆಚ್ಚಿನ ಅನುದಾನ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ. ನಾನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇದಕ್ಕೆ ಕನಿಷ್ಠ ಪಕ್ಷ 50,000 ರೂಪಾಯಿಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದು ಅಲ್ಲದೆ ಈ ಫಸಲು ಬರಬೇಕಾದರೆ, ನಾವು ಇನ್ನು ಹದಿನೈದು ವರ್ಷ ಕಾಯಬೇಕಾಗಿದೆ. ಹಾಗಾಗಿ ಸರ್ಕಾರ ಇದನ್ನು ಮನಗಂಡು ಮುಂದಿನ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೋರುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ, ನನಗೂ ಸಹಾನುಭೂತಿ ಇದೆ. ನಾನು ಅಲ್ಲಿಗೆ ಭೇಟಿ ನೀಡಿದ್ದೇನೆ. ಅಲ್ಲಿ ನಿಜವಾಗಿಯು ಕಷ್ಟವಿದೆ. ಆದರೆ ಏನಾಗುತ್ತದೆಂದರೆ, ಯಾವುದೇ ಸರ್ಕಾರವಾಗಲಿ, ಅದು ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಕಾನೂನಿನ ಚೌಕಟ್ಟಿನಲ್ಲಿ ನಿಯಮಗಳನ್ನು ಹಾಕಿಕೊಂಡು ಕೆಲಸವನ್ನು ಮಾಡುತ್ತಿದ್ದೇವೆ. ಎನ್.ಡಿ.ಆರ್.ಎಫ್.ನಿಂದ ಏನು ಹಣ ಬರುತ್ತಿದೆ, ಅದು ಶೇಕಡಾ 100ರಷ್ಟು ಭಾರತ ಸರ್ಕಾರದ ಹಣ. ಈ ಸಬ್ಸಿಡಿ ಹಣ ಬರುವುದರಿಂದ ಎಸ್.ಡಿ.ಆರ್.ಎಫ್.,ನಲ್ಲಿ ನಮ್ಮ ಕೊಡುಗೆ ಇರುತ್ತದೆ. ಆದುದರಿಂದ ಭಾರತ ಸರ್ಕಾರ ಮತ್ತು ಎನ್.ಡಿ.ಆರ್.ಎಫ್.,ನ ನಿಯಮಗಳು ಏನಿವೆ, ಅದರ ಪ್ರಕಾರ ಬರುತ್ತದೆ. ಆದರೆ ಎಷ್ಟೆ ನಷ್ಟವಾದರೂ ಕೂಡ ಪರಿಹಾರವನ್ನು ಎರಡು ಎಕರೆಗೆ ಮಾತ್ರ ಎಂದು ನಿರ್ಬಂಧಿಸಲಾಗಿದೆ. ಅದು ಭತ್ತ ಇರಬಹುದು, ತೋಟಗಾರಿಕೆ ಬೆಳೆ ಇರಬಹುದು ಅಥವಾ ಕಾಫಿ ಇರಬಹುದು. ಹಾಗಾಗಿ ಇದರಲ್ಲಿ ಎಷ್ಟು ಸಾಧ್ಯವಿದೆ, ಅಷ್ಟನ್ನು ಪ್ರಯತ್ನ ಮಾಡಿ, ಆದಷ್ಟು ಬೇಗ ಆ ಸಂತ್ರಸ್ತರಿಗೆ ತಲುಪಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲಿನ ಮೂಲಭೂತ ಸೌಕರ್ಯಗಳು ಸಾಕಷ್ಟು ಹಾಳಾಗಿವೆ. ಅದಕ್ಕೂ ಸಹ ರಾಜ್ಯ ಸರ್ಕಾರ ಎರಡು ಜಿಲ್ಲೆಗಳಿಗೆ ಇನ್ನೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ಆ ಕೆಲಸವನ್ನು ಸಹ ಪ್ರಾರಂಭ ಮಾಡಿದ್ದೇವೆ. ಸದಸ್ಯರಾದ ಮಾನ್ಯ ಸುನಿಲ್ ಸುಬ್ರಮಣಿಯವರು ಹೇಳಿದ ಹಾಗೆ ಪುನರ್ ವಸತಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಇದು ಸ್ವಲ್ಪ ಅನಾವಶ್ಯಕ, I don't have a false hope. ಹಾಗಾಗಿ ಇದು ಕಷ್ಟ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಚುಕ್ಕೆ ಪ್ರಶ್ನೆ ಸಂಖ್ಯೆ: 232)**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮ ದೇವಸ್ಥಾನ ಅತ್ಯಂತ ಪುರಾತನ ದೇವಸ್ಥಾನವಾಗಿದ್ದು, ಅಮಾವಾಸ್ಯೆ ಮತ್ತು ಹುಣ್ಣಿಮೆ ಸಮಯದಲ್ಲಿ ಲಕ್ಷಾಂತರ ಯಾತ್ರಾರ್ಥಿಗಳು ಬರುತ್ತಿದ್ದು, ಅವರಿಗೆ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಸ್ನಾನಗೃಹ, ಶುದ್ಧ ಕುಡಿಯುವ ನೀರು ಹಾಗೂ ತಂಗಲು ಕೊಠಡಿಗಳ ವ್ಯವಸ್ಥೆ ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಹಾಗೂ ದೇವಸ್ಥಾನದ ಪರಿಸರದ ಶುಚಿತ್ವ ಹಾಳಾಗಿ ಹೋಗಿರುವ ವಿಚಾರವಾಗಿ ನಾನು ಸನ್ಮಾನ್ಯ ಸಚಿವರ ಗಮನಕ್ಕೆ ತಂದಿದ್ದೆನು. ಅದಕ್ಕೆ ಅವರು ವಿವರವಾದ ಉತ್ತರವನ್ನು ನೀಡಿದ್ದಾರೆ. ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ, ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಗೋವಾ ಈ ರಾಜ್ಯಗಳ ಒಂದು ಪ್ರಮುಖ ದೇವಸ್ಥಾನವಾಗಿದೆ. ಇಲ್ಲಿಗೆ ಕೇವಲ ಉತ್ತರ ಕರ್ನಾಟಕ ಅಷ್ಟೆ ಅಲ್ಲ, ನಾಲ್ಕೈದು ರಾಜ್ಯಗಳಿಂದ ಯಾತ್ರಿಕರು ಬರುತ್ತಿದ್ದು, ವರ್ಷದ ಹನ್ನೊಂದು ತಿಂಗಳು ಅಲ್ಲಿ ಜಾತ್ರೆ ಉತ್ಸವಗಳು ನಡೆಯುವಂತಹ ಅತ್ಯಂತ ದೊಡ್ಡ ಮತ್ತು ಸುಮಾರು ಮೂರ್ನಾಲ್ಕು ಶತಮಾನಗಳ ಹಿಂದಿನ ಪ್ರಾಚೀನ ದೇವಸ್ಥಾನವಾಗಿದೆ. ಕದಂಬರು, ರಾಷ್ಟ್ರಕೂಟರು ಮತ್ತು ಚಾಲುಕ್ಯರು ಇದನ್ನು ಜೀರ್ಣೋದ್ಧಾರ ಮಾಡಿರುವಂತಹ ಒಂದು ಐತಿಹಾಸಿಕ ದೇವಸ್ಥಾನವಾಗಿದೆ.

ನಾನು ಮಾನ್ಯ ಸಚಿವರಿಗೆ ಮೂರ್ನಾಲ್ಕು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ, ಮೂಲಭೂತ ಸೌಕರ್ಯಗಳ ಕೊರತೆಯ ಜೊತೆಗೆ ಶುಚಿತ್ವ ಹಾಳಾಗಿರುವುದು ಗಮನಕ್ಕೆ ಬಂದಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಲಕ್ಷಾಂತರ ಜನ ಭಕ್ತರು ಬರುವಂತಹ ಇಷ್ಟು ದೊಡ್ಡ ದೇವಸ್ಥಾನದಲ್ಲಿ ಒಟ್ಟು ನೂರು ಶೌಚಾಲಯಗಳಿವೆ. ನಾವು ಸ್ವಚ್ಛ ಭಾರತ ಮತ್ತು ಶುಚಿತ್ವದ ಬಗ್ಗೆ ಮಾತನಾಡುತ್ತೇವೆ. ಒಂದು ದಿವಸಕ್ಕೆ ಸುಮಾರು ಐವತ್ತು ಸಾವಿರ ಜನ ಭೇಟಿ ಕೊಡುವಂತಹ ಈ ದೇವಸ್ಥಾನದಲ್ಲಿ 100 ಅಥವಾ 200 ಶೌಚಾಲಯಗಳು ಇದ್ದರೆ, ಆ ದೇವಸ್ಥಾನದಲ್ಲಿ ಸ್ವಚ್ಛತೆಯನ್ನು ಕಾಪಾಡಬಹುದೆ ಎನ್ನುವುದು ನನ್ನ ಮೂಲ ಪ್ರಶ್ನೆ. ಇವತ್ತು ಅಲ್ಲಿ ಶೌಚಾಲಯಗಳು ಮತ್ತು ಸ್ನಾನಗೃಹಗಳ ಕೊರತೆ ಇದೆ. ಬರುವಂತಹ ಭಕ್ತರಿಗೆ ಉಳಿದುಕೊಳ್ಳುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಇಷ್ಟು ದೊಡ್ಡ ದೇವಸ್ಥಾನದಲ್ಲಿ ಶೌಚಾಲಯಗಳ ಕೊರತೆಯನ್ನು ನೀಗಿಸುವಲ್ಲಿ ಸರ್ಕಾರದ ಕ್ರಮ ಏನು ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ನಾನು ಕೇಳುವ ಪ್ರಶ್ನೆ ಇಷ್ಟೆ, ಈ ದೇವಸ್ಥಾನದಿಂದ ಸುಮಾರು ವರ್ಷಗಳಿಂದ 18 ರಿಂದ 20 ಕೋಟಿ ರೂಪಾಯಿಗಳಷ್ಟು ಹಣ ಭಕ್ತರಿಂದ ಕಾಣಿಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪದಲ್ಲಿ ತಮ್ಮ ಇಲಾಖೆಗೆ ಬರುತ್ತಿದೆ. ಮುಂದುವರೆದು ನನ್ನ ಪ್ರಶ್ನೆಗೆ ಈ ರೀತಿ ಉತ್ತರವನ್ನು ಹೇಳಿದ್ದಾರೆ. ಆದರೆ, ಅಲ್ಲಿ ಬಂದಂತಹ ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. 2015-16ನೇ ಸಾಲಿನಲ್ಲಿ ಸುಮಾರು 16 ಕೋಟಿ ರೂಪಾಯಿಗಳನ್ನು, 2016-17ನೇ ಸಾಲಿನಲ್ಲಿ ಸುಮಾರು 27 ಲಕ್ಷ ರೂಪಾಯಿಗಳನ್ನು ಹಾಗೂ 2017-18ನೇ ಸಾಲಿನಲ್ಲಿ ಕೇವಲ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ನನ್ನ ವಿಚಾರ ಇಷ್ಟೆ. ಉತ್ತರ ಕರ್ನಾಟಕದಲ್ಲಿ ಇರುವಂತಹ ಈ ದೇವಸ್ಥಾನಕ್ಕೆ ಸರ್ಕಾರಗಳ ತಾರತಮ್ಯ ಏಕೆ? ದಕ್ಷಿಣ ಕನ್ನಡದಲ್ಲಿ ಇರುವಂತಹ ದೇವಸ್ಥಾನಗಳಿಗೆ ಕೊಡುವಂತಹ ಅನುದಾನದಲ್ಲಿ ಅತ್ಯಂತ ಯಥೇಚ್ಛವಾದ ಹಣವನ್ನು ಸವದತ್ತಿ ಯಲ್ಲಮ್ಮ ದೇವಸ್ಥಾನಕ್ಕೆ ಕೊಡಬೇಕೆನ್ನುವ ವಿಚಾರವನ್ನು ಇವತ್ತು ಬೆಳಗಾವಿಯಲ್ಲಿ ನಡೆಯುವಂತಹ ಸದನದಲ್ಲಿ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

~~(ಮುಂದು...)~~

(568)19-12-2018(02-10)ಎಲ್‌ಎಲ್-ಜಿಆರ್

~~(ಸಭಾಪತಿಯವರ ಉಪಸ್ಥಿತಿ)~~

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಮುಂದುವರೆದಿದ್ದು...):-

ತಾವು ಉತ್ತರ ಕರ್ನಾಟಕ ಭಾಗದಲ್ಲಿರುವ ಬೀದರ್ ಜಿಲ್ಲೆಯ ಹೆಮ್ಮೆಯ ಸುಪುತ್ರರು. ತಮ್ಮಿಂದ ನಮಗೆ ಬಹಳ ನಿರೀಕ್ಷೆ ಇದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರವೂ ಸಹ, ಮೊನ್ನೆಯ ದಿವಸ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಶೃಂಗೇರಿ ದೇವಸ್ಥಾನಕ್ಕೆ 15 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದ್ದಾರೆ. ಶ್ರೀ ಆದಿಚುಂಚನಗಿರಿ ಮಠಕ್ಕೆ 5 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದ್ದಾರೆ.

**ಸಭಾಪತಿಯವರು:-** ತಮ್ಮ ಭಾಗದ ದೇವಸ್ಥಾನಕ್ಕೆ ಎಷ್ಟು ಅನುದಾನ ಬೇಕೆಂದು ಕೇಳಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ಎಡೆಯೂರು ಕ್ಷೇತ್ರಕ್ಕೆ 30 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದ್ದಾರೆ. ಆ ಅನುದಾನವನ್ನು ಏತಕ್ಕೆ ಕೊಟ್ಟಿದ್ದಾರೆಂದು ನಾನು ಕೇಳುವುದಿಲ್ಲ. ಎಲ್ಲಾ ದೇವಸ್ಥಾನಗಳಿಗೆ ಅನುದಾನ ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯ. ಆದರೆ, 'ಎಲ್ಲರ ಅಮ್ಮ ಯಲ್ಲಮ್ಮ'. ಅತ್ಯಂತ ಬಡವರ ದೇವಸ್ಥಾನ ಯಾವುದಾದರೂ ಕರ್ನಾಟಕ ರಾಜ್ಯದಲ್ಲಿದ್ದರೆ ಅದು 'ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ'. ಇಲ್ಲಿ ಮೂಲಭೂತ ಸೌಕರ್ಯಗಳಾದ ಶೌಚಾಲಯಗಳ ಕೊರತೆ ಮತ್ತು ಶುಚಿತ್ವದ ಕೊರತೆ ಇದೆ. ಎಲ್ಲಿ ನಾವು ಸ್ನಾನ ಮಾಡುತ್ತೇವೆ, ಎಲ್ಲಿ ನಾವು ಊಟ ಮಾಡುತ್ತೇವೆ ಅಲ್ಲಿ ಇವೊತ್ತಿನ ದಿವಸ ಶೌಚಾಲಯಗಳ ಕೊರತೆ ಇದ್ದರೆ ನಾವು ಸ್ವಚ್ಛತೆಯನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವೇ? ಆದುದರಿಂದ, ದಯಮಾಡಿ ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, 'ಯಲ್ಲಮ್ಮ' ದೇವರಿಗೆ 'ಇಲ್ಲಮ್ಮ' ಎಂದು ಹೇಳಬಾರದು.

**ಶ್ರೀ ರಾಜಶೇಖರ ಬಿ. ಪಾಟೀಲ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಹೇಳಿರುವಂತಹ ದೇವಾಲಯ ಸುಮಾರು 1,097 ಎಕರೆ ವಿಸ್ತೀರ್ಣದಲ್ಲಿ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಈ ದೇವಸ್ಥಾನಕ್ಕೆ ವಿಶೇಷವಾಗಿ ಮಹಾರಾಷ್ಟ್ರ ಮತ್ತು ಇಡೀ ನಮ್ಮ ರಾಜ್ಯದ ಅನೇಕ ಹಳ್ಳಿಗಳಿಂದ ಲಕ್ಷಾಂತರ ಜನ ಭಕ್ತರು ಬರುತ್ತಾರೆ. ಇವೊತ್ತಿನ ದಿವಸ ಈ ದೇವಾಲಯದ ವಿಶೇಷ ಸೇವೆ 'ಪಡವಲಗಿ ಸೇವೆ', ಈ ಬಗ್ಗೆ ತಮಗೆಲ್ಲರಿಗೂ ನನಗಿಂತಲೂ ಬಹಳ ಚೆನ್ನಾಗಿ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಪಡವಲಗಿ ತುಂಬಿಸುವುದೆಂದರೆ, ಒಂದು ಬುಟ್ಟಿಯಲ್ಲಿ ಪೂಜಾ ಸಾಮಗ್ರಿಗಳು, ಆಯಾ ಭಕ್ತರು ತಯಾರಿಸಿದಂತಹ ನೈವೇದ್ಯ ಮತ್ತು ಹುಡಿಲು ಅಕ್ಕಿಯನ್ನು ಇಟ್ಟು ದೇವರಿಗೆ ಸಲ್ಲಿಸುವುದಾಗಿದೆ. ನನ್ನ ಮಾಹಿತಿ ಪ್ರಕಾರ ಮಂಗಳವಾರ ಮತ್ತು ಶುಕ್ರವಾರ ಹುಣ್ಣಿಮೆ ದಿನಗಳಂದು ಲಕ್ಷಾಂತರ ಜನ ಭಕ್ತಾದಿಗಳು ಅಲ್ಲಿಗೆ ಬರುವಂತಹ ಸಂಪ್ರದಾಯ ಇದೆ. ಇವತ್ತೂ ಕೂಡ ಲಕ್ಷಾಂತರ ಜನ ಅಲ್ಲಿಗೆ ಬಂದಿದ್ದಾರೆಂಬ ಮಾಹಿತಿ ಇದೆ. ಇಲ್ಲಿ ವಿಶೇಷವೇನೆಂದರೆ, ಶೇಕಡ 80 ರಷ್ಟು ಭಕ್ತಾದಿಗಳು ಪಡವಲಗಿ ತುಂಬಿಸುತ್ತಾರೆ. ಅದಕ್ಕಾಗಿ ಅವರು ಆ ದೇವಸ್ಥಾನದ ಸಮೀಪ ಕಡುಬು ಮತ್ತು ಹೋಳಿಗೆ, ಕಾಯಿಪಲ್ಯೆ ಮುಂತಾದ ಅಡುಗೆ ಮಾಡಿಕೊಂಡು, ಆ ದೇವಸ್ಥಾನದ ಹೊರಗಡೆ ವಿಶಾಲವಾದಂತಹ ಜಾಗದಲ್ಲಿ ಪ್ರಸಾದ ಮಾಡಿಕೊಂಡು ವಾಪಸ್ಸು ಹೋಗುವಂತಹ ಒಂದು ಸಂಪ್ರದಾಯ ನಡೆಯುತ್ತಿದೆ.

ಇವೊತ್ತಿನ ದಿವಸ ಮಾನ್ಯ ಸದಸ್ಯರು ಸ್ವಚ್ಛತೆ ಆಗಬೇಕೆಂದು ಹೇಳಿದ್ದಾರೆ. ಅಲ್ಲಿ ಇನ್ನೂ ಕೂಡ ಸ್ವಲ್ಪ ಸುಧಾರಣೆಯಾಗಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಲಕ್ಷಾಂತರ ಜನ ಭಕ್ತಾದಿಗಳು ಬರುತ್ತಿದ್ದಾರೆ, ಅದಕ್ಕನುಗುಣವಾಗಿ ಅಲ್ಲಿ ಮೂಲಭೂತ ಸೌಕರ್ಯಗಳಿಲ್ಲವೆಂದು ಹೇಳಿದ್ದಾರೆ. ಆದರೆ, ಈ ಬಗ್ಗೆ ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಈಗಾಗಲೇ ಮಾನ್ಯ ಸದಸ್ಯರು ಅನೇಕ ಬೇಡಿಕೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಆದರೆ, ಲೋಕೋಪಯೋಗಿ ಇಲಾಖೆಯಿಂದ ಸುಮಾರು 15 ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಕಾಮಗಾರಿ ನಡೆಯುತ್ತಿದೆ. 106 ಕೋಣೆಗಳು dormitories ಈಗಾಗಲೇ ಬಳಕೆಯಲ್ಲಿವೆ. ಇನ್ನೂ 206 ಕೋಣೆಗಳ ಕೆಲಸ ನಡೆಯುತ್ತಿದ್ದು, ಅದು ಈಗ ಮುಕ್ತಾಯ ಹಂತದಲ್ಲಿದೆ. ಆದಷ್ಟು ಬೇಗನೆ ಆ ಕೋಣೆಗಳಿಗೆ ಬೇಕಾಗಿರುವ ಪೀಠೋಪಕರಣ ಮುಂತಾದ ಸೌಲಭ್ಯಗಳನ್ನು ಒದಗಿಸಿ, ಬಂದಂತಹ ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡಬೇಕಾಗಿದೆ. ಸ್ನಾನಗೃಹಗಳ ಬಗ್ಗೆ ಮಾನ್ಯ ಸದಸ್ಯರು ಬೆಳಕು ಚೆಲ್ಲಿದ್ದಾರೆ...

(**ಗೊಂದಲ**)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ವಿನಂತಿ ಏನೆಂದರೆ, ಲಕ್ಷಾಂತರ ಜನ ಭಕ್ತಾದಿಗಳು ಬಂದಾಗ ಮೂಲಭೂತವಾಗಿ ಕುಡಿಯುವ ನೀರು, ಶೌಚಾಲಯದ ಕೊರತೆಯನ್ನು ನೀಗಿಸದೇ ಇದ್ದರೆ...

**ಶ್ರೀ ರಾಜಶೇಖರ ಬಿ. ಪಾಟೀಲ:-** ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿಗಾಗಿ ಈಗಾಗಲೇ ಕನೆಕ್ಷನ್ ಕೊಡಿಸಿದ್ದೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಈಗ ಆ ಕೆಲಸವನ್ನು ಮಾಡುತ್ತಿದ್ದಾರೆ. ಅದು ಕೂಡ ಟೆಂಡರ್ ಆಗಿದೆ. ಸ್ವಾತಂತ್ರ್ಯ ಬಂದ 70 ವರ್ಷಗಳ ನಂತರ ನಮ್ಮ ನಂಬರ್ ಹತ್ತಿದೆ. ಅದಕ್ಕಾಗಿ, ಉತ್ತರ ಕರ್ನಾಟಕದ ಬೀದರ್ ಜಿಲ್ಲೆಯವರು ಮಂತ್ರಿಯಾಗಿದ್ದಾರೆಂದು ನಿಮ್ಮ ಕಡೆ ನಮ್ಮ ಜನ ನೋಡುತ್ತಿದ್ದಾರೆ.

**(ಗೊಂದಲ)**

**ಶ್ರೀ ರಾಜಶೇಖರ ಬಿ. ಪಾಟೀಲ:-** ಮಾನ್ಯ ಸಭಾಪತಿಯವರೇ, 2017-18 ನೇ ಇಸವಿಯಲ್ಲಿ 120 ಕೋಟಿ ರೂಪಾಯಿಗಳ ಕಾಮಗಾರಿ ನಡೆಯುತ್ತಿದ್ದು, ಅದು ಈಗ ಮುಕ್ತಾಯ ಹಂತದಲ್ಲಿದೆ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದಕ್ಕಾಗಿ ಒಂದು ವಿಶೇಷವಾದ ಸಭೆಯನ್ನು ಕರೆಯಬೇಕು. ವಿಶೇಷ ಅನುದಾನವನ್ನು ಸರ್ಕಾರದಿಂದ ಕೊಡಬೇಕು. ನಮ್ಮಲ್ಲಿರುವ ಗ್ರಾಂಟ್‌ನಿಂದ ಅನುದಾನ ಬೇಡ. ಸರ್ಕಾರ ವಿಶೇಷವಾಗಿ 50 ಕೋಟಿ ರೂಪಾಯಿ ಅನುದಾನ ಕೊಡಬೇಕು. ಆಗ, 'ಇಲ್ಲಪ್ಪಾ ಉತ್ತರ ಕರ್ನಾಟಕ ಭಾಗಕ್ಕೆ ಮಲತಾಯಿ ಧೋರಣೆ ಆಗಿಲ್ಲ, ನಮಗೂ ಹಣ ಕೊಡುತ್ತಾರೆಂದು' ವಿಶ್ವಾಸ ಬರುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕಕ್ಕೆ ಎಲ್ಲಾ ರೀತಿಯಿಂದಲೂ ಅನ್ಯಾಯ ಮಾಡುತ್ತೀರೆನ್ನುವುದು ಜಗಜ್ಜಾಹೀರಾಗಿದೆ. ಅದರಲ್ಲೂ ಕೂಡ ದೇವರಿಗೆ ಅನ್ಯಾಯ ಮಾಡುತ್ತಾರೆ, ಇವರು ಎಂತಹವರು? **(ಗೊಂದಲ)** ಆ ದೇವಸ್ಥಾನಕ್ಕೆ ಲಕ್ಷಾಂತರ ಜನ ಭಕ್ತಾದಿಗಳು ಬರುತ್ತಾರೆಂದು ಇವರೇ ಹೇಳುತ್ತಾರೆ. ಬೆಳಗಿನ ಜಾವ ಹೆಣ್ಣುಮಕ್ಕಳು ಶೌಚಕ್ಕೆ ತಂಬಿಗೆ ತೆಗೆದುಕೊಂಡು ಹೊರಗೆ ಹೋದರೆ, Guard of honor ಎಂದು ಜನ ಅಣಕಿಸುತ್ತಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಇದನ್ನು ಹೇಳಿಸಿಕೊಳ್ಳುವುದು ಸರಿಯಿಲ್ಲ. ಉಳಿದಂತೆ ವಸತಿ ಮತ್ತಿತರ ಸಮಸ್ಯೆಗಳ ಬಗ್ಗೆ ಬಿಡಿ.

**ಶ್ರೀ ರಾಜಶೇಖರ ಬಿ. ಪಾಟೀಲ:-** ಮಾನ್ಯ ಸಭಾಪತಿಯವರೇ, ಆ ಸ್ಥಳದಲ್ಲಿ ಹೆಚ್ಚು ಶೌಚಾಲಯಗಳ ನಿರ್ಮಾಣ ಮಾಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅಲ್ಲಿ ಹೆಚ್ಚು ಶೌಚಾಲಯಗಳನ್ನು ನಿರ್ಮಾಣ ಮಾಡಿಸಲೇಬೇಕು.

**ಶ್ರೀ ರಾಜಶೇಖರ ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಶೌಚಾಲಯಗಳನ್ನು ನಿರ್ಮಾಣ ಮಾಡುವ ಬಗ್ಗೆ ಅಥವಾ ಸ್ನಾನಗೃಹಗಳನ್ನು ಮಾಡುವ ವಿಷಯದಲ್ಲಿ ದುಡ್ಡಿನ ಕೊರತೆ ಇರುವುದಿಲ್ಲ. ಅವುಗಳನ್ನು ಆದಷ್ಟು ಬೇಗನೆ ಮಾಡಿಸುವಂತಹ ಕೆಲಸ ಮಾಡಿಸುತ್ತೇನೆ.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, "ಮುನಹಾಬಾದ್ ಗೌಡರು ಬಂದಾಗ, ಸವದತ್ತಿಯಲ್ಲಿ ಏನಾದರೂ ಒಂದಿಷ್ಟು ಅಭಿವೃದ್ಧಿ ಆಗುತ್ತದೆ" ಎಂದು ಜನ ಬಹಳ ಅಪೇಕ್ಷೆ ಇಟ್ಟುಕೊಂಡಿದ್ದಾರೆ. ಮುಜರಾಯಿ ಖಾತೆ ಅನುದಾನದೊಳಗೆ ಈ ಕೆಲಸವನ್ನು ಮಾಡುತ್ತೇನೆಂದು ಹೇಳಿದರೆ, ಆ ಇಲಾಖೆಯ ಪರಿಸ್ಥಿತಿ ನಮಗೆ ಗೊತ್ತಿದೆ. ಮಾನ್ಯ ಸಚಿವರ ಜೊತೆ ಉತ್ತರ ಕರ್ನಾಟಕ ಭಾಗದ ಸದಸ್ಯರಾದ ನಾವುಗಳು ಸಹ ಬರುತ್ತೇವೆ, ಆ ದೇವಸ್ಥಾನಕ್ಕೆ 100 ಕೋಟಿ ರೂಪಾಯಿಗಳ ಅನುದಾನ ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಬಳಿ ಕೇಳಬೇಕು ಮತ್ತು ದೇವಸ್ಥಾನವನ್ನು ಉದ್ಧಾರ ಮಾಡಬೇಕು. ಈ ಭಾಗದಲ್ಲಿ ಸಹನ ನಡೆಯುತ್ತಿರುವುದರಿಂದ 100 ಕೋಟಿ ರೂಪಾಯಿಗಳ ಅನುದಾನ ಕೊಡಬೇಕು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಸವದತ್ತಿ ದೇವಸ್ಥಾನದ ಅಭಿವೃದ್ಧಿಗಾಗಿ ವಿಶೇಷ ಅನುದಾನದಲ್ಲಿ 100 ಕೋಟಿ ರೂಪಾಯಿ ಅನುದಾನ ಕೇಳಬೇಕು.

**ಸಭಾಪತಿಯವರು:–** ಮಹಿಳಾ ಸದಸ್ಯರು ಈ ವಿಷಯದ ಬಗ್ಗೆ ಏನೋ ಉತ್ತರ ನೀಡಬೇಕೆಂದು ಹೇಳುತ್ತಿದ್ದಾರೆ. ಅವರು ಏನು ಹೇಳುತ್ತಾರೆಂದು ನೋಡೋಣ.

**ಶ್ರೀ ರಾಜಶೇಖರ ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಅನುದಾನದ ಬಗ್ಗೆ ನಾನು ಈಗಾಗಲೇ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಅನುದಾನ ಜಾಸ್ತಿ ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿದ್ದೇನೆ. ಮುಖ್ಯಮಂತ್ರಿಗಳು ಕೂಡ ಒಪ್ಪಿಕೊಂಡಿದ್ದಾರೆ. ಅದನ್ನು ನೋಡೋಣ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಅರುಣ ಶಹಾಪುರರವರು ನಾವೆಲ್ಲಾ ಸದಸ್ಯರು ತಮ್ಮ ಜೊತೆ ಬಂದುಬಿಡುತ್ತಾರೆಂದು ಹೇಳಿದರು. ನಾನು ಅಲ್ಲಿ ಶೌಚಾಲಯಗಳನ್ನು ಕಟ್ಟುವುದಕ್ಕೆ ಹೋಗುತ್ತಾರೆಂದು ನಾನು ಭಾವಿಸಿದ್ದೆನು.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ, ಸವದತ್ತಿ ಕಾಶ್ಮೀರಿ ರಾಜನ ಮಗಳಾದ ರೇಣುಕೆಯನ್ನು ಜಮದಗ್ನಿ ಮಹರ್ಷಿ ಮದುವೆಯಾಗಿ ಪರಶುರಾಮ ಎಂಬ ಮಗನಿಗೆ ಜನ್ಮ ನೀಡುತ್ತಾರೆ. ಪರಶುರಾಮ, ಆ ಒಂದು ಮಹರ್ಷಿ ಬಗ್ಗೆ ದೊಡ್ಡ ಐತಿಹಾಸಿಕ ಕಥೆಯಿದೆ. ಇದು ಧಾರ್ಮಿಕ ದತ್ತಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಲಾಖೆಯ ಆಯುಕ್ತರು ಪ್ರಕಟಣೆ ಮಾಡಿದಂತಹ ಪುಸ್ತಕದಲ್ಲಿ ಈ ಬಗ್ಗೆ ಉಲ್ಲೇಖವಿದೆ. ಈ ದೇವಸ್ಥಾನ ಸುಮಾರು 5000 ವರ್ಷಗಳ ಪ್ರಾಚೀನ ಪರಂಪರೆ ಇರುವ ದೇವಸ್ಥಾನ. ಅಲ್ಲಿ ಎರಡು ಕಾರಣಕ್ಕಾಗಿ, ಒಂದು ಜಮದಗ್ನಿಯ ಆಶ್ರಮದಲ್ಲಿದ್ದ ಕಾಮಧೇನುವನ್ನು ಬಲವಂತವಾಗಿ ಕೊಂಡೊಯ್ದು ಕಾರ್ತಿಕೇಯನನ್ನು ಹತ್ಯೆ ಮಾಡುವುದಕ್ಕಾಗಿ ಪರಶುರಾಮ 21 ಬಾರಿ ಭೂ ಪ್ರದಕ್ಷಿಣೆ ಮಾಡಿದ ಎಂಬ ಮಹಾನ್ ಇತಿಹಾಸ ಒಂದು ಕಡೆಯಾದರೆ, ಮತ್ತೊಂದು ಕಡೆ ರೇಣುಕಾ ತಾಯಿಯನ್ನು ಪರಶುರಾಮರೇ ತನ್ನ ತಾಯಿ ತಪ್ಪು ಮಾಡಿದಾಗ ಹತ್ಯೆ ಮಾಡಿ, ಮತ್ತೆ ವರದಿಂದ ತಾಯಿಯನ್ನು ಪಡೆದಂತಹ ಕ್ಷಣ.

'ಜೋಗುತಿ' ಎನ್ನುವ ಪದ್ಧತಿಯಲ್ಲಿ ಏನಿದೆಯೆಂದರೆ, ಹೆಣ್ಣುಮಕ್ಕಳು ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಮುಗ್ಧ ಹೆಣ್ಣುಮಕ್ಕಳ ಪರಂಪರೆಯನ್ನು ಇಡೀ ನಾಡು ಗೌರವಿಸುತ್ತದೆ. ಅದನ್ನು ನಾವು ಹೆಮ್ಮೆ ಪಡುತ್ತೇವೆ. ಇಂತಹ ಸಂದರ್ಭದಲ್ಲಿ ಮೊನ್ನೆ ರಜೆ ದಿನದಂದು ನಾನು ಸವದತ್ತಿಗೆ ಭೇಟಿ ನೀಡಿದ್ದೆನು. ಅಲ್ಲಿ ನಾಲ್ಕು ಸಮಸ್ಯೆಗಳನ್ನು ನಾನು ಗುರುತಿಸಿದ್ದೇನೆ. ಮೊದಲನೆಯದಾಗಿ, ಎಣ್ಣೆ ಹೊಂಡ ಎಂಬ ಜಾಗದಲ್ಲಿ ಜಲ ಉದ್ಭವವಾಗುತ್ತದೆ. ಆ ಬೆಟ್ಟ ಪ್ರದೇಶದಿಂದ ಬರುವ ಪವಿತ್ರವಾದ ಜಲದ ಪಕ್ಕದಲ್ಲಿ ಶೌಚಾಲಯದ ನೀರು ಹರಿಯುತ್ತಿತ್ತು. ನಾನು ಅಲ್ಲಿಗೆ ಮೂಗು ಮುಚ್ಚಿಕೊಂಡು ಹೋಗಬೇಕಾಯಿತು. ಅಲ್ಲಿ ಸ್ವಚ್ಛತೆಗೆ ಆದ್ಯತೆ ಕೊಡಲೇಬೇಕು. ಎರಡನೆಯದಾಗಿ, ಅನಧಿಕೃತವಾಗಿ ದೇವಾಲಯದ ಆವರಣದ ಒಳಗಡೆ ಹತ್ತಾರು ಅಂಗಡಿಗಳನ್ನು ತೆರೆಯಲಾಗಿದೆ. ಅದರಿಂದ ದೇವಸ್ಥಾನದ ಅರ್ಚಕರ ಮನೆಗಳು ಸಹ ಕಾಣುವುದಿಲ್ಲ. ಅಲ್ಲಿ ಅನ್ಯ ಧರ್ಮೀಯರು ಅಂಗಡಿಗಳನ್ನು ತೆರೆದಿರುವುದು, ಹಿಂದೂ ಭಕ್ತರ ಧಾರ್ಮಿಕ ಭಾವನೆಗಳಿಗೆ ಘಾಸಿಯಾಗಿದೆ. ದಯಮಾಡಿ, ಇಂತಹ ಸೂಕ್ಷ್ಮ ವಿಚಾರಗಳ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಅನಧಿಕೃತವಾಗಿ ದೇವಾಲಯದ ಆವರಣದ ಒಳಗಡೆ ಇಟ್ಟಿರುವ ದೇವಾಲಯದ ಅಂಗಡಿಗಳಿಂದ ಲಕ್ಷಾಂತರ ಭಕ್ತರಿಗೆ ಅನಾನುಕೂಲವಾಗುತ್ತದೆ.

ಮೂರನೆಯದಾಗಿ, ಕುಂಕುಮ ಮತ್ತು ಅರಿಶಿನವನ್ನು ಎರಚುವಂಥದ್ದು ಒಂದು ಮಹಾನ್ ಪೂಜಾ ಪದ್ಧತಿ. ಅಲ್ಲಿ ಕೆಮಿಕಲ್‌ಯುಕ್ತ ಕುಂಕುಮವನ್ನು ಸಂಪೂರ್ಣವಾಗಿ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಒಂದು ಅಂಗಡಿಯವರನ್ನು ಒರಿಜಿನಲ್ ಕುಂಕುಮ ಕೊಡಿ ಎಂದು ಕೇಳಿದೆನು. ಅದಕ್ಕೆ ಆ ಅಂಗಡಿಯವರು ಮುಗ್ಧತೆಯಿಂದ "ಹೆಚ್ಚು ಬೆಲೆಯ ಕುಂಕುಮವನ್ನು ಇಲ್ಲಿ ಯಾರೂ ಕೊಂಡುಕೊಳ್ಳುವುದಿಲ್ಲವೆಂದು" ಹೇಳಿದರು. ಈ ಸಮಸ್ಯೆಯಿದೆ.

ಆದುದರಿಂದ, ರಿಯಾಯಿತಿ ದರದಲ್ಲಿ ಉತ್ತಮ ಗುಣಮಟ್ಟದ ಅರಿಶಿನ ಮತ್ತು ಕುಂಕುಮವನ್ನು ಈ ಬಡ ಭಕ್ತರು ಅದರಲ್ಲೂ ಹೆಚ್ಚು ದಲಿತ ಭಕ್ತರು ಹೆಚ್ಚು ಬರುವುದರಿಂದ ಇದನ್ನು ಒದಗಿಸಬೇಕು ಮತ್ತು ಈ ಅರಿಶಿನ ಮತ್ತು ಕುಂಕುಮವನ್ನು ಎರಚುವುದರಿಂದ ಅದು ಭಕ್ತರ ಕಣ್ಣಿಗೆ ಬೀಳುತ್ತದೆ ಮತ್ತು ಆ ರಾಸಾಯನಿಕಯುಕ್ತ ಕುಂಕುಮವು ನೀರಿಗೆ ಕೆ.ಜಿ., ಗಟ್ಟಲೇ ಹೋಗುವುದರಿಂದ ಅದನ್ನು ತಡೆಯಬೇಕು. ಕೊನೆಯದಾಗಿ, ಇಲ್ಲಿಗೆ

ಸಾವಿರಾರು ಕಿಲೋಮೀಟರ್‌ಗಳಿಂದ ಭಕ್ತರು ಬರುವುದರಿಂದ, ಸುಮಾರು 18 ಕೋಟಿ ರೂಪಾಯಿಗಳ ಆದಾಯ ತರುವಂತಹ ಈ ದೇವಸ್ಥಾನದಲ್ಲಿ ಬೇರೆ ದೇವಸ್ಥಾನಗಳಲ್ಲಿ ಇರುವ ರೀತಿಯಲ್ಲಿ ಪ್ರಸಾದ ವಿನಿಯೋಗವನ್ನು ಮಾಡಬೇಕು. ಖಂಡಿತವಾಗಿ ಅದು ಜನರ ದುಡ್ಡು. ಆ ಜನರ ದುಡ್ಡನ್ನು ಸದ್ಬಳಕೆ ಮಾಡಿಕೊಂಡು ಆ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಇತರೆ ಕಾಮಗಾರಿಗಳನ್ನು ಮಾಡಬೇಕೆಂದು ಆಗ್ರಹ ಮಾಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಸವದತ್ತಿ ದೇವಸ್ಥಾನದಲ್ಲಿ ಕುಡಿಯುವ ನೀರು ಮಾಡಿರುವುದಿಲ್ಲ. ಜೊತೆಗೆ, ಯು.ಜಿ.ಡಿ., ಕೂಡ ಮಾಡಿರುವುದಿಲ್ಲ.

**ಶ್ರೀ ರಾಜಶೇಖರ ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಅದನ್ನು ನಾವು ಮಾಡಿರುತ್ತೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಯು.ಜಿ.ಡಿ., ಅನುಮೋದನೆಯಾಗಿರುವುದಿಲ್ಲ. ಅಲ್ಲಿ ಶೌಚಾಲಯಗಳನ್ನು ಕಟ್ಟಿ ಯು.ಜಿ.ಡಿ., ಮಾಡದೇ ಇದ್ದರೆ ಏನೂ ಉಪಯೋಗವಾಗುವುದಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರ ಇರುವುದಿಲ್ಲ, ಪೊಲೀಸ್ ಸ್ಟೇಷನ್ ಇರುವುದಿಲ್ಲ. ಇದೆಲ್ಲವೂ ಕೂಡ ಆಗಬೇಕು. ಈ ಬಗ್ಗೆ ಮಾಸ್ಟರ್‌ಪ್ಲಾನ್ ಮಾಡಬೇಕು. ತಮಗೆ ಬಹಳ ಪುಣ್ಯ ಬರುತ್ತದೆ.

**ಶ್ರೀ ರಾಜಶೇಖರ ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ನಾನೂ ಕೂಡ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದೇನೆ. ಪೊಲೀಸ್ ಸ್ಟೇಷನ್ ತೆರೆಯುವ ಬಗ್ಗೆ ಮಾನ್ಯ ಗೃಹ ಸಚಿವರ ಬಳಿ ಮಾತನಾಡುತ್ತೇನೆ. ಇದರ ಜೊತೆಗೆ, ಡಾ: ತೇಜಸ್ವಿನಿ ಗೌಡರವರು ಅಂಗಡಿಗಳನ್ನು ತೆರವುಗೊಳಿಸುವ ಬಗ್ಗೆ ಹೇಳಿದ್ದಾರೆ, ಅವುಗಳನ್ನು ತೆರವುಗೊಳಿಸುತ್ತೇವೆ ಮತ್ತು ರಾಸಾಯನಿಕ ಮಿಶ್ರಿತ ಅರಿಶಿನ ಮತ್ತು ಕುಂಕುಮದ ಬಗ್ಗೆ ಹೇಳಿದ್ದಾರೆ, ಅದನ್ನು ಪರಿಶೀಲಿಸಿ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಮುಕ್ತಾಯವಾಗಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(569) 19-12-2018 (2.20) ವೈಎಲ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಸಮೂಹ-IIIರ ಒಟ್ಟು 117 ಪ್ರಶ್ನೆಗಳ ಪೈಕಿ 72 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) **ವಿಷಯ:-** ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ವಿದ್ಯುತ್ ಅವಘಡದಿಂದ ಉಂಟಾಗಿರುವ ಹಾನಿಗೆ ಪರಿಹಾರ ನೀಡುವ ಬಗ್ಗೆ.

****

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವಿದ್ಯುತ್ ಅವಘಡದಿಂದ ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ತಂತಿ ತಗುಲಿ 333 ಜನ ಹಾಗೂ 163 ಜಾನುವಾರುಗಳು ಮೃತ ಪಟ್ಟಿವೆ. ಸದರಿ ಜಿಲ್ಲೆಗಳಲ್ಲಿ ಅಳವಡಿಸಿರುವ ವಿದ್ಯುತ್ ತಂತಿಗಳು ಹಳೆಯದಾಗಿದ್ದು ತುಂಡಾಗಿ ಬೀಳುತ್ತಿವೆ. ಕಂಬಗಳು ಮುರಿದು ಬಿದ್ದು ಸಂಭವಿಸುತ್ತಿರುವ ದುರಂತಗಳಲ್ಲಿ ಭಾರೀ ಪ್ರಮಾಣದಲ್ಲಿ ಹಾನಿಯಾಗುತ್ತದೆ. ಈವರೆಗೆ 221 ಜನ ಅಂಗವಿಕಲರಾಗಿದ್ದು ಸುಮಾರು 798 ವಿವಿಧ ರೀತಿಯ ಬೆಂಕಿ ಅವಘಡಗಳಾಗಿವೆ. ಸುಮಾರು 1600 ಎಕರೆಗಿಂತ ಅಧಿಕ ಕೃಷಿ ಬೆಳೆಗಳು ಸುಟ್ಟು ಹೋಗಿರುತ್ತದೆ. ಇದೇ ಪರಿಸ್ಥಿತಿ ಮುಂದುವರೆದರೆ ರಾಜ್ಯದಲ್ಲಿ 2000 ಕ್ಕಿಂತ ಅಧಿಕವಾಗಬಹುದೆಂದು ಅಂದಾಜಿಸಲಾಗಿದೆ. ಯಾವುದೇ ಒಬ್ಬ ವ್ಯಕ್ತಿ ಕೊಲೆ ಮಾಡಿದರೆ ಅವನಿಗೆ ಜೀವಾವಧಿ ಶಿಕ್ಷೆಯಾಗುವುದು ಅಥವಾ 10, 20 ವರ್ಷ ಜೈಲು ಶಿಕ್ಷೆಯಾಗುವುದು. ಈ ಎಲ್ಲ ಕಾರಣಗಳಿಂದ ವಿದ್ಯುತ್ ಕಂಪನಿಯವರು ಹಳೆಯದಾದ ತಂತಿ, ಕಂಬಗಳನ್ನು ಬದಲಾಯಿಸದೆ ಇರುವುದು ಕಂಬದಿಂದ ಕಂಬಕ್ಕೆ ಹೆಚ್ಚಿನ ಅಂತರ ಇರುವುದರಿಂದ ವಿದ್ಯುತ್ ತಂತಿಗಳು, ಜೋತು ಬಿದ್ದು ಅವಘಡಗಳು ಸಂಭವಿಸುತ್ತಿರುವುದು ವಾಡಿಕೆಯಾಗಿದೆ. ನಾನು ಮತ್ತು ಈ ಭಾಗದ ರೈತ ಸಂಘಟನೆಯವರು ಅನೇಕ ಸಲ ಸಂಬಂಧಪಟ್ಟವರಿಗೆ ಸ್ವತಃ ಭೇಟಿಯಾಗಿ ದೂರವಾಣಿ ಮುಖಾಂತರ ತಿಳಿಸಿದಾಗ್ಯೂ ಹಾಗೂ ನಾನು ಸಭಾಪತಿಯಾದಾಗ ಹೆಸ್ಕಾಂ ಅಧಿಕಾರಿಗಳೊಡನೆ ಚರ್ಚೆ ಮಾಡಿದಾಗ ತಕ್ಷಣ ಸರಿಪಡಿಸಲು ಹಾಗೂ ಕ್ರಮ ಕೈಗೊಳ್ಳಲಾಗುವುದೆಂದು ತೀರ್ಮಾನಿಸಲಾಗಿತ್ತು. ಅದು ಎಷ್ಟರ ಮಟ್ಟಿಗೆ ಪ್ರಗತಿಯಾಗಿದೆ ಎನ್ನುವುದು ಇನ್ನು ನಮಗೆ ತಿಳಿದು ಬಂದಿಲ್ಲವಾದ್ದರಿಂದ, ಸರಕಾರ ತಕ್ಷಣ ಸದರಿ ವಿಷಯದಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಸರಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಪಡೆದು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Formatted: Font: Bold

**ಆ) ~~ವಿಷಯ:-~~ ಬೆಳಗಾವಿ ಜಿಲ್ಲೆಯಲ್ಲಿನ ಗಡಿಯಲ್ಲಿ ಬರುವ ಗಾಂವ ಎಂದಿರುವ ಎಲ್ಲಾ ಗ್ರಾಮಗಳ ಹೆಸರನ್ನು ಗ್ರಾಮ ಎಂದು ಮರುನಾಮಕರಣ ಮಾಡುವ ಬಗ್ಗೆ.**

Formatted: Font: Bold

Formatted: Font: Bold

****

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಳಗಾಂ ಜಿಲ್ಲೆ ಬೆಳಗಾವಿ ಎಂದು ನಾಮಕರಣವಾದ ಮೇಲೆ, ಕನ್ನಡನಾಡಿನ ವ್ಯಾಪ್ತಿಗೆ ಬಂದ ಮೇಲೆ ಆ ಜಿಲ್ಲೆಯ ವ್ಯಾಪ್ತಿಯಲ್ಲಿ ಕನ್ನಡನಾಡಿನ ಗಡಿಯೊಳಗೆ ಬರುವ ಗಾಂವ ಎಂದಿರುವ ಎಲ್ಲಾ ಗ್ರಾಮಗಳ ಹೆಸರನ್ನು ಗ್ರಾಮ ಎಂದು ಉದಾಹರಣೆಗೆ ದೇವಗಾಂವ ಎಂದಿರುವ ಹೆಸರನ್ನು ದೇವಗ್ರಾಮ ಎಂದು ಮರುನಾಮಕರಣ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲೆಗಳಲ್ಲಿ ಬರುವ ಎಲ್ಲಾ ಗ್ರಾಮಗಳ ಹೆಸರನ್ನು ಕನ್ನಡೀಕರಣಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಸಚಿವರು):–** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯಿಂದ ಉತ್ತರವನ್ನು ಪಡೆದು ನಂತರ ಒದಗಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಇ) ~~ವಿಷಯ:~~ ಬೆಂಗಳೂರು ನಗರದ ಟ್ರಿನಿಟಿ ವೃತ್ತದ ನಿಲ್ದಾಣ ಬಳಿಯಲ್ಲಿ ಮೆಟ್ರೋದ ವಯಾಡಕ್ಟ್‌ನಲ್ಲಿ ಕಾಂಕ್ರೀಟ್ ಶಿಥಿಲವಾಗಿರುವ ಬಗ್ಗೆ.**



****

**ಶ್ರೀ ಕೆ.ಗೋವಿಂದರಾಜ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಅಂತರರಾಷ್ಟ್ರೀಯ ಮಟ್ಟದಲ್ಲಿ ಹತ್ತು ಹಲವು ಕಾರಣಗಳಿಗಾಗಿ ಹೆಸರುವಾಸಿಯಾದ ನಗರ. ಈ ನಗರದ ಟ್ರಾಫಿಕ್ ಸಮಸ್ಯೆ ನಿವಾರಣೆಗಾಗಿ ಶ್ರೀಸಾಮಾನ್ಯರ ಹಣ ಮತ್ತು ಸಮಯವನ್ನು ಉಳಿಸುವ ನಿಟ್ಟಿನಲ್ಲಿ ಮೆಟ್ರೋ ರೈಲು ಒಂದು ವರದಾನ. ಹಾಗೆಯೇ ರಾಜ್ಯದ ಹಾಗೂ ಬೆಂಗಳೂರು ನಗರದ ಹೆಮ್ಮೆ. ಜನರ ನಿತ್ಯ ಜೀವನದ ಒಡನಾಡಿಯಾಗಿ ಬೆಸೆದಿರುವುದು ನಮ್ಮ ಮೆಟ್ರೋ, ಆದರೆ ಈಗ್ಗೆ ಕೆಲವು ದಿನಗಳಿಂದ, ಬೆಂಗಳೂರು ಮೆಟ್ರೋ ಸಂಚಾರ ಮಾರ್ಗ ಟ್ರಿನಿಟಿ ವೃತ್ತದ ನಿಲ್ದಾಣ ಬಳಿಯ ಪಿಲ್ಲರ್–155 ರಲ್ಲಿ Viaduct ನಲ್ಲಿ 'Honeycomb' ಅಂದರೆ, ಕಳಪೆ concrete ನಿಂದ ಆದ ಟೊಳ್ಳು ಎಂದು ಅರ್ಥೈಸಲಾಗಿದೆ. ಕೇವಲ 10 ವರ್ಷಗಳ ಹಿಂದೆ ನಿರ್ಮಾಣಗೊಂಡ Viaduct ನಲ್ಲಿ concrete ಶಿಥಿಲವಾಗಿರುವುದು ಹಲವಾರು ಅನುಮಾನಗಳ ಆತಂಕಗಳಿಗೆ ಕಾರಣವಾಗಿದೆ. ಇದು ಕಳಪೆ ಕಾಮಗಾರಿ ಎನ್ನುವುದನ್ನು ಸಮಗ್ರ ತನಿಖೆಯಿಂದ ಕಂಡುಕೊಳ್ಳಬೇಕಾದ ಅವಶ್ಯಕತೆ ಇದೆ. ಅಷ್ಟೇ ಅಲ್ಲದೇ, ಈ ಶಿಥಿಲ ಪಿಲ್ಲರ್‌ನಿಂದಾಗಿ ಮೆಟ್ರೋ ಸಂಚಾರವನ್ನು ಅವಲಂಬಿಸಿರುವ ಪ್ರಯಾಣಿಕರು ಮಾತ್ರವಲ್ಲದೇ ಇತರೇ ನಾಗರಿಕರೂ ಸಹ ಭಯಭೀತಿಯಿಂದಾಗಿ ಆಂತಕದಲ್ಲೇ ಪ್ರಯಾಣಿಸುವ ಇಲ್ಲವೇ ಮೆಟ್ರೋ ಸಂಚಾರವನ್ನೇ ಕೈಬಿಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇಂತಹ ಪರಿಸ್ಥಿತಿಯು ಪ್ರತಿಷ್ಠಿತ ಮೆಟ್ರೋಗೆ ಕಳಂಕ ತರುತ್ತದೆ. ಹೀಗಾಗಿ ಈ ಅಚಾತುರ್ಯಕ್ಕೆ ಕಾರಣವಾದ ಅಂಶಗಳನ್ನು ಪತ್ತೆ ಹಚ್ಚಿ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳು ಹಾಗೂ ಜನರಲ್ಲಿ ಉಂಟಾಗಿರುವ ಆತಂಕವನ್ನು ದೂರ ಮಾಡಿ ಸುಗಮ ಸಂಚಾರದ ನಿಟ್ಟಿನಲ್ಲಿ ಜನರಲ್ಲಿ ಧೈರ್ಯ ತುಂಬುವ ಕಾರ್ಯ ಶೀಘ್ರವಾಗಿ ಕೈಗೊಳ್ಳಬೇಕಾದ ಮಹತ್ವದ ವಿಷಯವನ್ನು ನಾನು ಇಂದು ಪ್ರಸ್ತಾಪಿಸಲು ಅನುಮತಿಸಬೇಕೆಂದು ಕೋರುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಉತ್ತರವನ್ನು ಪಡೆದು ನಂತರ ಒದಗಿಸಲಾಗುವುದು.



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಈ) ~~ವಿಷಯ:~~ ಪೊಲೀಸ್ ಇಲಾಖೆಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಸೇವೆಯಿಂದ ವಜಾ ಮಾಡಿರುವ ಬಗ್ಗೆ.**

****

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಸುಮಾರು 904 ಜಾಡಮಾಲಿ ಸಿಬ್ಬಂದಿಗಳು ಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ, ಇದೀಗ ಪೊಲೀಸ್ ಇಲಾಖೆಯು ಈ ಜಾಡಮಾಲಿಗಳನ್ನು ವಜಾಗೊಳಿಸುವಂತೆ ಸುತ್ತೋಲೆಯನ್ನು ಹೊರಡಿಸಿ ಆದೇಶ ಜಾರಿಗೆ ತಂದಿರುತ್ತಾರೆ. ಇದರಿಂದ 10 ರಿಂದ 30 ವರ್ಷಗಳ ಕಾಲ ಕೆಲಸ ನಿರ್ವಹಿಸಿದ ಜಾಡಮಾಲಿಗಳ ಬದುಕು ಅತಂತ್ರವಾಗಿದೆ ಇವರುಗಳು ತಮ್ಮ ಜೀವನದ ಭದ್ರತೆಯನ್ನು ಕಳೆದುಕೊಂಡಿರುತ್ತಾರೆ. ಇದರಿಂದಾಗಿ ಈ ಜಾಡಮಾಲಿಗಳು ಸುವರ್ಣ ಸೌಧದ ಬಳಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ.

ಈ ಜಾಡಮಾಲಿಗಳನ್ನು ಕೆಲಸದಿಂದ ತೆಗೆಯದೆ ಇವರುಗಳಿಗೆ ಸೇವಾ ಭದ್ರತೆಯನ್ನು ನೀಡುವ ಮೂಲಕ ಇವರುಗಳ ಕುಟುಂಬ ಹಾಗೂ ಇವರ ಜೀವನ ನಿರ್ವಹಣೆಗೆ ಅನುಕೂಲವಾಗುವಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಸಚಿವರು):-** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಉತ್ತರವನ್ನು ಪಡೆದು ನಂತರ ಒದಗಿಸಲಾಗುವುದು.

Formatted: Font: Bold

Formatted: Indent: Left: 0 cm, First line: 0 cm

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ವಿಷಯ:– ಹಾಸನ ಜಿಲ್ಲೆಯ ಸಾವಂತಹಳ್ಳಿಯಲ್ಲಿರುವ ಜೀತ ಪದ್ಧತಿ ಬಗ್ಗೆ.**

****

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಾಸನ ಜಿಲ್ಲೆಯ ಸಾವಂತಹಳ್ಳಿ ಗ್ರಾಮದ ಕೃಷ್ಣೇಗೌಡ ಎಂಬುವವರ ತೋಟದಲ್ಲಿ ಅಕ್ರಮವಾಗಿ 52 ಕಾರ್ಮಿಕರನ್ನು ಜೀತಕ್ಕೆ ಇಟ್ಟುಕೊಂಡಿದ್ದು ಊಟ ತಿಂಡಿ ಕೊಡದೆ ಅಮಾನವೀಯ ರೀತಿಯಲ್ಲಿ ನಡೆಸಿಕೊಳ್ಳುತ್ತಿರುವ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ. 21ನೇ ಶತಮಾನದಲ್ಲೂ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲೇ ಜೀತ ಪದ್ದತಿ ಇನ್ನೂ ಜೀವಂತ ಇರುವುದು ಖೇದಕರ. ಹೆತ್ತವರೊಂದಿಗೆ ಕೆಲಸ ಹುಡುಕಿಕೊಂಡು ಬಂದಿರುವ ಮಕ್ಕಳಿಂದಲೂ ಕೆಲಸ ಮಾಡಿಸಿಕೊಳ್ಳುವ ಮೂಲಕ ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿರುವುದು ಸ್ಪಷ್ಟ. ರಾಜ್ಯದ ಉತ್ತರ ಕರ್ನಾಟಕ ಭಾಗವಾದ ರಾಯಚೂರು, ಹಾವೇರಿ ಮುಂತಾದ ಬರಗಾಲ ಪೀಡಿತ ಪ್ರದೇಶಗಳ ಜನರೇ ಈ ರೀತಿಯಾಗಿ ಜೀತಕ್ಕೆ ಒಳಗಾಗುತ್ತಿರುವುದು ವಿಷಾದನೀಯ. ಸರಕಾರ ಈ ಕುರಿತು ಕೂಡಲೇ ಗಮನ ಹರಿಸಿ ಜೀತ ಮುಕ್ತಗೊಂಡವರಿಗೆ ಎಲ್ಲಾ ಸೌಲಭ್ಯಗಳನ್ನು ನೀಡುವಂತೆ ಮತ್ತು ಉತ್ತರ ಕರ್ನಾಟಕದ ಬರ ಪೀಡಿತ ಜಿಲ್ಲೆಗಳ ಜನತೆ ಗುಳೇ ಹೋಗದ ರೀತಿಯಲ್ಲಿ ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಸಚಿವರು):–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಉತ್ತರವನ್ನು ಪಡೆದು ನಂತರ ಒದಗಿಸಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿದೆ. ಇವತ್ತಿನ ದಿವಸವೂ ಮಕ್ಕಳಿಂದ ಜೀತ ಮಾಡಿಸಿಕೊಳ್ಳುತ್ತಾರೆ ಎಂದರೆ ಇಂತಹ ಪದ್ಧತಿಯನ್ನು ಸದನ ಸಹಿಸುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಮಾನ್ಯ ಸಚಿವರು ಬಹಳ ಗಂಭೀರವಾಗಿ ತೆಗೆದುಕೊಂಡು ಉತ್ತರ ನೀಡಬೇಕು.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಜಿಲ್ಲೆಯ ವತಿಯಿಂದಲೇ ಉತ್ತರವನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:–** ಇರಲಿ. ಚರ್ಚೆ ಮಾಡುವುದು ಬೇಡ. ಸಮಯವಾಗಿದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Formatted: Font: Bold

Formatted: Left, Indent: Left: 0 cm, First line: 0 cm, Right: 0 cm, Adjust space between Latin and Asian text, Adjust space between Asian text and numbers, Tab stops: Not at 3.65 cm

**ಊ) ~~ವಿಷಯ:~~ ರೈತರು ಸಾಲ ಪಡೆದು ಬೆಳೆದ ಕಬ್ಬಿಗೆ ಸಾಗಾಣಿಕೆ ವ್ಯವಸ್ಥೆ ಇಲ್ಲದೇ ಕಟಾವಿಗೆ ಬಂದಿರುವ ಕಬ್ಬು ಬೆಳೆ ಒಣಗುತ್ತಿರುವ ಬಗ್ಗೆ.**

****

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕನ್ನಡಪ್ರಭ ದಿನಪತ್ರಿಕೆಯ ಬೀದರ್ ಆವೃತ್ತಿಯಲ್ಲಿ ಸಕ್ಕರೆ ಕಾರ್ಖಾನೆ ವಿರುದ್ಧ ರೈತರು ಅಕ್ರೋಶ, ಬೀದರ್ ಹೊರವಲಯದ ಜನವಾಡ ಬಳಿ ನೀರು ಇಲ್ಲದೇ ಒಣಗುತ್ತಿರುವ ಕಬ್ಬು, ಕಟಾವಿಗೆ ಸಹಕರಿಸದೇ ನಿರ್ಲಕ್ಷಿಸುತ್ತಿರುವ ಎನ್.ಎಸ್.ಎಸ್.ಕೆ ಎಂದು ವರದಿಯಾಗಿದೆ. ಬೀದರ್ ಜಿಲ್ಲೆಯಾದ್ಯಂತ ಸುಮಾರು 25 ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿದ್ದು, ಜಿಲ್ಲೆಯ 3 ಸಹಕಾರ ಹಾಗೂ 2 ಖಾಸಗಿ ಮತ್ತು 2 ಖಾಂಡಸಾರಿ ಸಕ್ಕರೆ ಕಾರ್ಖಾನೆಗಳಿಗೆ ವಿವಿಧೆಡೆಯಿಂದ ಕಬ್ಬು ಸಾಗಾಣಿಕೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ಇಲ್ಲದಿರುವುದರಿಂದ ರೈತರ ಕಟಾವಿಗೆ ಬಂದಿರುವ ಕಬ್ಬು ಹೊಲದಲ್ಲಿಯೇ ಒಣಗಿ ಹೋಗುತ್ತಿದೆ. ಜಿಲ್ಲಾ ಕೇಂದ್ರವಾದ ಬೀದರ್‌ನಿಂದ ಕೆಲವೇ ಕಿ.ಮೀ. ದೂರದಲ್ಲಿರುವ ಜನವಾಡಾ ಬಳಿಯ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿದ್ದು, ಈಗಾಗಲೇ ಕಬ್ಬು ಬೆಳೆ ಸಂಪೂರ್ಣ ಕಟಾವಿಗೆ ಬಂದಿದ್ದು, ನೀರಿಲ್ಲದೇ ಬತ್ತಿರುವ ಮಾಂಜ್ರಾ ನದಿ, ಮಳೆಯಿಲ್ಲದೆ ಒಣಗಿ ಬೆಳೆದು ನಿಂತಿರುವ ಕಬ್ಬಿನ ಕಟಾವಿಗೆ ಬಾರದ ಕಾರ್ಖಾನೆಯ ವಿಮುಖ ನೀತಿಗೆ ಕಬ್ಬು ಬೆಳೆದ ರೈತರು ಆತಂಕವನ್ನು ಎದುರಿಸುವಂತಾಗಿದೆ. ಕಬ್ಬಿನ ಬೆಳೆಗಾಗಿ ರೈತರು ಮಾಡಿದ ಸಾಲ ಶೂಲದ ಕೆನ್ನಾಲಿಗೆಗೆ ಬೀಳುವ ಮುನ್ನ ಸರ್ಕಾರವು ಕಿವಿಗೊಡಬೇಕಾದ ವಿಚಾರದ ಬಗ್ಗೆ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಕೋರುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಪಡೆದು ನಂತರ ಒದಗಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖು) ವಿಷಯ:– ಕಂಬಳ ಜಾನಪದ ಕ್ರೀಡೆಯ ಕುರಿತು**

Formatted: Font: Bold

****

**ಶೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಕಂಬಳ ಅತ್ಯಂತ ಜನಪ್ರಿಯ ಜಾನಪದ ಕ್ರೀಡೆಯಾಗಿದೆ. ಸುಮಾರು ಮೂರು ವರ್ಷಗಳಿಂದೀಚೆಗೆ ಈ ಕ್ರೀಡೆ ನಡೆಸಲು ಅನೇಕ ವಿಘ್ನಗಳು ಬರುತ್ತಲೇ ಇರುತ್ತವೆ. ಕರ್ನಾಟಕ ಪ್ರಾಣಿಹಿಂಸೆ ತಡೆಕಾಯಿದೆ 2017 (ಎರಡನೇ ತಿದ್ದುಪಡಿ) ಅನ್ನು ರದ್ದು ಮಾಡಬೇಕು ಮತ್ತು ಕಂಬಳ ಕ್ರೀಡೆಗೆ ತಡೆ ನೀಡಬೇಕೆಂದು PETA (People for the Ethical Treatment of Animals) ಸಂಸ್ಥೆ ಸುಪ್ರೀಂ~~ಕೋರ್ಟ್~~ ಕೋರ್ಟಿನಲ್ಲಿ ದಾವೆ ಹೂಡಿದ ಪರಿಣಾಮವಾಗಿ ಈ ವಿಷಯವು ಕಾನೂನು ತಿದ್ದುಪಡಿ ವಿಧೇಯಕಕ್ಕೆ ಸಂಬಂಧಪಟ್ಟಿರುವುದರಿಂದ ತೀರ್ಪಿಗಾಗಿ ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಲಾಗಿದೆ.

ಇಂತಹ ಸಂದರ್ಭದಲ್ಲಿ ಕಂಬಳ ಕ್ರೀಡೆಯ ಮಹತ್ವ ಹಾಗೂ ಅದರ ಹಿಂದಿರುವ ವೈಶಿಷ್ಟವನ್ನು Attorney General ಮುಖೇನ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಾಂವಿಧಾನಿಕ ಪೀಠಕ್ಕೆ ಸವಿವರವಾಗಿ ತಿಳಿಸಲು ವಿಫಲವಾದರೆ ಖಂಡಿತವಾಗಿ ಕಂಬಳಕ್ಕೆ ಕೊನೆ ಮೊಳೆ ಹೊಡೆದಂತಾಗುತ್ತದೆ. ಹಾಗೇನಾದರೂ ಆದರೆ ಆ ನಂತರ ಕೇಂದ್ರ ಸರ್ಕಾರವು ಹೊಸ ಕಾನೂನು ರಚನೆ ಮಾಡಬೇಕೇ ಹೊರತು, ಬೇರೆ ಯಾವುದೇ ಕಾನೂನು ಹೋರಾಟ ಸಾಧ್ಯವಿಲ್ಲ.

ಆದುದರಿಂದ ಮಾನ್ಯ ಕಾನೂನು ಸಚಿವರು ಈ ವಿಷಯದಲ್ಲಿ ತಕ್ಷಣ ಮಧ್ಯೆ ಪ್ರವೇಶಿಸಿ, ಸಾಂವಿಧಾನಿಕ ಪೀಠಕ್ಕೆ ಮನವರಿಕೆ ಮಾಡಲು ರಾಜ್ಯ ಸರ್ಕಾರದ Advocate General ಮುಖಾಂತರ Attorney General ರವರಿಗೆ ತೀವ್ರ ಒತ್ತಡ ತರಬೇಕೆಂದು ಪ್ರಸ್ತಾಪಿಸುತ್ತಿದ್ದೇನೆ.

~~(ಮುಂದು) . . .~~

(570)19.12.2018,2.30,ಟಿಸಿಹೆಚ್–ಎಂಡಿ

~~(ಸಭಾಪತಿಯವರ ಉಪಸ್ಥಿತಿ)~~

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವಂತೆ, ಕಳೆದ ಸರ್ಕಾರದಲ್ಲಿ ನಾವು ಕಂಬಳ ಕ್ರೀಡಿಯನ್ನು ಮುಂದುವರೆಸುವುದಕ್ಕೆ ಕಾನೂನಿನಲ್ಲಿ ತಿದ್ದುಪಡಿಯನ್ನು ಮಾಡಿ, ಅವೊತ್ತಿನ ದಿನ ಏನು ಆತಂಕ ಬಂದಿತ್ತು, ಆ ಆತಂಕವನ್ನು ನಿವಾರಣೆ ಮಾಡಿ, ಈ ಕಂಬಳ ಕ್ರೀಡೆ ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವು. ಅದಕ್ಕೆ *PETA* (*People for the Ethical Treatment of Animals*) ಮತ್ತು ಇತರ ಸಂಸ್ಥೆಗಳು ಮೇಲ್ಮನವಿಯನ್ನು ಸಲ್ಲಿಸಿದ್ದಾರೆ. ಆದರೂ ಕೂಡ ಕರ್ನಾಟಕದ ಪರವಾಗಿ ವಾದವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಪಷ್ಟವಾಗಿ ಮಂಡನೆ ಮಾಡಬೇಕು. ಕರ್ನಾಟಕದ ಅಭಿಪ್ರಾಯ, ನಿಲುವನ್ನು ವ್ಯಕ್ತಪಡಿಸುವಲ್ಲಿ ಯಾವುದೇ ನ್ಯೂನತೆಗಳು ಇರಬಾರದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಇದರ ಬಗ್ಗೆ ನಾವು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮನ್ನೂ ಕೂಡ ಬಾಜಿದಾರನ್ನಾಗಿ ಮಾಡಬೇಕಾಗುತ್ತದೆ ಎಂದು ಅಂದುಕೊಳ್ಳುತ್ತೇನೆ. ಒಂದು ವೇಳೆ, ಬಾಜಿದಾರರು ಇದ್ದಲ್ಲಿ ಖಂಡಿತವಾಗಿ ಅದರಲ್ಲಿ ನಮ್ಮ ವಾದವನ್ನು ಮಂಡಿಸುತ್ತೇವೆ. ಆ ರೀತಿ ಆಗದಿದ್ದರೆ ನಮ್ಮ Advocate General ರವರ ಮುಖಾಂತರ ಮಾಡಿಸುತ್ತೇವೆ. Impleading ಆಗುವುದರ ಬಗ್ಗೆಯೂ ಕೂಡ examine ಮಾಡುತ್ತಿದ್ದೇವೆ. ಮತ್ತೆ *Attorney General* ರವರಿಗೆ ಏನು ಹೇಳಬೇಕಿದೆ. ಅದಕ್ಕೆ ನಮ್ಮ ಕಡೆಯಿಂದ ನಮ್ಮ ವಾದವನ್ನು ಅವರಿಗೆ ಪುಷ್ಟೀಕರಿಸುವುದಕ್ಕೆ ಸಹಾಯ ಮಾಡುವಂತಹ ಕೆಲಸವನ್ನು ಕೂಡ ಮಾಡುತ್ತೇವೆ.

**ಎ)ವಿಷಯ:- ಎಸ್.ಎಸ್.ಎ/ ಆರ್.ಎಂ.ಎಸ್.ಎ. ಶಿಕ್ಷಕರಿಗೆ ಕಳೆದ ಹತ್ತು ತಿಂಗಳಿನಿಂದ ವೇತನ ಬಿಡುಗಡೆಯಾಗದಿರುವ ಬಗ್ಗೆ.**

----

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕೆಲಸ ಮಾಡುತ್ತಿರುವಂತಹ ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ ಶಿಕ್ಷಕರಿಗೆ ತಿಂಗಳಿಗೆ ಸರಿಯಾಗಿ ಸಂಬಳ ಸಿಗುತ್ತಿಲ್ಲ. ವಿಶೇಷವಾಗಿ ಕೋಲಾರ ತಾಲ್ಲೂಕಿನ ರಾಜಕಲ್ಲಹಳ್ಳಿ ಸರ್ಕಾರಿ ಪ್ರಾಥಮಿಕ ಪಾಠ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸುಮಾರು 7 ಜನ 1 ಆರ್.ಎಂ.ಎಸ್.ಎ ಶಿಕ್ಷಕರಿಗೆ ಕಳೆದ 10 ತಿಂಗಳಿನಿಂದ ಸಂಬಳ ಸಿಗದೆ ಬಹಳ ತೊಂದರೆಗೀಡಾಗಿರುತ್ತಾರೆ. ಇದೇ ರೀತಿ ಬಂಗಾರಪೇಟೆ ತಾಲ್ಲೂಕಿನಲ್ಲಿ ಸುಮಾರು 35 ಜನ ಆರ್.ಎಂ.ಎಸ್.ಎ. ಶಿಕ್ಷಕರಿಗೆ 8 ತಿಂಗಳಿನಿಂದ ಸಂಬಳ ಆಗಿರುವುದಿಲ್ಲ.

ಈ ಸಂಬಂಧ ಹತ್ತು ಹಲವಾರು ಬಾರಿ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡಂತೆ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ಹಾಗೂ ಪ್ರಧಾನ

ಕಾರ್ಯದರ್ಶಿಗಳ ಸಮಕ್ಷಮದಲ್ಲಿ ಚರ್ಚಿಸಿದರೂ ಸಹ ಸಮಸ್ಯೆಗೆ ಪರಿಹಾರ ಸಿಕ್ಕಿರುವುದಿಲ್ಲ. ಈ ಅಧಿಕಾರಿಗಳು ಇವರ ಜವಾಬ್ದಾರಿಯನ್ನು ಆರ್ಥಿಕ ಇಲಾಖೆಯ ಮೇಲೆ ಹೊರಿಸಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಒಟ್ಟಾರೆಯಾಗಿ, ಶಿಕ್ಷಣ ಇಲಾಖೆಯ ಕಾರ್ಯನಿರ್ವಹಣೆಯ ವೈಫಲ್ಯದಿಂದಾಗಿ ರಾಜ್ಯದಲ್ಲಿನ ಎಸ್.ಎಸ್.ಎ ಹಾಗೂ ಆರ್.ಎಂ.ಎಸ್.ಎ. ಶಿಕ್ಷಕರಿಗೆ ಸಂಬಳವಿಲ್ಲದೆ ಅವರ ಜೀವನ ಕಷ್ಟಕರವಾಗಿದೆ ಹಾಗೂ ದಕ್ಷತೆಯಿಂದ ಕೆಲಸ ನಿರ್ವಹಿಸಲು ಆಗದಿರುವುದರಿಂದ, ಗುಣಾತ್ಮಕ ಶಿಕ್ಷಣ ಕಲ್ಪನೆಗೆ ಕುತ್ತು ಬಂದಿರುತ್ತದೆ. ಆದ್ದರಿಂದ ತಕ್ಷಣವೇ ಮೇಲ್ಕಂಡ ಶಿಕ್ಷಕರಿಗೆ ಸಂಬಳ ಬಿಡುಗಡೆ ಮಾಡಬೇಕು ಮತ್ತು ಈ ವಿಳಂಬಕ್ಕೆ ಸಂಬಂಧಿಸಿದ ಶಿಕ್ಷಣ ಇಲಾಖೆಯ



Formatted: Font: Bold

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಜ್ಯ ಮಟ್ಟದ ಹಿರಿಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಹಾಗೂ ಈ ವಿಷಯವನ್ನು ಶೂನ್ಯವೇಳೆಯಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆ ಸಂಬಂಧಪಟ್ಟಂತಹ ಹಿರಿಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜುರುಗಿಸಬೇಕು ಎನ್ನುವುದು. ಮತ್ತೊಂದು ಕಡೆ ಶಿಕ್ಷಕರ ವೇತನ ಬಿಡುಗಡೆಗೊಳಿಸಲು ಬಾಕಿ ಇರುವುದರ ಬಗ್ಗೆ ಹೇಳಿದ್ದಾರೆ, ನಾನು ಆ ಜಿಲ್ಲೆಯ ಉಸ್ತುವಾರಿ ಸಚಿವನಾಗಿದ್ದೇನೆ. ನಾನು ಕೂಡ ಸರ್ಕಾರದ ಕಾರ್ಯದರ್ಶಿಗಳ ಬಳಿ ಈ ಸಂಬಂಧ ಮಾತನಾಡುತ್ತೇನೆ. ಇದು policy issue ಇದೆಯೋ ಅಥವಾ implementation issue ಇದೆಯೋ ಅದನ್ನು ಪರಿಶೀಲಿಸಿ, sort out ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಉತ್ತರವನ್ನು ಶಿಕ್ಷಣ ಸಚಿವರಿಂದ ಪಡೆದು ಕೊಡುತ್ತೇವೆ. Operational issue ಆಗಿದ್ದಲ್ಲಿ, ನಾನು ಕೂಡ ಅವರ ಬಳಿ ಮಾತನಾಡಿ ಅದನ್ನು sort out ಮಾಡುತ್ತೇನೆ.

Formatted: Font: Bold

ಏ)~~ವಿಷಯ:–~~ **ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ "ರಾಜ್ಯದಲ್ಲಿ 5272 ಗ್ರಾಮಗಳಲ್ಲಿ ಶಾಲೆ ಇಲ್ಲ" ಎಂಬ ವಿಷಯದ ಕುರಿತು.**

Formatted: Font: Bold

----

**ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ "ರಾಜ್ಯದಲ್ಲಿ 5272 ಗ್ರಾಮಗಳಲ್ಲಿ ಶಾಲೆ ಇಲ್ಲ" ಎಂಬ ವಿಷಯದ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಶಿಕ್ಷಣ ಇಲಾಖೆಯು ನಡೆಸಿದ ಉಪಗ್ರಹ ಆಧಾರಿತ ಮ್ಯಾಪಿಂಗ್‌ನಿಂದ 5272 ಗ್ರಾಮಗಳಲ್ಲಿ ಶಾಲೆಗಳೇ ಇಲ್ಲದಿರುವುದು ಬೆಳಕಿಗೆ ಬಂದಿದೆ. ಈ ಎಲ್ಲಾ ಗ್ರಾಮಗಳು ಒಂದು ಕಿ.ಮೀ ವ್ಯಾಪ್ತಿಯಲ್ಲಿಯೂ ಪ್ರಾಥಮಿಕ ಶಾಲೆಗಳು ಇಲ್ಲದಿರುವ ಕಾರಣ, ಅಲ್ಲಿನ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತಾಗಿದೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಸರ್ಕಾರಿ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಾರಂಭಿಸಲು ಉತ್ಸುಕರಾಗಿದ್ದಾರೆ. ಆದರೆ, ಉಪಗ್ರಹ ಮ್ಯಾಪಿಂಗ್ ಪ್ರಕಾರ, ಸಾವಿರಾರು ಊರುಗಳ ಮಕ್ಕಳು ಕನ್ನಡ ಮಾಧ್ಯಮ ಶಿಕ್ಷಣಕ್ಕಾಗಿಯೇ ಬೇರೆ ಊರುಗಳಿಗೆ ಅಲೆಯುವಂತಾಗಿದೆ. ಗ್ರಾಮಾಂತರ ಭಾಗದ ಜನ, ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕಿಂತ ಕೃಷಿ ಚಟುವಟಿಕೆಯಲ್ಲಿ ತೊಡಗಿಸುವತ್ತ ಹೆಚ್ಚಿನ ಆದ್ಯತೆ ನೀಡುತ್ತಾರೆ. ಇಂತಹ ಸನ್ನಿವೇಶದಲ್ಲಿ ಇಷ್ಟೊಂದು ಗ್ರಾಮಗಳಲ್ಲಿ ಶಾಲೆಗಳೇ ಇಲ್ಲದಿರುವುದು ಅಲ್ಲಿನ ಮಕ್ಕಳ ಶಿಕ್ಷಣದ ಹಕ್ಕನ್ನು ಕಸಿದುಕೊಂಡಂತಾಗಿದೆ.

ಶ್ರೀ ಗೋವಿಂದ ಸಮಿತಿಯ ವರದಿ ಅನ್ವಯ 2012ರಲ್ಲಿ 3000 ಕ್ಕೂ ಹೆಚ್ಚು ಶಾಲೆಗಳನ್ನು ಹತ್ತಿರದ ಶಾಲೆಗಳಲ್ಲಿ ವಿಲೀನ ಮಾಡಲಾಯಿತು. ಹಾಗೆಯೇ, ಸದ್ಯ 5272 ಗ್ರಾಮಗಳಲ್ಲಿ ಶಾಲೆಗಳೇ ಇಲ್ಲದ ಪರಿಸ್ಥಿತಿ ತಲೆದೋರಿದೆ. ಈ ವಿಷಯದ ಕುರಿತು ಮಾನ್ಯ ಮುಖ್ಯಮಂತ್ರಿಗಳು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ಕುರಿತು ತಜ್ಞರೊಂದಿಗೆ ಪರಾಮರ್ಶಿಸಿ, ಸತ್ಯಾಸತ್ಯತೆಯನ್ನು ಕಂಡುಹಿಡಿದು ಶಾಲೆಗಳು ಇಲ್ಲದ ಗ್ರಾಮಗಳಲ್ಲಿ ಶಾಲೆ ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳಿಗೆ ನ್ಯಾಯ ಒದಗಿಸಲು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆಯ ಕಡೆಯಿಂದ ಉತ್ತರ ಪಡೆದು, ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದ ಇದಕ್ಕೆ ಉತ್ತರವನ್ನು ಕೊಡಿಸಲಾಗುವುದು.

Formatted: Centered

**ಐ) ~~ವಿಷಯ:-~~ ಜೆ.ಓ.ಸಿ.ಶಿಕ್ಷಕರನ್ನು ಖಾಯಂಗೊಳಿಸುವ ಕುರಿತು.**

Formatted: Font: Bold

-----

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜೆ.ಓ.ಸಿ. ಶಿಕ್ಷಕರನ್ನು ದಿನಾಂಕ 06.04.2011ರಂದು ವಿಶೇಷ ವಿಧೇಯಕದ ಅನ್ವಯ ಸುಮಾರು 3500 ಜೆ.ಓ.ಸಿ. ಶಿಕ್ಷಕರಲ್ಲಿ ಸುಮಾರು 3000 ಶಿಕ್ಷಕರನ್ನು ದಿನಾಂಕ 06.04.2011ಕ್ಕಿಂತ ಹಿಂದಿನ ಕನಿಷ್ಠ 05 ವರ್ಷಗಳ ಸೇವೆ ಸಲ್ಲಿಸಿರುವಂತಹ ಸಿಬ್ಬಂದಿಯನ್ನು ಸಕ್ರಮಾತಿ ಮಾಡಿ ಖಾಯಂ ಮಾಡಲಾಯಿತು. ಆದರೆ 05 ವರ್ಷ ಪೂರ್ಣಗೊಳಿಸದೇ ಬಾಕಿ ಇರುವ ಸುಮಾರು 500 ಜೆ.ಓ.ಸಿ ಶಿಕ್ಷಕರನ್ನು ಸೇವೆ ಖಾಯಂಗೊಳಿಸಿರುವುದಿಲ್ಲ. ಸೇವೆ ಸಕ್ರಮಾತಿಯಿಂದ ಅನ್ಯಾಯಕ್ಕೊಳಗಾದ ಶಿಕ್ಷಕರು ದಿನಾಂಕ 14.12.2018 ಬೆಳಗಾವಿಯ ಸುವರ್ಣ ವಿಧಾನಸೌಧದ ಬಳಿ ಸೇವಾ ಸಕ್ರಮಾತಿ ಮಾಡುವಂತೆ ಆಗ್ರಹಿಸಿ ಹೋರಾಟ ಮಾಡಿರುವುದು ದಿನಪತ್ರಿಕೆಗಳಲ್ಲಿ ವರದಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದುದರಿಂದ ಮಾನವೀಯತೆ ಹಿನ್ನೆಲೆಯಲ್ಲಿ, ಕೈಗೊಂಡ ವಿಧೇಯಕದಲ್ಲಿ ಒಂದೇ ಕಾನೂನು ಹಾಗೂ ಒಂದೇ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವುದರಿಂದ, ಸದರಿ ವಿಧೇಯಕಕ್ಕೆ ತಿದ್ದುಪಡಿ ತಂದು, 05 ವರ್ಷ ಸೇವೆ ಪೂರ್ಣಗೊಳಿಸದೇ ಬಾಕಿ ಇರುವ ಸುಮಾರು 500 ಜೆ.ಓ.ಸಿ. ಶಿಕ್ಷಕರನ್ನೂ ಸಹ ಸೇವೆ ಖಾಯಂ ಮಾಡಲು ಕ್ರಮ ವಹಿಸಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಶಿಕ್ಷಣ ಇಲಾಖೆಯ ಸಚಿವರ ಕಡೆಯಿಂದ ಉತ್ತರ ಪಡೆದು ಒದಗಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**4. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪ ಮಾಡಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ</u>**

**ಅ) ರಾಜ್ಯ ಸರ್ಕಾರಿ ನೌಕರರಿಗೆ ಪರಿಮಿತಿ ರಜಾ ಪಟ್ಟಿಯಲ್ಲಿ ಕ್ರೈಸ್ತ ಸಮುದಾಯದವರಿಗೆ ಪವಿತ್ರ ಹಬ್ಬವಾದ ಕನ್ಯಾಮರಿಯಮ್ಮ ಜಯಂತಿ ಹಬ್ಬವನ್ನು ಸೇರಿಸುವ ಬಗ್ಗೆ.**

----

**ಶ್ರೀ ಕೃಷ್ಣಭೈರೇಗೌಡ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ದಿನಾಂಕ 18.12.2018ರಂದು ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ನೀಡುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**



Formatted: Font: Bold

**ಆ) ಬೆಳಗಾವಿಯಲ್ಲಿನ ಸುವರ್ಣ ವಿಧಾನಸೌಧಕ್ಕೆ ಕೆಲವು ಕಛೇರಿಗಳನ್ನು ಸ್ಥಳಾಂತರಿಸುವ ಬಗ್ಗೆ.**

Formatted: Font: Bold

----

**ಶ್ರೀ ಕೃಷ್ಣಭೈರೇಗೌಡ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ದಿನಾಂಕ 18.12.2018ರಂದು ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ನೀಡುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಇ) ಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿನ ಭತ್ತ ಖರೀದಿ ಕೇಂದ್ರದಲ್ಲಿ ನೋಂದಣಿ ಮಾಡಿಸಿಲ್ಲವೆಂಬ ಕಾರಣಕ್ಕೆ ಜ್ಯೋತಿ ತಳಿ ಭತ್ತವನ್ನು ಖರೀದಿಸಲು ನಿರಾಕರಿಸುತ್ತಿರುವ ಬಗ್ಗೆ.**

----

**ಶ್ರೀ ಕೃಷ್ಣಭೈರೇಗೌಡ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಹಾಗೂ ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 18.12.2018ರಂದು ಮಾನ್ಯ ಸದಸ್ಯರಾದ ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ನೀಡುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Formatted: Font: Bold

**ಈ) ಕೈಗಾ ಪರಮಾಣು ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕ ನಿರ್ಮಾಣಕ್ಕೆ ಸಾರ್ವಜನಿಕರ ವಿರೋಧದ ಬಗ್ಗೆ.**

Formatted: Font: Bold

----

**ಶ್ರೀ ಕೃಷ್ಣಭೈರೇಗೌಡ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 18.12.2018ರಂದು ಮಾನ್ಯ ಸದಸ್ಯರಾದ ಶ್ರೀ ಶ್ರೀಕಾಂತ ಎಲ್.ಘೋಟ್ನೆಕರರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ನೀಡುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ 3 ಗಂಟೆ 45 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

~~**(ಸದನವನ್ನು ಮಧ್ಯಾಹ್ನ 2 ಗಂಟೆ 38 ನಿಮಿಷದಿಂದ ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆ 45 ನಿಮಿಷದವರೆಗೆ ಮುಂದೂಡಲಾಯಿತು)**~~

(571) 19-12-2018/4-00/ಕೆಹೆಚ್-ಎಕೆ

~~(ಸಭಾಪತಿಯವರ ಉಪಸ್ಥಿತಿ)~~

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 38 ನಿಮಿಷಕ್ಕೆ ಮುಂದೂಡಿದ್ದು ಪುನಃ ಮಧ್ಯಾಹ್ನ ~~ನಂತರ ಗಂಟೆ~~ 4 ಗಂಟೆ 07 ನಿಮಿಷಕ್ಕೆ ~~ಪುನಃ~~ ಸಮಾವೇಶಗೊಂಡಿತು).**

**(ಪೀಠದಲ್ಲಿ ಮಾನ್ಯ ಸಭಾಪತಿಯವರು ಉಪಸ್ಥಿತರಿದ್ದರು)**

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮುಂದಿನ ಬೆಂಚ್‌ನಲ್ಲಿ ಯಾವ ಸದಸ್ಯರು ಹಾಜರಾಗಿರುವುದಿಲ್ಲ. ಮಾನ್ಯ ಸಭಾನಾಯಕರು, ಮಾನ್ಯ ಮಂತ್ರಿಗಳು, ಮಾನ್ಯ ಸದಸ್ಯರು ಯಾರು ಹಾಜರಾಗಿದ್ದಾರೆ? ಈ ಸರ್ಕಾರಕ್ಕೆ ಏನಾಗಿದೆ? ಸರ್ಕಾರ ಇದೆಯೇ ಅಥವಾ ಇಲ್ಲವೇ ಎಂದು ನಾನು ಕೇಳುತ್ತಿದ್ದೇನೆ. ಸರಿಯಾಗಿ ಉತ್ತರವನ್ನು ಕೊಡುವುದಿಲ್ಲ. ಪ್ರಶ್ನೆಗಳಿಗೆ ಸರಿಯಾಗಿ ತಯಾರಾಗಿ ಬರುವುದಿಲ್ಲ. ಸರಿಯಾಗಿ ರಿವ್ಯೂ ಮಾಡಿಕೊಂಡು ಬರುವುದಿಲ್ಲ. ಸರ್ಕಾರಕ್ಕೆ ಏನಾಗಿದೆ?

**ಸಭಾಪತಿಯವರು:-** ಮಾನ್ಯ ಸದಸ್ಯರೇ ಕುಳಿತುಕೊಳ್ಳಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಜಯಮಾಲ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಯಾವ ಪ್ರಶ್ನೆಗೆ ಉತ್ತರವನ್ನು ಕೊಟ್ಟಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕು.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, 500 ಪ್ರಶ್ನೆಗಳಲ್ಲಿ 300 ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. 200 ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿಲ್ಲ.

**5. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

~~ಕಾರ್ಯದರ್ಶಿಯವರ ವರದಿ~~

**ಕಾರ್ಯದರ್ಶಿಯವರು:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2018
2. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ, 2018

**ಸಭಾಪತಿಯವರು:-** ಮಂಡಿಸಲಾಯಿತು.

6.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಪುಟ್ಟರಂಗ ಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಸಿ.ಪುಟ್ಟರಂಗ ಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995ನ್ನು (3)ನೇ ಪ್ರಕರಣದಡಿ (2)ನೇ ಉಪ ಪ್ರಕರಣದ ಪ್ರಕಾರ ಒಬ್ಬರು ಅಧ್ಯಕ್ಷರು ಹಾಗೂ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ವಿಷಯದ ಬಗ್ಗೆ ವಿಶೇಷ ಜ್ಞಾನವುಳ್ಳ ಐದು ವ್ಯಕ್ತಿಗಳು ಸದಸ್ಯರಾಗಿರುತ್ತಾರೆ. ಶ್ರೀ ಹೆಚ್. ಕಾಂತರಾಜು ರವರ ನೇತೃತ್ವದಲ್ಲಿ ಹಾಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿದ ವಿಶೇಷವಾದ ವರದಿಯಲ್ಲಿ ಆಯೋಗದ ಅಧಿನಿಯಮ, 1995 ಕ್ಕೆ ಈ ಕೆಳಕಂಡಂತೆ ತಿದ್ದುಪಡಿ ಮಾಡಲು ಶಿಫಾರಸ್ಸು ಮಾಡಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995ರ (3)ನೇ ಪ್ರಕರಣದಡಿ (2)ನೇ ಉಪ ಪ್ರಕರಣದ (ಸಿ) ಖಂಡದಲ್ಲಿ 'ಇವರಲ್ಲಿ' ಎಂಬ ಪದದ ನಂತರ "ಒಬ್ಬ ಸಮಾಜ ವಿಜ್ಞಾನಿಯಾಗಿರತಕ್ಕದ್ದು." ಪದಗಳಿಗೆ ಮೊದಲು 'ಒಬ್ಬ ಮಹಿಳೆ' ಎಂದು ಸೇರಿಸಿ ಅಧಿನಿಯಮ, 1995ರ ತಿದ್ದುಪಡಿ ಮಾಡುವುದು. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995ರ ಮುಖ್ಯ ಉದ್ದೇಶ ಹಿಂದುಳಿದ ವರ್ಗಗಳನ್ನು ಗುರುತಿಸುವುದು, ಅದರಲ್ಲೂ ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರ ಹಿತಾಸಕ್ತಿಗಳನ್ನು ರಕ್ಷಿಸುವುದು ಹಾಗೂ ಹಿಂದುಳಿದ ವರ್ಗಗಳ ಸಮಸ್ಯೆಗಳಿಗೆ ಅನುಗುಣವಾಗಿ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಮೇಲ್ವಿಚಾರಣೆ ಮಾಡುವಾಗ ಅದರಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಿಂದುಳಿದ ವರ್ಗಗಳ ಮಹಿಳೆಯರಿಗೆ ಸಂಬಂಧಪಟ್ಟ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಸೂಕ್ತವಾದ ಸಲಹೆಗಳನ್ನು ಸರ್ಕಾರಕ್ಕೆ ನೀಡಬೇಕಾಗಿರುತ್ತದೆ. ಆದ್ದರಿಂದ ಮಹಿಳಾ ಸದಸ್ಯರಾದ ನಾಮನಿರ್ದೇಶನವಾದ ಹಿಂದುಳಿದ ವರ್ಗಗಳಲ್ಲಿ ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸಹಕಾರಿಯಾಗಲಿದೆ.

~~(ಮುಂದು)~~

-(572) 19-12-2018 (4-10) ಎಸ್‌ಪಿಆರ್-ಆರ್‌ಎನ್

~~(ಸಭಾಪತಿಯವರ ಉಪಸ್ಥಿತಿ)~~

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ವಿಧೇಯಕಕ್ಕೆ ಬಹಳ ಸರಳವಾದ ತಿದ್ದುಪಡಿಯನ್ನು ತಂದಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗವು ಬಹಳ ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದು ನಾನು ಭಾವಿಸುತ್ತೇನೆ. ಇದೇ ಆಯೋಗದ ಬಗ್ಗೆ ಸದನದಲ್ಲಿ ಪ್ರಶಂಸನೆಯನ್ನೂ ಸಹ ಮಾಡಲಾಗಿದೆ. ಆಯೋಗ ಮಾಡಿರುವ ಕೆಲಸಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಸರ್ಕಾರ ವಿಫಲವಾಗಿರುವ ಬಗ್ಗೆ ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಗಿದೆ. ಸದರಿ ಚರ್ಚೆಗೆ ಪೂರಕವಾಗಿ ಎಲ್ಲಾ ವರ್ಗಕ್ಕೆ ಸೇರಿದ ಆಡಳಿತ ಹಾಗೂ ವಿರೋಧ ಪಕ್ಷದ ಜನಪ್ರತಿನಿಧಿಗಳು ಜಾತಿ ಗಣತಿ ಸಮೀಕ್ಷೆಯನ್ನು ಆದಷ್ಟು ಬೇಗನೆ ಸದನದಲ್ಲಿ ಮಂಡಿಸಬೇಕು ಎನ್ನುವ ಕೂಗು ಬಹಳ ದೊಡ್ಡ ಪ್ರಮಾಣದಲ್ಲಿ ಇದ್ದರೂ ಸಹ ಈ ವಿಚಾರದಲ್ಲಿ ಸರ್ಕಾರ ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಅಂದರೆ ಈ ವಿಚಾರದಲ್ಲಿ ಸರ್ಕಾರದ ಕಾಳಜಿ ಗೊತ್ತಾಗುತ್ತದೆ. ಹಿಂದುಳಿದ ವರ್ಗಗಳ ಆಯೋಗಕ್ಕೆ ಇರುವ ಐದು ಸದಸ್ಯರುಗಳ ಪೈಕಿ ಒಬ್ಬರು ಮಹಿಳೆಯಾಗಿರತಕ್ಕದ್ದು ಮತ್ತು ಒಬ್ಬರು ಸಮಾಜ ವಿಜ್ಞಾನಿಯಾಗಿರತಕ್ಕದ್ದು ಎಂಬುದಾಗಿ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿರುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಸಮರ್ಥವಾಗಿ ಕೆಲಸ ನಿರ್ವಹಿಸುತ್ತಿರುವ ಆಯೋಗದಿಂದ ಬಂದ ಫಲಶೃತಿಯಿಂದಾಗಿ 154 ಕೋಟಿ ರೂಪಾಯಿಗಳಷ್ಟು ಹಣವನ್ನು ವ್ಯಯ ಮಾಡಿ ಜಾತಿ ಸಮೀಕ್ಷೆಯ ವರದಿಯನ್ನು ತಯಾರಿಸಲಾಗಿದೆ. ಆದರೆ ಸದರಿ ವರದಿಯನ್ನು ಸದನದಲ್ಲಿ ಇದುವರೆವಿಗೂ ಮಂಡಿಸುವುದಕ್ಕೆ ಏಕೆ ಆಗಲಿಲ್ಲ? ಇದೇ ವಿಚಾರವಾಗಿ ನಮ್ಮ ಮಾನ್ಯ ಸದಸ್ಯರುಗಳಾದ ಶ್ರೀಯುತ ಕೆ.ಸಿ.ಕೊಂಡಯ್ಯ, ಹೆಚ್.ಎಂ.ರೇವಣ್ಣ, ಎನ್.ರವಿಕುಮಾರ್, ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ ರವರುಗಳೆಲ್ಲರೂ ಸಹ ದೊಡ್ಡ ಪ್ರಮಾಣದಲ್ಲಿ ಮಾತುಗಳನ್ನಾಡಿದ್ದಾರೆ. ಇಷ್ಟು ಅಸಹಾಯಕರಾಗಿ ಮಂತ್ರಿಗಳು ಕೆಲಸ ಮಾಡಿದರೆ, ಜನರಿಗೆ ನ್ಯಾಯ ಸಿಗುವುದು ಹೇಗೆ? ಸದನಕ್ಕೆ ತಪ್ಪು ಸಂದೇಶ ಕೊಡಬಾರದು. ಪತ್ರಿಕೆ, ಮಾಧ್ಯಮ ಹಾಗೂ ಇತರೆ ಕಡೆಗಳಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಜಾತಿ ಗಣತಿ ಸಮೀಕ್ಷೆಯ ವರದಿಯು ಸರ್ಕಾರದ ಕೈ ಸೇರಿದೆ. ಇದು ನನ್ನ ಗಮನಕ್ಕೂ ಸಹ ಬಂದಿದೆ. ನಾನು ಹೇಳುವುದು ತಪ್ಪಾಗಿದ್ದರೆ ಮಾನ್ಯ ಮಂತ್ರಿಗಳು ಅದನ್ನು ತಿದ್ದಲಿ. ಇದೇ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಷಯವು ಸದನದಲ್ಲಿಯೂ ಸಹ ಚರ್ಚೆಯಾಗಿದೆ ಹಾಗೂ ಹಿರಿಯ ಸದಸ್ಯರೂ ಇದರ ಬಗ್ಗೆ ಹೇಳಿದ್ದಾರೆ. ಆದರೆ ಸರ್ಕಾರ ಯಾವ ಕಾರಣಕ್ಕಾಗಿ ಸದರಿ ವರದಿಯನ್ನು ಸದನದಲ್ಲಿ ಮಂಡನೆ ಮಾಡಲು ಆಗುತ್ತಿಲ್ಲ ಎಂಬ ಅಂಶದ ಬಗ್ಗೆ ಬೆಳಕನ್ನು ಚೆಲ್ಲಬೇಕು. ಪ್ರಸ್ತುತ ವಿಧೇಯಕಕ್ಕೆ ಮಹತ್ವದ ತಿದ್ದುಪಡಿ ತರುವ ಮೂಲಕ ಆಯೋಗಕ್ಕೆ ಇನ್ನೂ ಹೆಚ್ಚಿನ ಶಕ್ತಿಯನ್ನು ಕೊಡುವಂತಹ ಆಸೆಯನ್ನು ಸರ್ಕಾರವು ಇಟ್ಟುಕೊಂಡಿದೆ, ಅದಕ್ಕೆ ಪೂರಕವಾಗಿ ಕೆಲಸ ಮಾಡಿದಂತಾಗುತ್ತದೆ. ಇಲ್ಲದಿದ್ದರೆ, ಸುಖಾಸುಮ್ಮನೆ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದರೆ ಯಾವುದೇ ಪ್ರಯೋಜನವಾಗುವುದಿಲ್ಲ. ಐದು ಜನ ಸಮರ್ಥರಿದ್ದ ಆಯೋಗದಲ್ಲಿ ಎಲ್ಲಾ ರೀತಿಯ ವಿಚಾರಗಳನ್ನು ಚರ್ಚೆ ಮಾಡಿ ಸಮೀಕ್ಷಾ ವರದಿಯನ್ನು ತಯಾರಿಸಿದೆ. ಇದರ ಮುಖಾಂತರ ಹಿಂದುಳಿದ ವರ್ಗಕ್ಕೆ ಅನುಕೂಲ ಮಾಡಬೇಕು ಹಾಗೂ ಆ ವರ್ಗದ ಜನರಿಗೆ ನ್ಯಾಯ ದೊರಕಿಸಿಕೊಡಬೇಕು, ಆ ವರ್ಗದವರನ್ನು ಸಬಲೀಕರಣಗೊಳಿಸಬೇಕು ಇಂತಹ ಕಾರಣಗಳಿಗಾಗಿ ತಯಾರಿಸಿದ ವರದಿಯನ್ನು ಸದನದಲ್ಲಿ ಮಂಡಿಸಲು ಸರ್ಕಾರ ಇಷ್ಟಪಡದಿದ್ದರೆ, ಆಯೋಗದಲ್ಲಿ ಮಹಿಳಾ ಹಾಗೂ ಸಮಾಜ ವಿಜ್ಞಾನಿಗಳಂತಹ ಸದಸ್ಯರುಗಳನ್ನು ಸೇರ್ಪಡೆಗೊಳಿಸಿದರೆ ಯಾವ ರೀತಿಯ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ದಯಮಾಡಿ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಬೆಳಕನ್ನು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ, 2018ಕ್ಕೆ ತಂದಿರುವ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತೇನೆ. ವಿರೋಧ ಪಕ್ಷದ ಮಾನ್ಯ ಉಪ ನಾಯಕರು ಹೇಳಿದ ರೀತಿಯಲ್ಲಿ ಹಾಗೂ ಕಳೆದ ಬಾರಿ ನಾವು ಎರಡು ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಮಾನ್ಯ ಮಂತ್ರಿಗಳು ಒಂದು ಪಟ್ಟಿಯನ್ನು ನೀಡಿ, ಇದಕ್ಕೆ ಸಂಬಂಧಪಟ್ಟ ಸಮಿತಿಯನ್ನು ರಚನೆ ಮಾಡಲಾಗಿದೆ ಎಂಬುದಾಗಿ ಹೇಳಿದರು. ಇದರ ಬಗ್ಗೆ ದಾಖಲೆಗಳನ್ನು ನೋಡಬಹುದು. ಸದರಿ ಸಮಿತಿಯು ನೀಡಿರುವ ವರದಿಯನ್ನು ಈಗ ನೋಡುವುದಕ್ಕಾಗಿ ನೀಡಿಲ್ಲ. ಸದರಿ ಸಮಿತಿಯನ್ನು ಈ ಹಿಂದೆ ರಚನೆ ಮಾಡಿದ ಸಂದರ್ಭದಲ್ಲಿ ಇದೇ ಸದನದಲ್ಲಿ ಬಹಳಷ್ಟು ಚರ್ಚೆಗಳಾಗಿವೆ. ಈ ಬಗ್ಗೆ ನಾವು ಹಾಗೂ ವಿರೋಧ ಪಕ್ಷದವರು ಕೇಳಿದಾಗ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಸಭೆಯನ್ನು ಮಾಡಿದ್ದರು. ಅವತ್ತಿನ ದಿವಸ ಸಾಮಾಜಿಕ ಕಳಕಳಿಯನ್ನು ಹೊಂದಿದ ಪ್ರೊಫೆಸರ್‌ಗಳನ್ನು, ವಿಜ್ಞಾನಿಗಳನ್ನು ಸೇರ್ಪಡೆಗೊಳಿಸಿ ಅಂದಿನ ದಿನವೇ ರಚನೆ ಮಾಡಿದ್ದ ಸಮಿತಿಯನ್ನು ಮಾನ್ಯ ಸಚಿವರು ಇತ್ತೀಚೆಗೆ ಮಾಡಲಾಗಿದೆ ಎಂಬುದಾಗಿ ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ ಸದನಕ್ಕೆ ತಪ್ಪು ಮಾಹಿತಿ ಹೋಗಿದೆ. ಪ್ರಸ್ತುತ ತಂದಿರುವ ತಿದ್ದುಪಡಿಯ ಬಗೆಗಿನ ಕೂಗು ಹಳ್ಳಿಯ ಗಾದೆ ಮಾತಿನಂತೆ ಸರ್ಕಾರದ ಕಿವಿಗೆ ಮುಟ್ಟುತ್ತಿಲ್ಲ. ಅದನ್ನು ಹೇಗೆ ಜಾರಿಗೆ ತರುತ್ತಾರೋ ತರಲಿ. ಹಾಲಿ ತಂದಿರುವ ತಿದ್ದುಪಡಿಯಲ್ಲಿ ಐವರು ವ್ಯಕ್ತಿಗಳಲ್ಲಿ ಒಬ್ಬ ಸಮಾಜ ವಿಜ್ಞಾನಿ

ಎಂಬ ಅಂಶವು ಇದೆ. ಆದರೆ ಈಗಾಗಲೇ ಒಬ್ಬ ಸಮಾಜ ವಿಜ್ಞಾನಿ ಆಯೋಗದಲ್ಲಿದ್ದಾರೆ. "ಒಬ್ಬರು ಮಹಿಳೆಯಾಗಿರತಕ್ಕದ್ದು" ಎಂಬ ಅಂಶವನ್ನು ನಾವು ಸ್ವಾಗತಿಸುತ್ತೇವೆ. ಇವತ್ತಿನ ದಿವಸ ಎಲ್ಲಾ ಕ್ಷೇತ್ರಗಳಲ್ಲಿ ಶೇಕಡ 50 ರಷ್ಟು ಮಹಿಳೆಯರಿದ್ದಾರೆ. ಇದು ಆಯೋಗಕ್ಕೆ ಅನ್ವಯಿಸದೇ ಇರುವುದು ಸರಿಯಲ್ಲ. ಹೀಗಾಗಿ ಈ ತಿದ್ದುಪಡಿಯನ್ನು ಜಾರಿಗೆ ತರಲಿ. ಆದರೆ ಸಮಾಜ ವಿಜ್ಞಾನಿಗಳು ಈಗಾಗಲೇ ಆಯೋಗದಲ್ಲಿ ಇದ್ದಾರೆ. ಅವರುಗಳ ಸಂಖ್ಯೆ ಐದರಲ್ಲಿ ಒಂದು ಅಥವಾ ಎರಡೇ ಎಂಬುದನ್ನು ಮಾನ್ಯ ಸಚಿವರು ಸರಿಯಾಗಿ ಸ್ಪಷ್ಟಪಡಿಸಬೇಕು. ಜಾತಿ ಸಮೀಕ್ಷಾ ವರದಿಯ ವಿಚಾರದಲ್ಲಿ ಸರ್ಕಾರವು "ಜಾಗ್ರತೆ", "ಅತೀ ಶೀಘ್ರದಲ್ಲಿ" ಎನ್ನುವಂತಹ ಪದಗಳನ್ನು ಬಳಸಿ ಸಮೀಕ್ಷೆಯ ವರದಿಯನ್ನು ತಯಾರು ಮಾಡಲಾಗುವುದು ಎಂದು ಹೇಳುವುದನ್ನು ಬಿಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ನಮಗೆ ತಿಳಿದಿರುವಂತೆ ಈಗಾಗಲೇ ಸದರಿ ವರದಿಯು ತಯಾರಾಗಿದೆ. ಆದರೆ ಸದರಿ ವರದಿಯನ್ನು ಸ್ವೀಕಾರ ಮಾಡುವ ಮನಸ್ಸು ಸರ್ಕಾರಕ್ಕೆ ಇಲ್ಲ ಎನ್ನುವುದು ಗೊತ್ತಾಗುತ್ತಿದೆ. ಅದು ಆಗಬಾರದು. ಯಾವುದೇ ಒಂದು ಸಮಾಜದ ವಿರುದ್ಧವಾಗಿ ಜಾತಿ ಸಮೀಕ್ಷೆ ನಡೆಯುತ್ತಿಲ್ಲ. ಸಾಮಾಜಿಕ ಕಳಕಳಿಯಿಂದ ಸರ್ಕಾರದ ಸವಲತ್ತುಗಳನ್ನು ಕೊಡುವ ಸಂದರ್ಭದಲ್ಲಿ ಇದಕ್ಕೆ ಅಳತೆಗೋಲನ್ನು ಲೆಕ್ಕ ಹಾಕಿದಾಗ, ಯಾರು ಯಾರಿಗೆ ಸವಲತ್ತು ದೊರೆತಿದೆ, ಯಾರಿಗೆ ದೊರೆತಿಲ್ಲ, ಅಂತಹವರುಗಳ ಸ್ಥಿತಿಗತಿಗಳೇನು ಎನ್ನುವುದನ್ನು ಕಂಡುಹಿಡಿಯುವ ನಿಟ್ಟಿನಲ್ಲಿ ಜಾತಿ ಸಮೀಕ್ಷೆಯನ್ನು ಮಾಡಲಾಗಿದೆ. ಇದರ ವರದಿಯು ಬಹಳ ಮಹತ್ವವಾದದ್ದು. ಅದನ್ನು ಸರ್ಕಾರವು ಬಿಡಗಡೆ ಮಾಡಲಿ ಎಂಬುದಾಗಿ ಒತ್ತಾಯಿಸಿ, ಈಗ ವಿಧೇಯಕಕ್ಕೆ ತಂದಿರುವ ತಿದ್ದುಪಡಿಯನ್ನು ಸ್ವಾಗತಿಸುತ್ತೇನೆ.

---

**ಶ್ರೀಮತಿ ಜಯಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 2018ಕ್ಕೆ ತಂದಿರುವ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತೇನೆ. "ಐವರು ವ್ಯಕ್ತಿಗಳು, ಇವರ ಪೈಕಿ ಒಬ್ಬರು ಮಹಿಳೆಯಾಗಿರತಕ್ಕದ್ದು ಮತ್ತು ಒಬ್ಬರು ಸಮಾಜ ವಿಜ್ಞಾನಿಯಾಗಿರತಕ್ಕದ್ದು" ಎಂಬುದಾಗಿ ಹೇಳಿದ್ದಾರೆ. ಇವತ್ತಿನ ದಿವಸ ಎಲ್ಲಾ ಕ್ಷೇತ್ರಗಳಲ್ಲಿ ಶೇಕಡ 50 ರಷ್ಟು ಮಹಿಳೆಯರು ಇರುವುದರಿಂದ ಒಬ್ಬ ಮಹಿಳೆಯ ಪೈಕಿ ಇಬ್ಬರು ಮಹಿಳೆಯರಿಗೆ ಆಯೋಗದಲ್ಲಿ ಅವಕಾಶವನ್ನು ನೀಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

---

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 2018ಕ್ಕೆ ತಂದಿರುವ ತಿದ್ದುಪಡಿಯಲ್ಲಿ "ಐವರು ವ್ಯಕ್ತಿಗಳು, ಇವರ ಪೈಕಿ ಒಬ್ಬರು ಮಹಿಳೆಯಾಗಿರತಕ್ಕದ್ದು ಮತ್ತು ಒಬ್ಬರು ಸಮಾಜ ವಿಜ್ಞಾನಿಯಾಗಿರತಕ್ಕದ್ದು" ಎಂಬುದಾಗಿ ಹೇಳಿದ್ದಾರೆ. ಮಾನ್ಯ

Formatted: Indent: First line: 0 cm

Formatted: Indent: First line: 0 cm

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಯಮ್ಮನವರು ಪ್ರಸ್ತಾಪಿಸಿದಂತೆ ಐದು ಜನರ ಪೈಕಿ ಒಬ್ಬರು ಮಹಿಳೆಯರನ್ನು ಸೇರಿಸಿ ಎಂಬುದಾಗಿ ಹೇಳಿದ್ದಾರೆ. ಕನಿಷ್ಠ ಒಂದು ಮಹಿಳೆಯನ್ನಾದರೂ ಸಹ ಆಯೋಗದಲ್ಲಿ ಸೇರಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಮನಸಿಲ್ಲವೇ? ಐದು ಜನರ ಪೈಕಿ ಒಬ್ಬ ಮಹಿಳೆ ಎಂಬುದಾಗಿ ಏಕೆ ತಿದ್ದುಪಡಿಯನ್ನು ಮಾಡುತ್ತೀರಿ? ಅದರ ಬದಲಾಗಿ ಇಬ್ಬರು ಎಂಬುದಾಗಿ ತಿದ್ದುಪಡಿ ಮಾಡಿ. ಇಬ್ಬರನ್ನು ಮಾಡದೇ ಇರಲು ಸರ್ಕಾರ ಕಾರಣ ಕೊಡಬೇಕು. ಐದು ಜನರ ಪೈಕಿ ಒಬ್ಬ ಮಹಿಳೆಯರಿಗೆ ಅವಕಾಶ ಕೊಡುವ ಸಂದರ್ಭದಲ್ಲಿ ಮೀಸಲಾತಿಯನ್ನು ಏಕೆ ನೀಡುತ್ತೀರಿ? ಈಗ ತಂದಿರುವ ತಿದ್ದುಪಡಿಯನ್ನು ಬದಲಾಯಿಸಿ, ಐದು ಜನರ ಪೈಕಿ ಒಬ್ಬರು ಬದಲಾಗಿ ಇಬ್ಬರಿಗೆ ಅವಕಾಶ ನೀಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 2018ಕ್ಕೆ ತಂದಿರುವ ತಿದ್ದುಪಡಿಯು ಬಹಳ ನೋವಿನ ವಿಚಾರವಾಗಿದೆ. ಇವತ್ತಿನ ದಿವಸ ವಿದ್ಯಾಭ್ಯಾಸದ ಮಟ್ಟ ಹೆಚ್ಚಾಗಿದೆ. 12ನೇ ಶತಮಾನದಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ಅಕ್ಕಮಹಾದೇವಿಯವರು ಪಾಲಿಸಿ ಮಾಡುವುದರಲ್ಲಿ ಭಾಗವಹಿಸಿದ್ದರು. ಮಹಿಳೆಯರ ಪಾಲ್ಗೊಳ್ಳುವಿಕೆ ಹೊಸ ವಿಚಾರವೇನೂ ಅಲ್ಲ. ಈ ದೇಶದಲ್ಲಿ 18 ವರ್ಷಗಳ ಕಾಲ ದಿವಂಗತ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದರು. ಹಲವು ರಾಜ್ಯಗಳಲ್ಲಿ ಮಹಿಳೆಯರು ಮುಖ್ಯಮಂತ್ರಿಗಳೂ ಸಹ ಆಗಿದ್ದಾರೆ. ಅಂತಹ ಹುದ್ದೆಗಳು ಯಾವುವು ಸಹ ಅನ್ಯ ರೀತಿಯಲ್ಲಿ ಕೊಟ್ಟ ಸ್ಥಾನಗಳಾಗಿಲ್ಲ. ಅವರುಗಳು ತಮ್ಮ ಸ್ವಂತ ನೇತೃತ್ವದಲ್ಲಿ ಆ ಸ್ಥಾನದವರೆಗೆ ಹೋಗಿದ್ದಾರೆ. ಮಹಿಳೆಯರಿಗೆ ಅಂತಹ ವಾತಾವರಣವನ್ನು ಕಲ್ಪಿಸಬೇಕಾಗುತ್ತದೆ. ಕರ್ನಾಟಕ ರಾಜ್ಯವು ಸುಸಂಸ್ಕೃತಿಗೆ ಮತ್ತು ಪ್ರಜ್ಞೆಗೆ ಹೆಸರುವಾಸಿಯಾದ ರಾಜ್ಯವಾಗಿದೆ. ಸದರಿ ಆಯೋಗದಲ್ಲಿ ಮೊಟ್ಟಮೊದಲಿಗೆ ತಿದ್ದುಪಡಿ ತರುವ ಮುನ್ನ ಯಾವ ಕಾರಣಕ್ಕಾಗಿ ಮಹಿಳೆಯರನ್ನು ಸೇರಿಸಲಿಲ್ಲ? ಈ ಬಗ್ಗೆ ಸರ್ಕಾರವು ಕ್ಷಮಾಪಣೆಯನ್ನು ಕೇಳಬೇಕು. ಇದರಲ್ಲಿ ಯಾವುದೇ ಪ್ರತಿಷ್ಠೆ ಮಾಡಬಾರದು. ಸದರಿ ಆಯೋಗದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಕೊಡಿ, ಮಹಿಳಾ ಸದಸ್ಯರನ್ನು ನೇಮಕ ಮಾಡಿ ಎಂದು ಯಾರೋ ಒತ್ತಾಯ ಮಾಡಿರುವ ಹಿನ್ನೆಲೆಯಲ್ಲಿ ಸರ್ಕಾರವು ಎಚ್ಚೆತ್ತುಕೊಂಡು ಈ ತಿದ್ದುಪಡಿಯನ್ನು ತಂದಿದೆ ಎಂದು ನಾನು ಹೇಳುತ್ತೇನೆ. ಸರ್ಕಾರಕ್ಕೆ ಈ ರೀತಿಯ ಅಸಡ್ಡೆ ಮನೋಭಾವ ಏಕೆ? ಈಗಲಾದರೂ ಎಚ್ಚೆತ್ತ ಸರ್ಕಾರದ ಈ ನಡೆಯನ್ನು ನಾನು ಅಭಿನಂದಿಸುತ್ತೇನೆ. ಈ ಸದನದಲ್ಲಿರುವ ಎಲ್ಲಾ ಸಹೋದರರ ಸದ್ಭಾವನೆ ನಮ್ಮ ಪರವಾಗಿ ಇರಲಿಲ್ಲವೆಂದಾಗಿದ್ದರೆ, ನಾವುಗಳು ಇಲ್ಲಿ ಸದಸ್ಯರಾಗಿ ಆಯ್ಕೆಯಾಗುವುದಕ್ಕೆ ಆಗುತ್ತಿರಲಿಲ್ಲ. ಇದೇ ಪರಿಸ್ಥಿತಿ ಕೆಳಮನೆಯಲ್ಲಿಯೂ ಸಹ ಇದೆ. ಇದು ನಮಗೂ ಸಹ ತಿಳಿದಿದೆ. ಇಂತಹ ಕಾರಣಗಳಿಗಾಗಿ ಮಹಿಳೆಯರಿಗಾಗಿ ಮೀಸಲಾತಿಯನ್ನು ತರಲಾಗುತ್ತಿದೆ. ಮಹಿಳೆಯರಿಗೆ ಶೇಕಡಾ 33 ರಷ್ಟು ಮೀಸಲಾತಿಯನ್ನು ನೀಡಿ ಎಂಬ ಕೂಗು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Formatted: Indent: First line: 0 cm

ಕೇಳಿ ಬರುತ್ತಿದೆ. ಪ್ರಸ್ತುತ ಸಂಸತ್ತಿನಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಈ ವಿಷಯದ ಬಗ್ಗೆ ಅಂತಿಮ ತೀರ್ಮಾನವಾಗಬೇಕು ಎಂದು ಎಲ್ಲರ ಕೂಗು ಆಗಿದೆ. ಕೇಂದ್ರ ಸರ್ಕಾರವು ಇದನ್ನು ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ. ವಿಶೇಷವಾಗಿ ಹಿಂದುಳಿದ ವರ್ಗಗಳ ಆಯೋಗಗಳಲ್ಲಿ ಮಹಿಳೆಯರಿಗೆ ಸ್ಥಾನ ನೀಡಬೇಕು. ಸಂವಿಧಾನದ ಆಶಯಗಳನ್ನು ಈಡೇರಿಸುವಲ್ಲಿ ವಿಫಲರಾಗಿದ್ದೇವೆ. ಈ ಕಾರಣಕ್ಕಾಗಿ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಸಂವಿಧಾನ ಶಿಲ್ಪಿ ಭಾರತ ರತ್ನ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಇಂತಿಷ್ಟೇ ವರ್ಷಗಳಲ್ಲಿ ಈ ದೇಶವನ್ನು ಸಮಾನತೆಯ ರೇಖೆಗೆ ತರಬೇಕೆಂಬ ಆಶಯವನ್ನು ಹೊಂದಿದ್ದರು. ಅದನ್ನು ಜಾರಿಗೊಳಿಸುವಲ್ಲಿ ನಾವು ವಿಫಲರಾದೆವು. ಹೀಗಾಗಿ ಕಾಯ್ದೆ, ಕಾನೂನುಗಳ ಮೂಲಕ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೊಳಿಸಿ, ಸಮಾನತೆಯನ್ನು ತರುವುದಕ್ಕೆ ಹೊರಟಿದ್ದೇವೆ. ಇಂತಹ ಸನ್ನಿವೇಶಗಳಲ್ಲಿ ಮಹಿಳೆಯರಿಗೆ ಸರ್ಕಾರವು ಮೀಸಲಾತಿಯನ್ನು ಕೊಡುತ್ತಿದೆ. ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಶೇಕಡಾ 50 ರಷ್ಟಿದ್ದಾರೆ; ಚುನಾವಣೆಯಲ್ಲಿ ಅವರ ಮತಗಳೂ ಸಹ ನಮಗೆ ಬೇಕಾಗಿದೆ ; ಮಹಿಳೆಯರಿಗೆ ಮೀಸಲಾತಿಯನ್ನು ಕೊಡದಿದ್ದರೆ ಸರ್ಕಾರಕ್ಕೆ ತೊಂದರೆಯಾಗುತ್ತದೆ ಎನ್ನುವಂತಹ ಭಿಕ್ಷಾ ಮನೋಭಾವವನ್ನು ಸರ್ಕಾರ ಬಿಡಬೇಕು. ಮಹಿಳೆಯರಿಗೆ ಸ್ಥಾನಮಾನಗಳನ್ನು ಕೊಡಬೇಕಾದ ಪರಿಸ್ಥಿತಿ ಇದೆ. ಕುಟುಂಬವನ್ನು ನಿರ್ಮಾಣ ಮಾಡುವಲ್ಲಿ ಮಹಿಳೆಯರ ಪಾತ್ರ ಎಷ್ಟು ಇದೆಯೋ ಸಮಾಜ, ಗ್ರಾಮ, ದೇಶ ನಿರ್ಮಾಣ ಮಾಡುವಲ್ಲಿ ಕೂಡ ಮಹಿಳೆಯರ ಪಾತ್ರ ಅಷ್ಟೇ ಮಹತ್ವದ್ದಾಗಿದೆ. ಇನ್ನೂ ಸಹ ಮಹಿಳೆಯರಿಗೆ ಯಾವುದೇ ಪ್ರಾತಿನಿಧ್ಯ ಸಿಗುತ್ತಿಲ್ಲವೆನ್ನುವ ಕಾರಣಗಳಿಂದಾಗಿ ತಪ್ಪು ಮನೋಭಾವನೆಯುಂಟಾಗುತ್ತಿದೆ.

~~(ಮುಂದು)~~

**(573) 19-12-2018 4:20 ಸಿಎಸ್/ಆರ್‌ಎನ್**

**ಡಾ॥ ತೇಜಸ್ವಿನಿ ಗೌಡ(ಮುಂದು):-**

ಅದರಲ್ಲಿಯೂ ಹಿಂದುಳಿದ ವರ್ಗದಲ್ಲಿರುವ ಪುಟ್ಟ ಪುಟ್ಟ ಸಮಾಜಗಳು ಮುಂದೆ ಬರಬೇಕು. ಮಾನ್ಯ ಸಚಿವರಾದ ಶ್ರೀ ಪುಟ್ಟರಂಗ ಶೆಟ್ಟಿಯವರ ಕಾಳಜಿಯನ್ನು ನಾನು ಮೆಚ್ಚುವುದಿಲ್ಲ ಎಂದಲ್ಲ. ಕಳೆದ ಸಲ ಡಾ॥ಜಯಮಾಲರವರು ಹಾಗೂ ಶ್ರೀಮತಿ ಜಯಮ್ಮನವರು ಮೇಲ್ಮನೆಗೆ ಆಯ್ಕೆ ಆದಾಗ ನಾವು ಸಂತೋಷ ಪಟ್ಟಿದ್ದೇವೆ. ನಮ್ಮ ಸಮಾಜದಲ್ಲಿ ಅನೇಕ ಪುಟ್ಟ ಪುಟ್ಟ ಸಮಾಜಗಳಿವೆ. ಅವುಗಳ ಬಗ್ಗೆ ದೂರದೃಷ್ಟಿ ಮತ್ತು ಅಂತಃಕರಣ ಇಲ್ಲದೇ ಹೋದರೆ ಯಾವುದೇ ಕಾನೂನಿನ ರಚನೆ ಮಾಡುವಾಗ ಅಥವಾ ರಾಜಕೀಯ ಪಕ್ಷಗಳಲ್ಲಿ ಅವಕಾಶವನ್ನು ನೀಡುವಾಗ ದೂರದೃಷ್ಟಿ ಇಟ್ಟು ಎಲ್ಲಾ ಸಮಾಜವನ್ನು ಮುಂದಕ್ಕೆ ತರದೇ ಹೋದರೆ ಇವತ್ತು ಅವರ ಸೇವೆಯಿಂದ ನಾವು ವಂಚಿತರಾಗುತ್ತಿದ್ದೆವು. ಆದ್ದರಿಂದ ಸಚಿವಸಂಪುಟದಲ್ಲಿಯೂ ಸಹ ಮಹಿಳೆಯರಿಗೆ

Formatted: Indent: Left: 0 cm, First line: 0 cm
Formatted: Font: Bold
Formatted: Indent: First line: 0 cm

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶೇಕಡ 33 ರಷ್ಟು ಮೀಸಲಾತಿಯನ್ನು ನೀಡಿದರೆ ಒಳ್ಳೆಯದಾಗುತ್ತದೆ. ನಮ್ಮ ಹೆಣ್ಣುಮಕ್ಕಳು ಸಹ ಜ್ಞಾನಿಗಳಿದ್ದಾರೆ. ಆದ್ದರಿಂದ ಈ ಆಯೋಗದಲ್ಲಿರುವ 5 ಜನರಲ್ಲಿ 3 ಸ್ಥಾನಗಳನ್ನು ಮಹಿಳೆಯರಿಗೆ ಕೊಡಿ. ನಾವು ಏಕೆ ಯಾವಾಗಲೂ ಒಂದು ಕೈ ಕೆಳಗೆ ಇರಬೇಕು. ಈ ವಿಚಾರದಲ್ಲಿ ಪೀಠ ನಮ್ಮ ಪರವಾಗಿ ತಕ್ಕಡಿಯನ್ನು ತೂಗಬೇಕು. ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್( ನಾಮ ನಿರ್ದೇಶಿತರು):- ಮಾನ್ಯ** ಸಭಾಪತಿಗಳೇ, ಕರ್ನಾಟಕ ಹಿಂದುಳಿದ ಆಯೋಗದ ವಿಧೇಯಕವನ್ನು 1995ರಲ್ಲಿ ಜಾರಿಗೆ ತರಲಾಗಿತ್ತು. ಈ ಕಾಯಿದೆ ಜಾರಿಗೆ ಬಂದು 23 ವರ್ಷಗಳಾಗಿವೆ. 23 ವರ್ಷಗಳ ಕಾಲ ಮಹಿಳೆಯರು ಇಲ್ಲದೆಯೇ ಈ ಆಯೋಗ ಕೆಲಸವನ್ನು ಮಾಡಿದೆ ಎನ್ನುವುದು ಇದರಿಂದ ಸ್ಪಷ್ಟವಾಗಿ ಕಾಣುತ್ತಿದೆ. ಇವತ್ತು ಮಹಿಳೆಯರಿಗೆ ಈ ಆಯೋಗದಲ್ಲಿ ಒಂದು ಸ್ಥಾನ ನೀಡಬೇಕು, ಅವರಿಗೂ ಸಹ ಪ್ರಾತಿನಿಧ್ಯ ನೀಡಬೇಕೆಂದು ಈ ಕಾಯಿದೆಗೆ ತಿದ್ದುಪಡಿಯನ್ನು ತರುತ್ತಿರುವುದು ಸ್ವಾಗತಾರ್ಹವಾಗಿದೆ. ಈಗಿರುವ 5 ಜನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಗೆ ಮಾಡುವ ಚಿಂತನೆ ಏನಾದರೂ ಸರ್ಕಾರಕ್ಕೆ ಇದೆಯೇ? ಏಕೆಂದರೆ ಇರುವ 5 ರಲ್ಲಿ ಒಂದು ಸ್ಥಾನವನ್ನು ಮಹಿಳೆಗೆ, ಮತ್ತೊಂದು ಸ್ಥಾನವನ್ನು ಸಮಾಜದ ವಿಜ್ಞಾನಿಗೆ ನೀಡಬೇಕೆಂದಿದೆ. ಈ 5 ಜನರು ಹಿಂದುಳಿದ ವರ್ಗದವರೇ ಇರಬೇಕಾ? ಅಥವಾ ಬೇರೆ ಜನಾಂಗದವರು ಸಹ ಇರಬಹುದೇ ಎನ್ನುವುದರ ಬಗ್ಗೆ ಏನನ್ನು ನಿರ್ದಿಷ್ಟವಾಗಿ ತಿಳಿಸಿಲ್ಲ. ಇಷ್ಟು ನಿಧಾನವಾಗಿಯಾದರೂ ಸಹ ಮಹಿಳೆಗೆ ಪ್ರಾತಿನಿಧ್ಯವನ್ನು ನೀಡುತ್ತಿರುವುದಕ್ಕೆ ಮೊದಲನೆಯದಾಗಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಆಯೋಗವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದು, ಇಡೀ ದೇಶಕ್ಕೆ ಮಾದರಿಯಾದಂತಹ ಜಾತಿ ಜನಗಣತಿಯ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಇದು ಇಡೀ ದೇಶಕ್ಕೆ ಒಂದು vision ಕೊಡತಕ್ಕ social justice, social engineering and political participation ಇವೆಲ್ಲಕ್ಕೂ ಇಡೀ ದೇಶದಲ್ಲಿ ಆಯೋಗವು ಮಾದರಿಯಾಗಿದೆ. ಈ ಆಯೋಗ ಮಾಡಿರುವ ಜನಗಣತಿ ಕೇವಲ ಹಿಂದುಳಿದ ವರ್ಗದ ಜನಗಣತಿ ಅಲ್ಲ. ಎಲ್ಲ ಜಾತಿ ಮತ್ತು ಪಂಗಡಗಳ ಜನಗಣತಿಯನ್ನು ತಂದಿದೆ. ಹಾಗಾಗಿ ಈ ಆಯೋಗ ಇನ್ನೂ ಹೆಚ್ಚಿನ ಕೆಲಸವನ್ನು ಮಾಡಬೇಕಾಗಿದೆ. ಹಾಗಾಗಿ ಆಗಿಂದಾಗ್ಗೆ ಅದರ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಕಳುಹಿಸಿ ಕೊಡಬೇಕು. ಹಾಗಾಗಿ ಶ್ರೀಮತಿ ಜಯಮ್ಮನವರು ಹೇಳಿದ ಹಾಗೆ ಇಬ್ಬರೂ ಮಹಿಳೆಯರಿಗಾದರೂ ಈ ಆಯೋಗದಲ್ಲಿ ಸ್ಥಾನಮಾನವನ್ನು ಕೊಡಬೇಕು. ಏಕೆಂದರೆ ಇವತ್ತು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಮುಂಚೂಣಿಲ್ಲಿದ್ದಾರೆ. ಹಾಗಾಗಿ ಇಬ್ಬರು ಮಹಿಳೆಯರನ್ನು ನೇಮಕ ಮಾಡುವುದರಿಂದ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಮಹಿಳೆಯರಿಗೆ ನೀಡಿದಂತಾಗುತ್ತದೆ, ಹಾಗೆಯೇ ಅವರ ಪಾಲ್ಗೊಳ್ಳುವಿಕೆಗೂ ಹೆಚ್ಚಿನ ಅವಕಾಶ ನೀಡಿದಂತಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಕರ್ನಾಟಕ ರಾಜ್ಯ ಸರ್ಕಾರದ ಹಿಂದುಳಿದ ಆಯೋಗ (ತಿದ್ದುಪಡಿ) ವಿಧೇಯಕ, 2018 ದಲ್ಲಿರುವ ಐವರು ವ್ಯಕ್ತಿಗಳಲ್ಲಿ ಒಬ್ಬರು ಸಮಾಜ ವಿಜ್ಞಾನಿಗಳಿರಬೇಕೆಂದು ನಿಗಧಿ ಮಾಡಲಾಗಿತ್ತು, ಈಗ ಅದಕ್ಕೆ ತಿದ್ದುಪಡಿಯನ್ನು ತರುವ ಮೂಲಕ ಐವರಲ್ಲಿ ಒಬ್ಬರು ಮಹಿಳೆಯರು ಇರಬೇಕೆಂದು ಮಾಡಲಾಗಿದೆ. ನನ್ನ ದೃಷ್ಟಿಯಲ್ಲಿ ಇದೊಂದು ಒಳ್ಳೆಯ ತಿದ್ದುಪಡಿ. ಆದರೆ ಯಾವುದಾದರೂ ಕಾರಣಕ್ಕೆ ಇಬ್ಬರು ಮಹಿಳೆಯರಿಗೆ ಅವಕಾಶ ನೀಡುವುದಕ್ಕೆ ಸಾಧ್ಯವಾದರೆ, ಅದನ್ನು ಸದ್ಬಳಕೆ ಮಾಡಿಕೊಂಡು ಒಬ್ಬ ಸಮಾಜ ವಿಜ್ಞಾನಿ, ಇಬ್ಬರೂ ಮಹಿಳೆಯರು ಎಂದು ಮಾಡಿದರೆ ಸರ್ಕಾರ ಮಹಿಳೆಯರಿಗೆ ನೀಡುತ್ತಿರುವ ನ್ಯಾಯಕ್ಕೆ ಮತ್ತಷ್ಟು ಶಕ್ತಿ ಬರುತ್ತದೆ ಎಂದು ನಾವು ಅಂದುಕೊಂಡಿದ್ದೇವೆ. ಇದು ಬಹಳ ಸಣ್ಣ ತಿದ್ದುಪಡಿಯಾಗಿದ್ದು, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಈ ತಿದ್ದುಪಡಿಯನ್ನು ತಂದಿರುವುದಕ್ಕೂ ಹಾಗೂ ಜಾತಿ ಜನಗಣತಿಗೂ ಸಂಬಂಧವಿಲ್ಲ ಎನ್ನುವುದನ್ನು ನಾವು ಒಪ್ಪುತ್ತೇವೆ, ಆದರೆ ಸರ್ಕಾರ ಬಹಳ ದುರ್ಬಲ ಆಗಬಾರದು. 5 ವರ್ಷಗಳ ಕೆಳಗೆ ನಮ್ಮ ಪಕ್ಷದ ಸರ್ಕಾರ ಆಡಳಿತದಲ್ಲಿದ್ದಾಗ ಹಿಂದುಳಿದ ಆಯೋಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿತ್ತು. ಹೊಸ ಸರ್ಕಾರ ಅಡಳಿತಕ್ಕೆ ಬಂದ ಮೇಲೆ ಅವರನ್ನು ತೆಗೆಯಲಾಯಿತು. ಆಗ ಮೊದಲಿನ ಅಧ್ಯಕ್ಷರು ನ್ಯಾಯಲಯದಲ್ಲಿ ದಾವೆ ಹೂಡಿದ್ದಾರೆ. ಅದು ಅವರ ಹಕ್ಕು, ಈ ವಿಚಾರದಲ್ಲಿ ನ್ಯಾಯಾಲಯವೂ ಸರ್ಕಾರಕ್ಕಿರುವ ಪರಮಾಧಿಕಾರವನ್ನು ಪ್ರಶ್ನೆ ಮಾಡುವುದಿಲ್ಲ ಎಂದು ತೀರ್ಪು ನೀಡಿದೆ. ಈಗ ಸರ್ಕಾರ ಹಿಂದುಳಿದ ವರ್ಗಗಳ ಅಧ್ಯಕ್ಷರಿಂದ ಜಾತಿ ಜನಗಣತಿಯ ವರದಿ ನಮಗೆ ಬಂದಿಲ್ಲವೆಂದು ಹೇಳುತ್ತಿದೆ. ಸರ್ಕಾರ ಯಾವಾಗಲೂ ಆನೆಯಂತಿರಬೇಕು, ಬಾಲದಂತೆ ಇರಬಾರದು. ದಯಮಾಡಿ ಇದು ಸರ್ಕಾರಕ್ಕೆ ನೋವನ್ನು ಉಂಟು ಮಾಡಲು ಹೇಳುತ್ತಿರುವ ಮಾತಲ್ಲ, ಸರ್ಕಾಕ್ಕಿರುವ ಶಕ್ತಿ ಸಾಮರ್ಥ್ಯವನ್ನು ಬಳಸಿಕೊಂಡು ಒಂದು ಗಂಟೆ ಅವಧಿಯಲ್ಲಿ ಜನಗಣತಿಯ ವರದಿಯನ್ನು ಕಾರ್ಯದರ್ಶಿ ಸಚಿವರಿಗೆ ಒಪ್ಪಿಸಿ, ಸರ್ಕಾರ ಅದನ್ನು ಸದನದ ಮುಂದೆ ಮಂಡಿಸುವಂತಾಗಬೇಕು. ಅದು ಸರ್ಕಾರದ ಶಕ್ತಿ, ಸಾಮರ್ಥ್ಯವನ್ನು ತೋರಿಸುತ್ತದೆ ಎನ್ನುವುದೇ ನನ್ನ ವಾದ. ಸರ್ಕಾರ ಅಸಹಾಯಕವಾಗಬಾರದು. ಆದ್ದರಿಂದ ಈ ವಿಧೇಯಕವನ್ನು ನಾವು ಸ್ವಾಗತ ಮಾಡುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಕರ್ನಾಟಕ ರಾಜ್ಯ ಹಿಂದುಳಿದ ಆಯೋಗ (ತಿದ್ದುಪಡಿ) ವಿಧೇಯಕದ ಮೇಲೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ಈ ವಿಧೆಯಕವನ್ನು ನಾವು ಸ್ವಾಗತ ಮಾಡುತ್ತೇವೆ. ಈಗಾಗಲೇ ಪತ್ರಿಕೆಗಳಲ್ಲಿ ಜಾತಿ ಜನಗಣತಿಯ ವರದಿ ತಯಾರಾಗಿದ್ದು, ಅದನ್ನು ಸರ್ಕಾರಕ್ಕೆ ಒಪ್ಪಿಸಲು ತಯಾರಾಗಿದ್ದೇವೆ ಎನ್ನುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ಸರ್ಕಾರ ಏಕೆ ಒಪ್ಪಿಕೊಳ್ಳುತ್ತಿಲ್ಲ ಎನ್ನುವ ಅನುಮಾನ ನಮಗೆ ಬಂದಿದೆ. ಅಥವಾ ವರದಿಯಲ್ಲಿ ನ್ಯೂನ್ಯತೆಗಳು ಇದ್ದಲ್ಲಿ ಅದನ್ನು ಸರಿಪಡಿಸಿಕೊಡುವುದಕ್ಕಾಗಿ ಸರ್ಕಾರ ತಡ ಮಾಡುತ್ತಿದೆಯೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದನ್ನಾದರೂ ಸರ್ಕಾರ ಹೇಳಬೇಕು. ನಮಗೆ ಸ್ವಾತಂತ್ರ್ಯ ಬಂದ ಮೇಲೆ ಇದು ಎರಡನೇ ಬಾರಿಗೆ ಜಾತಿ ಗಣತಿ ಆಗುತ್ತಿರುವುದು. ಇಂತಹ ಸುಧೀರ್ಘವಾದ ಕಾರ್ಯಕ್ರಮವನ್ನು ಮಾಡಿದ ಮೇಲೆ ಹಿಂದುಳಿದ ಜನಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕೆನ್ನುವ ದೃಷ್ಟಿಯಿಂದ ಈ ಆಯೋಗವನ್ನು ರಚಿಸಲಾಗಿದೆ. ಈಗ ಸಚಿವರು ಈ ವಿಧೇಯಕದಲ್ಲಿ ಆಯೋಗದಲ್ಲಿರುವ 5 ಸದಸ್ಯರಲ್ಲಿ ಒಬ್ಬರು, ಮಹಿಳೆ, ಮತ್ತೊಬ್ಬರು, ಸಮಾಜದ ವಿಜ್ಞಾನಿ ಇರಬೇಕೆಂದು ಹೇಳುತ್ತಾರೆ. ಇವರನ್ನು ನೇಮಕ ಮಾಡಿಕೊಳ್ಳಬೇಕೆನ್ನುವ ಆಲೋಚನೆ ಮೊದಲೇ ಸರ್ಕಾರಕ್ಕೆ ಇರಲಿಲ್ಲವೇ? ಈಗ ನಮ್ಮ ಸಹೋದರಿ ಶ್ರೀಮತಿ ಜಯಮ್ಮನವರು ಹೇಳಿದ ಹಾಗೆ ಈ ಆಯೋಗದಲ್ಲಿ ಇಬ್ಬರು ಮಹಿಳೆಯರಿಗೆ ಅವಕಾಶವನ್ನು ಕೊಡಿ. ——ಏಕೆ ಕೊಡಬಾರದು, ಮಹಿಳೆಯರಿಗೆ ಸಮಾನ ಸ್ಥಾನಮಾನಗಳನ್ನು ನೀಡಬೇಕೆನ್ನುವ ಕೂಗು ಇಡೀ ದೇಶದಲ್ಲಿದೆ. ——ಇದಕ್ಕೆ ನಾವು ಅವಕಾಶವನ್ನು ಮಾಡಿಕೊಡಬೇಕಾಗಿದೆ. ಇಬ್ಬರೂ ಮಹಿಳೆಯರನ್ನು ನೇಮಕ ಮಾಡುವ ಸಂದರ್ಭದಲ್ಲಿ ರಾಜ್ಯದಲ್ಲಿರುವ ಬಲಿಷ್ಠ ರಾಜಕಾರಣಿಗಳ ಕುಟುಂಬವರ್ಗದವರನ್ನು ನೇಮಕ ಮಾಡುವುದಕ್ಕೆ ಹೋಗಬಾರದು. ಈ ಸಮಾಜದ ಮುಖ್ಯವಾಹಿನಿಯಲ್ಲಿ ಸಮಾಜದ ಬಗ್ಗೆ ಕಳಕಳಿ ಇರುವಂತಹ ಅನೇಕ ಮಂದಿ ಹೆಣ್ಣುಮಕ್ಕಳಿದ್ದಾರೆ. ಅಂತಹವರನ್ನು ಗುರುತಿಸಿ, ಈ ಆಯೋಗದಲ್ಲಿ ಸದಸ್ಯತ್ವವನ್ನು ನೀಡಬೇಕೆಂದು ಹೇಳಿ, ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಸಿ. ಪುಟ್ಟರಂಗ ಶೆಟ್ಟಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸಿ.ಹೆಚ್.ಕಾಂತರಾಜು ರವರ ಅಧ್ಯಕ್ಷತೆಯಲ್ಲಿ ತಂದಿರುವ ಈ ವಿಧೇಯಕಕ್ಕೆ ಈ ಸದನ ಅನುಮತಿಯನ್ನು ನೀಡಬೇಕೆಂದು ಕೋರುತ್ತಾ, ಅದರ ಜೊತೆಯಲ್ಲಿಯೇ ಇವತ್ತು ಈ ಆಯೋಗ ಜನಗಣತಿಯನ್ನು ಮಾಡಿ, ಅದನ್ನು ಮಂಡಿಸಲು ನೇಮಿಸಿರುವ 7 ಜನರ ಸಮಿತಿಯಲ್ಲಿ ಅದರಲ್ಲಿರುವ ಲೋಪದೋಷಗಳ ಸಮೀಕ್ಷೆ ಕಾರ್ಯ ನಡೆಯುತ್ತಿದೆ. ಅಂತಿಮ ವರದಿ ಇನ್ನೂ ಬಂದಿರುವುದಿಲ್ಲ. ಅಂತಿಮ ವರದಿ ಬಂದ ತಕ್ಷಣ ಸರ್ಕಾರದ ಮುಂದೆ ಆಯೋಗದ ವರದಿಯನ್ನು ಮಂಡಿಸಲಾಗುವುದು.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಈ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದಲ್ಲಿರುವ 5 ಜನ ಸದಸ್ಯರಲ್ಲಿ ಒಬ್ಬರು ಸಮಾಜ ವಿಜ್ಞಾನಿಗಳು ಈಗಾಗಲೇ ಇದ್ದಾರೆ, ಅದನ್ನು ಇನ್ನೊಂದು ಸಲ ಏಕೆ ತೋರಿಸಲಾಗುತ್ತಿದೆ, ಆಯೋಗದ ಸದಸ್ಯರ ಸಂಖ್ಯೆಯನ್ನೇನಾದರೂ 7ಕ್ಕೆ ಏರಿಸಲಾಗುವುದೇ, ಇಬ್ಬರನ್ನು ಮಹಿಳೆಯರಿಗೆ ನೀಡುವ ಸಲುವಾಗಿ ಸದಸ್ಯರ ಸಂಖ್ಯೆ ಹೆಚ್ಚಿಗೆ ಮಾಡುವ ಉದ್ದೇಶ ಏನಾದರೂ ಇದೆಯೇ ಎನ್ನುವುದನ್ನು ಸರ್ಕಾರ ತಿಳಿಸಬೇಕು.

**ಶ್ರೀ ಸಿ. ಪುಟ್ಟರಂಗ ಶೆಟ್ಟಿ:-** ಅವರಲ್ಲಿಯೇ ಒಬ್ಬರು ಸಮಾಜ ವಿಜ್ಞಾನಿ, ಮತ್ತೊಬ್ಬ ಮಹಿಳೆಗೆ ಮೀಸಲಿಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅಬ್ದುಲ್ ಜಬ್ಬಾರ್(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಗಳೇ, ನನ್ನ ಅಂದಾಜಿನ ಪ್ರಕಾರ ಒಂದು ವರ್ಷದ ಹಿಂದೆಯೇ ಆಯೋಗವು ಜಾತಿ ಜನಗಣತಿಯ ವರದಿಯನ್ನು ನೀಡದೆ. 5 ತಿಂಗಳ ಒಳಗಾಗಿ ಸದನದ ಮುಂದೆ ಮಂಡಿಸಲಾಗುವುದು ಎನ್ನುವ ಮಾತನ್ನು ಇದೇ ಸದನದಲ್ಲಿ ಹೇಳಿದ್ದರು. ಆದರೆ ಇನ್ನೂ ಏಕೆ ವರದಿಯನ್ನು ಮಂಡನೆ ಮಾಡುತ್ತಿಲ್ಲ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಈಗ ಅದನ್ನು ಹೊತ್ತುಕೊಂಡು ಬರಲು 5 ಜನರನ್ನು ನೇಮಿಸುತ್ತಿರಬಹುದು.

~~(ಮುಂದು)~~

(574) 19-12-2018 4-30 ಎಲ್‌ಎಂ/ವಿಕೆ ~~ಎಂಎಸ್‌ಎಸ್~~

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"2018 ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>**

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

<u>ಖಂಡ 2</u>

**ಸಭಾಪತಿಯವರು:-** "ಖಂಡ 2 ಈ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**<u>ಖಂಡ 1 ಇತ್ಯಾದಿ</u>**

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಪುಟ್ಟರಂಗ ಶೆಟ್ಟಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2018 ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ (ತಿದ್ದುಪಡಿ) ವಿಧೆಯಕ"ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018 ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ (ತಿದ್ದುಪಡಿ) ವಿಧೇಯಕ"ವನ್ನು ಅಂಗೀಕರಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Formatted: Justified, Line spacing: single

## ಆ) ಕರ್ನಾಟಕ ಧನವಿನಿಯೋಗ(ಸಂಖ್ಯೆ:3) ವಿಧೇಯಕ, 2018

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣಭೈರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು)**(ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018 ಧನ ವಿನಿಯೋಗ (ಸಂಖ್ಯೆ:3) ವಿಧೇಯಕ" ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಕೃಷ್ಣಭೈರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು)** (ಮುಖ್ಯಮಂತ್ರಿಗಳ ಪರವಾಗಿ):- ಮಾನ್ಯ ಸಭಾಪತಿಯವರೇ, 6980 ಕೋಟಿ ರೂ.ಗಳ ಧನ ವಿನಿಯೋಗಕ್ಕೆ ವಿಧಾನ ಪರಿಷತ್ತಿನ ಅನುಮತಿಯನ್ನು ಕೋರಿ ಈ ಸದನದ ಮುಂದೆ ತರಲಾಗಿದೆ. ಯಾವ ಇಲಾಖೆಗೆ ಎಷ್ಟು, ಯಾವ ಕಾಮಗಾರಿಗೆ ಎಷ್ಟು ಹಣವನ್ನು ಇಡಲಾಗಿದೆ ಎನ್ನುವ ವಿವರಣೆಯನ್ನು ವಿಧೇಯಕದಲ್ಲಿ ಕೊಡಲಾಗಿದೆ. ಈ ವಿಧೇಯಕಕ್ಕೆ ಸದನ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ:ವೈ.ಎ.ನಾರಾಯಣ ಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ. ಕರ್ನಾಟಕ ಧನವಿನಿಯೋಗ (ಸಂಖ್ಯೆ-3) ವಿಧೇಯಕ, 2018ನ್ನು ಅನುಮತಿಗಾಗಿ ಇಂದು ಈ ಸದನದ ಮುಂದೆ ಸರ್ಕಾರ ತಂದಿದೆ. ಇದರಲ್ಲಿ ಎರಡು-ಮೂರು clarification ಗಳನ್ನು ನಾನು ಕೇಳಬಯಸುತ್ತೇನೆ. 6980 ಕೋಟಿ ರೂ.ಗಳ ಬಜೆಟ್‌ನ್ನು ಇಂದು ಸರ್ಕಾರ ತಂದಿದೆ. ಆದರೆ ಪೂರಕ ಅಂದಾಜನ್ನು ಮುಖ್ಯ ಬಜೆಟ್‌ನಲ್ಲಿಯೇ ಪಾಸ್ ಮಾಡಿಕೊಳ್ಳಲು ಏನು ತೊಂದರೆ? ಮಾರ್ಚ್ ತಿಂಗಳಲ್ಲಿ ಮುಖ್ಯ ಬಜೆಟ್‌ನಲ್ಲಿಯೇ ಪಾಸ್ ಮಾಡಲಾಗುತ್ತದೆ. Transaction of Business Rules ನಲ್ಲಿ ಮೇನ್ ಬಜೆಟ್‌ನಲ್ಲಿಯೇ ಪಾಸ್ ಮಾಡಿಕೊಳ್ಳಬೇಕೆಂದು ಉಲ್ಲೇಖವಿದೆ ಎಂದು ನಾನು ಕೇಳಲ್ಪಟ್ಟಿದ್ದೇನೆ. ಅದರ ಬಗ್ಗೆ ಬೆಳಕು ಚೆಲ್ಲಬೇಕು. 6980 ಕೋಟಿ ರೂ.ಗಳಲ್ಲಿ 4 ಇಲಾಖೆಗಳು ಬಹಳ ಮುಖ್ಯವಾಗುತ್ತದೆ. ಅದರಲ್ಲಿಯು ಬಹಳ ಮುಖ್ಯವಾಗಿ ಲೋಕೋಪಯೋಗಿ ಇಲಾಖೆಗೆ 460 ಕೋಟಿ ರೂ.ಗಳಿಗೆ ಬೇಡಿಕೆ ಸಲ್ಲಿಸಿದ್ದಿರಿ. ಸಹಕಾರ ಇಲಾಖೆಗೆ 260 ಕೋಟಿ ರೂ.ಗಳಿಗೆ ಬೇಡಿಕೆಯನ್ನು ಸಲ್ಲಿಸಲಾಗಿದೆ. ಗೃಹ ಇಲಾಖೆಗೆ 146 ಕೋಟಿ ರೂ.ಗಳಿಗೆ ಬೇಡಿಕೆಯನ್ನು ಸಲ್ಲಿಸಲಾಗಿದೆ. ಮಿಕ್ಕವು ಎಲ್ಲವು ಚಿಕ್ಕ-ಚಿಕ್ಕ ಅಮೌಂಟ್ ಆಗಿದೆ. ಇದರಲ್ಲಿ ಮುಖ್ಯವಾದದ್ದು ಎಂದರೆ, 1995.84 ಕೋಟಿ ರೂ.ಗಳನ್ನು public works ಗೆ ಕೊಡಲಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಆಗುತ್ತಿರುವ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಹೇಳಬೇಕು ಎಂದರೆ. ನಾನು ಬೆಂಗಳೂರು ಮತ್ತು ಮೈಸೂರು ರಸ್ತೆ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ 10 ಪಂಥದ ರಸ್ತೆ ನಿರ್ಮಾಣ ಮಾಡುತ್ತಿದ್ದೇವೆ, ಅದಕ್ಕೆ ಶೇಕಡಾ 100ಕ್ಕೆ 100ರಷ್ಟು ಹಣವನ್ನು ಕೇಂದ್ರ ಸರ್ಕಾರದ ನೀಡುತ್ತದೆ ಎಂದು ಹೇಳಿದರು. ಈ ಪೂರಕ ಅಂದಾಜಿನಲ್ಲಿ 1995.84 ಕೋಟಿ ರೂ.ಗಳನ್ನು ಕೊಟ್ಟಿರುವುದು ಯಾವ್ಯಾವ ಕಾಮಗಾರಿಗಳಿಗೆ ಎನ್ನುವುದರ ಬಗ್ಗೆ ಬೆಳಕು ಚೆಲ್ಲಿದರೆ ಒಳ್ಳೆಯದಾಗುತ್ತದೆ. ಕೇವಲ ಲೋಕೋಪಯೋಗಿ ಇಲಾಖೆ ಒಂದಕ್ಕೆ ಇಷ್ಟು ದೊಡ್ಡ ಮೊತ್ತ ಕೊಡುವ ಅವಶ್ಯಕತೆ ಏನಿದೆ? ಇದರಿಂದ ಇಡೀ ಕರ್ನಾಟಕ ರಾಜ್ಯಕ್ಕೆ ಆಗುವ ಅನುಕೂಲವೇನು? ಇಡೀ ರಾಜ್ಯ ವ್ಯಾಪ್ತಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆಯೇ? ಇದರ ಬಗ್ಗೆ ವಿವರಣೆ ಕೊಟ್ಟರೆ ಅನುಕೂಲವಾಗುತ್ತದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಪೂರಕ ಬಜೆಟ್ ಸಮಾಧಾನ ತರುವಂತಹ ಪ್ರಸ್ತಾವವಲ್ಲ. ಈಗ ನಾವು ಡಿಸೆಂಬರ್ ತಿಂಗಳ ಕೊನೆಯಲ್ಲಿದ್ದೇವೆ. ಇನ್ನು ಒಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಿಂಗಳು ಕಳೆದರೆ ಫೆಬ್ರವರಿ ತಿಂಗಳಲ್ಲಿ ಬಜೆಟ್ ಅಧಿವೇಶನ ಪ್ರಾರಂಭವಾಗುತ್ತದೆ. ಈ ಒಂದು ತಿಂಗಳ ಅಂತರದಲ್ಲಿ ತುರ್ತಾಗಿ 6980 ಕೋಟಿ ರೂ.ಗಳ ಬೇಡಿಕೆಯನ್ನು ಸದನದ ಮುಂದೆ ಏಕೆ ಇಟ್ಟಿದ್ದಾರೆ ಎನ್ನುವುದು ನಮಗೆ ಸಮಾಧಾನ ತರುತ್ತಿಲ್ಲ. ಇದರಲ್ಲಿ ಸ್ವಲ್ಪಮಟ್ಟಿಗೆ ಪರಿಗಣಿಸಬೇಕಾದ ಅಂಶ ಎಂದರೆ. ಸಹಕಾರ ಇಲಾಖೆಗೆ ಬೇಡಿಕೆ ಇಟ್ಟಿರುವ ಹಣವನ್ನು ಸಾಲಮನ್ನಾಕ್ಕಾಗಿ ಉಪಯೋಗಿಸುತ್ತಾರೆ ಎಂದು ಭಾವಿಸುತ್ತೇನೆ. 2,60,000.00 ರೂ.ಗಳನ್ನು ಸಾಲ ಮನ್ನಾಕ್ಕೆ ಇಟ್ಟಿದ್ದಾರೆ ಎಂದು ಸರ್ಕಾರದ ಪರವಾಗಿಯೇ ನಾನು ಮಾತನಾಡುತ್ತಿದ್ದೇನೆ. ಏಕೆಂದರೆ ಸಾಲಮನ್ನಾದ ವಿಚಾರ ಈ ಸದನದಲ್ಲಿ ವಿಶೇಷವಾಗಿ ಗಂಭೀರವಾಗಿ ಚರ್ಚೆಯಾಗುತ್ತಿದೆ. ಒತ್ತಡವಿದೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಈ ಕಾರಣಕ್ಕಾಗಿ ಈ ಹಣವನ್ನು ಕೇಳಿದ್ದಾರೆ ಎಂದು ಅನ್ನುವುದಾದರೆ ತಕ್ಕಮಟ್ಟಿಗೆ ಸಮಂಜಸ ಎಂದು ಭಾವಿಸಲು ಸಾಧ್ಯವಾಗುತ್ತದೆ.  ಬಾಕಿ ಎಲ್ಲಾ ಇಲಾಖೆಗಳಿಗೆ ಎಷ್ಟು ಕೊಟ್ಟಿದ್ದಾರೆ ಎನ್ನುವುದನ್ನು ನೋಡಿದರೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ, ಇಲ್ಲಿ ಬರ ಇತ್ಯಾದಿಗಳ ಬಗ್ಗೆ ಬಹಳ ದೊಡ್ಡ ಚರ್ಚೆಯನ್ನು ನಾವು ಮಾಡುತ್ತಿದ್ದೇವೆ. ಎರಡು ಸದನದಲ್ಲಿ ಬರದ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಆದರೆ ಅದಕ್ಕಾಗಿ ಇಟ್ಟಿರುವುದು ಕೇವಲ 3,990.42 ಕೋಟಿ ರೂ.ಗಳು ಮಾತ್ರ. ಆರುವರೆ ಕೋಟಿ ಜನರಿಗೆ ಸಂಬಂಧಪಟ್ಟ ಬರದ ಬಗ್ಗೆ ಇಷ್ಟೊಂದು ಚರ್ಚೆಯಾಗುತ್ತಿರುವಾಗ, ಎರಡು ಸದನದಲ್ಲಿ ನಿಲುವಳಿ ಸೂಚನೆ ಮೇಲೆ ಬರದ ಬಗ್ಗೆ ಚರ್ಚೆಯಾಗಿದೆ. ಇದಕ್ಕೆ ಸರ್ಕಾರ ಕೇವಲ 3,990.42 ಕೋಟಿ ರೂ.ಗಳನ್ನು  ಮಾತ್ರ ಇಲಾಖೆಗೆ 129 ಕೋಟಿ ರೂ.ಗಳನ್ನು ಇಟ್ಟಿದೆ. ಒಳಾಡಳಿತ ಮತ್ತು ಸಾರಿಗೆ ಇಲಾಖೆಗೆ 166 ಕೋಟಿ ರೂ.ಗಳನ್ನು ಇಟ್ಟಿದೆ. ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆಗೆ ತುಂಬಾ ಕಡಿಮೆ ಇದೆ. ಮೂಲ ಸೌಕರ್ಯಗಳ ಬಗ್ಗೆ ತುಂಬಾ ಚರ್ಚೆ ಮಾಡುತ್ತೇವೆ, ನಾವು ಶಾಸಕರೆಲ್ಲರೂ ನಮ್ಮ ನಮ್ಮ ಕ್ಷೇತ್ರಗಳ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇವೆ. ಆ ಇಲಾಖೆಗೆ ಕೇವಲ 300 ಕೋಟಿ ರೂ.ಗಳು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಗೆ ತುಂಬಾ ಕೊಟ್ಟಿದ್ದಾರೆ. ಏಕೆಂದರೆ ನಮ್ಮಲ್ಲಿ ಹಳ್ಳಿಗಳು ತುಂಬಾ ಕಡಿಮೆ ಇವೆ, ಗ್ರಾಮಗಳಲ್ಲಿ ಸಮಸ್ಯೆಗಳು ಇಲ್ಲ, ಕುಡಿಯುವ ನೀರು ಸಿಕ್ಕಿದೆ, ಬಡವರಿಗೆ ಮನೆಗಳು ಸಿಕ್ಕಿವೆ, ರಸ್ತೆಗಳು ಸುಸ್ಥಿತಿಯಲ್ಲಿ ಇವೆ, ರಾಸುಗಳಿಗೆ ಮೇವು ಸಂಗ್ರಹ ಮಾಡಿ ಇಟ್ಟಿದ್ದಾರೆ, ಪಟ್ಟಣದಷ್ಟು ಹಳ್ಳಿಗಳು ನಮ್ಮ ರಾಜ್ಯದಲ್ಲಿ ಇಲ್ಲ ನೋಡಿ.

~~(ಮುಂದು)~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(575)19-12-2018(04-40)ಬಿಎಸ್‌ಡಿ-ವಿಕೆ**

**ಶ್ರೀ ಆಯನೂರು ಮಂಜುನಾಥ್ (ಮುಂದು)**

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಭಿವೃದ್ಧಿ ಖಾತೆಗೆ ರೂ. 510 ಕೋಟಿಗಳನ್ನು ಕೊಟ್ಟಿದ್ದಾರೆ. ಸಹಕಾರ ಇಲಾಖೆಗೆ ರೂ. 2,600 ಕೋಟಿ ಕೊಟ್ಟಿದ್ದಾರೆ. ಸಮಾಜ ಕಲ್ಯಾಣ ಇಲಾಖೆಗೆ

**Formatted:** Font: Nudi 01 e, 14 pt, Bold
**Formatted:** Font: Nudi 01 e, 14 pt, Bold
**Formatted:** Font: Nudi 01 e, 14 pt, Bold
**Formatted:** Font: Nudi 01 e, 14 pt

ಸಂಬಂಧಪಟ್ಟಂತೆ ತಂದಿರುವ ವಿಧೇಯಕದಲ್ಲಿ ಒಬ್ಬ ಮಹಿಳೆಯನ್ನು ಸೇರಿಸಿ ತಿದ್ದುಪಡಿ ಮಾಡಿದ ಮಾತ್ರಕ್ಕೆ ಆ ಸಮಾಜ ಉದ್ಧಾರ ಆಗುವುದಿಲ್ಲ. ಮಹಿಳೆಗೆ ಪ್ರಾತಿನಿಧ್ಯ ಕೊಡುತ್ತಿದ್ದಾರೆ. ಸಮಾಜ ಕಲ್ಯಾಣ ಸಚಿವರು ಎಷ್ಟು ಕೇಳಿ ಎಷ್ಟು ಕೊಟ್ಟಿದ್ದಾರೋ ಗೊತ್ತಿಲ್ಲ. ಸಮಾಜ ಕಲ್ಯಾಣಕ್ಕೆ ರೂ. 7.12 ಕೋಟಿಗಳನ್ನು ಕೊಟ್ಟಿದ್ದಾರೆ. ದೀನ-ದಲಿತರು, ಹಿಂದುಳಿದವರು, ಮಹಿಳೆಯರು ಎಂದು ಎಲ್ಲಾ ಸರ್ಕಾರಗಳಲ್ಲಿ ಹೇಳುತ್ತಾರೆ. ಈ ರೀತಿ ಮಾತನಾಡುವವರಾಗಿ ರೂ. 6,800 ಕೋಟಿಗಳಲ್ಲಿ ಹಿಂದುಳಿದವರಿಗಾಗಿ ರೂ. 7 ಕೋಟಿಗಳನ್ನು ಇಟ್ಟಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ರೂ. 22 ಕೋಟಿಗಳನ್ನು ಇಟ್ಟಿದ್ದಾರೆ. ಮಹಿಳೆ ಮತ್ತು ಮಕ್ಕಳ ಸಮಸ್ಯೆಗಳ ಬಗ್ಗೆ ಈ ಸದನದಲ್ಲಿ ಅಗಾಧವಾಗಿ ಚರ್ಚೆ ಮಾಡಿದ್ದೇವೆ. ಕಂದಾಯ ಇಲಾಖೆಗೆ ರೂ. 270 ಕೋಟಿಗಳನ್ನು ಇಟ್ಟಿದ್ದಾರೆ. ವಸತಿ ಇಲಾಖೆ ಬಗ್ಗೆ ಪ್ರಸ್ತಾಪಿಸಿದಂತಹ ಸಂದರ್ಭಗಳಲ್ಲಿ ಗ್ರಾಮಾಂತರ ಪ್ರದೇಶದ ಕಡುಬಡವರಿಗೆ ಮನೆಗಳಿಲ್ಲ ಎಂದು ಆಶ್ರಯ ಇತ್ಯಾದಿ ಮನೆಗಳ ಬಗ್ಗೆ ಚರ್ಚೆಯಾಗುತ್ತದೆ. ಅದಕ್ಕೆ ತುಂಬಾ ದುಡ್ಡು ಅಂದರೆ ರೂ. 5.48 ಕೋಟಿಗಳನ್ನು ಇಟ್ಟಿದ್ದಾರೆ. ಅಂದರೆ ಜನಸಂಖ್ಯೆಗಿಂತಲೂ ಕಡಿಮೆ ಹಣ ಇಟ್ಟಿದ್ದಾರೆ. ಶಿಕ್ಷಣಕ್ಕೆ ರೂ. 83 ಕೋಟಿಗಳನ್ನು ಹಾಗೂ ನಗರಾಭಿವೃದ್ಧಿಗೆ ರೂ. 18 ಕೋಟಿಗಳನ್ನು ಇಟ್ಟಿದ್ದಾರೆ. ಲೋಕೋಪಯೋಗಿ ಇಲಾಖೆಗೆ ಮಾತ್ರ ಬಹಳ ಕಡಿಮೆ ಹಣವನ್ನು ಇಟ್ಟಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಎಲ್ಲಾ ಇಲಾಖೆಗಳಿಗೆ ಇಷ್ಟಿಷ್ಟು ಕೊಟ್ಟಿದ್ದಾರೆ. ಮಾನ್ಯ ಕೃಷ್ಣ ಭೈರೇಗೌಡರ ಇಲಾಖೆಗೆ ರೂ. 500 ಕೋಟಿಗಳನ್ನು ಕೊಟ್ಟಿದ್ದಾರೆ. ರಸ್ತೆಗಳು ಚೆನ್ನಾಗಿ ಇರಬೇಕು, ಹಳ್ಳಿ ರಸ್ತೆಗಳು ಏನಾದರೂ ಆಗಲೀ, ಗ್ರಾಮೀಣಾಭಿವೃದ್ಧಿಗೆ ಕೊಡುವುದಕ್ಕಿಂತ ಮಾನ್ಯ ರೇವಣ್ಣನವರ ಖಾತೆಗೆ ಮಾತ್ರ ರೂ. 1997 ಕೋಟಿಗಳನ್ನು ಕೊಟ್ಟಿದ್ದು, ಈ ಪೂರಕ ಬಜೆಟ್ ಯಾರ ಸಲುವಾಗಿ ಬಂದಿದೆ? ಆರೋಗ್ಯಕ್ಕೆ ಇಲ್ಲ, ಕನ್ನಡ ಸಂಸ್ಕೃತಿಗೆ ಇಲ್ಲ, ಗ್ರಾಮೀಣಕ್ಕೆ ಮತ್ತು ಶಿಕ್ಷಣಕ್ಕೆ ಇಲ್ಲ, ಎಸ್‌ಸಿ, ಎಸ್‌ಟಿ ಜನಾಂಗಕ್ಕೆ ಇಲ್ಲ ಮತ್ತು ವಸತಿಗೂ ಇಲ್ಲ. ಆದರೆ ಈ ಬಜೆಟ್ ಅನ್ನು ಏಕೆ ತಂದಿದ್ದಾರೆ? ಒಂದು ಕುಟುಂಬ ಸಾಕಾಣಿಕೆಗೆ ಬಜೆಟ್ ತರಲಾಗಿದೆಯೇ? ಅಥವಾ ಕುಟುಂಬ ಹಿತಾಸಕ್ತಿಗೆ ತರಲಾಗಿದೆಯೇ 'ಕುಟುಂಬ ಸಾಕಾಣಿಗೆ' ಎಂಬ ಪದವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, comment ಮಾಡಲಿ, ಆದರೆ ಕುಟುಂಬ ಸಾಕಾಣಿಕೆ ಎಂದರೆ, ಯಾರೂ ಮನೆಗೆ ತೆಗೆದುಕೊಂಡು ಹೋಗುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ವಾಪಸ್ಸು ತೆಗೆದುಕೊಂಡಿದ್ದೇನೆ ಎಂದು ಹೇಳಿದೆ.

**ಶ್ರೀ ಐವನ್ ಡಿ'ಸೋಜಾ:-** ಈ ರೀತಿ comment ಮಾಡುವುದು ಸರಿಯಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೆ, slip of the tongue ಬಂದ ತಕ್ಷಣ ವಾಪಸ್ಸು ತೆಗೆದುಕೊಂಡಿದ್ದೇನೆ.

Formatted: Font: 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Sri IVAN D'SOUZA:-** You have all the rights to ask. If anybody, is taking this money to their home.

**ಶ್ರೀ ಆಯನೂರು ಮಂಜುನಾಥ್:-** ವಾಪಸ್ಸು ತೆಗೆದುಕೊಂಡ ಮೇಲೆ ಚರ್ಚೆಗೆ ಏನು ಉಳಿದಿದೆ? ಮಾನ್ಯ ಐವನ್ ಡಿ'ಸೋಜಾರವರು ಬಹಳ ಸೂಕ್ಷ್ಮವಾಗಿದ್ದಾರೆ. ಈ ಸಂವೇದನಾಶೀಲತೆಯನ್ನು ಇಡೀ ರಾಜ್ಯದಲ್ಲಿರುವ ಎಲ್ಲಾ ಜನರ ಬಗ್ಗೆ ತೋರಿಸಬೇಕು. ಯಾವುದೋ ಒಂದು ವ್ಯಕ್ತಿ ಅಥವಾ ಸಮೂಹಕ್ಕಾಗಿ ಅಲ್ಲ. ನಾನು ಒಬ್ಬ ವ್ಯಕ್ತಿ ಮೇಲೆ ಆರೋಪ ಮಾಡಬೇಕೆಂದು ಮಾತನಾಡುತ್ತಿಲ್ಲ. ಇಡೀ ರಾಜ್ಯದಲ್ಲಿ ದೊಡ್ಡ ಸಮಸ್ಯೆ ಇದೆ, ದಿನನಿತ್ಯ ಸುವರ್ಣ ಸೌಧದ ಎದುರಿಗೆ ನೂರಾರು ಜನ ಬಂದು ಟೆಂಟ್ ಹಾಕಿಕೊಂಡು ಧರಣಿ ಕುಳಿತುಕೊಳ್ಳುತ್ತಾರೆ, ಲಕ್ಷಾಂತರ ಜನರ ಹೋರಾಟಗಳು ನಡೆಯುತ್ತಿವೆ. ಆ ಸಮಸ್ಯೆಗಳ ಪ್ರಸ್ತಾವಕ್ಕೆ ಹಣ ಇಲ್ಲದೇ ಯಾವುದೋ ಒಬ್ಬ ವ್ಯಕ್ತಿಯ ಒಂದು ಖಾತೆಗೆ ಇಷ್ಟೊಂದು ಹಣ ಕೊಡಲು ಏನು ಅರ್ಜೆಂಟ್ ಇದೆ? ಇನ್ನೊಂದು ತಿಂಗಳಿಗೆ ಏನು ಅರ್ಜೆಂಟ್? ಇದನ್ನು ಫೆಬ್ರವರಿ-ಮಾರ್ಚ್‌ನಲ್ಲಿ ಬರುವ ಮೈನ್ ಬಜೆಟ್‌ನಲ್ಲಿ ಬೇಕಾದರೆ ಮಾಡಲಿ. ಆಗ ಮಾಡದೇ ಈಗ ಅರ್ಜೆಂಟಾಗಿ ಹಣ ಮಂಜೂರು ಮಾಡಿಕೊಳ್ಳಲು ಅರ್ಜೆಂಟ್ ಏನಿದೆ? ಯಾರಿಗೆ ಆತುರ? ಯಾವ ಉದ್ದೇಶಕ್ಕೆ? ಒಂದು ತಿಂಗಳಲ್ಲಿ ಅವರುಎಷ್ಟು ರಸ್ತೆಗಳನ್ನು ಮಾಡಿ ಮುಗಿಸುತ್ತಾರೆ. ಅದರ ಬದಲು ಸಮಾಜ ಕಲ್ಯಾಣದ ಹಲವಾರು ಸಂಗತಿಗಳಿಗೆ ಆ ಹಣವನ್ನು ವಿನಿಯೋಗ ಮಾಡಬೇಕು. ಈ ರೀತಿ ಯಾವುದೋ ಒಂದು hidden agenda ಇಟ್ಟುಕೊಂಡಿರುವ ಪೂರಕ ಬಜೆಟ್ ಇದಾಗಿದೆ. ಇದನ್ನು ಯಾರೂ ಬಿಡಿಸಿ ಹೇಳುತ್ತಿಲ್ಲ. Hidden agenda ಇದೆ ಎಂದು ವಿರೋಧ ಪಕ್ಷದ ಸದಸ್ಯನಾಗಿ ನಾನು ಭಾವಿಸುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ರೂ. 18 ಕೋಟಿ ಕೊಟ್ಟಿದ್ದು, ಮೊನ್ನೆ ನವೆಂಬರ್‌ನಲ್ಲಿ ಕನ್ನಡದ ಬಗ್ಗೆ ಮಾತನಾಡಿದ್ದೇ ಆಡಿದ್ದು. ರೂ. 1998 ಕೋಟಿಗಳು ಮಾತ್ರ ಯಾರಿಗೋ ಮಾಡಿಕೊಳ್ಳುವುದು. ಕಾನೂನು ಇಲಾಖೆಯು ಮಾನ್ಯ ಕೃಷ್ಣ ಭೈರೇಗೌಡರ ಬಳಿ ಇರುವುದರಿಂದ ಅದಕ್ಕೆ ರೂ. 100 ಕೋಟಿ ಇಟ್ಟಿದ್ದಾರೆ. ಒಟ್ಟಾರೆ ಇದು ಸದುದ್ದೇಶದಿಂದ ಬಂದಿರುವ ಪೂರಕ ಬಜೆಟ್ ಅಲ್ಲ, ಬಹಳ ತರಾತುರಿಯಲ್ಲಿ ಬಂದಿರುವ ಬಜೆಟ್ ಆಗಿದೆ. ನಾನು ಮಾಧ್ಯಮವನ್ನು ಆಧರಿಸಿ ಮಾತನಾಡುತ್ತೇನೆ, ನನಗೆ ಗೊತ್ತಿಲ್ಲ. ಎಲ್ಲೋ ಅವರು ಯಾರೋ operation ಮಾಡುತ್ತಾರೆ, ಇವರು ಯಾರೋ operation ಮಾಡುತ್ತಾರೆ ಎನ್ನುವ ಗೊಂದಲಗಳ ಮಧ್ಯೆ ಕುರ್ಚಿ ಕಳೆದುಹೋಗಬಹುದೇನೋ ಎಂದು ಬೇಕಾದ ಹಾಗೆ ಮಂಜೂರು ಮಾಡಿಕೊಳ್ಳುತ್ತಿದ್ದಾರೆಯೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಈ ಪೂರಕ ಬಜೆಟ್‌ನಲ್ಲಿ ಸಾಲ ಮನ್ನಾದ ಸದುದ್ದೇಶ ಇದ್ದರೆ ಸಹಕಾರ ಇಲಾಖೆಗೆ ಕೊಟ್ಟಿದ್ದನ್ನು ಒಪ್ಪಬಹುದೇ ವಿನ: ಬೇರೆ ಯಾವುದನ್ನೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಕೃಷಿಗೆ ರೂ. 1900 ಕೋಟಿಗಳನ್ನು ಕೊಡಲಿ, ಬೇರೆ ಬೇರೆ ಇಲಾಖೆಗಳಿಗೆ ಕೊಡಲಿ. ಎಲ್ಲವನ್ನೂ ಮಂಜೂರು ಮಾಡಿಕೊಡೋಣ. ಆದರೆ ಒಂದೇ ಒಂದು ಇಲಾಖೆಗೆ ಇಷ್ಟು ಕೊಡಲು ಸಾಧ್ಯವಿಲ್ಲ. ಇದರಲ್ಲಿ ಷಡ್ಯಂತ್ರ ಮತ್ತು ಸ್ವಾರ್ಥ ಇದೆ. ಇದರಲ್ಲಿ ಏನೋ ಒಂದು ಕುತಂತ್ರ ಮತ್ತು hidden agenda ಇದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "



Formatted: Font: 14 pt
Formatted: Font: Bookman Old Style, 14 pt
Formatted: Font: 14 pt
Formatted: Font: Bookman Old Style, 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Bookman Old Style, 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt

ಯಾರನ್ನೋ ಯಾರೋ ಓಲೈಸುವುದಕ್ಕೆ ಮಾಡಿದ್ದಾರೆ. ಇಡೀ ರಾಜ್ಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದು ಜನರ ತೆರಿಗೆ ಹಣವಾಗಿದೆ. ಯಾರ ಇಚ್ಛೆಯಂತೆ ಅವರಿಗೆ ಖುಷಿ ಬಂದ ಹಾಗೆ ಅಥವಾ ಯಾರಿಗೆ ಚಾಕೋಲೇಟ್ ಅಥವಾ ಹೋಳಿಗೆ ಹಾಕುವಂತೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇವೆರಡು ಅಂಶಗಳನ್ನು ನಾನು ವಿರೋಧ ಮಾಡುತ್ತೇನೆ. ಅದನ್ನು ತಿದ್ದುಪಡಿ ಮಾಡಿ ಹೊಸದನ್ನು ತರಲಿ. ಎಲ್ಲರಿಗೂ ಸಮನಾಗಿ ಹಂಚಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಹಣಕಾಸಿನ ವಿಧೇಯಕದ ಬಗ್ಗೆ ಸದನದಲ್ಲಿ ಇದುವರೆಗೂ ನಾವು ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದೇವೆ. ಆದರೆ ಇವತ್ತು ನಡೆದಿರುವ ಆತಂಕದ ಹಿನ್ನೆಲೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ದಯವಿಟ್ಟು ಸಹಕಾರ ಕೊಡಬೇಕು.

**ಶ್ರೀ ಕೃಷ್ಣ ಭೈರೇಗೌಡ:–** ಒಟ್ಟು ಮೆಚ್ಚಬೇಕು ಎಂದು ಹೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಮಗೆ ಯಾರನ್ನಾದರೂ ಮೆಚ್ಚಿಸುವ ಶಕ್ತಿ ಉಂಟು. ಆದರೆ ಇಲ್ಲಿ ಸರಿ ಮಾಡಿಕೊಂಡು ಮುಂದುವರೆಯೋಣ.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪೂರಕ ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಮುಂಚೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಿಎಜಿ ವರದಿಯನ್ನು ಮಂಡಿಸಿದ್ದರು. ಆ ಸಿಎಜಿ ವರದಿಯನ್ನು ಮಂಡಿಸಿದ ಸಂದರ್ಭದಲ್ಲಿ ಅನೇಕ ಸಂಗತಿಗಳು ನಮಗೆ ಗೊತ್ತಾಗುವುದರ ಮೂಲಕ ರಾಜ್ಯಕ್ಕೂ ಗೊತ್ತಾಗಿದೆ. ಆಗಾಗ್ಗೆ ಪತ್ರಿಕೆಗಳಲ್ಲಿ ಹಗರಣಗಳ ಬಗ್ಗೆ ಸಿಎಜಿ ವರದಿಯಲ್ಲಿ ಬಂದಿದೆ ಎಂದು ಗೊತ್ತಾಗುತ್ತಿತ್ತು. ನಾನು ಜೀವನದಲ್ಲಿ ಮೊದಲನೇ ಬಾರಿ ಸಿಎಜಿ ವರದಿಯನ್ನು ಓದಿದೆ. ಆದರೆ ಹಾರ್ಟ್ ಅಟ್ಯಾಕ್ ಆಗುವುದು ಒಂದೇ ಬಾಕಿ ಇತ್ತು. ಆದರೆ ಸ್ವಲ್ಪ ಸಂಘಟನೆಯೊಡನೆ ಬೆಳೆದುಬಂದು, ಸಮಾಜವನ್ನು ಅರ್ಥ ಮಾಡಿಕೊಂಡಿರುವವನಾದ್ದರಿಂದ ಹಾರ್ಟ್ ಅಟ್ಯಾಕ್ ಅನ್ನು ತಡೆದುಕೊಂಡೆನು. ಅಂದರೆ ವಿಷಯ ಏನೆಂದರೆ 2016–17ನೇ ಸಾಲಿನಲ್ಲಿ ಮಾನ್ಯ ಸಿದ್ದರಾಮಯ್ಯನವರು ರೂ. 1,86,052 ಕೋಟಿಗಳ ಬಜೆಟ್ ಅನ್ನು ಮಂಡಿಸಿದ್ದಾರೆ. ನಾನು ಸಿಎಜಿ ವರದಿಯಲ್ಲಿ ಬಹುಶಃ ಅಷ್ಟನ್ನೂ ಖರ್ಚು ಮಾಡಿರುವ ಬಗ್ಗೆ ಉಲ್ಲೇಖಿಸಿರುತ್ತಾರೆ ಎಂದು ತಿಳಿದುಕೊಂಡಿದ್ದೆನು. ಆದರೆ ವರದಿಯನ್ನು ಓದುತ್ತಾ ಹೋದಂತೆ ನಂತರ ಅರ್ಥವಾಯಿತು. ಅದರಲ್ಲಿ ರೂ. 1,86,052 ಕೋಟಿಗಳ ಬಜೆಟ್‌ನಲ್ಲಿ ರೂ. 19% ಹಣಕ್ಕೆ ಲೆಕ್ಕ ತಾಳೆಯಾಗುತ್ತಿಲ್ಲ ಮತ್ತು ವೆಚ್ಚ ಹಾಗೂ ಸ್ವೀಕೃತಿಗಳಿಗೆ ತಾಳೆ ಆಗದಂತಹ ಸಂಗತಿ ಸಿಎಜಿ ವರದಿಯಲ್ಲಿ ಬಂದಿದೆ. ಅಂದರೆ ಸುಮಾರು 35 ಸಾವಿರ ಕೋಟಿ ರೂಪಾಯಿಗಳ ಹಣಕ್ಕೆ ಲೆಕ್ಕ ತಾಳೆ ಆಗುತ್ತಿಲ್ಲ. ಮಾನ್ಯ ಕೃಷ್ಣ ಭೈರೇಗೌಡರ ಖಾತೆಯಾದ ಗ್ರಾಮೀಣಾಭಿವೃದ್ಧಿಗೆ ರೂ. 35 ಸಾವಿರ ಕೋಟಿಗಳನ್ನು ಕೊಟ್ಟಿದ್ದರೆ ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮಾಂತರ ಪ್ರದೇಶಗಳು ಪುನರ್ ನಿರ್ಮಾಣವಾಗುತ್ತಿದ್ದವು. ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು, ಶಿಕ್ಷಣ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂಸ್ಥೆಗಳು ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಎಲ್ಲಾ ಇಲಾಖೆಗಳ ಕೆಲಸ ಆಗುತ್ತಿದ್ದವು. ರೂ. 35 ಸಾವಿರ ಕೋಟಿ ರೂಪಾಯಿಗಳ ಹಣಕ್ಕೆ ಲೆಕ್ಕ ಸಿಗುತ್ತಿಲ್ಲ ಎಂದರೆ, ಇದಕ್ಕೆ ಯಾರು ಉತ್ತರ ಕೊಡುತ್ತಾರೆ? ಈ ಪ್ರಶ್ನೆಯನ್ನು ಸದನದಲ್ಲಿ ಕೇಳುತ್ತಿದ್ದೇನೆ. ರೂ. 12,850 ಕೋಟಿಗಳನ್ನು ಸಾಲದ ಮೇಲಿನ ಬಡ್ಡಿಯಾಗಿ ಕಟ್ಟಲಾಗಿದೆ. ರೂ. 14,387 ಕೋಟಿಗಳನ್ನು ಸಹಾಯ ಧನ ಪಾವತಿ ಮಾಡಲಾಗಿದೆ. ಇನ್ನೂ ಆಶ್ಚರ್ಯದ ಸಂಗತಿ ಎಂದರೆ ಬಳಕೆಯಾಗದ ಹಣವನ್ನು ಸರ್ಕಾರಕ್ಕೆ surrender ಮಾಡಬೇಕಾಗಿತ್ತು. Unutilised money ಯನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು.

~~(ಮುಂದು)~~

Formatted: Font: 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt
Formatted: Font: Nudi 01 e, 14 pt

(576)19–12–2018(4–50)ಹೆಚ್‌ವಿ:ಬಿಎನ್‌ಎಸ್

~~(ಸಭಾಪತಿಯವರ ಉಪಸ್ಥಿತಿ)~~

**ಶ್ರೀ ಎನ್.ರವಿಕುಮಾರ್(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ಇದರ ಪ್ರಮಾಣ ಎಷ್ಟೆಂದರೆ, 11,994.81 ಕೋಟಿ ರೂಪಾಯಿಗಳು, ಅಂದರೆ 12,000 ಕೋಟಿ ರೂಪಾಯಿಗಳಿಗೆ 6 ಕೋಟಿ ರೂಪಾಯಿಗಳು ಕಡಿಮೆ. ಈ 12 ಸಾವಿರ ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಹಿಂದಿರುಗಿಸಿಲ್ಲ. ಹಾಗಾದರೆ, 11,994.81 ಕೋಟಿ ರೂಪಾಯಿಗಳು ಯಾವ ಇಲಾಖೆಯ ಅಕೌಂಟ್‌ನಲ್ಲಿದೆ? ಈ ಮೊತ್ತವನ್ನು ಮಾನ್ಯ ಮುಖ್ಯಮಂತ್ರಿಗಳು ಏತಕ್ಕೋಸ್ಕರ ತಮ್ಮ ಆಯವ್ಯಯದಲ್ಲಿ ತೋರಿಸಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆಯವ್ಯಯದಲ್ಲಿ ತೋರಿಸಿರುವ ಸುಮಾರು ಶೇಕಡ 7ರಷ್ಟು ಹಣವನ್ನು ಅಂದರೆ ಸುಮಾರು 13007 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಹಿಂದಿರುಗಿಸಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ಸುಮಾರು 612 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಆದರೆ, ಈ ಹಣವನ್ನು ಖರ್ಚು ಮಾಡಿಲ್ಲ. ಅದು ಬ್ಯಾಂಕ್‌ನಲ್ಲಿಯೇ ಇದೆ. ಈ 612 ಕೋಟಿ ರೂಪಾಯಿಗಳಿಗೆ ಬಡ್ಡಿ ಬರುತ್ತಿದೆ. ಈ ಹಣವನ್ನು ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಏತಕ್ಕೋಸ್ಕರ ಖರ್ಚು ಮಾಡಿಲ್ಲ ಮತ್ತು ಅದರ ಅಗತ್ಯತೆ ಇರಲಿಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದರೆ ಅದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಳ್ಳಬೇಕಾಗಿದೆ. ಏಕೆಂದರೆ, ನಾವು ಸಂವಿಧಾನಾತ್ಮಕ ಜಗತ್ತಿನಲ್ಲಿದ್ದೇವೆ. ರಾಜ್ಯಕ್ಕೆ ಮತ್ತು ದೇಶಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯ ಸರ್ಕಾರವನ್ನು ಕೊಟ್ಟಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ, ಸಂವಿಧಾನಕ್ಕೆ ವಿರುದ್ಧವಾಗಿ ಮತ್ತು ಶಾಸಕಾಂಗ ವ್ಯವಸ್ಥೆಗೆ ವಿರುದ್ಧವಾಗಿ 7378 ಕೋಟಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೂಪಾಯಿಗಳನ್ನು ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳದೇ ಖರ್ಚು ಮಾಡಲಾಗಿದೆ. ಇದು ಹೇಗೆ ಸಾಧ್ಯವಾಯಿತು ಎನ್ನುವುದನ್ನು C.A.G. (Comptroller and Auditor General of India) ವರದಿಯಲ್ಲಿ ಕೇಳಲಾಗಿದೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗಿದೆ.

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, C.A.G. ವರದಿ ಬಗ್ಗೆ ಮಾತನಾಡುವುದಾದರೆ ಮತ್ತೊಂದು ಸಂದರ್ಭದಲ್ಲಿ ಮಾತನಾಡೋಣ. ಈಗ ಧನವಿನಿಯೋಗ ವಿಧೇಯಕದ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದರೆ, ಇವರು ಪೂರಕ ಅಂದಾಜುಗಳ ಮೇಲೆ ಚರ್ಚೆ ಮಾಡುವ ರೀತಿ ಮಾತನಾಡುತ್ತಿದ್ದಾರೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಸನ್ಮಾನ್ಯ ಸಭಾಪತಿಯವರೇ, ಈಗ ಚರ್ಚೆಯಾಗುತ್ತಿರುವ ವಿಧೇಯಕದ ವಿಷಯವೇ ಬೇರೆ ಅವರು ಮಾತನಾಡುತ್ತಿರುವ ವಿಷಯವೇ ಬೇರೆ. ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಗೃಹ, ಕಾರ್ಮಿಕ, ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಲ್ಲಿ ಸುಮಾರು 18.11 ಕೋಟಿ ರೂಪಾಯಿಗಳು ಕಳುವಾಗಿದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಸನ್ಮಾನ್ಯ ಸಭಾಪತಿಯವರೇ, 2008 ರಿಂದ 2013ರವರೆಗೆ ಈ ರಾಜ್ಯದಲ್ಲಿ ಸರ್ಕಾರಕ್ಕೆ ಹಿಂದಿರುಗಿಸದೇ ಇರುವ ಹಣದ ಪ್ರಮಾಣ ಶೇಕಡ 40ರಷ್ಟು ಇತ್ತು. ಅದರ ಬಗ್ಗೆ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಎಂ.ನಾರಾಯಣ ಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವರ ಪಕ್ಷದವರೇ ಆದ ಶ್ರೀಯುತರುಗಳಾದ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದಗೌಡ ಮತ್ತು ಜಗದೀಶ್ ಶೆಟ್ಟರ್ ಈ ಮೂರು ಜನ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿನ C.A.G. ವರದಿಯ ಬಗ್ಗೆಯೂ ಚರ್ಚೆ ಮಾಡೋಣ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ C.A.G. ವರದಿಯನ್ನು ಸದನದ ಮುಂದೆ ಮಂಡಿಸಿದ ಮೇಲೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಶಾಸಕರಿಗೆ ಹಕ್ಕಿದೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದ ಆಡಳಿತ ಅವಧಿಯಲ್ಲಿಯೂ 24 ಸಾವಿರ ಕೋಟಿ ರೂಪಾಯಿಗಳಿಗೆ ಲೆಕ್ಕವಿರಲಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, 2011–2012ನೇ ಸಾಲಿನ C.A.G. ವರದಿಯಲ್ಲಿ ಶೇಕಡ 40ರಷ್ಟು ಇತ್ತು. ಆಗ ಇವರು ತಿಂದು ಜೈಲಿಗೆ ಹೋದರು. ಅದರ ಬಗ್ಗೆ ಮಾತನಾಡೋಣ. ಎಷ್ಟು ದುಡ್ಡು ತಿಂದಿದ್ದಾರೆ ಎನ್ನುವುದರ ಬಗ್ಗೆ ಮಾತಾಡೋಣ. Let them bring the subject.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಸರ್ಕಾರ ಅಧಿಕಾರದಲ್ಲಿದ್ದಾಗಲೂ C.A.G. ವರದಿಯಲ್ಲಿ ವ್ಯತ್ಯಾಸಗಳಾಗಿವೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, C.A.G. ವರದಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಅದನ್ನು ಬಿಟ್ಟು ಬೇರೆ ವಿಷಯದ ಮಧ್ಯೆ ಆ ವಿಷಯವನ್ನು ನುಸುಳಿಸುವುದು ಸರಿಯಲ್ಲ. ಅವರು ಹೇಳುವುದನ್ನೆಲ್ಲ ಕೇಳುವುದಕ್ಕೆ ನಮಗೆ ಬೇರೆ ಕೆಲಸವಿಲ್ಲವೇ?

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Formatted: Justified

**ಶ್ರೀ ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಮಾತನಾಡಿ ಮುಗಿಸಿದ ಮೇಲೆ ಮಾನ್ಯ ಐವನ್ ಡಿ'ಸೋಜಾರವರು ಮಾತನಾಡಲಿ. ಈಗ ಅವರು ಮಾತನಾಡುವುದಕ್ಕೆ ಅವಕಾಶವನ್ನು ನೀಡಲಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡುವುದನ್ನೆಲ್ಲ ಕೇಳುತ್ತಾ ಕುಳಿತುಕೊಳ್ಳುವುದಕ್ಕೆ ನಾವು ಬಂದಿಲ್ಲ. It is the Demand. It is not flowing water. What are they talking?

**(ಗೊಂದಲ)**

**ಶ್ರೀ ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದೀರಿ, ಅವರು ಮಾತನಾಡುತ್ತಿದ್ದಾರೆ. ಇವರಿಗೆ ಅವಕಾಶವನ್ನು ನೀಡಿದಾಗ ಇವರು ಮಾತನಾಡಲಿ.

**(ಗೊಂದಲ)**

**ಸಭಾಪತಿಯವರುಃ–** ಮಾನ್ಯ ಸಚಿವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**(ಗೊಂದಲ)**

**ಶ್ರೀ ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ನಾವು 2 ಲಕ್ಷದ 25 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿ 900 ಕೋಟಿ ರೂಪಾಯಿಗಳಷ್ಟು ಬಡ್ಡಿ ಕಟ್ಟುತ್ತಿದ್ದೇವೆ.

**ಸಭಾಪತಿಯವರುಃ–** ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಮರಿತಿಬ್ಬೇಗೌಡರೇ, ತಾವು ಏನೋ ಹೇಳುತ್ತಿದ್ದೀರಿ ಹೇಳಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ)ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ಅವರು C.A.G. ವರದಿಯ ಬಗ್ಗೆ ಮಾತನಾಡುವುದಕ್ಕೆ ತಾವು ಅನುಮತಿಯನ್ನು



Formatted: Indent: First line: 0 cm
Formatted: Left, Indent: First line: 0 cm
Formatted: Indent: First line: 0 cm
Formatted: Left, Indent: First line: 0 cm
Formatted: Left, Indent: First line: 0 cm
Formatted: Indent: First line: 0 cm
Formatted: Indent: First line: 0 cm
Formatted: Indent: First line: 0 cm

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಟ್ಟರೆ, ಅದರ ಮೇಲೆ ಚರ್ಚೆಗೆ ಹಾಗೂ ಉತ್ತರ ಹೇಳುವುದಕ್ಕೆ ಸರ್ಕಾರ ಸಿದ್ಧವಿದೆ. ಆದ್ದರಿಂದ ಈಗ ಮಾನ್ಯ ಸದಸ್ಯರು ಧನವಿನಿಯೋಗ ವಿಧೇಯಕದ ಬಗ್ಗೆ ಮಾತ್ರ ಮಾತನಾಡಲಿ.

**(ಗೊಂದಲ)**

**ಶ್ರೀ ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಇದು ರಾಜ್ಯದ ಅರ್ಥಿಕ ಪರಿಸ್ಥಿತಿಯ ಅವಲೋಕನವಾಗಿದೆ.

**(ಗೊಂದಲ)**

Formatted: Justified

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, 'ಮಾನ್ಯ ಸದಸ್ಯರು ಈಗ ನಾವು ಸದನದ ಮುಂದೆ ಮಂಡಿಸಿರುವ ಧನವಿನಿಯೋಗ ವಿಧೇಯಕದ ಬಗ್ಗೆ ಮಾತನಾಡುತ್ತಿಲ್ಲ. ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ಅವರು ಮಾತನಾಡಲಿ. C.A.G. ವರದಿಯ ಮೇಲೆ ಚರ್ಚೆಯನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳಲಿ' ಎಂದು ನಮ್ಮ ಭಾಗದ ಸದಸ್ಯರು ಹೇಳುತ್ತಿರುವುದು ಸರಿಯಾಗಿದೆ. ಆದರೂ ಸಹ ಈಗಾಗಲೇ ಅವರು ತಮ್ಮ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಅದನ್ನು ಕೇಳಿಕೊಂಡು ಸುಮ್ಮನಿದ್ದರೆ ಅದಕ್ಕೆ ಬೇರೆ ಏನೋ ಕಾರಣವಿದೆ ಎನ್ನುವ ಅಭಿಪ್ರಾಯ ಬರುವುದು ಬೇಡ. ಮಾನ್ಯ ಸದಸ್ಯರು ಮೊದಲೇ ವಿವೇಚನೆ ಉಪಯೋಗಿಸಿ ಮಾತನಾಡಬೇಕಾಗಿತ್ತು. ಆದರೆ, ಅವರು ವಿವೇಚನೆ ಮೀರಿ ಮಾತನಾಡಿದ್ದಾರೆ. ಅವರು ಮಾತನಾಡಿರುವ ವಿಚಾರಕ್ಕೆ ಸರ್ಕಾರ ಈಗಲೂ ಉತ್ತರ ಕೊಡುವುದಕ್ಕೆ ತಯಾರಿದೆ. ಆದರೆ, ಈಗ ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ಅವರು ಏನು ಹೇಳಬೇಕೆಂದಿದ್ದಾರೆ ಅದನ್ನು ಸಂಕ್ಷಿಪ್ತವಾಗಿ ಹೇಳಲಿ.

**(ಗೊಂದಲ)**

Formatted: Left, Indent: First line: 0 cm

**ಶ್ರೀ ಹೆಚ್.ಎಂ.ರೇವಣ್ಣಃ–** ಸನ್ಮಾನ್ಯ ಸಭಾಪತಿಯವರೇ, ಕಾರ್ಯಕಲಾಪಗಳ ಪಟ್ಟಿಯಲ್ಲಿ ಇಲ್ಲದಿರುವ ವಿಷಯಕ್ಕೆ ತಾವು ಯಾಕೆ ಅವಕಾಶ ಕೊಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಆರ್.ಧರ್ಮಸೇನಃ–** ಸನ್ಮಾನ್ಯ ಸಭಾಪತಿಯವರೇ, ಅವರು ಈ ರೀತಿ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬಾರದು. ಇಲ್ಲದಿದ್ದರೆ ಅವರು 2011ರಲ್ಲಿ ಕೊಟ್ಟ ಸಿ.ಎ.ಜಿ. ವರದಿಯಲ್ಲಿನ ವ್ಯತ್ಯಾಸಕ್ಕೆ ಲೆಕ್ಕ ಕೊಟ್ಟು ಮುಂದುವರೆಯಲಿ. ಮಾನ್ಯ ಸಿದ್ದರಾಮಯ್ಯನವರು ತಮ್ಮ ಅಕೌಂಟ್‌ಗೆ ಹಣವನ್ನು ವರ್ಗಾವಣೆ ಮಾಡಿಕೊಂಡಿರುವಂತೆ ಮಾತನಾಡುತ್ತಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(**ಗೊಂದಲ**)

**ಸಭಾಪತಿಯವರುಃ-** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್‌ರವರೇ, ತಾವು ಮಾತನಾಡಿ.

Formatted: Indent: First line: 0 cm

**ಶ್ರೀ ಎನ್.ರವಿಕುಮಾರ್ಃ-** ಸನ್ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡುವಂತಹ ಯೋಜನೆಗಾಗಿ ಸುಮಾರು 115.10 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ತೆಗೆದಿಟ್ಟಿದ್ದಾರೆ. ಆದರೆ, ನಮ್ಮ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಲ್ಯಾಪ್‌ಟಾಪ್ ಅನ್ನು ಉಪಯೋಗಿಸದೇ ಇರುವಂತಹ ದುರಾದೃಷ್ಟಕರ ಸಂಗತಿ ನಮ್ಮ ರಾಜ್ಯದಲ್ಲಿ ಸಂಭವಿಸಿತು. ಏಕೆಂದರೆ, ಆ 115.10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲೇ ಇಲ್ಲ. ಆ ವರ್ಗದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡಲೇ ಇಲ್ಲ. ಯೋಜನೆಯನ್ನು ಉದ್ಘಾಟನೆ ಮಾಡುವುದಕ್ಕಾಗಿ ಯಾರೋ 4-5 ಜನ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಟ್ಟಿರುವುದನ್ನು ಬಿಟ್ಟರೆ, ಬೇರೆಯವರಿಗೆ ಕೊಟ್ಟಿಲ್ಲ. ಸಾವಿರಾರು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡಬೇಕೆಂದು ಆಯವ್ಯಯದಲ್ಲಿ ಮೀಸಲಿಟ್ಟಿದ್ದ 115 ಕೋಟಿ ರೂಪಾಯಿಗಳನ್ನು ಖರ್ಚು ಮಾಡದೇ, ಆ ವರ್ಗದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಲಾಗಿದೆ. ಇನ್ನು ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸುವುದಕ್ಕಾಗಿ. . . . .

Formatted: Indent: First line: 0 cm

**ಶ್ರೀ ಮರಿತಿಬ್ಬೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ಅವರಿಗೆ ಧನವಿನಿಯೋಗ ವಿಧೇಯಕದ ಬಗ್ಗೆ ಮಾತನಾಡುವುದಕ್ಕೆ ಹೇಳಿ. ಬೇರೆ ನಿಯಮದಡಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದರೆ ಸರ್ಕಾರ ಉತ್ತರ ಕೊಡುತ್ತದೆ.

(**ಗೊಂದಲ**)

**ಶ್ರೀ ಆರ್.ಧರ್ಮಸೇನಃ-** ಸನ್ಮಾನ್ಯ ಸಭಾಪತಿಯವರೇ, ಅವರು ವಿಧೇಯಕದ ಬಗ್ಗೆ ಮಾತ್ರ ಮಾತನಾಡಲಿ.

(**ಗೊಂದಲ**)

**ಡಾ:ಜಯಮಾಲಃ-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

(**ಗೊಂದಲ**)

**ಸಭಾಪತಿಯವರುಃ-** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಸರ್ಕಾರದವರು ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಅವರು ಎರಡು ನಿಮಿಷಗಳ ಕಾಲ ಮಾತನಾಡಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ರವಿಕುಮಾರ್‌ರವರೇ, ನೀವು ಒಂದು ಗಂಟೆಗಳ ಕಾಲ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿ ಮಾತನಾಡಿದರೆ ಅದನ್ನು ಬೇರೆ ನಿಯಮದಡಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಈಗ ತಾವು ಚರ್ಚೆಯನ್ನು ಪ್ರಾರಂಭ ಮಾಡಿದ್ದೀರಿ ಐದು ನಿಮಿಷಗಳ ಕಾಲ ಮಾತನಾಡಿ ಮುಗಿಸಿ.

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಅವರು ಆರೋಪದ ರೀತಿಯಲ್ಲಿ ಮಾತನಾಡುವುದು ಬೇಡ. ಅದರ ಬದಲಿಗೆ ಸ್ಪಷ್ಟೀಕರಣವನ್ನು ಕೇಳಲಿ. ಆಗ ನಾವು ಅದು ಆ ರೀತಿಯಲ್ಲ, ಈ ರೀತಿ ಎಂದು ಸ್ಪಷ್ಟೀಕರಣ ಕೊಡುತ್ತೇವೆ. ಆಗ ಅವರು ಅದಕ್ಕೆ ಯಾವ ಬಣ್ಣವನ್ನಾದರೂ ಕೊಡಲಿ. ಉತ್ತರ ಹೇಳುವಂತಹ ಸಂದರ್ಭದಲ್ಲಿ ನಾವು ಎಲ್ಲವನ್ನು ಹೇಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬಂದರೆ ಅವರೇ ಉತ್ತರ ಹೇಳುತ್ತಾರೆ. ಇಲ್ಲದಿದ್ದರೆ ನಾನು ಹೇಳುತ್ತೇನೆ. ನಾವು ಉತ್ತರ ಹೇಳುವುದಕ್ಕೂ ಮೊದಲೇ ಅವರು ಬಣ್ಣ ಕಟ್ಟುವುದು ಬೇಡ. ಸುಮ್ಮನೆ, they are provoking. C.A.G. ರಿಪೋರ್ಟ್‌ನಲ್ಲಿ ಅವರು ಗಮನಿಸಿರುವ ಅಂಶಗಳನ್ನು ಹೇಳಬೇಕಾಗುತ್ತದೆಯೇ ಹೊರತು ಅದಕ್ಕೆ ರೆಕ್ಕೆಪುಕ್ಕ ಕಟ್ಟುವುದು ಸರಿಯಲ್ಲ.

**ಶ್ರೀ ಹೆಚ್.ಎಂ.ರೇವಣ್ಣಃ–** ಸನ್ಮಾನ್ಯ ಸಭಾಪತಿಯವರೇ, ಮೊದಲಿಗೆ ಅವರು ಮಾತನಾಡುತ್ತಿರುವ ವಿಚಾರಕ್ಕೆ ತಾವು ಅವಕಾಶವನ್ನು ಮಾಡಿ ಕೊಡಬಾರದಾಗಿತ್ತು. ವಿಧೇಯಕದ ಮೇಲಿನ ಚರ್ಚೆಯನ್ನು ಬಿಟ್ಟು ಅವರು ಬೇರೆ ವಿಚಾರವನ್ನೇ ಮಾತನಾಡುತ್ತಿದ್ದಾರೆ.

~~(ಮುಂದುವರಿದಿದೆ)~~

**(577) 19.12.2018 5.00 ಪಿಕೆ:ಬಿಎನ್‌ಎಸ್**

~~**(ಸಭಾಪತಿಗಳ ಉಪಸ್ಥಿತಿ)**~~

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ತಿಂದರು; ಚೆಕ್ ಮುಖಾಂತರ ದುಡ್ಡು ತೆಗೆದುಕೊಂಡು ಅವರು ಜೈಲಿಗೆ ಹೋದರು. ನಾವು ಜೈಲಿಗೆ ಹೋಗಿದ್ದೇವೆಯೇ? ಜೈಲಿಗೆ ಹೋದವರು ಯಾರು? Let them show it.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"



Formatted: Indent: First line: 0 cm
Formatted: Indent: First line: 0 cm
Formatted: Font: Bold
Formatted: Indent: First line: 1.27 cm, Right: -0.25 cm
Formatted: Font: Bold
Formatted: Left

**ಶ್ರೀ ಎನ್.ರವಿಕುಮಾರ್:-** ಇಂದಿರಾಗಾಂಧಿಯವರು ಜೈಲಿಗೆ ಹೋಗಿ ಬಂದಿದ್ದರೋ ಇಲ್ಲವೋ?

(ಗೊಂದಲ)

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ಇಂದಿರಾಗಾಂಧಿಯವರು ಏಕೆ ಜೈಲಿಗೆ ಹೋಗಿದ್ದರು ಎನ್ನುವುದು ನಿಮಗೆ ಗೊತ್ತೇ?

**(ಗೊಂದಲ)**

Formatted: Font: Bold

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್‌ರವರೇ, ನಿಮಗೆ ಮಾತನಾಡಲು 5 ನಿಮಿಷ ಕೊಟ್ಟಿದ್ದೇನೆ. 5 ನಿಮಿಷದ ಒಳಗೆ ಮುಗಿಸುವುದಾದರೆ ಮುಗಿಸಿ ಇಲ್ಲದಿದ್ದರೆ ಬೇರೆಯವರ ಹೆಸರನ್ನು ಕರೆಯುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೂ ನೀವು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಈ ವಿಧೇಯಕದ ಬಗ್ಗೆ ಮಾತನಾಡದೇ ನಾವೂ ಕೂಡ ಬೇರೆ ವಿಷಯ ಮಾತನಾಡಬೇಕಾಗುತ್ತದೆ.

(ಗೊಂದಲ)

(ಗೊಂದಲ)

**ಸಭಾಪತಿಯವರು:-** ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ; ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ರಾಜ್ಯದ ಪೊಲೀಸ್ ಇಲಾಖೆಯನ್ನು ಆಧುನೀಕರಣ ಮಾಡುವುದಕ್ಕಾಗಿ, ಅಲ್ಲಿನ ತಂತ್ರಜ್ಞಾನ ಮತ್ತು ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಳ್ಳುವುದಕ್ಕೆ ಕೇಂದ್ರ ಸರ್ಕಾರ ರೂ.290.98 ಕೋಟಿಗಳನ್ನು ಬಿಡುಗಡೆ ಮಾಡುತ್ತದೆ. ಆದರೆ, ಅದರಲ್ಲಿ ರೂ.66.37 ಕೋಟಿಗೆ Utilization Certificate ಕೊಡದೇ ಇದ್ದುದರಿಂದ ಅದು ರಾಜ್ಯಕ್ಕೆ ಸಿಗಲಿಲ್ಲ. ಕೇಂದ್ರದಿಂದ ಅನೇಕ ಸಲ Utilization Certificate ಕಳುಹಿಸಿ ಕೊಡಿ ಎಂದು ಕೇಳಿದರೂ ಇವರು ಅದಕ್ಕೆ ಉತ್ತರವನ್ನು ಕೊಡಲಿಲ್ಲ.

*ಸಭಾಪತಿಯವರು:-* ಮಾನ್ಯ ಸದಸ್ಯರೇ, ಪ್ರಸ್ತುತ ಇರುವ ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಫೇಕ್ ಯುನಿವರ್ಸಿಟಿಗಳಿಂದ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡಿರುವಂತಹ ಉಪನ್ಯಾಸಕರನ್ನು ನೇಮಕಾತಿ ಮಾಡಲಾಗಿದೆ ಎನ್ನುವುದು C.A.G. (Comptroller and Auditor General of India) Report ನಲ್ಲಿದೆ.

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೆ, ಧನ ವಿನಿಯೋಗ ವಿಧೇಯಕದ ಮೇಲೆ ಮಾತನಾಡುವಾಗ ಯಾವ ಯಾವ ವಿಷಯಗಳು ಬರುತ್ತವೆ? ಮಾನ್ಯ ರವಿಕುಮಾರ್‌ರವರು ಏನು ಬೇರೆ



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಚಾರಗಳ ಬಗ್ಗೆ ಮಾತನಾಡುತ್ತಿದ್ದಾರೋ ಅದನ್ನೂ ಬೇಕಾದರೆ ಬೇರೆ ನಿಯಮದ ಅಡಿ ಚರ್ಚೆಗೆ ತೆಗೆದುಕೊಳ್ಳೋಣ. ಆದರೆ ಅದರ ಬಗ್ಗೆ ಈಗ ಮಾತನಾಡಬಾರದು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ತಾವು ಹೇಳುತ್ತಿರುವುದು ಸರಿಯಿದೆ. ಈಗಾಗಲೇ ಒಂದು ಬಜೆಟ್ ಮಂಡನೆಯಾಗಿದ್ದರೂ ಈಗ ಇಲಾಖಾವಾರು ಹಣವನ್ನು ಕೇಳಿದ್ದಾರೆ. ನಮ್ಮ ತಂದೆಯವರು ನನಗೆ ನೂರು ರೂಪಾಯಿ ಕೊಟ್ಟು ನಾನು ಮತ್ತೆ ಅವರನ್ನು ದುಡ್ಡು ಕೇಳುವುದಕ್ಕೆ ಹೋದರೆ ಅವರು, ಕೊಟ್ಟ ನೂರು ರೂಪಾಯಿ ಏನಾಯಿತು ಎಂದು ಕೇಳಿ, ನಂತರ ಐವತ್ತು ರೂಪಾಯಿ ಕೊಡುತ್ತಾರೆ. ಹಾಗೆಯೇ ನಮ್ಮ ಸದಸ್ಯರು, ಹಿಂದೆ ಬಜೆಟ್‌ನಲ್ಲಿ ಇಷ್ಟಿಷ್ಟು ಹಣವನ್ನು ಕೊಡಲಾಗಿತ್ತು, ಅದು ಏನಾಯಿತು? ಈಗ ಮತ್ತೆ ಕೇಳುತ್ತಿದ್ದೀರಲ್ಲಾ ಎಂದು ಹೇಳುತ್ತಿದ್ದಾರೆ.

**(ಗೊಂದಲ)**

~~(ಗೊಂದಲ)~~

**ಶ್ರೀ ಹೆಚ್.ಎಂ.ರೇವಣ್ಣ:–**ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಹಿರಿಯ ಸದಸ್ಯರು. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕೆಲಸ ಮಾಡಿದ್ದಾರೆ. ಈ ರೀತಿ ಸಮರ್ಥನೆ ಮಾಡಬಹುದೇ?

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–**ಮಾನ್ಯ ಸಭಾಪತಿಯವರೇ, ಶೇಕಡ 52ರಷ್ಟು ಔಷಧಗಳು ಚೆಕ್ ಆಗದೇ ಸರ್ಕಾರಿ ಆಸ್ಪತ್ರೆಗಳಿಗೆ ತಲುಪಿದೆ ಎಂದು ರಿಪೋರ್ಟ್‌ನಲ್ಲಿದೆ.

**(ಗೊಂದಲ)**

~~(ಗೊಂದಲ)~~

**ಸಭಾಪತಿಯವರು:–** ನಿಮ್ಮ ಇಚ್ಛೆ ಬಂದ ಹಾಗೆ ನೀವು ಮಾತನಾಡುವುದಕ್ಕಾಗುವುದಿಲ್ಲ. ಪೀಠ ಹೇಳಿದ ಮೇಲೂ ನೀವು ಮಾತನಾಡಿದರೆ ಅದು ದಾಖಲೆಗೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಸೂಚನೆಯಂತೆ ನಡವಳಿಯನ್ನು ದಾಖಲಿಸಿರುವುದಿಲ್ಲ.)**

**ಡಾ:ಜಯಮಾಲ:–**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಮಾತಿಗೂ ಬೆಲೆ ಕೊಡದೇ ಹೋದರೆ ಹೇಗೇ?

(ಗೊಂದಲ)



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Formatted: Font: Bold
Formatted: Font: Bold
Formatted: Centered
Formatted: Centered

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ ತಾವು ಮಾತನಾಡುತ್ತಿರುವುದು ದಾಖಲೆಗೆ ಹೋಗುತ್ತಿಲ್ಲ. ರಾಜಕಾರಣ ಮಾತನಾಡುವುದಕ್ಕೂ ಒಂದು ಇತಿ-ಮಿತಿ ಇರಬೇಕು. ತಾವು ಮಾತನಾಡುವುದಕ್ಕೆ ಕೇಳಿದ್ದ ಸಮಯವನ್ನು ಕೊಟ್ಟಾಗಿದೆ. ಇನ್ನು ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ತೇಜಸ್ವಿನಿಗೌಡರವರು ಮಾತನಾಡಿ.

**ಡಾ:ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರ ಮುಖ್ಯ ಬಜೆಟ್ ಮಂಡಿಸಿದ ನಂತರದಲ್ಲಿ, ತುರ್ತಾಗಿ ಖರ್ಚು ಮಾಡಬೇಕಾದ ಹಣಕ್ಕೆ ಮಂಜೂರಾತಿ ಕೊಡಬೇಕು ಎಂದು ಎರಡೂ ಸದನಗಳಲ್ಲಿ ಈ ವಿಧೇಯಕವನ್ನು ತಂದಿದೆ. ನಮ್ಮ ವ್ಯವಸ್ಥೆಯಲ್ಲಿ, ಮನೆಯ ಖರ್ಚು-ವೆಚ್ಚಗಳನ್ನು ನಿಭಾಯಿಸುವಾಗ ಅಥವಾ ರಾಜ್ಯದ ಹಣವನ್ನು ವಿನಿಯೋಗ ಮಾಡುವಾಗ ಅದರಲ್ಲಿ ನಮಗೆ ಉತ್ತರದಾಯಿತ್ವ ಇರುತ್ತದೆ. ತೆರಿಗೆದಾರರು, ಪ್ರತಿಪಕ್ಷದವರು ಕಣ್ಣು ಬಿಟ್ಟು ನೋಡಬೇಕು; ಕಿವಿಗೊಟ್ಟು ಕೇಳಬೇಕು, ಇಂತಹ ಜವಾಬ್ದಾರಿಯನ್ನು ನಿಭಾಯಿಸುವುದಕ್ಕಾಗಿಯೇ ನಿಮ್ಮನ್ನು ಅಲ್ಲಿ ಕೂರಿಸಿದ್ದೇವೆ ಎಂದು ಹೇಳುವ ಕಾರಣ, ನಾವು ನಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕಿದೆ. ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಂದು ಕಡೆ ಅತಿವೃಷ್ಟಿಯಾಗಿದೆ, ಇನ್ನೊಂದು ಕಡೆ ಬರಗಾಲ ಬಂದಿದೆ. ಸರ್ಕಾರ ಮಾತು ಕೊಟ್ಟ ಹಾಗೆ ಸಾಲ ಮನ್ನಾ ಮಾಡಬೇಕಿದೆ. ಮಲೆನಾಡು-ಕರಾವಳಿ ಭಾಗಗಳಲ್ಲಿ ರಸ್ತೆಗಳು ಕೊಚ್ಚಿ ಹೋಗಿವೆ. ಕೊಡಗಿನಂತಹ ಜಿಲ್ಲೆ ಸಂಪೂರ್ಣವಾಗಿ ಕಷ್ಟಕ್ಕೀಡಾಗಿದೆ. ಮಾನ್ಯ ಸಭಾಪತಿಯವರೇ, ಮೂಲಭೂತ ಸೌಕರ್ಯಕ್ಕೆ ರೂ. 3 ಕೋಟಿಗಳನ್ನು ಕೇಳಿದ್ದಾರೆ. ಇದಕ್ಕೆ ನಾವು ಕಣ್ಣು ಮುಚ್ಚಿಕೊಂಡು ಹೇಗೆ ಬೆಂಬಲ ಕೊಡುವುದಕ್ಕೆ ಆಗುತ್ತದೆ? ಯಾವುದಕ್ಕೆ ಆದ್ಯತೆ ಕೊಡಬೇಕಾಗಿತ್ತೋ ಅಂಥದ್ದಕ್ಕೆ ಆದ್ಯತೆ ಕೊಟ್ಟಿಲ್ಲ. ಮಾನ್ಯ ಕೃಷ್ಣಭೈರೇಗೌಡರು, ಕುಡಿಯುವ ನೀರು ಕೊಡಬೇಕು, ಗ್ರಾಮೀಣ ಭಾಗಕ್ಕೆ ರಸ್ತೆಗಳನ್ನು ಕೊಡಬೇಕು, ಪಶುಸಂಗೋಪನಾ ಇಲಾಖೆಗೆ ದುಡ್ಡು ಕೊಡಬೇಕು ಎಂದು ಹೇಳಿದರು. ಶಿಶುವಿಹಾರ ಕೇಂದ್ರದ ಮಕ್ಕಳಿಗೆ ಕೊಡುವ ಹಾಲನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಯಾವುದೇ ಇಲಾಖೆಗಳಾಗಲಿ ಅವುಗಳಿಗೆ ಕೊಡಬೇಕಾದ ಹಣವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಆದರೆ, ಬೇಡಿಕೆಯನ್ನು ಇಡುವಾಗ, ಯಾವುದಕ್ಕೆ ಆದ್ಯತೆ ಕೊಡಬೇಕಾಗಿತ್ತೋ ಅದರ ಧಾವಂತ ಇದರಲ್ಲಿ ಕಾಣುತ್ತಿಲ್ಲ. ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದ ಹಾಗೆ, ಯಾವುದನ್ನು ತಡೆಯಬಹುದಾಗಿತ್ತೋ ಅದನ್ನು 2 ತಿಂಗಳು ತಡೆದಿದ್ದರೆ ಏನೂ ವ್ಯತ್ಯಾಸ ಆಗುತ್ತಿರಲಿಲ್ಲ. ಮಾನ್ಯ ಸಭಾಪತಿಯವರೇ, ಜಲಸಂಪನ್ಮೂಲ ಇಲಾಖೆಗೆ ಸಂಬಂಧಪಟ್ಟಂತೆ ಹೆಚ್ಚುವರಿಯಾಗಿ ರೂ. 261 ಕೋಟಿಗಳನ್ನು ಕೇಳಿದ್ದಾರೆ. ನಾವು ಇವತ್ತು ಬೆಳಗಾವಿಯಲ್ಲಿ ಸದನ ನಡೆಸುತ್ತಿದ್ದೇವೆ. ನೀರಾವರಿಗೆ ಸಂಬಂಧಪಟ್ಟಂತೆ ನ್ಯಾಯಾಲಯಗಳಿಂದ ಆದೇಶಗಳು ಬಂದಮೇಲೆ, ಯೋಜನೆಗಳನ್ನು ಕಾರ್ಯಮಿತಿಯೊಳಗೆ ಜಾರಿ ಮಾಡದೇ ಇದ್ದರೆ ಹಕ್ಕನ್ನು ಕಳೆದುಕೊಳ್ಳುತ್ತೇವೆ. ಅದರ ಅವಸರ ಇದರಲ್ಲಿ ಕಾಣುತ್ತಿಲ್ಲ. ಇಂತಹ ವಿಚಾರಗಳಿಗೆ ಸಂಬಂಧಪಟ್ಟಂತೆ ಒಂದೊಂದು ಇಲಾಖೆಗಳ ಬಗ್ಗೆ ಕೆಲವೊಂದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಲ್ಲೇಖ ಮಾಡುತ್ತಿದ್ದೇವೆ ಅಷ್ಟೆ. ಯಾವುದನ್ನು ತಡೆಯಬಹುದಾಗಿತ್ತೋ ಅದಕ್ಕೆ ಹೆಚ್ಚು ಹಣ ಕೇಳುವುದು ಎಷ್ಟು ಸರಿ? ಗ್ರಾಮೀಣಾಭಿವೃದ್ಧಿ ಇಲಾಖೆಗೆ ರೂ. 500 ಕೋಟಿ ಕೇಳುತ್ತೀರಿ; ಲೋಕೋಪಯೋಗಿ ಇಲಾಖೆಗೆ, ತಡೆಯಬಹುದಾಗಿದ್ದ ಇಲಾಖೆಗೆ ರೂ.2000 ಕೋಟಿ ಕೇಳುತ್ತೀರಿ. ಆತ್ಮಸಾಕ್ಷಿಗೆ ವಿರುದ್ಧವಾಗಿ ಈ ವಿಧೇಯಕವನ್ನು ಅನುಮೋದನೆ ಮಾಡಲು ಕಷ್ಟವಾಗುತ್ತದೆ ಎನ್ನುವ ಭಾವನೆಗಳನ್ನು ನಾಡಿನ ಜನರ ಪರವಾಗಿ, ಅವರ ವಾರಸುದಾರರಾಗಿ, ಅವರ ಧ್ವನಿಯನ್ನು, ಕಾಳಜಿಯನ್ನು, ಆತಂಕವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇವುಗಳನ್ನು ಹೇಳುವ ರೀತಿಯಲ್ಲಿ ವ್ಯತ್ಯಾಸಗಳಿರಬಹುದೇ ಹೊರತು ಭಾವನೆಗಳು ಒಂದೇ ಇರುತ್ತವೆ. ಮಾನ್ಯ ಸಭಾಪತಿಯವರೇ, ಆದ್ಯತೆಗೆ ಅನುಸಾರವಾಗಿ ಹಣವನ್ನು ಹಂಚಿಕೆ ಮಾಡಿ ತೆಗೆದುಕೊಂಡು ಬಂದಂತಹ ವಿಧೇಯಕಕ್ಕೆ ಅನುಮೋದನೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಮಾನ್ಯ ಸಭಾಪತಿಯವರೇ, 2018–19ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ನಾನು ಸಮರ್ಥಿಸುತ್ತೇನೆ. ಈ ರೀತಿ ಧನ ವಿನಿಯೋಗ ವಿಧೇಯಕವನ್ನು ಏಕೆ ತರುತ್ತೇವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಕಳೆದ ಅಧಿವೇಶನದಲ್ಲಿ ನಾವು ಬಜೆಟನ್ನು ಅಪ್ರೂವ್ ಮಾಡಿರುತ್ತೇವೆ. ಆಗ ರಾಜಸ್ವ ಮೊತ್ತ ರೂ. 3,89,995.34 ಲಕ್ಷಗಳು ಮತ್ತು ಬಂಡವಾಳ ರೂ. 3,08,092.69 ಲಕ್ಷಗಳು. ಅಂದರೆ, ರೂ.6,98,088.03 ಲಕ್ಷಗಳಿಗೆ ಅಪ್ರೂವಲ್ ಕೊಟ್ಟಿದ್ದೇವೆ.

~~(ಮುಂದು . . .)~~

**(578)19–12–2018 ಡಿಎಸ್–ಕೆಎಸ್ 5.10**

**ಶ್ರೀ ಕೆ.ಸಿ.ಕೊಂಡಯ್ಯ(ಮುಂದು):–**
ಅಂದರೆ 6,98,088.03 ಲಕ್ಷ ರೂಪಾಯಿಗಳ ಅಪ್ರೂವಲ್ ಕೊಟ್ಟುಬಿಟ್ಟಿದ್ದೇವೆ. ಈಗ ಅದಲ್ಲದೆ, ಹೆಚ್ಚುವರಿಯಾಗಿ 6,700 ಕೋಟಿ ರೂಪಾಯಿಗಳನ್ನು ಮಂಜೂರಾತಿ ಕೊಡಿ ಎಂದು ತಂದಿದ್ದಾರೆ. ಹೆಚ್ಚುವರಿಯಾಗಿ ಏಕೆ ತಂದಿದ್ದೇವೆಂದು justification ಕೊಡುತ್ತಾರೆ. ಶ್ರೀಮತಿ ತೇಜಸ್ವಿನಿಗೌಡರವರು proportionate ಆಗಿ ಕೊಟ್ಟಿಲ್ಲವೆಂದು ಹೇಳಿದರು. ನಾವು main Budget ನಲ್ಲಿ ಇದಕ್ಕೆಲ್ಲಾ ಅಪ್ರೂವಲ್ ತೆಗೆದುಕೊಂಡಿದ್ದೇವೆ. ಹೆಚ್ಚುವರಿಯಾಗಿ ತೆಗೆದುಕೊಂಡಿರುವುದಕ್ಕೆ ಈ ಆರು ತಿಂಗಳಿನಲ್ಲಿ ವಿವಿಧ ರೂಪಗಳನ್ನು ಸರ್ಕಾರ ಕೊಡಬೇಕಾಗುತ್ತದೆ. ಯಾವ್ಯಾವುದಕ್ಕೆ ಮಾಡಿದ್ದೇವೆಂದು ಸರ್ಕಾರ justification ಕೊಡಬೇಕು. ಅಂದರೆ, ನಾರ್ಮಲ್ ಬಜೆಟ್‌ಗಿಂತ ಹೆಚ್ಚಾಗಿದ್ದರೆ ಅದನ್ನು appropriation ಮಾಡಿ supplementary budget ನಲ್ಲಿ include ಮಾಡುತ್ತಾರೆ. ಮಾನ್ಯ ರವಿಕುಮಾರ್‌ರವರು CAG (Comptroller and Auditor General) report ಬಗ್ಗೆ ಹೇಳಿದರು, ಆಡಿಟ್ ಮಾಡುವುದು ನಮ್ಮ ಸಂವಿಧಾನದಲ್ಲಿ ಬಂದಿದೆ.



Formatted: Font: Bold
Formatted: Justified, Line spacing: 1.5 lines
" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

CAG ರವರು ಪ್ರತಿ ಇಲಾಖೆಗೂ ಆಡಿಟ್ ಮಾಡುತ್ತಾರೆ. ಆಡಿಟ್ ಮಾಡಿದಾಗ ಆ ಇಲಾಖೆಗೆ compliance report ಕೇಳುತ್ತಾರೆ. ಆ ವರದಿಯನ್ನು within time ಕೊಡದಿದ್ದರೆ ಅವರು ವರದಿಯನ್ನು ಪಬ್ಲಿಷ್ ಮಾಡುತ್ತಾರೆ. ಅದಾದ ಮೇಲೆ CAG ವರದಿಯನ್ನು Public Accounts Committee (PAC) ಯವರು ರಿವ್ಯೂ ಮಾಡುತ್ತಾರೆ. ನಮ್ಮ ಸಂವಿಧಾನದಲ್ಲಿ PAC ಗೆ ವಿರೋಧ ಪಕ್ಷದ ಸದಸ್ಯರೆ ಅಧ್ಯಕ್ಷರಾಗಿರುತ್ತಾರೆ. ವಿರೋಧ ಪಕ್ಷದ ಸದಸ್ಯರಾದ ಆರ್.ಅಶೋಕ್‌ರವರ ಅಧ್ಯಕ್ಷರಾಗಿದ್ದಾರೆ. ಈಗ ಮಾನ್ಯ ಸದಸ್ಯರಾದ ರವಿಕುಮಾರ್‌ರವರು ಲೋಕೋಪಯೋಗಿ ಇಲಾಖೆಯಲ್ಲಿ ಈ ರೀತಿಯಾಗಿದೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಈ ರೀತಿಯಾಗಿದೆ ಎಂದು ಹೇಳಿದರು. ಇವೆಲ್ಲಾ ರಿವ್ಯೂಗೆ ಬರುತ್ತವೆ. ರಿವ್ಯೂಗೆ ಬಂದಾಗ ಆ ಇಲಾಖೆಯ ಅಧಿಕಾರಿಗಳನ್ನೆಲ್ಲಾ ಕರೆಯುತ್ತಾರೆ. ಸಿಎಜಿ ವರದಿಯಲ್ಲಿ ಇವೆಲ್ಲಾ ಆಗಿಲ್ಲ, ಎಷ್ಟು ದಿನದಲ್ಲಿ compliance report ಅನ್ನು ಕೊಡುತ್ತೀರಿ ಎಂದು ಕೇಳುತ್ತಾರೆ. ಅಂದರೆ checkmate ಅನ್ನು ಇಡಲು ವಿರೋಧ ಪಕ್ಷದವರ ಕೈಯಲ್ಲೇ ಅಧಿಕಾರ ಇರುತ್ತದೆ. ಈಗ ಒಮ್ಮಲೇ ಮಾನ್ಯ ರವಿಕುಮಾರ್‌ರವರು ನೇರವಾಗಿ ಆರೋಪ ಮಾಡಿದರೆ ಮಾನ್ಯ ಕುಮಾರಸ್ವಾಮಿಯವರ ಬದ್ಧತೆಯ ಬಗ್ಗೆ ಪ್ರಶ್ನೆ ಮಾಡಿದರೆ, ಅವರು ಅಧಿಕಾರಕ್ಕೆ ಬಂದು ಸುಮಾರು ಆರೇಳು ತಿಂಗಳಾಗಿವೆ. ಅವರು ಹೇಗೆ ಎರಡು-ಮೂರು ವರ್ಷಗಳದ್ದನ್ನು ಹೇಳುತ್ತಾರೆ? ಅಕೌಂಟ್ ಟ್ಯಾಲಿ ಆಗಬೇಕು. ಅಕೌಂಟ್ ಟ್ಯಾಲಿ ಆಗುವುದಿಲ್ಲವೆಂದ ಮೇಲೆ ವರದಿಯಲ್ಲಿ ಬರುತ್ತದೆ. ಆದಕಾರಣ ಮಾನ್ಯ ಸದಸ್ಯರು ತಪ್ಪು ಆರೋಪ ಮಾಡುವುದು ಬೇಡ. ವಿರೋಧ ಪಕ್ಷದವರು ಸಹ ಸರ್ಕಾರವನ್ನು ಐದು ವರ್ಷ ನಡೆಸಿದ್ದಾರೆ. ಆಗಲೂ ಈ ರೀತಿಯಾಗಿರುತ್ತದೆ. ಇವತ್ತು ಬಂದಿರುವ ವಿಷಯ ಸಪ್ಲಿಮೆಂಟರಿ ಬಜೆಟ್ ಆರು ಸಾವಿರದ ಒಂಬೈನೂರ ಎಂಬತ್ತು ಕೋಟಿ ಎಂಬತ್ತೆಂಟು ಲಕ್ಷ ರೂಪಾಯಿಗಳಿಗೆ ಸರ್ಕಾರ justification ಕೊಡುತ್ತದೆ. ಒಂದು ವೇಳೆ ಅವರು ಸಿಎಜಿ ವರದಿಯ ಮೇಲೆ ಚರ್ಚೆ ಮಾಡಬೇಕೆಂದು ಒತ್ತಾಯ ಮಾಡಿದರೆ ನೋಟಿಸ್ ಕೊಡಲಿ. ಆಗ ಸರ್ಕಾರ ಉತ್ತರ ಕೊಡುತ್ತದೆ. ಆದಕಾರಣ ದಾರಿತಪ್ಪಿಸುವ ಕೆಲಸವನ್ನು ಮಾಡಬಾರದು. ಈಗ ನಾವು ಧನವಿನಿಯೋಗ ವಿಧೇಯಕಕ್ಕೆ ಬೆಂಬಲ ಸೂಚಿಸೋಣ.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈಗ ಹಣವನ್ನು ಹಂಚಿಕೆ ಮಾಡಿದ್ದಾರೆ. ಈಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ 46,660 ಜನ ದೇವದಾಸಿಯವರನ್ನು ಗುರುತು ಮಾಡಿದ್ದಾರೆ. ಆದರೆ, ಸರ್ಕಾರ ಕೇವಲ 5,000 ಜನರಿಗೆ ಮಾತ್ರ ಕೊಡುತ್ತೇವೆಂದು ಸದನ ಸಮಿತಿಯಲ್ಲಿ ಹೇಳಿದ್ದಾರೆ. ಈಗಾಗಲೇ ಅವರಿಗೆ ವಯಸ್ಸಾಗಿ 1500 ರೂಪಾಯಿ ಮಾಸಾಶನವನ್ನು ಕೊಡುತ್ತಿದ್ದಾರೆ. ಇನ್ನು ಕೆಲವರಿಗೆ ಕೊಡುತ್ತಿಲ್ಲ. ಬೇರೆ ಬೇರೆ ಖರ್ಚನ್ನು ಕಡಿಮೆ ಮಾಡಿ ಅವರಿಗೆ ಮಾಸಾಶನವನ್ನು ಕೊಡಬೇಕಾಗುತ್ತದೆ. ಮೊದಲು ಮನುಷ್ಯ ಬದುಕಲಿ, ಆಮೇಲೆ ಬೇರೆಯದೆಲ್ಲಾ ಆಗುತ್ತದೆ. ದಯಮಾಡಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಅವರಿಗೆ ಮಾಸಾಶನ ಕೊಡಬೇಕು. ನಾಲ್ಕೈದು ವರ್ಷಗಳಿಂದ ಸರ್ಕಾರ

ಅಂಗವಿಕಲರಿಗೆ ಸ್ಕೂಟರ್‌ನ್ನು ಕೊಟ್ಟಿಲ್ಲ. ಅಂಗವಿಕಲರಿಗೆ ಸ್ಕೂಟರ್ ಇದ್ದರೆ ಎಲ್ಲೋ ಹೋಗಿ ಕೆಲಸ ಮಾಡಿಕೊಂಡು ಬರುತ್ತಾರೆ. ಇವತ್ತು ಯಾರು ಯಾರನ್ನು ಸಾಕುವ ಮಟ್ಟದಲ್ಲಿ ಮನುಷ್ಯರು ಇಲ್ಲ. ಹಾಗಾಗಿ ಅವರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಈ ಇಲಾಖೆ ಮುಖಾಂತರ ಮಹಿಳೆ ಮತ್ತು ಮಕ್ಕಳಿಗೆ ಹಾಗೂ ಅಂಗವಿಕಲರಿಗೆ ಸಹಾಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕಳೆದ ಬಾರಿ ನಾವು ಇಲ್ಲೇ ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ ಶಿಕ್ಷಣ ಇಲಾಖೆಗೆ ಮಂತ್ರಿಗಳಾಗಿದ್ದ ಮಾನ್ಯ ಎನ್.ಮಹೇಶ್‌ರವರು ವರ್ಷಕ್ಕೆ 60-70 ಶಾಲಾ ಕೊಠಡಿಗಳನ್ನು ಕಟ್ಟುತ್ತಿದ್ದೇವೆ, ಆದರೆ ರಾಜ್ಯದಲ್ಲಿ 10,000 ಕೊಠಡಿಗಳ ಬೇಡಿಕೆ ಇದೆ ಎನ್ನುವ ಮಾತನ್ನು ಹೇಳಿದ್ದರು. ಈಗಾಗಲೇ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದ್ದಾರೆ. ಕೂಡಲೇ ಎಲ್ಲಿಂದಲಾದರೂ ಹಣವನ್ನು ಸರಿದೂಗಿಸಿ ಈ ಎರಡು ಇಲಾಖೆಗೆ ಹೆಚ್ಚಿನ ಒತ್ತನ್ನು ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಆರು ಸಾವಿರದ ಒಂಬೈನೂರ ಎಂಬತ್ತು ಕೋಟಿ ಎಂಬತ್ತೆಂಟು ಲಕ್ಷ ರೂಪಾಯಿಗಳ ಸಪ್ಲಿಮೆಂಟರಿ ಬಜೆಟ್ ತಂದಿದ್ದಾರೆ. ನನ್ನ ಕಳಕಳಿ ಪ್ರಶ್ನೆ ಏನೆಂದರೆ, ಇದರಲ್ಲಿ ರಾಜಕೀಯ ಮಾಡುವಂಥದ್ದಕ್ಕೆ ಅಥವಾ ದೋಷಾರೋಪಣೆ ಮಾಡುವುದಕ್ಕೆ ಇದು ಎಲ್ಲಿಯೂ ಅವಕಾಶ ಮಾಡಿಕೊಡುವುದಿಲ್ಲ. —Main Budget ಅನ್ನು ಪ್ರೆಸೆಂಟ್ ಮಾಡುವಾಗ ನಾವು ಸದನದಲ್ಲಿ ಕೇಳುತ್ತೇವೆ, ಈ ಇಲಾಖೆಗೆ ಇಷ್ಟು ಕಡಿಮೆ ಹಣವನ್ನು ಕೊಟ್ಟಿದ್ದೀರಿ, ಇದಕ್ಕೆ ಹೆಚ್ಚುವರಿಯಾಗಿ ಹಣವನ್ನು ಕೊಡಿ ಅಥವಾ ಸಪ್ಲಿಮೆಂಟರಿ ಬಜೆಟ್‌ನಲ್ಲಾದರೂ ಹಣವನ್ನು ಕೊಡಿ ಎಂದು ಕೇಳುತ್ತೇವೆ. ಕಳೆದ ಬಾರಿ ಲೋಕೋಪಯೋಗಿ ಇಲಾಖೆಯ ಬಗ್ಗೆ ಚರ್ಚೆಯನ್ನು ಮಾಡುವಂತಹ ಸಂದರ್ಭದಲ್ಲಿ, ಲೋಕೋಪಯೋಗಿ ಇಲಾಖೆಗೆ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಕಡಿಮೆ ಹಣವನ್ನು ಕೊಟ್ಟಿದ್ದೀರಿ, ಜಾಸ್ತಿ ಹಣವನ್ನು ಕೊಡಿ ಎಂದು ಕೇಳಿದ್ದೆವು ಮತ್ತು ಬೇರೆ ಇಲಾಖೆಗಳಿಗೂ ಜಾಸ್ತಿ ಕೊಡಿ ಎಂದು ಕೇಳಿರುವಂಥದ್ದು ಇದೆ. —
ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅವುಗಳಿಗೆ ಕೊಡುವುದಕ್ಕೆ ಅವಕಾಶ ಇರುವುದರಿಂದ ಕೊಟ್ಟಿದ್ದಾರೆ. But, it does not mean that, ಇವತ್ತು 20 ಕೋಟಿ, 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಒಂದು ಸಲ ಒಂದು ಸಾವಿರದ ಒಂಬೈನೂರು ಕೋಟಿ ರೂಪಾಯಿಗಳನ್ನು ಕೊಟ್ಟದ ಮಾತ್ರಕ್ಕೆ ಅದು ಬೇಕೆಂದೇ favouritism ಗೆ ಕೊಟ್ಟಿದ್ದಾರೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಸಿಎಜಿ ವರದಿ ಬಗ್ಗೆ ಹೇಳುವುದಾದರೆ, ಮೊನ್ನೆ 35,000 ಕೋಟಿ ರೂಪಾಯಿಗಳನ್ನು ಮಾನ್ಯ ಸಿದ್ದರಾಮಯ್ಯನವರು ಗುಳುಂ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಬಂತು. ನಾನು ಸಿಎಜಿ ವರದಿಯನ್ನು ನನ್ನ ಮಿತ್ರರುಗಳಿಗೆ ತೆಗೆದು ತೋರಿಸುತ್ತೇನೆ. ಇದರಲ್ಲಿ 2008 ರಿಂದ 2013 ರವರೆಗೆ ಬೇರೆ ಬೇರೆ ವರದಿಗಳಿವೆ. ಎಲ್ಲಿಯೂ ತಿಂದಿದ್ದಾರೆ, ಗುಳುಂ ಮಾಡಿದ್ದಾರೆಂದು ಇಲ್ಲ. ಬಜೆಟ್‌ನಲ್ಲಿ ನಿಗದಿಪಡಿಸಿದ ವೆಚ್ಚಕ್ಕಿಂತ, ಜಾಸ್ತಿ ಖರ್ಚಾಗಿದೆ, ಏಕೆ ಎಂದು ಕೇಳಿದ್ದಾರೆ. ಅದೇ ರೀತಿ ಕಡಿಮೆ ಖರ್ಚಾಗಿದ್ದರೆ, ಏಕೆ ಕಡಿಮೆ ಖರ್ಚಾಗಿದೆ ಎಂದು ಕೇಳಿದ್ದಾರೆ. ಅದಕ್ಕೆ ಬೇಕಾದಂಥ explanation ಅನ್ನು ಕೊಡಲಿಕ್ಕೆ ಸಾಕಷ್ಟು



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅವಕಾಶಗಳಿವೆ, ಕೊಟ್ಟಿದ್ದಾರೆ. It does not mean that, ಇದರಲ್ಲಿ ಏನಾದರೂ ತಿಂದಿದ್ದಾರೆ, ಗುಳುಂ ಮಾಡಿದ್ದಾರೆ, ಭ್ರಷ್ಟಾಚಾರ ಮಾಡಿದ್ದಾರೆಂದು ಇದೆಯೇ ಎಂದು ಎಲ್ಲಿಯಾದರೂ ಒಂದು ಕಡೆ ಅದನ್ನು ತೋರಿಸಲಿ. ಆರೋಪಕ್ಕೋಸ್ಕರ ಆರೋಪವನ್ನು ಮಾಡಬಾರದು. ಅವರು ಇದನ್ನು ಹೇಳಿದರೆ ನಾವು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ ಎನ್ನುವುದನ್ನು ಅವರು ನೆನಪಿಟ್ಟುಕೊಳ್ಳಲಿ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈ Supplementary Budget Bill ಅನ್ನು ಸ್ವಾಗತ ಮಾಡುತ್ತಾ, ನನ್ನ ಸಹಮತ್ತವನ್ನು ವ್ಯಕ್ತಪಡಿಸುತ್ತಾ, ಈ ವಿಷಯಗಳಲ್ಲಿ ಮುಖ್ಯವಾಗಿ ಕೆಲವೊಂದು ಇಲಾಖೆಗಳಿಗೆ ಹೆಚ್ಚಿಗೆ ಕೊಟ್ಟಿರುವುದು ಸ್ವಾಗತಾರ್ಹ. ಇಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಸಹ ಇದ್ದಾರೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ದುಡ್ಡೇ ಬೇಡವೇ, ದುಡ್ಡು ಕೊಡುವುದೇ ಇಲ್ಲವಾ ಅಥವಾ ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರಾ? ಏಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯೇ ಈ ರಾಜ್ಯದಲ್ಲಿ ಇಲ್ಲವೇ? ಮಕ್ಕಳ ಕಲ್ಯಾಣ ಮತ್ತು ಕ್ರೀಡೆಗೆ ಸಂಬಂಧಿಸಿದಂತೆ ಕಡಿಮೆ ಹಣವನ್ನಾದರೂ ಕೊಟ್ಟಿದ್ದಾರೆ. ಆದರೆ ಈ ಪಟ್ಟಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯೇ ಇಲ್ಲದಾಗಿದೆ. ಸರ್ಕಾರದಲ್ಲಿ ಈ ಇಲಾಖೆಗೆ ಮಂತ್ರಿಗಳಿದ್ದಾರೆ, ಅದಕ್ಕೆ ಹಣವನ್ನು ಕೊಡುವುದಿಲ್ಲವೇ?

**ಶ್ರೀ ಶರಣಪ್ಪ ಮಟ್ಟೂರು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಹಣವನ್ನು ಕೊಡಬೇಕು, ಅದಕ್ಕೆ ಬೇಡಿಕೆ ಇದೆ, ಮಾನ್ಯ ಸದಸ್ಯರು ಈ ವಿಚಾರ ಕೇಳಿರುವುದು ಸರಿ ಇದೆ. ಆದರೆ ಈಗಾಗಲೇ ಮಾನ್ಯ ಕೊಂಡಯ್ಯನವರು ಹೇಳಿದ ಹಾಗೆ, it is a justification for the additional Budget.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಇವೆಲ್ಲಾ ನನಗೆ ಗೊತ್ತಿದೆ, ನಾನೇನು ಗೊತ್ತಿಲ್ಲದೇ ಮಾತನಾಡಿಲ್ಲ. ಆದರೆ ಆ ಒಂದು ಇಲಾಖೆ ಇದೆ ಎಂದು ಜ್ಞಾಪಿಸಲು ಹೇಳಿದೆ. ಮಾನ್ಯ ರವಿಕುಮಾರ್‌ರವರು ಚೆನ್ನಾಗಿ ಮಾತನಾಡುತ್ತಾರೆ. ಅವರು ಮಾತನಾಡುವಾಗ ಹೋರಾಟದಿಂದ ಬಂದಿರತಕ್ಕಂಥವರು ಎಂದು ಹೇಳಿದರು. ನಾವುಗಳು ಸಹ ಹೋರಾಟ ಮಾಡಿಕೊಂಡು ಬಂದವರು. ಮೊನ್ನೆಯ ವರದಿ ನೋಡಿ ಅವರಿಗೆ heart attack ಆಯಿತು ಎಂದರೆ, ಅದರ ಹಿಂದಿನ ವರದಿಯನ್ನು ನೋಡಿದ್ದರೆ ಅವರು ಇಲ್ಲಿಗೆ ಬರುತ್ತಲೇ ಇರಲಿಲ್ಲ.



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಧನ ವಿನಿಯೋಗ ವಿಧೇಯಕ 2018, ಸಂಚಿತ ನಿಧಿಯಿಂದ ಅಧಿಕ ಮೊತ್ತವನ್ನು ವಿನಿಯೋಗಿಸಲಿಕ್ಕೆ ವಿಧಾನ ಪರಿಷತ್ತು ಅನುಮೋದನೆ ಕೊಡಬೇಕೆಂದು ಸರ್ಕಾರ ಕೇಳಿದೆ. ಇದರ ಬಗ್ಗೆ ಹೆಚ್ಚು ವಿವರಗಳನ್ನು ಹೇಳಬೇಕೆಂದು ಅನ್ನಿಸಿಲ್ಲ. ಬಂಡವಾಳ ಶೀರ್ಷಿಕೆಯಲ್ಲಿ ಲೋಕೋಪಯೋಗಿ ಇಲಾಖೆ ಒಂದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನುವುದು, ಸಮಾಜ ಕಲ್ಯಾಣ ಇಲಾಖೆಗೆ ಕೊಟ್ಟಿರುವಂಥ 7 ಕೋಟಿ ರೂ. ಹಾಗೂ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಅಂದರೆ ಒಂದು ವೇಳೆ ಮಲೆನಾಡು ಅಭಿವೃದ್ಧಿ, ಕರಾವಳಿ ಅಭಿವೃದ್ಧಿ ಹಾಗೂ ಬಯಲುಸೀಮೆ ಅಭಿವೃದ್ಧಿಗೆ ಕೊಟ್ಟಿರುವಂಥಾದ್ದು 1.31 ಕೋಟಿ ರೂ. ಯಾವತ್ತೂ ಸಹ ಈ ಸದನದಲ್ಲಿ ಹಣಕಾಸು ವಿಧೇಯಕದ ಬಗ್ಗೆ ಚರ್ಚೆಗೆ ಬಂದಾಗ ಇಷ್ಟು ತೀವ್ರವಾಗಿ ಪ್ರತಿರೋಧ ಮಾಡಿದಂಥ ಉದಾಹರಣೆಗಳಿಲ್ಲ. ಯಾವುದೇ ಕಡೆ ಕುಳಿತುಕೊಂಡಿದ್ದರೂ ಸಹ ನಮ್ಮೆಲ್ಲರ ಭಾವನೆ ಏನಿತ್ತು ಎಂದರೆ, ಸರ್ಕಾರ ನಡೆಸ್ಲಿಕ್ಕೆ ಕಾಲ ಕಾಲಕ್ಕೆ ಇಂತಹ ಅಗತ್ಯವಾದ ವಿಧೇಯಕ ಬರುವುದನ್ನು ನಾವೆಲ್ಲರೂ ನೋಡಿದ್ದೇವೆ. ಆದರೆ ನಮಗಿರುವ ಆತಂಕವನ್ನು ಸರ್ಕಾರ ನಿವಾರಿಸಬೇಕೆಂದರೆ, ಅವರದ್ದು ಸೇರಿದಂತೆ ಅನೇಕ ಇಲಾಖೆಗಳಲ್ಲಿರುವಂಥ ನೂರಾರು ಸಮಸ್ಯೆಗಳಿಗೆ, ಇಲ್ಲಿ 29 ಇಲಾಖೆಗಳನ್ನು ಉಲ್ಲೇಖ ಮಾಡಿದ್ದಾರೆ. ಇದರಲ್ಲಿ ಒಂದೇ ಇಲಾಖೆಗೆ ಸಂಬಂಧಿಸಿದಂತೆ ಅಂದರೆ ಲೋಕೋಪಯೋಗಿ ಇಲಾಖೆಗೆ 1,995 ಕೋಟ ರೂ.ಗಳನ್ನು ಬಿಡುಗಿಸಿದ್ದಾರೆ. ಒಟ್ಟು 29 ಸೇವೆಗಳ ಇಲಾಖೆಗಳಿಗೆ 6,98,088.03 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಅದರಲ್ಲಿ ಲೋಕೋಪಯೋಗಿ ಒಂದೇ ಇಲಾಖೆಗೆ ಹೆಚ್ಚು-ಕಡಿಮೆ 2,000 ಕೋಟಿ ರೂ.ಗಳನ್ನು ಕೊಡಲಾಗಿದೆ. ಇಷ್ಟು ದೊಡ್ಡ ಮೊತ್ತದ ಹಣವನ್ನು ಒಂದು ವೇಳೆ ಶಿಕ್ಷಣಕ್ಕೆ, ಆರೋಗ್ಯಕ್ಕೆ, ಸಮಾಜ ಕಲ್ಯಾಣ ಇಲಾಖೆಗೆ, ಶಿಶು ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಕೇಳಿದರೆ, ಅದಕ್ಕೆ ಕೆಲವು ಉತ್ತರದಾಯಿತ್ವ ಆದರೂ ಇರುತ್ತದೆ. ಇಂತಹ ಅನಾಹುತಗಳಾಗಿವೆ ಎಂದು ಹಣವನ್ನು ಕೇಳುತ್ತಾರೆ. ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್‌ಗಳಿಗೆ ಹಣವನ್ನು ಕೇಳಿದರೆ ಕೊಡಬೇಕಾಗುತ್ತದೆ. ಏಕೆಂದರೆ ಅಲ್ಲಿ ವಿದ್ಯಾರ್ಥಿಗಳು ನರಕ ಯಾತನೆ ಅನುಭವಿಸುತ್ತಿದ್ದಾರೆ. ಹಾಸ್ಟೆಲ್‌ಗಳ ಪರಿಸ್ಥಿತಿ ಸುಧಾರಣೆಯಾಗಬೇಕು, ನಾವು ಬೇಡವೆಂದು ಹೇಳುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

~~(ಮುಂದು)~~

**(579)19-12-2018(5-20)ಬಿಕೆಪಿ-ಕೆಎಸ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು. . .)**



Formatted: Font: Bold

ಲೋಕೋಪಯೋಗಿ ಇಲಾಖೆ ಒಂದಕ್ಕೆ 1995 ಕೋಟಿ ರೂಪಾಯಿಗಳನ್ನು ನೀವೇನು ಕೇಳಿದ್ದೀರಿ, ಅದನ್ನು ನಾವು ಎಲ್ಲಿಯಾದರೂ ಸರಿ ಎಂದು ಹೇಳಿಬಿಟ್ಟರೆ ನಮ್ಮನ್ನು ಜನರು ಕ್ಷಮಿಸುವುದಿಲ್ಲ. ಬೇರೆಲ್ಲಾ ಇಲಾಖೆಗಳನ್ನು ವಿಂಗಡಿಸಿದಾಗ ಈ ಇಲಾಖೆಗೆ ಇಷ್ಟೊಂದು ಹಣ ಅಗತ್ಯ ಇದೆಯೇ ಎನ್ನುವುದು ಚರ್ಚೆಯ ವಿಷಯವಾಗಿದೆ. ಇದನ್ನು ತಾವು ತಪ್ಪಾಗಿ ತಿಳಿಯಬೇಡಿ. ಕರ್ನಾಟಕ ರಾಜ್ಯದಲ್ಲಿ ಈ ಇಲಾಖೆಯ ಮಂತ್ರಿಗಳಾಗಿರುವಂತಹ ಸನ್ಮಾನ್ಯ ಶ್ರೀ ಹೆಚ್.ಡಿ.ರೇವಣ್ಣ ರವರನ್ನು ನಾವೆಲ್ಲರೂ ಬಹಳ ಪ್ರೀತಿಯಿಂದ, ಅಭಿಮಾನದಿಂದ, ಗೌರವದಿಂದ "ರೀ ನೀವು ಸೂಪರ್ ಸಿ.ಎಂ." ಎಂದು ಕರೆಯುತ್ತೇವೆ. ಅದನ್ನು ನಾವು ಪ್ರೀತಿಯಿಂದ ಕರೆದುದಾಗಿದೆ; ಟೀಕೆಗಾಗಿ ಕರೆದದ್ದಲ್ಲ. ಯಾರೇ ಸಿ.ಎಂ. ಆಗಲಿ, 'ರೇವಣ್ಣ ಸೂಪರ್ ಸಿ.ಎಂ.' ಎಂದು ನಾವು ಕರೆಯುತ್ತಿದ್ದೇವೆ. ಅದು ಈಗ ಹೌದು ಎಂಬಂತಾಯಿತು. ಅಂದರೆ, ಬಜೆಟ್‌ಗೆ ಅನುಮೋದನೆಯನ್ನು ಕೊಟ್ಟಿದ್ದೇ ಸೂಪರ್ ಸಿ.ಎಂ. ಎಂದು ನಮಗೆ ಅನಿಸಿತು. ನಾವೆಲ್ಲರೂ ಮಾತನಾಡುವಾಗ ನಮ್ಮ ಭಾಷಾ ಶೈಲಿಯಲ್ಲಿ ಈ ರೀತಿಯಲ್ಲಿ ಹೇಳಿರಬಹುದು. ಅದನ್ನು ಬಿಟ್ಟು ದ್ವೇಷ ಉಂಟು ಎಂದಲ್ಲ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ಆ ಮಂತ್ರಿಗಳು ಬಂದಾಗ ಈ ಬಗ್ಗೆ ಮಾತನಾಡೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಕೇವಲ ಉಲ್ಲೇಖ. ನಮ್ಮದೇನೂ ಜಗಳವಲ್ಲ. ನಾನು ಮಂತ್ರಿಗಳ ಬಗ್ಗೆ ಉಲ್ಲೇಖ ಮಾಡಿದ್ದೇನೆ. ನಮಗೆ ಹೆಮ್ಮೆಯ ವಿಷಯ ಏನೆಂದರೆ, ನಮಗೆ ಅದು ಒಂದು ಅಭಿಮಾನ. ಆ ಒಂದು ಅಭಿಮಾನದಿಂದ ನಾನು ಹೇಳಿದೆ. ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಇರುವಾಗಲೂ ಕೂಡ, 1995 ಕೋಟಿ ರೂಪಾಯಿಗಳನ್ನು ಕೇವಲ ಲೋಕೋಪಯೋಗಿ ಇಲಾಖೆ ಒಂದೇ ಪಡೆಯುತ್ತದೆ ಎಂದಾದರೆ, ಆ ಇಲಾಖೆಯ ಮಂತ್ರಿ 'ಸೂಪರ್ ಸಿ.ಎಂ' ಎಂದು ಹೇಳಿ ನಾವು ಕರೆದುದು ಸಾರ್ಥಕವಾಯಿತು ಎಂದು ಹೇಳಿದೆ.

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ತಪ್ಪು ಭಾವಿಸುವುದಿಲ್ಲವೆಂದರೆ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಂತ್ರಿಗಳು ಯಾವಾಗಲೂ ತಪ್ಪನ್ನು ಹೇಳುವುದಿಲ್ಲ. ಆದರೆ ಅವರು ಸರಿಯಾದುದನ್ನು ಮಾತ್ರ ಹೇಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಈ ಮಾತನ್ನು ಅಭಿಮಾನದಿಂದ ಹೇಳುತ್ತಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಿಗೆ ಅವರ ಮೇಲೆ ಏನು ಪ್ರೀತಿ, ಅದೇನು ಗೌರವ, ಅದೇನು ವಿಶ್ವಾಸ ಇದೆ ಎಂದು ನೋಡಬೇಕು. ಇದು ಕೇವಲ ಯಕ್ಷಗಾನ ಕಲಾವಿದರಿಂದ ಮಾತ್ರ ಬರಲಿಕ್ಕೆ ಸಾಧ್ಯ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಯಕ್ಷಗಾನದ ಪ್ರಶ್ನೆ ಇದಲ್ಲ. ನಾವು ಕಲೆಯನ್ನು ಕಲಿತಿದ್ದೇ ಶ್ರೀಯುತ ಕೃಷ್ಣ ಭೈರೇಗೌಡರವರಿಂದ. ಈ ಕಲಾತ್ಮಕವಾದ ಮಾತು, ಪ್ರೀತಿಪೂರ್ವಕವಾದ ಮಾತಿನಲ್ಲಿ ಒಂದು ಚಾಟಿ ಏಟು ಇರುತ್ತದೆ. ಇದೆಲ್ಲವನ್ನು ನಾವು ಅವರಿಂದಲೇ ಕಲಿತಿದ್ದೇವೆ. ನಾನು ಅವರ ತಂದೆಯವರಾದ ಭೈರೇಗೌಡರನ್ನು ನೋಡಿದ್ದೆ. ಅವರದ್ದು ತುಂಬಾ ಗಡುಸು ಧ್ವನಿ. ಅವರದ್ದು ನೇರ ಮಾತು. ಅಂದರೆ ಇವರದ್ದು ನೇರ ಮಾತು ಅಲ್ಲವೆಂದು ಹೇಳುತ್ತಿಲ್ಲ. ಈ ರೀತಿ ಬುದ್ಧಿವಂತಿಕೆ ಮೂಲಕ ಬೇರೆಯವರನ್ನು ದಾರಿ ತಪ್ಪಿಸುವುದರಲ್ಲಿ ನೀವು ಬುದ್ಧಿವಂತರು ಎಂದು ನಮಗೆ ಅನಿಸಿಬಿಡುತ್ತದೆ. ಈ ಒಂದು ಕಲಾತ್ಮಕವಾದ ಮಾತಿಗೆ ನಿಜವಾಗಿಯೂ ಸಹ ನಾನು ಕಪ್ಪವನ್ನು ಕೊಟ್ಟಿದ್ದೇನೆ. ಕಪ್ಪ ಎಂದರೆ ಏನು ಎಂದು ತಮಗೆ ಗೊತ್ತೆ? ಅಂದರೆ, ಕಪ್ಪ-ಕಾಣಿಕೆಯನ್ನು ಕೊಟ್ಟೆ ಎಂದರ್ಥ. *ಕಲಾತ್ಮಕವಾದಂತಹ ಮಾತುಗಳನ್ನಾಡಿ ವಿರೋಧ ಪಕ್ಷವನ್ನೂ ಸಹ ದಾರಿ ತಪ್ಪಿಸುವಂತಹ ಪ್ರಬುದ್ಧತೆಯನ್ನು ಪಡೆದಿರುವಂತಹ ಪ್ರಥಮ ರಾಜಕಾರಣಿ ಇವರಾಗಿದ್ದಾರೆ. ಅದರಲ್ಲಿ ಏನೂ ಅನುಮಾನಗಳು ಬೇಡ. ಈಗ ವಾಸ್ತವಿಕವಾಗಿ ಎಲ್ಲರೂ ಮಾತನಾಡುವಾಗ . . .*

**ಸಭಾಪತಿಯವರು:-** ನೀವು ಈಗ ಯಾರ ದಾರಿ ತಪ್ಪಿಸುತ್ತೀರಿ?

**(ಗೊಂದಲ)**

Formatted: Font: Bold

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾವು ಮಾತ್ರವಲ್ಲ. ಆ ಕಡೆಯಿಂದ ಬಂದಿರುವ ಮಾತುಗಳ ಬಗ್ಗೆ ಕೂಡ ತಾವು ವಿಮರ್ಶೆ ಮಾಡಿ. ಅತ್ಯಂತ ಗಂಭೀರವಾಗಿರುವಂತಹ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಶಿಶು ಕಲ್ಯಾಣ ಇಲಾಖೆ ಮತ್ತು ಮೂಲಭೂತ ಸೌಕರ್ಯಗಳ ಇಲಾಖೆ, ಕೃಷಿ ಇಲಾಖೆ ಈ ಎಲ್ಲಾ ಇಲಾಖೆಗಳನ್ನು ನಿರ್ಲಕ್ಷಿಸಿ ಲೋಕೋಪಯೋಗಿ ಇಲಾಖೆ ಒಂದಕ್ಕೆ 1995 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ ಎಂದರೆ, ಇದರ ಅನುಷ್ಠಾನ 'ಕೊಂಡು ಹೋದ, ಕೊಂಡು ಹೋದ' ಎನ್ನುವ ಹಾಗೆ ಇದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೋಸ್ಕರ ಈ ಕಾಮಗಾರಿಗಳ ತುರ್ತು ಅನುಷ್ಠಾನ ಏನಿತ್ತು? ದಯವಿಟ್ಟು ಈ ವಿಚಾರದಲ್ಲಿ ನೀವು ತಿದ್ದುಪಡಿ ಮಾಡಿ. ಉಳಿದೆಲ್ಲಾ ಇಲಾಖೆಗಳಿಗೆ ಹಂಚಿಕೆ ಮಾಡಿ ಪುನಃ ತನ್ನಿ. ನಾವು ಆಗ ಅದಕ್ಕೆ ಅನುಮೋದನೆಯನ್ನು ಕೊಡುತ್ತೇವೆ. ಇದಕ್ಕೆ ನಮ್ಮ ವಿರೋಧವಿದೆ.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 1995 ಕೋಟಿ ರೂಪಾಯಿಗಳು ಎಂದು ಏನು ಹೇಳುತ್ತಾರೆ, ಅದರಲ್ಲಿ SCP (Special Component Plan) and

TSP (Tribal Sub Plan) ಕಾಂಕ್ರೀಟ್ ರಸ್ತೆ, ಚರಂಡಿ, ಇವೆಲ್ಲವುಗಳು ಅದರಲ್ಲಿ ಬರುತ್ತದೆ. ಅಲ್ಲಿ ದಲಿತರದ್ದು ಸಹ ಹಣ ಇದೆ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಇದಕ್ಕೆ ಪಟ್ಟಿಯನ್ನು ಕೊಡುತ್ತಾರೆಯೇ ಎಂದು ಕೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ತೋರಿಸಿರುವಂತಹದ್ದು 29 ಇಲಾಖೆಗಳು. ಪ್ರತಿಯೊಂದು ಇಲಾಖೆಯಲ್ಲಿಯೂ ಕೂಡ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಅದರದ್ದೇ ಆದಂತಹ ಪ್ರಾತಿನಿಧ್ಯ ಇರುತ್ತದೆ. ನೀವು ತೋರಿಸಿರುವ 29 ಇಲಾಖೆಗಳಲ್ಲಿ ಈ ಇಲಾಖೆಗೆ ಕೊಟ್ಟಿರುವ ಹಣ ಅತ್ಯಂತ ದೊಡ್ಡ ಪ್ರಮಾಣದ್ದಾಯಿತು. ಇದು ನಂಬಲರ್ಹವಾದಂತಹ ಮೊತ್ತವಲ್ಲ ಎಂಬುದನ್ನು ನಾವು ಹೇಳಿದ್ದೇವೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನಾ ಸದಸ್ಯರು ಇದನ್ನು ನಾನಾ ರೀತಿಯಲ್ಲಿ ಉಲ್ಲೇಖ ಮಾಡಿದ್ದಾರೆ. ಕೆಲವು ಮೂಲಭೂತ ವಿಚಾರಗಳ ಬಗ್ಗೆ ಹೇಳಕು ಚೆಲ್ಲುವುದಾದರೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರು (Public Accounts Committee-PAC) new service criteria ಎಂದು ನಿಗದಿ ಮಾಡುತ್ತಾರೆ. ಸರ್ಕಾರ ಎಷ್ಟು ಪ್ರಮಾಣದಲ್ಲಿ ಈ ರೀತಿಯಾಗಿ ಮರು ಹೊಂದಾಣಿಕೆ, re-appropriation ಮಾಡಬಹುದು ಎಂದು PAC ಯವರೇ ಆರ್ಥಿಕ ಇಲಾಖೆಗೆ ceiling limit ಅನ್ನು ನಿಗದಿ ಮಾಡುತ್ತಾರೆ. Time-to-time ಇದನ್ನು revision ಮಾಡಲಾಗುತ್ತದೆ. ಅದು ಪ್ರತಿಯೊಂದು ಮೀಟಿಂಗ್ ಆಗುವುದಿಲ್ಲ, ಈ ಒಂದು ವಿಷಯ ಬಂದಾಗ ಎಷ್ಟು ಸೀಲಿಂಗ್ ಎಂದು ನೋಡುತ್ತಾರೆ, PAC ಗೆ ಪ್ರತಿಯೊಂದು re-appropriation amount ಗೆ ಹೋಗುವುದಿಲ್ಲ. ಎಷ್ಟು ಪ್ರಮಾಣದ ಬಜೆಟ್‌ನ್ನು ನೀವು, re-appropriate ಮಾಡಬಹುದು ಎನ್ನುವಂತಹ ಒಂದು ceiling limit ಅನ್ನು ಇಟ್ಟಿದ್ದಾರೆ. ನಾವು ಇವತ್ತು ಏನು ಮರು ಹೊಂದಾಣಿಕೆ ಮಾಡಲಿಕ್ಕೆ ತೆಗೆದುಕೊಂಡು ಬಂದಿದ್ದೇವೆ, ಇದು PAC ನವರು ನಮಗೆ ಕೊಟ್ಟಿರುವ ಅನುಮತಿಯೊಳಗಡೆ ಇದೆ. ಇದ್ದು ಮೊದಲನೆಯ ವಿಚಾರ.

ಎರಡನೆಯದಾಗಿ, ಏತಕ್ಕೆ ಇದನ್ನು re-appropriate ಮಾಡುತ್ತೀರಿ ಎಂದು ಕೇಳುತ್ತೀರಿ. ಎಲ್ಲಾ ಸರ್ಕಾರಗಳು ಸಹ ಪ್ರತಿ ವರ್ಷ ಖರ್ಚು-ವೆಚ್ಚಗಳನ್ನು ನೋಡಿಕೊಂಡು ವರ್ಷದಲ್ಲಿ ಎರಡು ಅಥವಾ ಮೂರು ಬಾರಿ ಮರು ಹೊಂದಾಣಿಕೆ ಮಾಡುತ್ತಾರೆ. ಸಪ್ಲಿಮೆಂಟರಿ ಎಸ್ಟಿಮೇಟ್ ಮುಖಾಂತರ ಎರಡು ಅಥವಾ ಮೂರು ಬಾರಿ re-appropriation ಅನ್ನು ಮಾಡುತ್ತಾರೆ. ಏತಕ್ಕೆ ಪ್ರತಿ ಬಾರಿ ಮಾಡುತ್ತಾರೆಂದರೆ, ವರ್ಷದ



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Formatted: Font: Bold

ಆಯವ್ಯಯದ ಗಾತ್ರದಲ್ಲಿ ಹೆಚ್ಚಿನ ಹಣ ಖರ್ಚಾಗಬೇಕು. ಉದಾಹರಣೆಗೆ ನಾನು ಈ ಹಿಂದೆ ಕೃಷಿ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದೆ. ಕೃಷಿ ಭಾಗ್ಯ ಯೋಜನೆಯನ್ನು ತೆಗೆದುಕೊಂಡು ಬಂದಾಗ ಮೊದಲನೆಯ ವರ್ಷ ನಾವು ಎಷ್ಟು ಹಣವನ್ನು ಕೇಳಿದ್ದೆವು, ಅದರಲ್ಲಿ ಮುಖ್ಯಮಂತ್ರಿಗಳು ನಮಗೆ 500 ಕೋಟಿ ರೂಪಾಯಿಗಳನ್ನು ಕೊಟ್ಟರು. ಆಗ ನಮ್ಮಲ್ಲಿ ಏನಾಯಿತು ಎಂದರೆ, ಆ ಕೃಷಿ ಭಾಗ್ಯ ಯೋಜನೆಯ ಬಗ್ಗೆ ಜನರಿಗೆ ಅರಿವು ಮೂಡಿಸುವಷ್ಟರಲ್ಲಿ ಮೊದಲನೆಯ ವರ್ಷ ನಾವು ಖರ್ಚು ಮಾಡಲಿಕ್ಕೆ ಆಗಿದ್ದು, 300 ಕೋಟಿ ರೂಪಾಯಿಗಳು. 2ನೇ ವರ್ಷ, 3ನೇ ವರ್ಷ ಅವರು ಕೊಟ್ಟ 500 ಕೋಟಿ ರೂಪಾಯಿಗಳ ಜೊತೆಗೆ 200 ಕೋಟಿ ರೂಪಾಯಿಗಳು ಸೇರಿ ಒಟ್ಟು 700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು ಬೇರೆ ವಿಚಾರ. ಮೊದಲನೆಯ ವರ್ಷ ನಮಗೆ ಏನಾಯಿತು ಎಂಬುದನ್ನು ಜನರಿಗೆ ಮನವರಿಕೆ ಮಾಡಿ, ಅದನ್ನು ಪ್ರಾರಂಭ ಮಾಡಿಸುವಷ್ಟರಲ್ಲಿ ನಮಗೆ ಖರ್ಚು ಮಾಡಲಿಕ್ಕೆ ಆಗಿದ್ದು, 300-350 ಕೋಟಿ ರೂಪಾಯಿಗಳು ಮಾತ್ರ. ಇನ್ನುಳಿದ 150 ಕೋಟಿ ರೂಪಾಯಿಗಳನ್ನು ನಾವು ಆ ವರ್ಷದಲ್ಲಿ ಖರ್ಚು ಮಾಡಲಿಲ್ಲ ಅಂದರೆ ನಮ್ಮ ಜವಾಬ್ದಾರಿಯಲ್ಲಿ ನಾವು ವಿಫಲರಾದಂತೆ ಆಗುತ್ತದೆ. ಸರ್ಕಾರಕ್ಕೆ ಏನು ಒಟ್ಟು ರೆವಿನ್ಯೂ ಇದೆ, ಅದರಲ್ಲಿ ಆದಷ್ಟು 100ಕ್ಕೆ 100 ರಷ್ಟು ಖರ್ಚು ಮಾಡಬೇಕೆನ್ನುವುದು ಸರ್ಕಾರದ ಮೂಲಭೂತ ಕರ್ತವ್ಯ ಹಾಗೂ ಅದು ಸರ್ಕಾರದ ಜವಾಬ್ದಾರಿಯಾಗಿದೆ. ದುಡ್ಡು ಉಳಿಸಿಕೊಡಿ ಎಂದು ಹೇಳಿ ಜನರು tax ಅನ್ನು ಕಟ್ಟುವುದಿಲ್ಲ. Tax ಕಟ್ಟಿದ್ದನ್ನು ಪೂರ್ಣವಾಗಿ ಖರ್ಚು ಮಾಡಿ ಎಂದು ಕೊಡುತ್ತಾರೆ. ಕರ್ನಾಟಕದಲ್ಲಿ ನಾವು ಸುಮಾರು ವರ್ಷಗಳಿಂದ ಪ್ರತಿ ವರ್ಷ ಆ ವರ್ಷದ ಆಯವ್ಯಯದ ಗಾತ್ರದಲ್ಲಿ ಶೇಕಡಾ 97-98 ರಷ್ಟು ಹಣವನ್ನು ನಾವು ಖರ್ಚು ಮಾಡುತ್ತಿದ್ದೇವೆ. ಅದರಲ್ಲಿ opening balance ಸಹ ಸೇರಿಕೊಂಡಿರುತ್ತದೆ. ಆದರೂ ಸಹ 97% ಖರ್ಚು ಪ್ರತಿವರ್ಷ ಆಗುತ್ತಿದೆ. ಏತಕ್ಕೆ 97% ಖರ್ಚು ಆಗುತ್ತದೆ ಎಂದರೆ, ಯಾವ ಇಲಾಖೆಯಲ್ಲಿ ಖರ್ಚು ಜಾಸ್ತಿ ಅವಶ್ಯಕತೆ ಇದೆ ಎಂದು ಹೇಳಿ ಅದಕ್ಕೆ ನಾವು re-appropriate ಮಾಡಿ ಕೊಡುವುದರಿಂದ, we are able to utilize the budgetary provisions in full. ಎಲ್ಲಿ ದುಡ್ಡು ಪೆಂಡಿಂಗ್ ಬಿಲ್ಸ್ ಜಾಸ್ತಿ ಇದೆ, ಎಲ್ಲಿ ಹಣವನ್ನು ತಕ್ಷಣ ಖರ್ಚು ಮಾಡಲಿಕ್ಕೆ ಅವಕಾಶ ಇದೆ, ಅಂತಹ ಕಡೆಗೆ re-appropriate ಮಾಡುವುದರಿಂದ, we were able to spend the about 97% among the available annual budgetary provision. ಆ ಕಾರಣದಿಂದ ಪ್ರತಿಯೊಂದು ಸರ್ಕಾರಗಳು ಸಹ ಈ ರೀತಿಯಾಗಿ ಪೂರಕ ಅಂದಾಜುಗಳು ಒಂದು-ಎರಡು-ಮೂರರ ಮುಖಾಂತರ ಹಣವನ್ನು ಮರು ಹೊಂದಾಣಿಕೆ ಮಾಡಿ ಅವಶ್ಯಕತೆ ಇರುವಂತಹ ಕಡೆ ಹಣವನ್ನು ಕೊಡುತ್ತಿದ್ದೇವೆ. ಈಗ ಈ ಒಂದು Supplementary estimate ಗೆ criteria ವನ್ನು ನಿಗದಿ ಪಡಿಸಬೇಕಾಗುತ್ತದೆ. ಮಧ್ಯದಲ್ಲಿ ಕೆಲವು ವಿಚಾರವಾಗಿ ತೀರ್ಮಾನ ಮಾಡಿದಾಗ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಜೆಟ್ ನಂತರದ ತೀರ್ಮಾನಗಳಿಗೆ ನಾವು ಹಣವನ್ನು ಒದಗಿಸಿಕೊಡಬೇಕಾಗುತ್ತದೆ. ಅದನ್ನು ಹೊರತುಪಡಿಸಿ, ಆರ್ಥಿಕ ಇಲಾಖೆಯವರು ಖರ್ಚಿಗೂ ಸಹ criteria ವನ್ನು ಇಟ್ಟುಕೊಳ್ಳುತ್ತಾರೆ. ಎಲ್ಲಿ ಜಾಸ್ತಿ ಖರ್ಚು ಆಗುತ್ತಿದೆ, ಎಲ್ಲಿ ಅವಶ್ಯಕತೆ ಇದೆ ಎಂದು ನೋಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನನ್ನ ಇಲಾಖೆಗೆ ಸಂಬಂಧಪಟ್ಟಂತೆ 510 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟಿದ್ದಾರೆ. ಏತಕ್ಕೆ ನಿಮಗೆ ಕೊಟ್ಟಿದ್ದಾರೆಂದು ನೀವುಗಳು ಕೇಳುತ್ತೀರಿ. ನಮ್ಮ ಇಲಾಖೆಯಲ್ಲಿ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಏನಾಗಿದೆ ಎಂದರೆ, ಕುಡಿಯುವ ನೀರು ಮತ್ತು ರಸ್ತೆಗಳ ಕೆಲಸಗಳು strictly financial year ನಲ್ಲಿ ಮೂವ್ ಆಗುವುದಿಲ್ಲ. ನಾವು ಅಪ್ರೂವಲ್ಸ್ ಕೊಡುತ್ತೇವೆ. ಉದಾಹರಣೆಗೆ ನಮ್ಮ ಇಲಾಖೆಯಲ್ಲಿ ಕುಡಿಯುವ ನೀರಿಗೆ 6 ಸಾವಿರ ಕೋಟಿ ರೂಪಾಯಿಗಳ ವೆಚ್ಚದ ಕಾಮಗಾರಿಗಳು ಚಾಲ್ತಿಯಲ್ಲಿವೆ. ಆದರೆ, ನಮಗೆ ಆಯವ್ಯಯದಲ್ಲಿ ಕೊಟ್ಟಿರುವಂತಹದ್ದು 2200 ಕೋಟಿ ರೂಪಾಯಿಗಳು. ನಮಗೆ ಹೆಚ್ಚಿಗೆ ಹಣವನ್ನು ಕೊಡಿ ಎಂದು ಹೇಳಿ ಆಗಲೇ ಆರ್ಥಿಕ ಇಲಾಖೆಯವರನ್ನು ಕೇಳಿದ್ದೇವೆ. ಖರ್ಚು ವೆಚ್ಚಗಳನ್ನು ನೋಡಿಕೊಂಡು ವರ್ಷದ ಅರ್ಧ ಭಾಗದ ನಂತರ ನಿಮಗೆ ಹೆಚ್ಚುವರಿಯಾಗಿ ಹಣವನ್ನು ಒದಗಿಸಿಕೊಡುತ್ತೇವೆಂದು ಆರ್ಥಿಕ ಇಲಾಖೆಯವರು ಆಯವ್ಯಯ ಸಂದರ್ಭದಲ್ಲಿಯೇ ಮಾಹಿತಿಯನ್ನು ಕೊಟ್ಟಿದ್ದರು. ಇವತ್ತು ನಮಗೆ ಕೇವಲ ಮಲ್ಟಿ ವಿಲೇಜ್ ಸ್ಕೀಮ್‌ಗಳ ಕಾಮಗಾರಿಗಳೇ 6 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಡೆಯುತ್ತಿದೆ. NRDWP (National Rural Drinking Water Programme) ಅನ್ನು ಬಿಟ್ಟು ಮಲ್ಟಿ ವಿಲೇಜ್ ಸ್ಕೀಮ್‌ಗಳಿಗೆ ನಮಗೆ ಇರುವಂತಹ ಹಂಚಿಕೆ 550 ಕೋಟಿ ರೂಪಾಯಿಗಳಷ್ಟಿದೆ. 550 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡು ಸುಮಾರು 6 ಸಾವಿರ ಕೋಟಿ ರೂಪಾಯಿಗಳದ್ದು 'work-in-progress' ನಲ್ಲಿದೆ. ಬಿಲ್ಸ್ ಬಂದಿಲ್ಲ, ಅದನ್ನು ನಾವು ಮ್ಯಾನೇಜ್ ಮಾಡಬೇಕು. ಇವುಗಳನ್ನೆಲ್ಲಾ ವೇಗವಾಗಿ ಮಾಡಬೇಕೆಂದರೆ ನೀವು ದುಡ್ಡು ಕೊಟ್ಟರೆ ಆಗುತ್ತದೆ ಎಂದು ಅವರನ್ನು ನಾವು ಕೇಳಿದ್ದೇವೆ. ಅದಕ್ಕಾಗಿ ಅವರು 100 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟಿದ್ದಾರೆ. ಹಾಗೆಯೇ ನಮ್ಮ RDPR (Rural Development and Panchayat Raj)ನಲ್ಲಿ 3-4 ಸಾವಿರ ಕೋಟಿ ರೂಪಾಯಿಗಳ ವೆಚ್ಚದ ರಸ್ತೆಗಳ ಕೆಲಸಗಳು ನಡೆಯುತ್ತಿವೆ.

ಮುಂದು. . .

(580) 19.12.2018 05.30 SV-GR



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

~~(ಸಭಾಪತಿಯವರ ಉಪಸ್ಥಿತಿ)~~

**ಶ್ರೀ ಕೃಷ್ಣ ಬೈರೇಗೌಡ:-** ನನಗೆ ರಸ್ತೆಗಳಿಗಾಗಿ ಕ್ಯಾಪಿಟಲ್ ಹೆಡ್ ನಲ್ಲಿ 1600 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಆಯವ್ಯಯ ಮಾಡುವಾಗಲೂ ಇಷ್ಟು ಮೊತ್ತ ಸಾಲುವುದಿಲ್ಲ ಎಂದು ನಾನು ಹೇಳಿದ್ದೆನು. ಆಗ "ನೀವು ಈ ಮೊತ್ತವನ್ನು ಖರ್ಚು ಮಾಡಿ, ನಿಮ್ಮ utilisation ನೋಡಿಕೊಂಡು ವರ್ಷಾಂತ್ಯದಲ್ಲಿ ಪುನಃ ಕೊಡುತ್ತೇವೆ" ಎಂದು ಹೇಳಿದ್ದರು. ಅದೇ ರೀತಿ ನನಗೆ ಇರುವ ಮಾಹಿತಿಯ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ 10 ರಿಂದ 15 ಸಾವಿರ ಕೋಟಿ ವೆಚ್ಚದ ಕಾಮಗಾರಿಗಳು ಪ್ರಗತಿಯಲ್ಲಿವೆ. ನನ್ನ ಬಳಿ ನಿಖರವಾದ ಮಾಹಿತಿ ಇಲ್ಲ. ಬೇಕಾದರೆ ಮತ್ತೊಂದು ಸಂದರ್ಭದಲ್ಲಿ ಕೊಡುತ್ತೇನೆ. They are the work in progress. ರಾಷ್ಟ್ರೀಯ ಹೆದ್ದಾರಿಯಲ್ಲ, ರಾಜ್ಯ ಹೆದ್ದಾರಿ, Major District Roads ಹಾಗೂ ಓ.ಟಿ.ಪಿ.,ಯಲ್ಲಿ One Time Improvement ಎಂದು ತೆಗೆದುಕೊಳ್ಳುತ್ತಾರೆ. ಇವೆಲ್ಲಾ ಬಹುಶಃ 15,000 ಕೋಟಿ ಮೊತ್ತದ works, which are in progress. ಏಕೆ ಈ ರೀತಿ ಆ ವರ್ಷದ್ದು ಆ ವರ್ಷವೇ ತೆಗೆದುಕೊಳ್ಳಲಾಗುತ್ತದೆ ಎಂದು ವಿರೋಧಪಕ್ಷದ ಮಾನ್ಯ ಸದಸ್ಯರು ಕೇಳಿದ್ದಾರೆ. Normal cycle ನಲ್ಲಿ ಒಂದು ಅಂದಾಜು ಸಿದ್ಧವಾಗಿ, ಟೆಂಡರ್ ಆಗಿ ಕೆಲಸ ಪ್ರಾರಂಭವಾಗಬೇಕಾದರೆ ಎರಡು – ಎರಡೂವರೆ ವರ್ಷ ಸಮಯ ಬೇಕಾಗುತ್ತದೆ. ವಿರೋಧ ಪಕ್ಷದವರು ರಾಜಕೀಯ ಕಾರಣಕ್ಕಾಗಿ ಏಕೆ ಇದನ್ನು ಒಂದು ವರ್ಷದೊಳಗೆ ಮಾಡಲಾಗುವುದಿಲ್ಲ ಎಂದು ಕೇಳಬಹುದು. ಅವರಿದ್ದರೂ ಅಷ್ಟೆ, ನಾವಿದ್ದರೂ ಅಷ್ಟೆ. ಹಾಗಾಗಿ ಈ ಎರಡೂ ಇಲಾಖೆಯಲ್ಲಿ ongoing works 5,000, 10,000, 15,000 ಕೋಟಿ ರೂ.ಗಳಲ್ಲಿ ಇರುತ್ತದೆ. ಅದಕ್ಕೆ ತಕ್ಕಹಾಗೆ ಅವರು ಪೂರಕ ಅಂದಾಜುಗಳಲ್ಲಿ ಇದನ್ನು ಒದಗಿಸಿಕೊಡುತ್ತಾರೆ.

ಮೊದಲನೆಯದಾಗಿ ಇದರಲ್ಲಿ ರೂ.2600 ಕೋಟಿಗಳನ್ನು ಸಾಲ ಮನ್ನಾಗಾಗಿ ಒದಗಿಸಿಕೊಳ್ಳುತ್ತಿದ್ದೇವೆ. ವಿರೋಧಪಕ್ಷದವರು ಹೊರಗಡೆಯೆಲ್ಲಾ ಇದರ ಬಗ್ಗೆ ಟೀಕೆಯನ್ನು ಮಾಡಿದ್ದರು. ಅದೇನೆಂದರೆ ರೂ.6500 ಕೋಟಿಗಳನ್ನು ಇಟ್ಟುಕೊಳ್ಳಲಾಗಿದ್ದು, ಅದು ವಾಣಿಜ್ಯ ಬ್ಯಾಂಕ್‌ಗಳಿಗೆ ಮಾತ್ರ ಇಟ್ಟುಕೊಳ್ಳಲಾಗಿದೆ. Co-operative Banks ನಲ್ಲಿ ಪಡೆಯಲಾದ ಸಾಲಗಳ Loan waiver ಅನ್ನು announce ಮಾಡಲಾಗಿದ್ದು, ಅದಕ್ಕೆ ದುಡ್ಡೇ ಇಟ್ಟುಕೊಂಡಿರುವುದಿಲ್ಲ ಎಂದು ವಿರೋಧಪಕ್ಷದ ನಾಯಕರು ಹೊರಗೆ ಟೀಕೆಯನ್ನು ಮಾಡಿದರು. ಕೋ-ಆಪರೇಟಿವ್ ಬ್ಯಾಂಕ್‌ಗಳಿಗೆ ನಮ್ಮ ಲೆಕ್ಕದ ಪ್ರಕಾರ ಮಾರ್ಚ್ ತಿಂಗಳವರೆಗೆ Co-operative loan waiver ರೂ.2600 ಕೋಟಿ ಬೇಕಾಗುತ್ತದೆ ಎಂದು ಅಂದಾಜು ಮಾಡಿ ಸದನದ ಅನುಮತಿಯನ್ನು ಕೋರಿ ತರಲಾಗಿದೆ. ಇನ್ನು ರಾಜ್ಯ ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳಿಗಾಗಿ ರೂ.1645 ಕೋಟಿಗಳನ್ನು ಕೇಳಿದ್ದೇವೆ. 'ನಮ್ಮ ಗ್ರಾಮ-ನಮ್ಮ ರಸ್ತೆ' ಯೋಜನೆಯಡಿಯಲ್ಲಿ ರೂ.3000 ಕೋಟಿಯಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

works ongoing ಇದೆಯೆಂದು ನಾನು ಆಗಲೇ ಹೇಳಿದ್ದೇನೆ. ಅದಕ್ಕೆ ರೂ.350 ಕೋಟಿ ಎಕ್ಸ್‌ಟ್ರಾ ತೆಗೆದುಕೊಂಡಿದ್ದೇವೆ. ರೂ.1600 ಕೋಟಿ ಬಜೆಟ್‌ನಲ್ಲಿ ಕೊಡಲಾಗಿದೆ. ಈಗ ಹೆಚ್ಚುವರಿಯಾಗಿ ರೂ.350 ಕೋಟಿಯನ್ನು ನೀಡಿದ್ದಾರೆ. ವಿಪತ್ತು ನಿರ್ವಹಣೆಗೆ ಕೇವಲ ರೂ.30 ಕೋಟಿ ಇದೆ ಎಂದು ಯಾರೋ ಹೇಳಿದರು. ಇಲ್ಲಿ ರೂ.200 ಕೋಟಿಗಳನ್ನು ಒದಗಿಸಲಾಗಿದ್ದು, ಇದನ್ನು ಈಗಾಗಲೇ ಎಂಟು ಜಿಲ್ಲೆಗಳಿಗೆ ಬಿಡುಗಡೆ ಸಹ ಮಾಡಲಾಗಿದೆ. ಅದಕ್ಕೆ ಸದನದ ratification ಅನ್ನು ಕೇಳುತ್ತಿದ್ದೇವೆ.

ಹೀಗೆ ಬೇರೆ ಬೇರೆ ಉದ್ದೇಶಗಳಿಗೆ ಎಲ್ಲಿ ಖರ್ಚಿನ ಅವಶ್ಯಕತೆ ಜಾಸ್ತಿ ಇದೆಯೋ ಅಂತಹ ಕಡೆ ಒದಗಿಸಲಿಕ್ಕಾಗಿ ಇದನ್ನು ಮಾಡಿಕೊಂಡು ಬಂದಿದ್ದೇವೆ. ಇದಿಷ್ಟು ಪೂರಕ ಅಂದಾಜುಗಳ ಬಗ್ಗೆ ವಿವರಣೆಯಾಗಿದೆ.

ಮಾನ್ಯ ವಿರೋಧ ಪಕ್ಷದವರು irresponsibility ಎಂದು ಹೇಳಿದರು. ಅದಕ್ಕೆ ನಾವು ಉತ್ತರವನ್ನು ಕೊಡಬೇಕಾಗುತ್ತದೆ. ದಯವಿಟ್ಟು ಸ್ವಲ್ಪ ತಾಳ್ಮೆಯಿಂದ ಕೇಳಬೇಕು. ಈಗ ನಾವು ತಂದಿರುವ ಪೂರಕ ಅಂದಾಜು ರೂ.2,24,110 ಕೋಟಿ ಏನಿದೆ, ನಾವು ಇಂದು ಕೇಳುತ್ತಿರುವ ರೂ.6,980 ಕೋಟಿ ಇದು ಶೇ.3.11 of the total budget size. ಕಳೆದ ವರ್ಷ 2017-18ನಲ್ಲಿ ಒಟ್ಟು re-appropriated amount to the total budget ಗೆ ಶೇ.4.72 ಇತ್ತು. ಏಕೆಂದರೆ ಈ ವರ್ಷ ನಾವು ಇನ್ನೂ ಒಂದು S.E., ತರಬಹುದು. ಬಹುಶಃ ಜನವರಿಗೆ ಅಥವಾ ಮಾರ್ಚ್‌ಗೆ ತರಬಹುದು. ಅದಕ್ಕೋಸ್ಕರ ಈ ವರ್ಷದ್ದು ಶೇ.3.11 partial ಆಗಿದೆ. ಕಳೆದ ವರ್ಷದ ಉದಾಹರಣೆಯನ್ನು ತೆಗೆದುಕೊಂಡರೆ ಶೇ.4.72 ಇತ್ತು, total re-appropriated amount as a percentage of the budget. ಈಗ ನಾನು ಮಾಹಿತಿಯನ್ನು ಕೊಡುತ್ತೇನೆ. ಅದನ್ನು ವಿರೋಧಪಕ್ಷದವರು ಯಾವ ರೀತಿ ಸ್ವೀಕಾರ ಮಾಡುತ್ತಾರೆ, ಅದು ಅವರಿಗೆ ಬಿಟ್ಟದ್ದು. 2012-13ರಲ್ಲಿ re-appropriated funds ಶೇ.17.35, 2011-12ರಲ್ಲಿ ಶೇ.13.68% ಅನ್ನು re-appropriate ಮಾಡಲಾಗಿದೆ. 2010-11ರಲ್ಲಿ ಶೇ.18.23% re-appropriate ಆಗಿದೆ. 2009-10ರಲ್ಲಿ 18.59% re-appropriate ಆಗಿದೆ. ನಾವು ಇವತ್ತು ಶೇ.3.11 ಅನ್ನು ಕೇಳುತ್ತಿದ್ದೇವೆ. 2013ರಲ್ಲಿ ಶೇ.9.74 ಈ ರೀತಿಯಾಗಿ ಕಡಿಮೆ ಮಾಡಿಕೊಂಡು ಬಂದಿದ್ದೇವೆ.

**ಶ್ರೀ ಎಸ್.ರುದ್ರೇಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, re-appropriation ಬಗ್ಗೆ ನಮ್ಮದೇನೂ ಆಕ್ಷೇಪವಿಲ್ಲ. ಆದರೆ, ಎರಡು ಇಲಾಖೆಗಳಿಗೆ 60% of the Appropriation Bill ...

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ಅವರು ಮಾತನಾಡುವಾಗ ನಾನು ಕೇಳಿದ್ದೇನೆ. ಈಗ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಅವರು ಏನೆಲ್ಲಾ ಮಾತನಾಡಬಹುದು, ನಾನು ಒಂದು blinder ಹಾಕಿಕೊಂಡು ಉತ್ತರವನ್ನು ಕೊಡಬೇಕೆಂದರೆ ವ್ಯವಸ್ಥೆಯಲ್ಲಿ ಅದು ಸರಿಯಲ್ಲ. ನಾವು ಉತ್ತರ ಕೊಡುವುದಕ್ಕೆ ಅವರು ಬಿಡಬೇಕು. 2014-15ರಲ್ಲಿ 8.71%, 2015-16ರಲ್ಲಿ 10.07%, 2016-17ರಲ್ಲಿ 8.1%, 2017-18ರಲ್ಲಿ 4.72%. ಹೀಗೆ ಶೇ.18 ಇದ್ದುದನ್ನು ಇಳಿಸಿಕೊಳ್ಳುತ್ತಾ ಬಂದಿರುತ್ತೇವೆ. ನಮ್ಮ ಈ ಎರಡು ಮೂರು ವರ್ಷದ ಸರಾಸರಿಯನ್ನು ತೆಗೆದುಕೊಂಡರೆ ಶೇ.5ರ ಈ ರೇಂಜ್‌ಗೆ ತೆಗೆದುಕೊಂಡು ಬಂದಿದ್ದೇವೆ. ಈ ಐದು ವರ್ಷಗಳಿಂದೀಚೆಗೆ ಆರ್ಥಿಕ ಶಿಸ್ತನ್ನು ಅಳವಡಿಸಿಕೊಂಡು ಇಷ್ಟ ಬಂದಂತೆ re-appropriate ಮಾಡುವುದಕ್ಕೆ ಕಡಿವಾಣ ಹಾಕಿ ಅನಿವಾರ್ಯವಿರುವಾಗ re-appropriation ಮಾಡಿಕೊಂಡು 97-98% of the budget allocation ಅನ್ನು ಖರ್ಚು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಎಲ್ಲಿಯೂ ಸಹ ಅಶಿಸ್ತಿನಿಂದ ಕೂಡಿರುವುದಿಲ್ಲ. ಲೋಕೋಪಯೋಗಿ ಇಲಾಖೆಗೆ ಹೆಚ್ಚು ಹಣವನ್ನು ಕೊಟ್ಟಿರುವ ಬಗ್ಗೆ ವಿರೋಧಪಕ್ಷದವರ ತಕರಾರು ಇದೆ. ಅದಕ್ಕೆ ಕಾರಣ ಹಿಂದೆ ನಾವು ಅಷ್ಟು ಕಾಮಗಾರಿಗಳಿಗೆ ಮಂಜೂರಾತಿಯನ್ನು ಕೊಟ್ಟಿರುತ್ತೇವೆ. ತಮಗೆ ತಿಳಿದಿರುವಂತೆ ಅಪೆಂಡಿಕ್ಸ್-ಇ ಅಡಿಯಲ್ಲಿ ಸಾಕಷ್ಟು ಕೆಲಸಗಳಿಗೆ ಮಂಜೂರಾತಿಯನ್ನು ಕೊಟ್ಟುಬಿಡುತ್ತೇವೆ. ಮಂಜೂರಾತಿ ಕೊಟ್ಟ ನಂತರ ಅದರ ಪೇಮೆಂಟ್ ಒಂದೆರಡು ವರ್ಷಗಳ ನಂತರ ಬರುತ್ತದೆ. ಅದಕ್ಕಿಂತ ಹಿಂದಿನ ಕೆಲಸಗಳು ಹೆಚ್ಚಿನ ಪ್ರಮಾಣದಲ್ಲಿ ಕೈಗೆತ್ತಿಕೊಂಡಿರುವುದರಿಂದ ಅದಕ್ಕೆ ಹಣ ಒದಗಿಸಬೇಕಾಗಿದೆ. ಹಾಗಾಗಿ it is not outside the need, ಎಂಬುದನ್ನು ನಾನು ಎಲ್ಲರಿಗೂ ಮನವರಿಕೆ ಮಾಡಿಕೊಡುವುದಕ್ಕೆ ಬಯಸುತ್ತೇನೆ.

ಇನ್ನು ಸಿ.ಎ.ಜಿ., ವರದಿಯ ಬಗ್ಗೆ ಚರ್ಚೆಯಾಯಿತು. ಈಗ ಚರ್ಚೆಯಾಗಿರುವುದರಿಂದ ಅದನ್ನು ಇನ್ನೊಂದು ರೂಪದಲ್ಲಿ ತೆಗೆದುಕೊಂಡು ಬಂದ ನಂತರ ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆಂದು ಹೇಳುವುದಕ್ಕೆ ಹೋಗುವುದಿಲ್ಲ. ಚರ್ಚೆಯಾಗಿರುವುದರಿಂದ ಅದಕ್ಕೆ ನಾನು ಉತ್ತರವನ್ನು ಸಹ ಕೊಡಬೇಕಾಗುತ್ತದೆ. ಇದರ ಬಗ್ಗೆ ಸದನದ ಹೊರಗೆ ಬಹಳಷ್ಟು ಚರ್ಚೆಯಾಗಿದ್ದು, ಒಳಗೂ ಚರ್ಚೆಯಾಗಿದ್ದು ಒಳ್ಳೆಯದೇ ಆಯಿತು. ಅವಕಾಶವನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ರವಿಕುಮಾರ್ ಅವರು ಪ್ರಸ್ತಾಪಿಸಿದ ಎಲ್ಲಾ ವಿಚಾರಗಳಿಗೂ ನಾನು ಉತ್ತರವನ್ನು ಕೊಡುವುದಿಲ್ಲ. ಕೆಲವು ವಿಚಾರಗಳನ್ನು ಯಾವ ರೀತಿಯಾಗಿ ಅರ್ಥೈಸಿಕೊಳ್ಳಬೇಕೆಂಬುದನ್ನು ಮನವರಿಕೆ ಮಾಡಿಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ಕೊಂಡಯ್ಯನವರು ಬಹಳ ಕಡಿಮೆ ಪದಗಳಲ್ಲಿ ಅರ್ಥವಾಗುವ ರೀತಿಯಲ್ಲಿ ಹೇಳಿದ್ದಾರೆ. ಅದನ್ನೇ ನಾನು ಸ್ವಲ್ಪ ಬಳಸಿ ಬಳಸಿ ಹೇಳುತ್ತೇನೆ. ಈಗ ಶೇ.19ರಷ್ಟು ಹಣ ತಾಳೆಯಾಗುತ್ತಿಲ್ಲ, reconciliation ಆಗುತ್ತಿಲ್ಲ ಎಂಬುದನ್ನು ಸಿ.ಎ.ಜಿ.ಯಲ್ಲಿ observation

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಲಾಗಿದೆ. ಇದರಲ್ಲಿ reconciliation percentage ನಮ್ಮ ಕಾಲದಲ್ಲಿ ಶೇ.19 ಇದೆ. ಇದೇ ಹಿಂದಿನ ವರ್ಷಗಳನ್ನು ನೋಡಿದರೆ 2015-16ರಲ್ಲಿ 17%, 2013-14ರಲ್ಲಿ 41%, 2012-13ರಲ್ಲಿ 42%, 2011-12ರಲ್ಲಿ 33%, 2010-11ರಲ್ಲಿ 32.92% non-reconciled amount. ಶೇ.30-40 ಇದ್ದಂತಹ non-reconciled ಮೊತ್ತವನ್ನು ನಾವು ಶೇ.17-19ಕ್ಕೆ ಇಳಿಕೆ ಮಾಡಿದ್ದೇವೆ. 'Reconciliation' ಎಂದರೆ reporting the amount ಮಾಡುವುದು. Reconcile ಆಗಿಲ್ಲ ಎಂದರೆ ಎಲ್ಲಿಗೋ ಹೋಗಿದೆ ಎಂದಲ್ಲ. ಅವರು ರಿಪೋರ್ಟ್ ಮಾಡಿಲ್ಲ ಎಂದಷ್ಟೆ. ಮಾನ್ಯ ಕೊಂಡಯ್ಯನವರು ಹೇಳಿದಂತೆ ಇವೆಲ್ಲವೂ ಸಹ ಪಿ.ಎ.ಸಿ., ಮುಂದೆ ಹೋಗುತ್ತದೆ. ಪಿ.ಎ.ಸಿ.ಯಲ್ಲಿ ಐಟಂ-ವೈಸ್ ಇದನ್ನು ರಿವ್ಯೂ ಮಾಡುತ್ತಾರೆ. ಸಿ.ಎ.ಜಿ., ಯಲ್ಲಿ ಇದಿಷ್ಟು as of that date, ಆ ದಿನಾಂಕದವರೆಗೆ reconcile ಆಗಿಲ್ಲ ಎಂದು ಅಬ್ಸರ್ವ್ ಮಾಡುತ್ತಾರೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಅದಾದ ಮೇಲೆ ಪುನಃ ಇಲಾಖೆಗಳು reconciliation ಅನ್ನು ಮುಂದುವರೆಸಿ, ಅದು reconciliation ಸಹ ಆಗುತ್ತದೆ. ಆ ತಾರೀಖಿನ ನಂತರವೂ ಸಹ ಆ ಇಲಾಖೆಗಳು reconciliation ಮಾಡುವುದರಿಂದ ಅಂತಿಮವಾಗಿ ಆ ಅಂಕಿ ಸಂಖ್ಯೆಗಳು ಕಡಿಮೆಯಾಗುತ್ತವೆ. Reconciliation ಸಿ.ಎ.ಜಿ. ನವರು ಕೊಟ್ಟಂತಹ deadline ಗೆ ಮುಗಿಯುವುದಿಲ್ಲ. ಅವರ reporting purpose ಗಾಗಿ ಒಂದು deadline ಅನ್ನು ನಿಗದಿ ಪಡಿಸುತ್ತಾರೆ. ಅದಾದ ಮೇಲೆಯೂ ಸಹ reconciliation ಮುಂದುವರೆಯುತ್ತದೆ ಮತ್ತು negligible amount will remain as non-reconciled amount.

~~(...ಮುಂದು)~~

**(581) 19.12.2018 ಕೆಜಿಜಿ/ಆರ್ 5.40**

---

**ಶ್ರೀ ಕೃಷ್ಣಭೈರೇಗೌಡ (ಮುಂದು...):-**

ಇನ್ನು ಶಾಸಕಾಂಗದ ಅನುಮೋದನೆ ಇಲ್ಲದೆಯೇ ಕಾರ್ಯನಿರ್ವಾಹಕ ಆದೇಶಗಳ ಮುಖಾಂತರ ರೂ.6,057 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ ಎನ್ನುವುದು ಒಂದು ಆರೋಪ. ನಾವು ಇವತ್ತು re-



" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Formatted: Font: Bold

Formatted: Heading 1, Tab stops: 3.05 cm, Left + 16 cm, Right

appropriation ಮಾಡುತ್ತಿದ್ದೇವಲ್ಲ, ನಾವು ಶಾಸಕಾಂಗದ ಅನುಮೋದನೆಯನ್ನು ಪಡೆದುಕೊಳ್ಳುವ ಮೊದಲೇ ಆ ಮೊತ್ತವನ್ನು ಬಿಡುಗಡೆ ಮಾಡಿದ್ದೀರಿ ಎನ್ನುವಂಥ ಆರೋಪ. ಎಲ್ಲಾ ಕಾನೂನುಗಳಲ್ಲಿಯೂ ಸಹ ಸರ್ಕಾರ ಸಮಯಕ್ಕೆ ಸರಿಯಾಗಿ ಹಣವನ್ನು ಬಿಡುಗಡೆ ಮಾಡಿ, ತದನಂತರದಲ್ಲಿ ಶಾಸಕಾಂಗದಿಂದ ratification ಮಾಡಿಕೊಳ್ಳುವಂತಹ ಕೆಲಸ ಇವತ್ತಲ್ಲ, ಅದು 1951ನೇ ಇಸವಿಯಲ್ಲಿ ಈ Republic of India ಸ್ಥಾಪನೆ ಆದಾಗಿನಿಂದಲೂ ನಡೆದುಕೊಂಡು ಬರುತ್ತಿದೆ. ಅದನ್ನು ಸಿ.ಎ.ಜಿ., ಯವರು observe ಮಾಡಿದ್ದಾರೆ. ಸಿ.ಎ.ಜಿ., ಯವರು ಏನೆಂದು observe ಮಾಡಿದ್ದಾರೆಂದರೆ, ಇದೇ ಖಂಡಿಕೆಯಲ್ಲಿ ಮಹಾ ಲೇಖಪಾಲರು 'ಇಷ್ಟು ಮೊತ್ತಕ್ಕೂ ಪೂರಕ ಅಂದಾಜುಗಳ ಮೂಲಕ ಶಾಸಕಾಂಗದ ಅನುಮೋದನೆ ಪಡೆಯಲಾಗಿದೆ' ಎಂದು ವರದಿಯಲ್ಲಿ ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ಅದನ್ನು ಬೇಕಾದರೆ ತೆಗೆದುನೋಡಬಹುದು. ಇವರು ಆ ಭಾಗವನ್ನು ಬದಿಗೆ ಇಟ್ಟು ಬಿಡುತ್ತಾರೆ. ನಾವು ಬಿಡುಗಡೆ ಮಾಡುತ್ತೇವೆ. ಹೌದು. ನಾವು ಕೊಡಗು ಹಾಗೂ 8 ಜಿಲ್ಲೆಗಳು ಸೇರಿದಂತೆ 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಗಾದರೆ, ಇವರ ಪ್ರಕಾರ ಹೋದರೆ, ನಾವು ಆ ಜನರಿಗೆ ಏನು ಉತ್ತರ ಹೇಳಬೇಕು? ಇಲ್ಲ ಸ್ವಾಮಿ, ಇದಕ್ಕೆ ಶಾಸಕಾಂಗ ಅನುಮೋದನೆ ಕೊಡುವವರೆಗೂ ನೀವು ಮಳೆಯಲ್ಲಿಯೇ ಕಷ್ಟ ಅನುಭವಿಸಿ, ಅಲ್ಲಿಯವರೆಗೆ ಹಣ ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುವುದಕ್ಕಾಗುತ್ತದೆಯೇ? ಮಾನ್ಯ ಸಭಾಪತಿಯವರೇ, ಅವರು ಹೇಳುವಂತಹ ವಾದದ ಅರ್ಥ ಇದೇನಾ? ನಾವು ಅವಶ್ಯಕತೆಗೆ ಅನುಗುಣವಾಗಿ ಹಣವನ್ನು ಮರುಹೊಂದಾಣಿಕೆ ಮಾಡಿಕೊಂಡು ಬಿಡುಗಡೆ ಮಾಡುತ್ತೇವೆ ಮತ್ತು ತದನಂತರ ಅಷ್ಟೂ ಹಣಕ್ಕೆ ಶಾಸಕಾಂಗದಿಂದ ಒಪ್ಪಿಗೆಯನ್ನು ಪಡೆದುಕೊಳ್ಳುತ್ತೇವೆ. Emergency ಇದ್ದಾಗ ಹಣ ಬಿಡುಗಡೆ ಮಾಡಲೇಬೇಕಾಗುತ್ತದೆ. 2016ರಲ್ಲಿ ಬರಗಾಲ ಇತ್ತು. ಪ್ರಕೃತ್ತಿ ವಿಕೋಪ ಇತ್ತು. ಅದಕ್ಕೆ ಎಲ್ಲಾ ಹಣವನ್ನು ಕೊಟ್ಟಿದ್ದೇವೆ. ಆದಾದ ಮೇಲೆ ಶಾಸಕಾಂಗದಿಂದ ಅನುಮೋದನೆಯನ್ನು ಪಡೆದುಕೊಂಡಿದ್ದೇವೆ. ಇದನ್ನು ನಾನು ಹೇಳುತ್ತಿರುವುದಲ್ಲ. ಸಿ.ಎ.ಜಿ., ಯವರು ಅವರ ವರದಿಯಲ್ಲಿ ಅನುಮೋದನೆಯನ್ನು ಪಡೆದುಕೊಂಡಿದ್ದಾರೆಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಹೇಳಿದಕ್ಕೆ ಸಿ.ಎ.ಜಿ., ವರದಿಯ ಬಗ್ಗೆ ಹೇಳುತ್ತಿದ್ದೇನೆ. ನಾವು ಏನಿತ್ತು re-appropriation ತೆಗೆದುಕೊಂಡಿದ್ದೇವೆ. ಇದೇ ತರಹ ಪ್ರತಿ ವರ್ಷವು re-appropriation ತೆಗೆದುಕೊಳ್ಳುತ್ತಿದ್ದೇವೆ. ಕೆಲವೊಂದು ಪ್ರಕರಣಗಳಲ್ಲಿ ಈಗ ಸಾಲ ಮನ್ನಾ ಘೋಷಣೆ ಮಾಡಿದ್ದೇವೆ. ಅದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಇಟ್ಟುಕೊಳ್ಳಿ, ನಾವು ಶಾಸಕಾಂಗದಿಂದ ಅನುಮೋದನೆ ಆಗುವವರೆಗೂ ಬಿಡುಗಡೆ ಮಾಡುವುದಿಲ್ಲವೆಂದರೆ, ಕೆಲವು ಕೆಲಸಗಳನ್ನು ನಿಲ್ಲಿಸುವುದಕ್ಕೆ ಆಗುತ್ತದಯೇ? ಮೊದಲು ಕೆಲಸ ಮಾಡಬೇಕು ಆನಂತರ ಶಾಸಕಾಂಗದ ಅನುಮೋದನೆಯನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಡೆದುಕೊಳ್ಳಬೇಕು. ಇದು ಪ್ರತಿ ವರ್ಷವೂ ನಡೆದು ಬಂದಿರುವಂತಹ ಪ್ರಕ್ರಿಯೆ. ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಇನ್ನೊಂದು observation ಅನ್ನು ಹೇಳುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವಂತಹ ಆಯವ್ಯಯದ ಮೇಲೆ ಸಿ.ಎ.ಜಿ., ಯವರು ಮೋಸ ಮತ್ತು ಕಳ್ಳತನ ಎಂಬ ಪದವನ್ನು ಉಪಯೋಗಿಸಿದ್ದಾರೆ ಎಂಬ ಆರೋಪ ಬಂದಿದೆ. In every C.A.G., report, whether it is State Government or the Central Government, ಪ್ರತಿಯೊಂದು ವರ್ಷದ ಸಿ.ಎ.ಜಿ., ವರದಿಯಲ್ಲಿ ಅದೇ ಒಂದು ಪ್ರತ್ಯೇಕವಾದಂತಹ ವರ್ಗ ಇದೆ. ಅದಕ್ಕೆ ಅವರು 'theft and misappropriation' ಎಂದು ಕರೆಯುತ್ತಾರೆ.

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದು ಎಲ್ಲಾ ಇಲಾಖೆಗೂ ಇದೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ Auditor's ವರದಿಯಲ್ಲಿ ಒಂದು theft and misappropriation ಎಂದು, ಬಹುಶಃ private sector ನಲ್ಲಿಯೂ ಇದೆ ಎಂದು ಕಾಣುತ್ತದೆ. ಎಲ್ಲಾ ಕಡೆ ಇರುತ್ತದೆ. ಬೇರೆ ಎಲ್ಲೂ ಅಕೌಂಟ್ಸ್ ಮಾಡುವುದಕ್ಕೆ ಆಗದೇ ಹೋದ ಹಣವನ್ನು ಆ ಒಂದು ಹೆಡ್ ಕೆಳಗಡೆ ಹಾಕುತ್ತಾರೆ. ಇಲ್ಲಿ ಮಾನ್ಯ ಸಿದ್ದರಾಮಯ್ಯನವರ ಬಜೆಟ್‌ನ ಮೇಲೆ ಮಾತ್ರ ಈ theft and misappropriation ಎಂದು ಪ್ರತಿಬಿಂಬಿಸಿಬಿಟ್ಟರು. 'Theft and misappropriation' is an essential part of every Auditor's Report. ಅದು 18 ಕೋಟಿ ರೂಪಾಯಿ, which could not be accounted. ಅಂದರೆ, ಅದಕ್ಕೆ ವಿವರಣೆ ಕೊಡುವುದಕ್ಕೆ ಆಗದೆ ಹೋಗಿದ್ದ 18 ಕೋಟಿ ರೂಪಾಯಿಗಳನ್ನು ಅದರ ಕೆಳಗಡೆ ತೋರಿಸಿದ್ದಾರೆ. 2008-2009 ರಲ್ಲಿ 2016ರ ಬಜೆಟ್‌ಗೆ ಶೇಕಡಾ 50 ರಷ್ಟು ಸಹ ಬಜೆಟ್ ಸೈಜ್ ಇರಲಿಲ್ಲ. ಆಗಲೇ 10 ಕೋಟಿ ರೂಪಾಯಿ theft and misappropriation ಆಗಿತ್ತು. ಅದು ಅವರಿಗೆ ಗೊತ್ತಾಗಲಿಲ್ಲವೇ? ಆಗ ಯಾರು ಮುಖ್ಯಮಂತ್ರಿ ಇದ್ದರು? ಯಾರು ಹಣಕಾಸಿನ ಮಂತ್ರಿ ಇದ್ದರು? ಅದು ಗೊತ್ತಾಗುವುದಿಲ್ಲವೇ? 2010-2011 ರಲ್ಲಿ ರೂ.12.62 ಕೋಟಿ ಇದೆ. ಪ್ರತಿ ವರ್ಷವೂ ಆ ಹೆಡ್‌ನಲ್ಲಿ ಒಂದಷ್ಟು ಮೊತ್ತ ಇದ್ದೇ ಇರುತ್ತದೆ. ಇನ್ನೊಂದು ರೂ.11,994 ಕೋಟಿ ಹಣ ಬಳಕೆ ಆಗಿಲ್ಲ. ಈ ಹಣ ಎಲ್ಲಿ ಹೋಯಿತು ಎಂದು ಗುಲ್ಲು ಮಾಡಿದರು. ಪ್ರತಿ ಇಲಾಖೆಯಲ್ಲಿಯೂ ಅನೇಕ ರೀತಿಯ heads of accounts ಇರುತ್ತವೆ. ಕೆಲವು ಇಲಾಖೆಯಲ್ಲಿ 10 ಇರುತ್ತವೆ. ಕೆಲವು ಇಲಾಖೆಯಲ್ಲಿ 50 ಇರುತ್ತವೆ. ನಮ್ಮ ಆರ್.ಡಿ.ಪಿ.ಆರ್., ನಲ್ಲಿ ಇನ್ನೂ ಹೆಚ್ಚಿಗೆ ಇರುತ್ತವೆ. ಅನೇಕ heads of accounts ನಲ್ಲಿ ವರ್ಷದ ಕೊನೆಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಣ ಸ್ವಲ್ಪ ಖರ್ಚಾಗದೆ ಉಳಿದಿರುತ್ತದೆ. ಹಣಕಾಸಿನ ಇಲಾಖೆಯಿಂದ ಬಿಡುಗಡೆ ಆಗಿರುವಂಥದ್ದು ಇಲಾಖೆಯವರ ಕಡೆಗೆ ಇರುತ್ತದೆ. ಕೆಲವು ಮೊತ್ತಗಳನ್ನು ಹಣಕಾಸಿನ ಇಲಾಖೆಯವರೇ ಬಿಡುಗಡೆ ಮಾಡುವುದಿಲ್ಲ. ಏಕೆ ಬಿಡುಗಡೆ ಮಾಡುವುದಿಲ್ಲವೆಂದರೆ, first and second quarterನ ಮೊತ್ತದಲ್ಲಿ ಎಷ್ಟು ಹಣ ಖರ್ಚಾಗಿದೆ ಎಂದು ನೋಡುತ್ತಾರೆ. ನಾವು ಖರ್ಚು ಮಾಡಿಲ್ಲವೆಂದರೆ, third and fourth quarterನ ಮೊತ್ತವನ್ನು ಅವರು ಬಿಡುಗಡೆ ಮಾಡುವುದೇ ಇಲ್ಲ. ಅವರು ಬಿಡುಗಡೆ ಮಾಡದೇ ಹೋದಾಗ line department ನವರು ಈ ಮೊತ್ತವನ್ನು surrender ಮಾಡುತ್ತಿದ್ದೇನೆಂದು Surrender Certificate ಅನ್ನು ಕೊಡಬೇಕು.

ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವಂತಹ ವಿಷಯ ಮಾನ್ಯ ಸದಸ್ಯರಿಗೆ ಅರ್ಥವಾಗುತ್ತಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನಾವು ಯಾವ ಹಣವನ್ನು ಉಪಯೋಗಿಸುತ್ತಿಲ್ಲವೋ ಆ ಹಣಕ್ಕೆ ನಾವು ಹಣಕಾಸಿನ ಇಲಾಖೆಯವರಿಗೆ Surrender Certificate ಕೊಡಬೇಕು. ಇದನ್ನು ಬಹಳ ಗಂಭೀರವಾಗಿ ಯಾವ ಇಲಾಖೆಗಳು ತೆಗೆದುಕೊಳ್ಳುವುದಿಲ್ಲ. ನಾವು ಆ ಹಣವನ್ನು ಖರ್ಚು ಮಾಡಲಿಲ್ಲವೆಂದರೆ ಹಣಕಾಸಿನ ಇಲಾಖೆಯವರು ಆಗಲೇ ಆ ಹಣವನ್ನು ಹಿಡಿದುಕೊಂಡಿರುತ್ತಾರೆ. ಅದನ್ನೇ ನಾವು Supplementary Estimates ನಲ್ಲಿ re-appropriate ಮಾಡಿ ಬೇರೆ ಇಲಾಖೆಗೆ ಕೊಡುವುದು, ಆ ಕಾರಣಕ್ಕೆ ಅವರು ನಮಗೆ ಬಿಡುಗಡೆ ಮಾಡಿರುವುದಿಲ್ಲ. ಆದರೂ ಸಹ ನಿಯಮಗಳು ಏನಿವೆ ಆರ್.ಡಿ.ಪಿ.ಆರ್., ಇಲಾಖೆ ಆಗಲಿ ಅಥವಾ ಬೇರೆ ಯಾವುದೇ ಇಲಾಖೆ ಆಗಲಿ I have to give them a Surrender Certificate. Though they have already surrendered the money, still I have to give them a Surrender Certificate. ಆ ಪ್ರಮಾಣಪತ್ರ ಕೊಡದೆ ಇರುವಂತಹ ಹಣ ಎಷ್ಟು ಎಂದರೆ, ರೂ.11,494 ಕೋಟಿ ರೂಪಾಯಿಗಳು. ಇದೇ ಹಣ ಬೇರೆ ಇಲಾಖೆಗೆ ಕೊಟ್ಟು ಅದು ಖರ್ಚಾಗಿ ಹೋಗಿದೆ. ಅದು ಎಲ್ಲಿಗೆ ಹೋಯಿತು ಎಂದರೆ, ಈ ಹಣವನ್ನೇ we have re-appropriate to other departments. ಅದನ್ನು ತೆಗೆದುಕೊಂಡು, ಆ ಹಣ 12 ಸಾವಿರ ಕೋಟಿ ರೂಪಾಯಿ ಎಲ್ಲೋ ಹೋಗಿಬಿಟ್ಟಿತು ಗಾಯಬ್ ಮಾಡಿಬಿಟ್ಟರು ಎಂದು ಹೇಳಿದರು. ಈ ವಿಚಾರದಲ್ಲಿ ತಮಗೆ ಬೇಕಾದರೆ, ಹಿಂದಿನ ವರ್ಷಗಳ ಹೋಲಿಕೆ ಕೊಡುತ್ತೇನೆ. Unspent ಹಣದಲ್ಲಿ percentage of amount non-surrendered, ಅಂದರೆ, ಪ್ರಮಾಣ ಪತ್ರ ಕೊಡದೆ ಇರುವುದು. Non-surrendered ಎಂದರೆ, purely certificate. ಎಷ್ಟು percentage ಗೆ ನಾವು unspent amount ನಲ್ಲಿ ಪ್ರಮಾಣಪತ್ರ ಕೊಟ್ಟಿಲ್ಲ. 2016-17 ರಲ್ಲಿ 85%. 2008-2009 ರಲ್ಲಿಯೂ ಸಹ 84.07% ಗೆ ಅವರು ಪ್ರಮಾಣ ಪತ್ರ ಕೊಟ್ಟಿಲ್ಲ. 2009-2010 ರಲ್ಲಿ 72% ಇದೆ. ಪ್ರತಿ ವರ್ಷವೂ ಸಹ ಇದೆ. ಇದನ್ನು ತೆಗೆದುಕೊಂಡು ರೂ.11,994 ಕೋಟಿ



" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಗಾಯಬ್ ಎಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ನಾವು ಇಷ್ಟೊಂದು ಹಣವನ್ನು ಗಾಯಬ್ ಮಾಡಿದರೆ ನಾವು ಇಲ್ಲಿ ನಿಲ್ಲುವುದಕ್ಕೆ ಆಗುತ್ತದೆಯೇ? ಸರ್ಕಾರ ಎನ್ನುವುದು ನಡೆಯುವುದಕ್ಕೆ ಆಗುತ್ತದೆಯೇ? ಇಡೀ ದೇಶದಲ್ಲಿಯೇ ಕರ್ನಾಟಕ fiscal prudence ನಲ್ಲಿ we are probably in the top position. ಅದು ಹಿಂದೆ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ನಾವು ಒಂದು ವರ್ಷವೂ ಸಹ, ಕ್ರಾಸ್ ಮಾಡಿಲ್ಲ. ನಮ್ಮ Fiscal Responsibility and Budget Management (*FRBM*) *Act* ಇದೆ. We are the role models in the fiscal responsibility. ನಾನು ಈ GSDP ಬಗ್ಗೆ ಕೆಲವು ರಾಜ್ಯಗಳ ಪರಿಸ್ಥಿತಿಯನ್ನು ನೋಡಿದ್ದೇನೆ. ಅವರು ಎಷ್ಟು ಸಾಲ ತೆಗೆದುಕೊಂಡಿದ್ದಾರೆ, ಅವರ ಖರ್ಚು ವೆಚ್ಚಗಳನ್ನು ನೋಡಿದರೆ, ಅವರ ಪರಿಸ್ಥಿತಿ ಭಯಾನಕ ಅನಿಸುತ್ತದೆ. ನಾವು ಅದಕ್ಕೆ ಹೋಲಿಸಿಕೊಂಡರೆ ಹಣ ಖರ್ಚು ಮಾಡುವುದರಲ್ಲಿಯೇ ಆಗಲಿ, fiscal management prudence ನಲ್ಲಿಯೇ ಆಗಲಿ we are far better. ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ತೆಲಂಗಣ ಹೊಸ ರಾಜ್ಯವಾಗಿ ವಿಭಜನೆಯಾದಾಗ, ಅವರದ್ದು total borrowing as a percentage of their GSDP 1.5% ಇತ್ತು. ಬಹುಶಃ ಈಗಿನ ಅಂಕಿಅಂಶಗಳನ್ನು 3.50% ದಾಟಿದ್ದಾರೆ. *F.R.B.M., Act* ಪ್ರಕಾರ, ನಾವು 3% ದಾಟಬಾರದು. ನಮ್ಮ ರಾಜ್ಯ ಐದು ವರ್ಷಗಳಿಂದ 2.5% ರಿಂದ 2.8% bandwidth ನಲ್ಲಿಯೇ ಇದೆ.

(582)19-12-2018(5-50)ಎಂವಿ-ಎಂಡಿ

~~(ಸಭಾಪತಿಯವರ ಉಪಸ್ಥಿತಿ)~~

Formatted: Highlight

**ಶ್ರೀ ಕೃಷ್ಣಭೈರೇಗೌಡ (ಮುಂದು...):-**

ಅವರು ಶೇಕಡಾ 1.5 ಇದ್ದಂತಹವರು. ಈಗ ನನ್ನ ಬಳಿ ಅವರ ಇತ್ತೀಚಿನ ಅಂಕಿ-ಸಂಖ್ಯೆ ಇಲ್ಲ. ಅಂದರೆ, ಅವರು ಅಷ್ಟು ಹೆಚ್ಚಿನ borrowing ಮಾಡಿ, they have ended up in a fiscally irresponsible mess. ಆದರೆ, ಕರ್ನಾಟಕ ರಾಜ್ಯ ಆ ರೀತಿ ಇಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಸುಮಾರು 618 ಕೋಟಿ ರೂಪಾಯಿ ಗಾಯಬ್ (ಕಣ್ಮರೆ) ಆಗಿದೆ ಎಂದರು. ನಾನು ಹಿಂದಿನ ಸಚಿವರಾದ ಮಾನ್ಯ ಹೆಚ್.ಕೆ.ಪಾಟೀಲ್‌ರವರಿಗೆ ಅಭಿನಂದನೆಯನ್ನು ಸಲ್ಲಿಸಬೇಕು. ಆ amount ಕೆಲವು account ಗಳಲ್ಲಿ park ಆಗಿದ್ದಂತಹ ಹಣವನ್ನು ಹುಡುಕಿ, ಆ ವಿಷಯವನ್ನು ಸಚಿವ ಸಂಪುಟಕ್ಕೆ ತಂದು, ಆ ಬ್ಯಾಂಕ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಕೌಂಟ್‌ಗಳಿಂದ ಹಣವನ್ನು ವಾಪಸ್ಸು ತೆಗೆದುಕೊಂಡು, ಅಷ್ಟು ಹಣವನ್ನು ಕುಡಿಯುವ ನೀರಿನ ಯೋಜನೆಗಳಿಗೆ ಖರ್ಚು ಮಾಡಿದ್ದೇವೆ. ಈ 618 ಕೋಟಿ ರೂಪಾಯಿಗಳು unidentified bank accounts ನಲ್ಲಿತ್ತು. ಆ ಖಾತೆಗಳನ್ನು ಮಾನ್ಯ ಹೆಚ್.ಕೆ.ಪಾಟೀಲರು ಗುರುತಿಸಿ ಹಣವನ್ನು ವಾಪಸ್ಸು ತೆಗೆದುಕೊಂಡರು.

**ಶ್ರೀ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳುತ್ತಿರುವ ಹಣ, ಅದು ಯಾವ ಕಾಲದ ಹಣವೆಂದು ಹೇಳಲಿ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ಇದು ಬಹುಶಃ 2008-09 ರಿಂದ ನಡೆದುಕೊಂಡು ಬಂದಿದೆ. ಅದನ್ನು ಮಾನ್ಯ ಹೆಚ್.ಕೆ.ಪಾಟೀಲರು 2015-16ರಲ್ಲಿ ಅದಕ್ಕೆ ಒಂದು ಇತಿಶ್ರೀ ಹಾಡಿದರು. ಎಲ್ಲಿ ಅಂದರೆ ಅಲ್ಲಿ amount ಗಳನ್ನು park ಮಾಡಿ ಇಡುತ್ತಿದ್ದಂತಹ ಸಂಸ್ಕೃತಿಯನ್ನು ಕೊನೆಗೊಳಿಸಿದರು. ಆ ಹಣವನ್ನು ಗುರುತಿಸಿ, ಅದನ್ನು ಕುಡಿಯುವ ನೀರಿಗೆ ಖರ್ಚು ಮಾಡಿದ್ದೇವೆ. ಇದನ್ನು *CAG (Comptroller and Auditor General)* ಯವರು ಸಹ ಗುರುತಿಸಿರಲಿಲ್ಲ. ಅಂತಹವುಗಳಲ್ಲಿ ಅಂದಿನ ಸರ್ಕಾರ ಅದನ್ನು ಗುರುತಿಸಿ ಆ ಹಣವನ್ನು ವಾಪಸ್ಸು ತೆಗೆದುಕೊಂಡು, we have put to productive use. ಅವರು ಅದನ್ನು ನಮ್ಮ ಮೇಲೆಯೇ ಅಸ್ತ್ರವಾಗಿ ಪ್ರಯೋಗ ಮಾಡುತ್ತಾರೆ. ಈ ತರಹದ ವಿಪರ್ಯಾಸಕ್ಕೆ ಮಿತಿ ಇರಬೇಕು. ಈ 618 ಕೋಟಿ ರೂಪಾಯಿಗಳು ಎಲ್ಲೋ park ಆಗಿದ್ದ ಹಣವನ್ನು ಹುಡುಕಿ ತೆಗೆದುಕೊಂಡು ಬಂದು we have put to productive use. ನೀವು ಅದನ್ನು ಮೆಚ್ಚಬೇಕು. ಆದರೆ, ಇಂತಹ ಒಳ್ಳೆಯ ಕೆಲಸ ಮಾಡಿದರೂ ಸಹ ಸರ್ಕಾರದ ಮೇಲೆ ಗುಮಾನಿ ಬರುವ ತರಹ ಗೂಬೆ ಕೂರಿಸುತ್ತಾರೆಂದರೆ, ನಾವು ಅವರ ಕಲೆಯನ್ನು ಮೆಚ್ಚಬೇಕಾಗುತ್ತದೆ. ಹಾಗಾಗಿ ಕೆಲವುಗಳನ್ನು ಉದಾಹರಣೆಗೆ ಹೇಳಿದ್ದೇನೆ ಅಷ್ಟೆ. ನಾನು ಇಷ್ಟೆಲ್ಲಾ ಹೇಳಿರುವುದನ್ನು ಮಾನ್ಯ ಸದಸ್ಯರಾದ ಕೆ.ಸಿ.ಕೊಂಡಯ್ಯನವರು ಒಂದೇ ನಿಮಿಷದಲ್ಲಿ ಹೇಳಿದರು. ಇಷ್ಟೆಲ್ಲಾ CAG observations ಎಲ್ಲಿಗೆ ಹೋಗುತ್ತದೆಂದರೆ, ಅದು Public Accounts Committee ಗೆ ಹೋಗುತ್ತದೆ. ಆ ಸಮಿತಿ ಅಧ್ಯಕ್ಷರನ್ನಾಗಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ವಹಿಸಿಕೊಳ್ಳಬೇಕೆಂದು ಕೇಳಿಕೊಂಡಿದ್ದೆವು. ಅದಕ್ಕೆ ಅವರು ಮಾನ್ಯ ಆರ್.ಅಶೋಕ್ ಅವರನ್ನು ಮಾಡಿದ್ದಾರೆ. ಈ ಸಮಿತಿಯಲ್ಲಿ ಡಾ॥ವೈ.ಎ.ನಾರಾಯಣಸ್ವಾಮಿಯವರು ಸಹ ಸದಸ್ಯರಾಗಿದ್ದಾರೆ ಎಂದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರಿಗೆ ಮಾನ್ಯ ಆರ್.ಅಶೋಕ್ ಮತ್ತು ಡಾ॥ವೈ.ಎ.ನಾರಾಯಣಸ್ವಾಮಿಯವರ ಮೇಲೂ ನಂಬಿಕೆ ಇಲ್ಲವೆಂದು ಹೇಳಬೇಕಾಗುತ್ತದೆ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಆ ರೀತಿ ಹೇಳುವುದು ಬೇಡ. ಇನ್ನು ಸಹ ಆ ವಿಷಯಗಳ ಬಗ್ಗೆ ಚರ್ಚೆಯಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೆ, ಈಗ ಆ ವಿಷಯ ಅವರ ಮುಂದೆ ಇದೆ.

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದುವರೆಗೂ ಏನು ಈ 35 ಸಾವಿರ ಕೋಟಿ CAG observations ಇದೆ. ಅದು ಇನ್ನು ಚರ್ಚೆಗೆ ಬಂದಿಲ್ಲ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೆ, ಅದು ಈಗ ಚರ್ಚೆಗೆ ಬರುತ್ತದೆ.

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇನ್ನು ಈ ವಿಷಯ ಚರ್ಚೆಗೆ ಬಂದಿಲ್ಲ, ಆಗಲೇ ಮಾನ್ಯ ಸಚಿವರು ನಂಬಿಕೆ ಇಲ್ಲವೆಂದು ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಆ ವಿಷಯ ಸಮಿತಿಯಲ್ಲಿ ಚರ್ಚೆಗೆ ಬಾರದೇ ಇರುವಾಗ ಮಾನ್ಯ ಆರ್.ಅಶೋಕ್‌ರವರ ಮತ್ತು ಡಾ॥ ವೈ.ಎ.ನಾರಾಯಣಸ್ವಾಮಿಯವರ ಬಗ್ಗೆ ಮಾನ್ಯ ಸಚಿವರು ಹೇಳಿದ ಮಾತು ಅವರಿಗೆ ಉತ್ಪ್ರೇಕ್ಷೆ ಅನಿಸುವುದಿಲ್ಲವೇ?

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಚಿವರನ್ನು ದಾರಿ ತಪ್ಪಿಸುತ್ತಾರೆಂದು ಹೇಳಿದ್ದಾರೆ. ಆದರೆ, ಮಾನ್ಯ ಸಚಿವರು ತಮಗೆ ಎಷ್ಟು ಚೆನ್ನಾಗಿ ಉಪನ್ಯಾಸ ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಈಗ ಅವರು CAG ವರದಿಯ ಬಗ್ಗೆ ಚರ್ಚೆ ಮಾಡಿದ್ದು ಮತ್ತು ಅವರು ಉತ್ತರ ಕೊಟ್ಟಿರುವುದು ಎಲ್ಲಾ ಇದೆ. ಆದರೆ, ಮಾನ್ಯ ಸಚಿವರು ತಮ್ಮ ಹತ್ತಿರ ಇರುವಂತಹ ಮಾಹಿತಿಗಳನ್ನು ಕಲಾತ್ಮಕವಾಗಿ ವರ್ಣನೆ ಮಾಡಿದ್ದಾರೆ. ಅದರ ಅರ್ಥ ನಾವು ಸುಮ್ಮನೆ ಕುಳಿತುಕೊಂಡಿದ್ದೇವೆಂದು ಅಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, Black and White ನಲ್ಲಿ ಇರುವುದನ್ನು ತಮಗೆ ಹೇಳಿರುವುದನ್ನು ಕಲಾತ್ಮಕವಾಗಿ ಎಂದರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿರುವುದಕ್ಕೆ ನಾವು ಏನಾದರೂ ಹೇಳಬೇಕು ಎಂದು ಯೋಚನೆ ಮಾಡೋಣ. ಏಕೆಂದರೆ ಅವರು ಹೇಳುವುದು ಸರಿಯಿದೆ. ನಾವು ತೆಗೆದುಕೊಂಡಿರುವ ಈ ಕರ್ನಾಟಕ ಧನವಿನಿಯೋಗ ಮಸೂದೆಯ ಮಧ್ಯೆದಲ್ಲಿ ವಿಚಾರಗಳು ಚರ್ಚೆಗೆ ಬಂದಿರುವುದರಿಂದ, ಅವರಿಗೆ ಲಭ್ಯವಿರುವ ಮತ್ತು ಅಧಿಕಾರಿಗಳು ಕೊಟ್ಟಿರುವಂತಹ ಮಾಹಿತಿಗಳನ್ನು ಅವರು ಹೇಳುತ್ತಿದ್ದಾರೆ. ಅದರ ಅರ್ಥ ಅವರು ಹೇಳಿದ ಎಲ್ಲವನ್ನು ನಾವು ಒಪ್ಪಿಕೊಳ್ಳುತ್ತೇವೆಂದು ಅಲ್ಲ. ಮಾನ್ಯ ಸಚಿವರು ಅದನ್ನು ಕಲಾತ್ಮಕವಾಗಿ ಹೇಳಿರುವುದು ನಮಗೆ ಸ್ವಲ್ಪ ರಂಜನೆಯಾಗಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮನವರಿಕೆಯಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅಭಿನಂದನೆಗಳು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ಸಚಿವರು ಈಗ ದಾರಿ ತಪ್ಪಿಸುವುದನ್ನು ಬಿಟ್ಟು ಅದನ್ನು ಕಲಾತ್ಮಕವಾಗಿ ಹೇಳಿದ್ದಾರೆಯೇ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಅದನ್ನೇ ಹೇಳುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇಷ್ಟೆಲ್ಲಾ ಹೇಳಿದ್ದಾರೆ. ದಾರಿ ತಪ್ಪಿಸುವಂತೆ ಹೇಳಿರುವುದಲ್ಲ. ಇದು ಅದರ ಒಂದು ಭಾಗ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲು ಹೇಳಿದರು ದಾರಿ ತಪ್ಪಿಸುತ್ತಾರೆಂದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಡಾ||ವೈ.ಎ.ನಾರಾಯಣಸ್ವಾಮಿಯವರನ್ನು ಸಮಿತಿಯಿಂದ ತೆಗೆದು, ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವನ್ನು ಅಲ್ಲಿಗೆ ಹಾಕಿ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ನಾನು 5ನೇ ತರಗತಿಯಿಂದ 10ನೇ ತರಗತಿಯವರೆಗೆ ಓದಿರುವುದು ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ. ಅಲ್ಲಿ ಸತ್ಯಸಾಯಿ ಲೋಕ ಸೇವಾ ಸಂಸ್ಥೆ ಎನ್ನುವಂತಹ ಶಾಲೆಯಲ್ಲಿ. ಅಲ್ಲಿ ಯಾರ್‍ಯಾರು ನನ್ನ ಗುರುಗಳು ಎಂದರೆ, ಅವರೆಲ್ಲರೂ ಸಹ ಮಂಗಳೂರು ಮತ್ತು ಉಡುಪಿ ಭಾಗದಿಂದ ಬಂದಂತಹ ಭಟ್ಟರು ಅವರು ನನ್ನ ಗುರುಗಳು. ಆಗ ನಾನು ಇನ್ನು ಚಿಕ್ಕ ಹುಡುಗ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಅದಕ್ಕೆ ಮಾನ್ಯ ಸಚಿವರು ಇಷ್ಟು ಬುದ್ಧಿವಂತರಾಗಿರುವುದು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಅವರಿಂದ ತರಬೇತಿ ಪಡೆದಿದ್ದೇನೆ. ಆಗ ನನಗೆ ಯಕ್ಷಗಾನ ಎಂದರೆ ಬಹಳ ಇಷ್ಟ. ಏಕೆಂದರೆ, ಅದು ಒಂದು ಅದ್ಭುತ ಕಲೆ. ನಾನು ಯಕ್ಷಗಾನವನ್ನು ನೋಡಿ ನೋಡಿ ಬೆರಗಾಗುತ್ತಿದ್ದೆ. ನನಗೆ ಮುದ್ದೇನಹಳ್ಳಿಯ ಶಾಲೆಯಲ್ಲಿ ಇದ್ದಂತಹ ಉಪಧ್ಯಾಯರು, ಅಡುಗೆಯವರು ಮತ್ತು ಪ್ರತಿಯೊಬ್ಬರು ಸಹ ದಕ್ಷಿಣ ಕನ್ನಡ ಜಿಲ್ಲೆಯವರು. ಅವರೆಲ್ಲರೂ ಸಹ ಕೂಡಿಕೊಂಡು ಪ್ರತಿವರ್ಷ ಒಂದು ಅಥವಾ ಎರಡು ಯಕ್ಷಗಾನವನ್ನು ಆಡುತ್ತಿದ್ದರು. ಅದು ಇವತ್ತಿನ ತರಹದ ಯಕ್ಷಗಾನವಲ್ಲ. ಆಗ ಯಕ್ಷಗಾನವನ್ನು

" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂಜೆ ಶುರು ಆಡಿ ಮುಂಜಾನೆಯವರೆಗೂ ಆಡುತ್ತಿದ್ದರು. ಕೆಲವು ಕಡೆ ಅದನ್ನು ಈಗ ಮೂರು ಗಂಟೆಗೆ ಸೀಮಿತ ಮಾಡಿದ್ದಾರೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಬಗ್ಗೆ ನಮಗೆ ಅರ್ಥವಾಗಿದೆ. ಅವರ ಕಲೆಯ ಮೂಲವೂ ಸಹ ದಕ್ಷಿಣ ಕನ್ನಡ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಈಗ ನಮ್ಮ ಸದನವೆಲ್ಲಾ ದಕ್ಷಿಣ ಕನ್ನಡವೇ ಆಗಿ ಹೋಯಿತು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಅದನ್ನು ಹೇಳುತ್ತೇನೆ. ನಾನು ನಮ್ಮ ಗುರುಗಳು ಆಡುವ ಯಕ್ಷಗಾನ ನೋಡುವುದನ್ನು ಕಲ್ಲಿತ್ತಿದ್ದೇನೆ. ಆದರೆ, ಯಕ್ಷಗಾನ ಆಡುವುದನ್ನು ಕಲಿತಿಲ್ಲ. ಆದರೆ, ಒಂದು ಒಳ್ಳೆಯ ಯಕ್ಷಗಾನ ಕಲೆಯನ್ನು ಅಭಿನಂದಿಸುವಷ್ಟು ಸಣ್ಣ ಹೃದಯದಲ್ಲಿ ಅವಕಾಶ ನನಗೆ ಇದೆ ಎಂದು ಅಷ್ಟೆ ಹೇಳುತ್ತಿದ್ದೇನೆ. ಇದನ್ನು ಏಕೆ ಹೇಳಿದೆ ಎಂದರೆ...

**ಸಭಾಪತಿಯವರು:-** ಈಗ ವಿಧೇಯಕವನ್ನು ಮುಗಿಸೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ಕಲಿಸಿಕೊಟ್ಟಂತಹ ಗುರುಗಳು ಈಗ ಇದ್ದರೆ, ಅವರು ದಿಗ್ಭ್ರಮೆಗೊಳ್ಳುತ್ತಿದ್ದರು. ಏಕೆಂದರೆ, ನಾವು ಪುಣ್ಯಾತ್ಮನಿಗೆ ಕಲಿಸಿಕೊಟ್ಟಿದ್ದು ಏನು; ಆ ಪುಣ್ಯಾತ್ಮ ಕಲಿತಿರುವುದು ಏನು ಎಂದು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ನನ್ನ ಉಪಾಧ್ಯಾಯರು ನನ್ನ ಮೇಲೆ ಬಹಳ ಪ್ರೀತಿ ಮತ್ತು ಹೆಮ್ಮೆಯನ್ನು ಇಟ್ಟುಕೊಂಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ಹೇಳಿಕೊಟ್ಟಂಥ ಗುರುಗಳು ಈಗ ಇದ್ದಿದ್ದರೆ ಅವರು ದಿಗ್ಭ್ರಮೆಗೊಳ್ಳುತ್ತಿದ್ದರು. ಮಾನ್ಯ ಸಚಿವರು ಗುರುಗಳನ್ನು ಮೀರಿಸುವಂತಹ ಶಿಷ್ಯ. ಅದು ಯಾವ ಜಿಲ್ಲೆಯಿಂದ ಬಂದಿರಲಿ. ಗುರುಗಳನ್ನು ಮೀರಿಸುವಂತಹ ಒಬ್ಬ ಶಿಷ್ಯನನ್ನು ಹುಡುಕಿದ್ದಾರೆ. ಗುರುಗಳು ಹೇಳಿ ಕೊಟ್ಟಿರುವುದು ಬೇರೆ. ಆದರೆ, ಇವರು ಕಲಿತಿರುವುದು ಬೇರೆ. ಅದಕ್ಕೋಸ್ಕರ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ಅದು ಏನೇ ಆದರೂ ಸಹ ಮಾನ್ಯ ವಿರೋಧ ಪಕ್ಷದವರ ಕೊಡುಗೆ ಎಂದು ತೆಗೆದುಕೊಂಡಿದ್ದೇನೆ, ಈ ಶ್ರೇಯಸ್ಸು ಅವರಿಗೆ ದೊರೆಯುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸಭಾಪತಿಯವರು ಕೂಡ ದಕ್ಷಿಣ ಕನ್ನಡದವರು ಅವರ ಪರಿಸ್ಥಿತಿ ಏನು?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೆ, ಈಗ ತಮ್ಮ ದಾರಿಗೆ ಬರುತ್ತೇನೆ. ಇದನ್ನು ಆಗಲೇ ಏಕೆ ಹೇಳಿದೆ ಎಂದರೆ, ಇದೆಲ್ಲಾ CAG observations ಎಲ್ಲವೂ ಸಹ PAC (Public Accounts Committee) ಗೆ ಹೋಗುತ್ತದೆ. ಈಗ PAC ಯಲ್ಲಿ ವಿರೋಧ ಪಕ್ಷದ ಸದಸ್ಯರು ಸಹ ಇದ್ದಾರೆ. ಅಲ್ಲಿ point by point ಎಲ್ಲವೂ ಸಹ ಚರ್ಚೆ ಆಗುತ್ತದೆ. ಆಮೇಲೆ departmental enquiries constitute ಆಗುತ್ತದೆ. ಅದು ಅಲ್ಲಿ ಸಾಬೀತಾದರೆ, ಆಗ ಇದು ವಂಚನೆಯಾಗಿದೆ ಎಂದು ಅರ್ಥ. ಅದನ್ನು ಹೊರತುಪಡಿಸಿ ಮತ್ತು ಅದನ್ನು ಮಾಡುವಂತಹ ಅಧಿಕಾರವನ್ನು ಸಂವಿಧಾನಬದ್ಧವಾಗಿ ವಿರೋಧ ಪಕ್ಷದವರಿಗೆ ಇದೆ. ಹಾಗಾಗಿ ಅವರ ಮೇಲೆ ನಂಬಿಕೆ ಇಟ್ಟುಕೊಳ್ಳಿ ಎಂದು ಹೇಳುತ್ತಿದ್ದೇನೆ. ಅದನ್ನು ಬಿಟ್ಟು observations ಆಧಾರದ ಮೇಲೆ ಏನೋ, ಮಾಧ್ಯಮದವರಿಗೂ ಈ ತರಹ ಏನಾದರೂ ಸಿಕ್ಕಿದರೆ ಸಾಕು. ಅವರು ಸಹ ಪೂರ್ವಾಪರ ಯೋಚನೆ ಮಾಡದೇ, ಹಣಕಾಸು ಇಲಾಖೆಯ ಕಾರ್ಯದರ್ಶಿಯವರನ್ನು ಕೇಳದೆ, ಅದನ್ನು ಪತ್ರಿಕೆಗಳಲ್ಲಿ Headlines ನಲ್ಲಿ ಹಾಕಿದರು. ಮೂರು ದಿನ ಇದರ ಬಗ್ಗೆಯೇ ಚರ್ಚೆ. ಈಗ ಏನಾದರೂ ಆಧಾರವಿದ್ದಾಗ ಅದರ ಬಗ್ಗೆ ಚರ್ಚೆ ಮಾಡಲಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಇದು ಪ್ರತಿವರ್ಷ ನಡೆದುಕೊಂಡು ಬಂದಿರುವುದಕ್ಕೆ ಇದನ್ನು ಕಪೋಲಾಕಲ್ಪಿತ ಮಾಡಿ ಇದನ್ನು ಇಷ್ಟರಮಟ್ಟಿಗೆ ಬೆಳೆಸುವುದು ಅನಾವಶ್ಯಕ. ಅದು ಹಾಗೆ ಇರಲಿ, ಅದು ಅವರ ರಾಜಕೀಯ ಸ್ವಾತಂತ್ರ್ಯ ಪ್ರಜಾಪ್ರಭುತ್ವದಲ್ಲಿ ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಪೂರಕ ಅಂದಾಜುಗಳ ಬಗ್ಗೆ ಅವರ ತಕರಾರುಗಳನ್ನು ಹೇಳಿದ್ದಾರೆ. ನಮಗೆ ಅವರ ತಕರಾರುಗಳ ಬಗ್ಗೆ ಗೌರವವಿದೆ. ದಯವಿಟ್ಟು ಪೂರಕ ಅಂದಾಜುಗಳಿಗೆ ಅನುಮತಿ ಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೆ, ಪಿ.ಡಬ್ಲ್ಯೂ.ಡಿ.ಗೆ ಇಟ್ಟಿರುವುದನ್ನು ಎಲ್ಲಾ ಇಲಾಖೆಯ ವಿಚಾರಣೆ ಮಾಡಿ. 6,800 ಕೋಟಿ ರೂಪಾಯಿಗಳಿಗೆ ನಮ್ಮ ಒಪ್ಪಿಗೆ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಲೋಕೋಪಯೋಗಿ ಇಲಾಖೆಗೆ ಇಷ್ಟು ಪ್ರಮಾಣದ ಹಣ ಕೊಟ್ಟಿರುವುದರ ಪಟ್ಟಿ ನೀಡಿ.

**ಡಾ।।ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಲೋಕೋಪಯೋಗಿ ಇಲಾಖೆಯಲ್ಲಿ ಯಾವ್ಯಾವ ಬಾಬ್ತಿಗೆ ಹಣವನ್ನು ಖರ್ಚು ಮಾಡಿದ್ದಾರೆಂದು, ನಮಗೆ ಅದರ ಪಟ್ಟಿ ನೀಡಿದರೆ ಸಾಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಸುಮಾರು 1995 ಕೋಟಿ ರೂಪಾಯಿಗಳನ್ನು ಲೋಕೋಪಯೋಗಿ ಇಲಾಖೆಗೆ ಕೊಟ್ಟಿದ್ದಾರೆ. ಇದರ ಹಿಂದೆ ಒಂದು ಷಡ್ಯಂತ್ರ ಇದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೆ, ಈಗ ಸುಮಾರು 6575 ಕೋಟಿ ರೂಪಾಯಿಗಳಿಗೂ ಒಪ್ಪಿಗೆ ಇದೆ.

" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ನೀವು ಐದು ಜನ ಒಟ್ಟಿಗೆ ಎದ್ದು ನಿಲ್ಲವುದು ಬೇಡ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಬಹಳ ಕಲಾತ್ಮಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು dispute ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಲೋಕೋಪಯೋಗಿ ಇಲಾಖೆಗೆ ಕೊಟ್ಟಿರುವ ಪಟ್ಟಿಯನ್ನು ನೀಡಬೇಕೆಂದು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಡಾ॥ವೈ.ಎ.ನಾರಾಯಣಸ್ವಾಮಿಯವರು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಬಹು ಮುಖ್ಯ ಇಲಾಖೆಗೆ ಏಳು ಕೋಟಿ, ಒಂದು ಕೋಟಿ ಮತ್ತು ಒಂದು ಕೋಟಿ ಮೂವತ್ತೊಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಲೋಕೋಪಯೋಗಿ ಇಲಾಖೆಗೆ ರಾಜಕೀಯ ಪ್ರೇರಿತವಾಗಿ ಮತ್ತು ರಾಜಕೀಯ ಒತ್ತಡಕ್ಕೆ ಮಣಿದು 1995 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ಏಕೆ ಕೊಟ್ಟಿದ್ದಾರೆಂದು ಹೇಳುವುದಕ್ಕೆ ವಿಫಲರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಇದನ್ನು ವಿರೋಧ ಮಾಡಿ, ಸದನದಿಂದ ಹೊರ ನಡೆಯುತ್ತೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಇದನ್ನು ನಾವು ನಿರೀಕ್ಷೆ ಮಾಡಿದೆವು. ಇದು ಅವರ ಅಭ್ಯಾಸ. **XXX**

**(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರು XXX ಎಂದು ಕೂಗಿದರು)**

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಪ್ರತಿ ಅಂಶವನ್ನು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರನ್ನು ಅಭಿನಂದಿಸದೆ, ಈ ತರಹ ಸದನದಿಂದ ಹೊರ ಹೋಗುವುದು ತಪ್ಪು.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಅವರು ಏನೇನು ಮಾಡಿದರು ಬರೆಯಿರಿ ಎಂದು ಹೋಗುತ್ತಿದ್ದಾರೆ. ಯಾರನ್ನು ಉದ್ಧಾರ ಮಾಡುವುದಕ್ಕೆ ಅಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾವು ಸ್ವಾರ್ಥಕ್ಕೋಸ್ಕರ ರಾಜಕಾರಣ ಮಾಡುತ್ತಿಲ್ಲ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ಮಾನ್ಯ ಸಚಿವರು ಎಷ್ಟು ಸವಿಸ್ತಾರವಾಗಿ ಹೇಳಿದ್ದಾರೆ. ಆದರೆ, ಅವರನ್ನು ಅಭಿನಂದನೆ ಮಾಡದೆ ಸದನದಿಂದ ಹೋಗುವುದು ಸರಿಯಲ್ಲ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಅವರು ಕೇವಲ ಸ್ವಾರ್ಥಕ್ಕೋಸ್ಕರ ಸದನದಿಂದ ಹೊರಗೆ ಹೋಗುತ್ತಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದು ಮಾಧ್ಯಮದಲ್ಲಿ ಬರಬೇಕೆಂದು ಈ ರೀತಿಯಾಗಿ ಮಾಡುತ್ತಾರೆ.

---

**XXX ಸಭಾಪತಿಯವರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.**

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಇದು ಸರಿಯಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇಷ್ಟೆಲ್ಲಾ justification ಕೊಟ್ಟರು ಸಹ ವಿರೋಧ ಪಕ್ಷದವರು ಸದನದಿಂದ ಹೊರಗೆ ಹೋಗುವುದು ಸರಿಯಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.3) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2 ರಿಂದ 3 ರವರೆಗೆ

ಸಭಾಪತಿಯವರು:– "ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 2 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.3) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

(ಮುಂದು...)



Formatted: Font: Not Bold
Formatted: Font: Bold
Formatted: Font: Bold

Formatted: Font: Bold

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಈಗ ನಿಯಮ 68 ರ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಪಡೆಯೋಣವೇ?

**ಡಾ: ಜಯಮಾಲ:-** ಮಾನ್ಯ ಸಭಾಪತಿಯವರೇ, ಸಂಜೆ 6-00 ಗಂಟೆಗೆ ಸಚಿವ ಸಂಪುಟ ಸಭೆ ಇದೆ.

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಅರ್ಧ ಗಂಟೆ ಕಾಲಾವಧಿಯಲ್ಲಿ ನಾನು ನನ್ನ ಉತ್ತರವನ್ನು ಮಂಡಿಸುತ್ತೇನೆ.

**7. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**

Formatted: List Paragraph, Left, Indent: First line: 0 cm

Formatted: Font: Nudi 01 e, 14 pt, Bold, Underline

**ಶ್ರೀ ಆರ್.ವಿ. ದೇಶಪಾಂಡೆ(ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ವಿರೋಧ ಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು, ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು, ಶ್ರೀ ಎನ್. ರವಿಕುಮಾರ್‌ರವರು, ಶ್ರೀ ಎಸ್.ಎಲ್. ಭೋಜೇಗೌಡರವರು, ಡಾ: ತೇಜಸ್ವಿನಿ ಗೌಡರವರು, ಡಾ:ವೈ.ಎ. ನಾರಾಯಣಸ್ವಾಮಿಯವರು, ಶ್ರೀ ಎಂ. ನಾರಾಯಣಸ್ವಾಮಿಯವರು, ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿಯವರು, ಶ್ರೀ ಎಸ್.ಎಲ್. ಧರ್ಮೇಗೌಡರವರು, ಶ್ರೀಮತಿ ಎಸ್. ವೀಣಾ ಅಚ್ಚಯ್ಯನವರು ಮತ್ತು ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು ಈ ಚರ್ಚೆಯಲ್ಲಿ ಭಾಗವಹಿಸಿ ಹಲವಾರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ.

**(ಈ ಹಂತದಲ್ಲಿ ಉಪ ಸಭಾಪತಿಯವರಾದ ಶ್ರೀ ಎಸ್.ಎಲ್. ಧರ್ಮೇಗೌಡರವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಇವೊತ್ತಿನ ದಿವಸ ರಾಜ್ಯದಲ್ಲಿ ಭೀಕರವಾದ ಬರಗಾಲವಿದೆ. ಅದರ ಬಗ್ಗೆ ಸರ್ಕಾರ ಕೆಲಸ ಮಾಡಬೇಕು ವಿರೋಧ ಪಕ್ಷದವರು ಕೆಲವು ಟೀಕೆ-ಟಿಪ್ಪಣಿಗಳನ್ನು ಮಾಡಿದ್ದಾರೆ. ಇವೊತ್ತಿನ ದಿವಸ ಕರ್ನಾಟಕ ರಾಜ್ಯ ಒಂದು *Drought Prone State* ಆಗಿದೆ. 2001ನೇ ಇಸವಿಯಿಂದ 2018ನೇ ಇಸವಿಯವರೆಗೆ 18 ವರ್ಷದಲ್ಲಿ ರಾಜ್ಯದಲ್ಲಿ 14 ವರ್ಷ ಬರಗಾಲವಿದೆ. ಕೇವಲ 4 ವರ್ಷ ಅಂದರೆ, 2005, 2007, 2010 ಮತ್ತು 2017ರಲ್ಲಿ ಬರಗಾಲವಿರುವುದಿಲ್ಲ. ಹಾಗಾಗಿ, ಇವೊತ್ತಿನ ದಿವಸ ಜನ ಗುಳೆ ಹೋಗಬಾರದು, ಉದ್ಯೋಗ ಸೃಷ್ಟಿಯಾಗಬೇಕು, ಕುಡಿಯುವ ನೀರಿನ ಅಭಾವ ದೂರ ಮಾಡುವುದಕ್ಕೆ ಬೋರ್‌ವೆಲ್‌ಗಳು, pipeline exchange ಮಾಡುವುದು, ಮೇವಿನ ಬ್ಯಾಂಕ್‌ಗಳನ್ನು ತೆರೆಯಬೇಕೆಂದು ಅನೇಕ ಮಾನ್ಯ ಸದಸ್ಯರುಗಳು ಸಲಹೆ ನೀಡಿದ್ದಾರೆ. ಆದರೆ, ನನ್ನ ದೃಷ್ಟಿಯಲ್ಲಿ ಇವೆಲ್ಲವೂ ಕೂಡ temporary measures. 'Prevention is better than cure' ಎಂದು ಹೇಳುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇವೊತ್ತಿನ ದಿವಸ ಮುಖ್ಯವಾಗಿ, ಪಕ್ಷಾತೀತವಾಗಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯದ ರೈತರು, ಕೂಲಿಕಾರರು, ಬಡವರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ದೃಷ್ಟಿಯಿಂದ ನಾವು ಚಿಂತನೆ ಮಾಡಬೇಕಾಗಿದೆ. ಇದೇ ರೀತಿಯಾಗಿ ಪ್ರತಿ ವರ್ಷ ಬರಗಾಲ ಎದುರಿಸುತ್ತಾ ಹೋದರೆ, ರೈತರು, ಕೂಲಿಕಾರರು ಮತ್ತು ದನಕರುಗಳ ಪರಿಸ್ಥಿತಿ ಏನು? ಇವೊತ್ತಿನ ದಿವಸ ಜನ ಗುಳೆ ಹೋಗುತ್ತಿದ್ದಾರೆ. ಕೆಳಮನೆಯಲ್ಲಿಯೂ ಸಹ ಬರಗಾಲದ ಬಗ್ಗೆ ಚರ್ಚೆಯಾಯಿತು. ಮುಖ್ಯವಾಗಿ ಖಾಯಂ ಸ್ವರೂಪದ 7ನೇ ಅನುಷ್ಠಾನದ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ಒಂದು ಕಡೆ ಪರಿಸರ ಸಂರಕ್ಷಣೆಯಾಗಬೇಕು, Forest Cover ಬೆಳೆಯಬೇಕು, ಕೆರೆಗಳು desilt ಆಗಬೇಕು. ಎಲ್ಲೆಲ್ಲಿ ನದಿಯಿಂದ ಕೆರೆಗಳನ್ನು ತುಂಬಿಸುವುದಕ್ಕೆ ಸಾಧ್ಯವಿದೆ, ಅದನ್ನು ತುಂಬಿಸಿ ನೀರಾವರಿ ಮತ್ತು ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಮಾಡಬೇಕು. Rain harvesting ಆಗಬೇಕು. ಇಂತಹ ಹಲವಾರು ಯೋಜನೆಗಳನ್ನು ಮಾಡಿ ಈ vulnerability ಏನಿದೆ, ಅದರಿಂದ ಕರ್ನಾಟಕ ರಾಜ್ಯವನ್ನು ಹೊರಗೆ ತರಬೇಕಾಗುತ್ತದೆ. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೇನೆ. ಇದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ, ಇದರ ಬಗ್ಗೆ ನಾವು ಒಂದು ಸಂಶೋಧನೆ ಮಾಡಬೇಕಾಗುತ್ತದೆ. ಈಗ ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಅನಾಹುತವಾಯಿತು, land sliding ಆಯಿತು, ನೂರಾರು ಮನೆಗಳು ಬಿದ್ದವು, ಎಷ್ಟೋ ಜನ ಪ್ರಾಣ ಕಳೆದುಕೊಂಡರು. Plantation crops, horticulture crops, cereal crops ಇಂತಹ ಬೆಳೆಗಳು ಹೋದವು. ಹಾಗಾಗಿ ಇದರ ಬಗ್ಗೆ ಒಂದು ಚಿಂತನೆ ನಡೆಯಬೇಕಾಗುತ್ತದೆ.

ಇವೊತ್ತಿನ ದಿವಸ ಮುಂಗಾರು ಬೆಳೆ ನಮ್ಮ ಕೈಬಿಟ್ಟು ಹೋಗಿದೆ. ಈ ವರ್ಷ ನಾವು ನೂರು ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದೇವೆ. ಅದರಲ್ಲಿ 86 ತಾಲ್ಲೂಕುಗಳನ್ನು ದಿನಾಂಕ:25.09.2018 ರಂದು ಮತ್ತು 14 ತಾಲ್ಲೂಕುಗಳನ್ನು 12.10.2018ರಂದು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದೇವೆ. ಕೆಲವು ಗೌರವಾನ್ವಿತ ಸದಸ್ಯರು ಇಂತಹ ಒಂದು ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿ ಎಂದು ಹೇಳುತ್ತಿದ್ದಾರೆ. ಆದರೆ, ಆ ಪರಿಸ್ಥಿತಿ ಇವೊತ್ತಿನ ದಿವಸ ಇಲ್ಲ. ಏಕೆಂದರೆ, ಕೇಂದ್ರ ಸರ್ಕಾರ 'Manual for Drought Management – 2016' ರಲ್ಲಿ ಕೆಲವು ಮಾರ್ಗಸೂಚಿಗಳನ್ನು ನೀಡಿದೆ. ಅದರಲ್ಲಿ, ಒಂದು ತಾಲ್ಲೂಕನ್ನು ಯಾವಾಗ ಬರಗಾಲ ಪೀಡಿತ ತಾಲ್ಲೂಕೆಂದು ಘೋಷಣೆ ಮಾಡಬಹುದು ಎಂದು ತಿಳಿಸಲಾಗಿದೆ. ಹಾಗಾಗಿ, ನಾವು ಆ parameters, triggers ನ್ನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೊನೆಯದಾಗಿ, ನಾವು ಕೇಂದ್ರ ಸರ್ಕಾರಕ್ಕೆ memorandum ಕೊಡುವುದಕ್ಕೆ ಹೋಗಬೇಕಾಗುತ್ತದೆ. ಇಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡಿದರೆ ಕೇಂದ್ರ

ಸರ್ಕಾರ memorandum ಅನ್ನು ವಾಪಸ್ಸು ಕಳುಹಿಸುತ್ತದೆ. ಹಾಗಾಗಿ, ಕೇಂದ್ರ ಸರ್ಕಾರದ 'Manual for Drought Management – 2016' ಏನಿದೆ, ಅದನ್ನು ನಾವು adhere ಮಾಡಬೇಕಾಗುತ್ತದೆ.

~~(ಮುಂದುವರೆದಿದೆ...)~~

Formatted: Font: Bold

**(584) 19-12-2018 (6.10) ವೈಎಲ್-ಎಕೆ** ~~(ಉಪ ಸಭಾಪತಿಯವರ ಉಪಸ್ಥಿತಿ)~~

ಶ್ರೀ ಆರ್.ವಿ.ದೇಶಪಾಂಡೆ(ಮುಂದು):-

ಇವತ್ತು ಸರ್ಕಾರ ಮುಂದಾಲೋಚನೆ ವಹಿಸಿ ಸಾಕಷ್ಟು ಕ್ರಮವನ್ನು ತೆಗೆದುಕೊಂಡಿದೆ. ನಮ್ಮ ವಿರೋಧ ಪಕ್ಷದ ನಾಯಕರು ಸಹಾ 5 ತಂಡಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಬಹಳ ಸಂತೋಷ ನಾವೇ ನಡೆಸುತ್ತೇವೆ. ಇಂತಹ ಬರಗಾಲದ ಸಮಯದಲ್ಲಿ ಆಡಳಿತ ಪಕ್ಷದವರು ಅಧಿಕಾರದಲ್ಲಿರಬಹುದು. ಆದರೆ, ಇದಕ್ಕೆ ವಿರೋಧ ಪಕ್ಷದವರ ಸಹಕಾರವೂ ಬೇಕಾಗುತ್ತದೆ. ಈ ಬರಗಾಲದ ಬಗ್ಗೆ ಒಂದೊಂದು ವಿಭಾಗಕ್ಕೂ ಒಂದೊಂದು ಕ್ಯಾಬಿನೆಟ್ ಸಬ್-ಕಮಿಟಿಯಂತೆ 4 ಕ್ಯಾಬಿನೆಟ್ ಸಬ್-ಕಮಿಟಿಗಳನ್ನು ಮಾಡಿದ್ದೇವೆ. ವಿರೋಧ ಪಕ್ಷದ ವತಿಯಿಂದಲೂ ಸಹ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ವಿರೋಧ ಪಕ್ಷದ ಕಡೆಯಿಂದ ಮಾರ್ಗದರ್ಶನ, ಸಲಹೆಗಳು ಬೇಕು. ವಿರೋಧ ಪಕ್ಷದ ನಾಯಕರು ಅರಸೀಕೆರೆಗೆ ಹೋದಾಗ ತೆಂಗಿನ ಬೆಳೆ ಹಾಳಾಗಿದೆ, ಬಹಳಷ್ಟು ಕಡೆ ಜನರಿಗೆ ಕುಡಿಯುವ ನೀರಿಲ್ಲ, ಕೆರೆಗಳು ತುಂಬಿಲ್ಲ, ಸರ್ಕಾರ ಯುದ್ಧೋಪಾದಿಯಲ್ಲಿ ಬರಗಾಲದ ಕೆಲಸ ಮಾಡುತ್ತಿಲ್ಲ ಎನ್ನುವಂಥ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಹಣವನ್ನು ನೀಡಲಾಗಿದೆ, ಆದರೆ, ಬರಪೀಡಿತ ತಾಲ್ಲೂಕುಗಳಿಗೆ ಬಿಡುಗಡೆ ಮಾಡಿರುವ ಹಣ ಬಹಳ ಕಡಿಮೆ ಇದೆ ಎಂದು ಹೇಳಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ಕಾಯ್ದೆಯ ಪ್ರಕಾರ ಕೊಪ್ಪಳ ಜಿಲ್ಲೆಯ ಬೆಳೆಗೆ 1.77 ಕೋಟಿ ರೂಪಾಯಿಗಳು ಬಂದಿರುವುದಿಲ್ಲ. Drought ಗೆ ನೀವು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಶೇಕಡ 75 ರಷ್ಟು lake ಬೀದರ್, ಬಾಗಲಕೋಟೆ, ಚಾಮರಾಜ ನಗರ ಜಿಲ್ಲೆಯಲ್ಲಿ dry ಆಗಿವೆ ಎಂದು ಹೇಳಿದ್ದಾರೆ. ಹಾಗೆಯೇ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರವರು ಸಹ ಫಸಲ್ ಬೀಮಾ ಯೋಜನೆ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಅದೇ ರೀತಿ ನಮ್ಮ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರು ಸಹ ಫಸಲ್ ಬೀಮಾ ಯೋಜನೆಯು ಯಾವ ರೀತಿ ಅನುಷ್ಠಾನವಾಗಬೇಕು, ಯಾವ ರೀತಿ ರೈತರಿಗೆ ಒದಗಿಸಬೇಕು ಎಂಬುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಕೇಂದ್ರ ಸರ್ಕಾರದ ಈ ಕಾರ್ಯಕ್ರಮ ಬಹಳ ಒಳ್ಳೆಯದಾಗಿದೆ. ಆದರೆ, ಪ್ರಚಾರದ ಕೊರತೆ ಇದೆ. ಬಹಳಷ್ಟು ಕಡೆ ರೈತರು ವಿಮಾ ಕಂತನ್ನು ತುಂಬುತ್ತಿದ್ದರೂ ದುರದೃಷ್ಟವಶಾತ್ ಅವರಿಗೆ ಪರಿಹಾರ ಸಿಗುತ್ತಿಲ್ಲ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಸೇರಿಕೊಂಡು ಮಾಡುವಂಥ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮ ಕೇವಲ insurance company ಸಲುವಾಗಿ ಆಗಬಾರದು. ರೈತರ ಹಿತದೃಷ್ಟಿಯಿಂದ ಆಗಬೇಕು. ಇಂತಹ ಕಾರ್ಯಕ್ರಮವನ್ನು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಷ್ಟದಲ್ಲಿರುವ ರೈತರಿಗೆ ಸಹಾಯ ಮಾಡುವುದಕ್ಕಾಗಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿ ಗೌಡರು ಸಹ ಈ ಸಮಯದಲ್ಲಿ ಮಾತನಾಡಿದ್ದಾರೆ. ಮಾನ್ಯ ಸದಸ್ಯರು ದೊಡ್ಡಬಳ್ಳಾಪುರ ತಾಲ್ಲೂಕಿಗೆ ಭೇಟಿ ಕೊಟ್ಟಿದ್ದಾರೆ. ಹಲವಾರು ಕಡೆ ಬರಗಾಲದಿಂದಾಗಿ ಕೆರೆಗಳಲ್ಲಿ ನೀರಿಲ್ಲ, desilting of tanks ಆಗಬೇಕೆಂದು ಹೇಳಿ ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿಯವರು ಸಹ ಮಾತನಾಡಿ, 100 ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಲಾಗಿದ್ದು, ರೈತರಿಗೆ ಇನ್ನೂ ಪರಿಹಾರ ಕೊಟ್ಟಿರುವುದಿಲ್ಲ, ರೈತರು ಕಷ್ಟದಲ್ಲಿದ್ದಾರೆ ಎಂದು ಹೇಳಿದ್ದಾರೆ. ಅದೇ ರೀತಿ ಈ 100 ತಾಲ್ಲೂಕುಗಳಿಗೆ ಹೆಚ್ಚಿನ ಪರಿಹಾರ ಕೊಡಬೇಕೆಂದು ಸಹ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿರವರು ಮಾತನಾಡಿ ಕೊಡಗು ಜಿಲ್ಲೆಯ ಜನರ ಕಷ್ಟದ ಪರಿಸ್ಥಿತಿಯ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ. ಕೊಡಗು ಜಿಲ್ಲೆಯ ಕಾಫಿ ಬೆಳೆ, pepper, plantation crops ಎಲ್ಲವೂ ಕೈಬಿಟ್ಟು ಹೋಗಿರುವುದರಿಂದ ಪರಿಹಾರವನ್ನು ಒದಗಿಸಿ ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಅದರ ಬಗ್ಗೆಯೂ ಪ್ರಶ್ನೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿದ್ದೇನೆ. ಕೊಡಗು ಜಿಲ್ಲೆಯ ಜನರು ಬಹಳ ಕಷ್ಟದಲ್ಲಿದ್ದು, ಮೂಲಭೂತ ಸೌಕರ್ಯಗಳಿಲ್ಲದೇ ಹಾನಿಗೊಳಗಾಗುತ್ತಿರುವುದರಿಂದ ಹೆಚ್ಚಿನ ಆರ್ಥಿಕ ನೆರವನ್ನು ಕೊಡಬೇಕೆಂದು ಹೇಳಿದ್ದಾರೆ. ಗೌರವಾನ್ವಿತ ಉಪ ಸಭಾಪತಿಯವರಾದ ಮಾನ್ಯ ~~ಶ್ರೀ~~ ಎಸ್.ಎಲ್.ಧರ್ಮೇಗೌಡರವರು ಸಹ ಕುಡಿಯುವ ನೀರಿನ ವಿಚಾರದಲ್ಲಿ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಹೇಳಿ, ಸಲಹೆಯನ್ನು ನೀಡಿದ್ದಾರೆ. ಹಾಗೆಯೇ ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯರವರು ಸಹ ಕಾಫಿ, pepper ಬೆಳೆಯ ಪರಿಹಾರದ ವಿಷಯವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರು ಸಹ ಮಾತನಾಡಿ, 3 ವರ್ಷಗಳಿಂದ ರೈತರು ಬರಗಾಲದಿಂದ ತತ್ತರಿಸಿ ಹೋಗಿದ್ದಾರೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಹಾಗಾಗಿ, ಸದನದ ಗೌರವಾನ್ವಿತ ಸದಸ್ಯರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಮುಂಗಾರಿನಲ್ಲಿ ಜೂನ್ 1 ರಿಂದ ಸೆಪ್ಟೆಂಬರ್ 30 ರವರೆಗೆ 839 ಮಿ.ಮೀ ರಾಜ್ಯದಲ್ಲಿ ಮಳೆ ಆಗಬೇಕಾಗಿದ್ದು 804 ಮಿ.ಮೀ.ಮಳೆಯಾಗಿದೆ. Deficit is-4%. ಆದರೆ, ಈ ಮಳೆ ಏನಾಯಿತು . . .

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರದ ಪ್ರತಿಯನ್ನು ಒದಗಿಸಿದರೆ ಏನೇನು ಮಾಡಲಾಗಿದೆ ಎಂಬುದನ್ನು ಓದಿಕೊಡುತ್ತೇವೆ.

**ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):-** ಮಾನ್ಯ ಸಭಾಪತಿಯವರೇ, ಉತ್ತರದ ಪ್ರತಿಯನ್ನು ನಾನು ಓದುತ್ತಿಲ್ಲ. ನಾನು extempore ಮಾತನಾಡುತ್ತಿದ್ದೇನೆ. ಹೇಳಿಕೆಯನ್ನು ಅಷ್ಟೇ ಹೇಳುತ್ತಿದ್ದೇನೆ. ಹಾಗೆಯೇ ಮಲೆನಾಡು, ಕರಾವಳಿ ಭಾಗಗಳಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಳೆಯಾಯಿತು. ಆದರೆ, ಉತ್ತರ ಕರ್ನಾಟಕ, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ, ಬಳ್ಳಾರಿ, ಬಿಜಾಪುರ, ಕಲ್ಬುರ್ಗಿ, ಯಾದಗಿರಿ ಜಿಲ್ಲೆಗಳಲ್ಲಿ ಪ್ರಾರಂಭದಲ್ಲಿ ಅಷ್ಟೇ ಮಳೆ ಆಗಿತ್ತು. ಆದರೆ, ಬೆಳೆ ಬೆಳೆಯುವಂಥ ಸಂದರ್ಭದಲ್ಲಿ ಮಳೆ ಆಗಲಿಲ್ಲ. ನಾನು ಸಹ ಬಿಜಾಪುರ, ಕಲ್ಬುರ್ಗಿ, ಯಾದಗಿರಿ ಜಿಲ್ಲೆಗಳಿಗೆ ಭೇಟಿ ನೀಡಿ, ಅಲ್ಲಿನ ಪರಿಸ್ಥಿತಿಯನ್ನು ಗಮನಿಸಿ, ಇವತ್ತು 100 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಲಾಗಿದೆ. ಈ ವರ್ಷ 74.61 ಹೆಕ್ಟೇರ್‌ನಷ್ಟು ಜಾಗ ಬಿತ್ತನೆ ಮಾಡುವುದಕ್ಕೆ ಗುರಿಯನ್ನು ಹಾಕಿಕೊಂಡಿದ್ದೆವು. ಆದರೆ, ಬಿತ್ತನೆಯಾಗಿದ್ದು, 66.36 ಹೆಕ್ಟೇರ್‌ನಷ್ಟು ಅಂದರೆ 89% ರಷ್ಟು ಬಿತ್ತನೆಯಾಗಿದೆ. ಇದೇ ಸಮಯದಲ್ಲಿ ಕಳೆದ ವರ್ಷದಲ್ಲಿ 64.56 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಲಾಗಿತ್ತು. ಈ ಬೆಳೆ ಹಾನಿ ಸಂಭವಿಸಿದಂತಹ ಸಮಯದಲ್ಲಿ N.D.R.F ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ಸಹಾಯ ಮಾಡುತ್ತದೆ. Plantation crops, horticulture crops ಅಥವಾ ಭತ್ತ, ಜೋಳಕ್ಕೆ ಸಂಬಂಧಿಸಿದಂತೆ ಶೇಕಡ 33 ಕ್ಕಿಂತ ಹೆಚ್ಚು ಬೆಳೆ ಹಾನಿಯಾದರೆ ಪರಿಹಾರ ಸಿಕ್ಕುತ್ತದೆ. 30ನೇ ಅಕ್ಟೋಬರ್ 2018ರಂದು ನಾನು ಮತ್ತು ಕೃಷಿ ಸಚಿವರುಗಳು ದೆಹಲಿಗೆ ಹೋಗಿ ಅಲ್ಲಿನ ಕೇಂದ್ರ ಸರ್ಕಾರದ ಮಾನ್ಯ ಗೃಹ ಸಚಿವರನ್ನು ಭೇಟಿಯಾಗಿ ಈ ನಿಟ್ಟಿನಲ್ಲಿ ವರದಿಯೊಂದಿಗೆ ಮನವಿಯನ್ನು ನೀಡಿದ್ದೇವೆ. 27.32 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಲ್ಲಿ ಕೃಷಿ ಬೆಳೆ ಹಾನಿಗೊಳಗಾಗಿದೆ which is entitled for compensation for the crop loss. ಮತ್ತು 1.94 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ತೋಟಗಾರಿಕೆ ಬೆಳೆ ನಷ್ಟವಾಗಿದೆ. ಈ ಕೃಷಿ ಮತ್ತು ತೋಟಗಾರಿಕೆ ಬೆಳೆಯ ಹಾನಿಯಿಂದ ಅಂದಾಜು 16,662,48 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಕೆಲವು ಮಾನ್ಯ ಸದಸ್ಯರುಗಳು ಈ ಬಗ್ಗೆ ತಾವು ಮಾತನಾಡುತ್ತಾ ಹೇಳಿದ್ದಾರೆ. ಇದು ನಮ್ಮ ಕೇಂದ್ರ ಸರ್ಕಾರಕ್ಕೆ ಕೊಟ್ಟ memorandum ಆಗಿದೆ. ಆದರೆ, ಸರ್ಕಾರ ಇದರ ಬಗ್ಗೆ ಕೆಲವು ಪೂರ್ವನಿಯೋಜಿತ ಕಾರ್ಯಕ್ರಮಗಳನ್ನು ಹಾಕಿಕೊಂಡು, ದನ-ಕರುಗಳಿಗೆ, ಜನರಿಗೆ ಕುಡಿಯುವ ನೀರಿನ ಅಭಾವವಾಗಬಾರದು, ಮತ್ತೆ ಯಾರೂ ಸಹ ಗುಳೆ ಹೋಗಬಾರದು, ಮತ್ತೆ, ದನ-ಕರುಗಳಿಗೆ ಮೇವಿನ ಕೊರತೆ, ನೀರಿನ ಕೊರತೆ ಆಗಬಾರದು ಎಂಬ ದಿಕ್ಕಿನಲ್ಲಿ ಕಂದಾಯ ಇಲಾಖೆ ಅಲ್ಲದೇ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶುಸಂಗೋಪನಾ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಹಕಾರಿ ಇಲಾಖೆ ಎಲ್ಲಾ ಇಲಾಖೆಗಳು ಕೂಡಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡು, ಆ ನಿರ್ಣಯವನ್ನು ಅನುಷ್ಠಾನಕ್ಕೆ ತಂದಿದ್ದೇವೆ. ನಾನು ಖುದ್ಧಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ, C.E.O ಗಳಿಗೆ, ಪ್ರತಿಯೊಂದು ಜಿಲ್ಲೆಯ in-charge ಇರುವ ಕಾರ್ಯದರ್ಶಿಗಳಿಗೆ, ಪ್ರಾದೇಶಿಕ ಆಯುಕ್ತರವರಿಗೆ, ಜಿಲ್ಲಾ ಸಚಿವರಿಗೆ ಯಾವ ರೀತಿ ಭೀಕರ ಬರಗಾಲವನ್ನು ಎದುರಿಸಬೇಕೆಂಬುದರ ಬಗ್ಗೆ ಪತ್ರದ ಮೂಲಕ ಕೆಲವು ಸೂಚನೆಗಳನ್ನು ನೀಡಿದ್ದೇನೆ. ಅದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಡಿಯುವ ನೀರಿನ ವಿಚಾರ ಇರಬಹುದು ಅಥವಾ employment generation ಅಥವಾ ಮೇವಿಗೆ ಸಂಬಂಧಿಸಿರುವುದಾಗಿರಬಹುದು.

~~(ಮುಂದು) . . .~~

**(585)19.12.2018,6.20, ಟಿಸಿಹೆಚ್-ಎಕೆ** ~~(ಉಪ ಸಭಾಪತಿಯವರ ಉಪಸ್ಥಿತಿ)~~

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ನನ್ನ ಹಿಂದಿನ ಅನುಭವದ ಮೇರೆಗೆ ನಾವು ಮುಂದಾಲೋಚನೆ ಮಾಡಿ, ಈಗಾಗಲೇ ಹೇಳಿದಂತೆ, ರಾಜ್ಯದಲ್ಲಿ ಕಳೆದ 18 ವರ್ಷಗಳಲ್ಲಿ 14 ವರ್ಷಗಳ ಕಾಲ ಬರಗಾಲವಿದೆ. ಯಾವ ಭಾಗದಲ್ಲಿ ಜನರಿಗೆ ಕುಡಿಯುವ ನೀರಿನ ಅಭಾವವಿದೆ, ಸಾಮಾನ್ಯವಾಗಿ ಯಾವ ಭಾಗದಿಂದ ಜನರು ಗುಳೆ ಹೋಗುತ್ತಾರೆ, ದನ-ಕರುಗಳಿಗೆ ಮೇವು ಎಲ್ಲಿ ಕೊರತೆ ಆಗುತ್ತಿದೆ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಾವು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. 2019ರ ಮೇ ತಿಂಗಳಿನವರೆಗೆ ಬರಗಾಲದ ಪರಿಸ್ಥಿತಿ ಏನಾಗಬಹುದೆಂದು ತಿಳಿದು, ನಾವು ಎಲ್ಲೆಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಬೇಕು, ಎಲ್ಲೆಲ್ಲಿ Fodder Bank ಗಳನ್ನು ತೆರೆಯಬೇಕೆಂದು ಭಾರತ ಸರ್ಕಾರಕ್ಕೂ ಕೂಡ ನಮ್ಮ memorandum ನಲ್ಲಿ ನಾವು ಗುರ್ತಿಸಿ ಕೊಟ್ಟಿದ್ದೇವೆ. ಇವತ್ತಿನ ದಿವಸ 100 ತಾಲ್ಲೂಕುಗಳಲ್ಲಿ ಬರಪೀಡಿತ ಪ್ರದೇಶಗಳೆಂದು ಘೋಷಿಸಿದ್ದೇವೆ. ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ Task Force ಇದ್ದು, ಸುಮಾರು 50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಬೋರ್‌ವೆಲ್‌ಗಳನ್ನು ಕೊರೆಸಲಿಕ್ಕೆ, ಮೋಟಾರ್‌ಗಳು ಮತ್ತು ಪಂಪ್‌ಸೆಟ್‌ಗಳನ್ನು ಖರೀದಿಸುವುದಕ್ಕೆ, ಪೈಪ್‌ಲೈನ್‌ನ್ನು ವಿಸ್ತರಿಸುವುದಕ್ಕೆ ಕೊಟ್ಟಿರುವಂತಹ ಹಣ ಬಹಳ ಕಡಿಮೆ ಆಯಿತು ಎಂದು ಹೇಳಿದ್ದಾರೆ. ಅದರ ಬಗ್ಗೆ ನಂತರ ಮಾತನಾಡುತ್ತೇನೆ. ಅದೇ ರೀತಿ ಹೊಸದಾಗಿ ಕೊಳವೆಬಾವಿ ಕೊರೆಸುವುದಕ್ಕೂ ಕೂಡ ಅನುಕೂಲವಾಗುತ್ತದೆ. ಇದಕ್ಕೆ ಬಿಡುಗಡೆ ಮಾಡಿರುವುದು S.D.R.F. ಹಣ ಅಲ್ಲ. ಇವತ್ತು 200 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವುದು ಏನಿದೆ, ಅದು ರಾಜ್ಯ ಸರ್ಕಾರದಿಂದ ಬಿಡುಗಡೆಯಾದಂತಹ ಹಣವಾಗಿದೆ. ಅದೇ ರೀತಿ S.D.R.F. ನಲ್ಲಿ ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಹಣವಿದೆ. ಪ್ರತಿಯೊಂದು ಜಿಲ್ಲಾಧಿಕಾರಿಯವರ ಹತ್ತಿರ ಕನಿಷ್ಠಪಕ್ಷ 5 ಕೋಟಿ ರೂಪಾಯಿಗಳಷ್ಟು ಹಣ ಉಳಿಯಬೇಕು. ಒಂದುವೇಳೆ, ಅವರ ಬಳಿ ಇರುವಂತಹ ಹಣ 5 ಕೋಟಿಗಿಂತ ಕಡಿಮೆ ಆದಲ್ಲಿ ಅವರು ಕೂಡಲೇ ನಮಗೆ ತಿಳಿಸಬೇಕು. In turn, ಜಿಲ್ಲಾಧಿಕಾರಿಗಳು ಪ್ರತಿಯೊಬ್ಬ ತಹಶೀಲ್ದಾರರ ಬಳಿ ಸುಮಾರು 10, 15, 20 ಲಕ್ಷ ರೂಪಾಯಿಗಳಷ್ಟು ಇಟ್ಟುಕೊಂಡಿರುತ್ತಾರೆ. ಹಾಗಾಗಿ, ಎಲ್ಲೂ ಹಣದ ಕೊರತೆ ಆಗಬಾರದು. ಇದಕ್ಕಾಗಿ ತಹಸೀಲ್ದಾರ್‌ರವರು, ಜಿಲ್ಲಾಧಿಕಾರಿಗಳನ್ನು ನೋಡುವ ಅವಶ್ಯಕತೆ ಇಲ್ಲ. ಅವರ ಬಳಿ ಇರುವಂತಹ ಹಣವನ್ನು, ಮನೆಗಳು ಬಿದ್ದು ಹೋದಲ್ಲಿ ಅವರಿಗೆ ಪರಿಹಾರ ಕೊಡುವುದಕ್ಕೆ ಬಳಸಬಹುದು, ಟ್ಯಾಂಕರ್ ಮೂಲಕ ಕುಡಿಯುವ



Formatted: Font: Bold
Formatted: Font: Bold
ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀರು ಸರಬರಾಜು ಮಾಡುವುದಕ್ಕೆ ಬಳಸಬಹುದು, ಬೋರ್‌ವೆಲ್‌ಗಳನ್ನು flush ಮಾಡಬಹುದು, ಬೋರ್‌ವೆಲ್‌ಗಳನ್ನು deepen ಮಾಡಿಸಲು ಕೂಡ ಇದೇ ಹಣವನ್ನು ಉಪಯೋಗಿಸಬಹುದು. ಬೆಳೆ ಹಾನಿ ಆದಲ್ಲಿ ಪರಿಹಾರ ಕೊಡುವುದಕ್ಕೆ ಇದೇ ಹಣವನ್ನು ಉಪಯೋಗಿಸಬಹುದು. ಕೆಲವು ಭಾಗದಷ್ಟು ಹಣ ಕೇಂದ್ರ ಸರ್ಕಾರದಿಂದಲೂ ಬರುತ್ತದೆ.

ಮತ್ತೆ ಕೆಲವು ಭಾಗದಷ್ಟು ಹಣ ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತದೆ. ಹಾಗಾಗಿ, 226 ಕೋಟಿ ರೂಪಾಯಿಗಳಷ್ಟು ಹಣ 30 ಜಿಲ್ಲಾಧಿಕಾರಿಗಳ P.D. Account ನಲ್ಲಿ ಇದೆ. In turn, ಅವರು ಒಂದಷ್ಟು ಹಣವನ್ನು ತಹಶೀಲ್ದಾರ್‌ರವರು ಬರಪೀಡಿತ ಪ್ರದೇಶಗಳಿಗೆ ಬಳಸಿಕೊಳ್ಳಲು ಬಿಡುಗಡೆ ಮಾಡಿರಬಹುದು. ಇದನ್ನು ಬಿಡುಗಡೆಗೊಳಿಸಲು ಒಂದು ಷರತ್ತನ್ನು ವಿಧಿಸಲಾಗುತ್ತಿತ್ತು, ಟ್ಯಾಂಕರ್ ನೀರನ್ನು ಕೇವಲ 90 ದಿವಸ ಮಾತ್ರ ಸರಬರಾಜು ಮಾಡಬೇಕಾಗಿತ್ತು, ಈಗ ಆ ಷರತ್ತನ್ನು ಕೂಡ ನಾವು ಸಡಿಲಗೊಳಿಸಿದ್ದೇವೆ. ಕುಡಿಯುವ ನೀರಿನ ಅಭಾವದ ಬಗ್ಗೆ ನಮಗೆ ಆತಂಕವಿದೆ. ಆ ಆತಂಕವನ್ನು ನಿವಾರಿಸಲು ಟ್ಯಾಂಕರ್‌ನ ಮೂಲಕ ನೀರನ್ನು ಕೊಡುತ್ತಿದ್ದೇವೆ. High-yielding bore wells ಇದ್ದಾರೆ, ಅವರ ಜೊತೆ ಅಗ್ರಿಮೆಂಟ್ ಮಾಡಿಕೊಂಡು ನೀರನ್ನು ಖರೀದಿಸಲು ಅನುವು ಮಾಡಿಕೊಟ್ಟಿದ್ದೇವೆ. ಹಾಗಾಗಿ, ಕುಡಿಯುವ ನೀರಿನ ವಿಚಾರದಲ್ಲಿ ಹಲವಾರು ಕ್ರಮಗಳನ್ನು ಸರ್ಕಾರದಿಂದ ತೆಗೆದುಕೊಳ್ಳಲಾಗಿದೆ. ಈಗ 209 ಹಳ್ಳಿಗಳಲ್ಲಿ 409 ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುತ್ತಿದ್ದಾರೆ. 382 ಖಾಸಗಿ high-yielding bore wells ನಿಂದ ನೀರನ್ನು ಖರೀದಿ ಮಾಡುತ್ತಿದ್ದೇವೆ. ಒಟ್ಟು ಸುಮಾರು 500 ಕ್ಕಿಂತಲೂ ಹೆಚ್ಚಿನ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವವಿದೆ. ಆ ಹಳ್ಳಿಗಳಿಗೆ ಕುಡಿಯುವ ನೀರಿನ ಸರಬರಾಜು ಆಗುತ್ತಿದೆ. ಈ ಹಣವನ್ನು ಸದ್ಬಳಕೆ ಮಾಡಿಕೊಳ್ಳಲು ಕೆಳ ಹಂತದ ಅಧಿಕಾರಿಗಳಾದ ತಹಸೀಲ್ದಾರ್‌ರವರಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಇದರ ಬಗ್ಗೆ ಕೆಲವು ಸಂದರ್ಭಗಳಲ್ಲಿ, ಅವರು ಜಿಲ್ಲಾಧಿಕಾರಿಗಳ ಆದೇಶಕ್ಕೆ ಕಾಯಬಾರದು. ಟಾಸ್ಕ್‌ಫೋರ್ಸ್‌ನಲ್ಲಿ ಏನು ನಿರ್ಣಯ ಆಗುತ್ತದೆ ಅದು ಇಂಪ್ಲಿಮೆಂಟ್ ಆಗಬೇಕು. As on today, ಪಶು ಸಂಗೋಪನಾ ಇಲಾಖೆಯಲ್ಲಿ 92.65 ಲಕ್ಷ ಮೆಟ್ರಿಕ್ ಟನ್‌ಗಳಿಗಿಂತಲೂ ಹೆಚ್ಚು ಮೇವು ಲಭ್ಯವಾಗಿದೆ. ಆದರೆ, ಕೆಲವು ಜಿಲ್ಲೆಗಳಲ್ಲಿ ಸುಮಾರು ನಾಲ್ಕು ವಾರ ಮತ್ತು ಎಂಟು ವಾರಗಳಿಗೆ ಆಗುವಷ್ಟು ಮೇವು ಕಡಿಮೆ ಇರುತ್ತದೆ. ಮಲೆನಾಡು ಜಿಲ್ಲೆಗಳಲ್ಲಿ ಹೆಚ್ಚು ಮೇವು ಲಭ್ಯವಿದೆ. ಹಾಗಾಗಿ, ನಾವೇನು ಮಾಡಿದ್ದೇವೆಂದರೆ, ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ಮೇವು ಹೋಗಬಾರದೆಂದು ಅದನ್ನು ban ಮಾಡಿ, ದಿನಾಂಕ 31.05.2018 ರವರೆಗೆ ನಿರ್ಬಂಧ ಹೇರಿದ್ದೇವೆ. ಆದರೆ, ನಮ್ಮ ರಾಜ್ಯದೊಳಗೆ fodder movementಗೆ ಅನುಮತಿಯನ್ನು ನೀಡಿದ್ದೇವೆ. ಏಕೆಂದರೆ, ಅದು surplus ಇದ್ದುದ್ದು deficit areaಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೋಗಬೇಕೆಂಬ ಕಾರಣಕ್ಕಾಗಿ ಅನುಮತಿಯನ್ನು ನೀಡಲಾಗಿದೆ. ಇನ್ನು ನಮ್ಮ ಪಶುಸಂಗೋಪನಾ ಇಲಾಖೆಗೆ ಮಿನಿ ಕಿಟ್‌ಗಳನ್ನು ಖರೀದಿಸುವ ಸಲುವಾಗಿ ಸುಮಾರು 15 ಕೋಟಿ ರೂಪಾಯಿಗಳನ್ನು ಈ ಹಿಂದೆಯೇ ಮಂಜೂರು ಮಾಡಿದ್ದೇವೆ. ಆ ಹಣದಲ್ಲಿ ಅವರು ಮಿನಿ ಕಿಟ್‌ಗಳನ್ನು ಖರೀದಿ ಮಾಡಿ, green fodder ನ್ನು ಬೆಳೆಸುವುದಕ್ಕೆ ಈಗಾಗಲೇ ಹಂಚಿಕೆ ಮಾಡಿದ್ದಾರೆ. ಅದೇ ರೀತಿ, 8.11 ಲಕ್ಷ

ಮಿನಿ ಕಿಟ್‌ಗಳನ್ನು ಹಂಚಿಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲೆಲ್ಲಿ Fodder Bank ಗಳು, ಎಲ್ಲೆಲ್ಲಿ ಗೋ ಶಾಲೆಗಳ ಅವಶ್ಯಕತೆ ಇದೆಯೋ, ಅಂತಹ ಕಡೆಗಳಲ್ಲಿ ನಾವು ಪರಿಶೀಲನೆ ಮಾಡಿ ಅವುಗಳನ್ನು ತೆರೆಯಬೇಕೆಂದು ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ನಾವು ಮನವಿ ಕೊಟಿದ್ದೇವೆ, 624 Fodder Banks ಮತ್ತು 297 ಗೋಶಾಲೆಗಳನ್ನು ತೆರೆಯಲು ಅನುಕೂಲವಾಗುವಂತೆ, ಹಣ ಬಿಡುಗಡೆಗೆ ಕೇಂದ್ರ ಸರ್ಕಾರಕ್ಕೆ ಮನವಿ ಕೊಟಿದ್ದೇವೆ. ಮತ್ತೆ Fodder Bank ನಿಂದ ನಾವೇನು ರೈತರಿಗೆ, ಕೂಲಿಕಾರರಿಗೆ ಏನು ಕೊಡುತ್ತಿದ್ದೇವೆ, ಅದನ್ನು ಬಹಳ ರಿಯಾಯಿತಿ ದರದಲ್ಲಿ ಕೊಡುತ್ತೇವೆ. ಈಗ ಕೋಲಾರ ಜಿಲ್ಲೆಯಲ್ಲಿ ಉತ್ತಮವಾದ ಕೆಲಸ ಆಗಿದೆ. ಕಳೆದ ವರ್ಷ ಹಾಲಿನ ಸೊಸೈಟಿಗಳು, ಮಿಲ್ಕ್ ಫೆಡರೇಷನ್‌ಗಳು ಮೇವಿನ ಉತ್ಪಾದನೆಯಲ್ಲಿ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ, ಪುನಃ ಹಾಲಿನ ಸೊಸೈಟಿಗಳು, ಮಿಲ್ಕ್ ಫೆಡರೇಷನ್‌ಗಳ ಮುಖಾಂತರ ಅವರಿಗೆ ಮಿನಿ ಕಿಟ್ಸ್ ಕೊಟ್ಟು, ಮೇವು ಬೆಳೆಸುವುದಕ್ಕೆ ಉತ್ತೇಜನ ನೀಡುತ್ತಿದ್ದೇವೆ. ಕೃಷಿ, ತೋಟಗಾರಿಕೆ, ಪಶು ಸಂಗೋಪನಾ ಇಲಾಖೆಯಲ್ಲಿ ಏನು ಫಾರಂಗಳಿವೆ ಎಲ್ಲೆಲ್ಲಿ ನೀರಿನ ಸೌಲಭ್ಯಗಳಿದೆ, ಅಲ್ಲೂ ಕೂಡ ಮೇವನ್ನು ಬೆಳೆಸುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ಉದ್ಯೋಗ ಸೃಷ್ಟಿ ಮಾಡುವ ನಿಟ್ಟಿನಲ್ಲಿ ಬರಪೀಡಿತ ಜಿಲ್ಲೆಗಳಲ್ಲಿ ಏನು 100 man days ನಲ್ಲಿ ಉದ್ಯೋಗ ಕೊಡುವುದು ಇತ್ತು, ಇದನ್ನು 150 ದಿನಗಳಿಗೆ ಹೆಚ್ಚಿಸಿದ್ದೇವೆ. ಅದಕ್ಕೆ Action Plan ಕೂಡ ಅನುಮೋದನೆ ಆಗಿದೆ. ಅದೇ ರೀತಿ ಇವತ್ತಿನವರೆಗೆ 6 ಲಕ್ಷ man days generate ಆಗಿವೆ. ಮುಂದಿನ ದಿನಗಳಲ್ಲಿ ಪ್ರತಿ ತಿಂಗಳು ಕನಿಷ್ಠಪಕ್ಷ 1 ಕೋಟಿ ರೂಪಾಯಿಗಳ man days generate ಆಗಬೇಕೆಂದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ವರ್ಷ 10 ಕ್ಕಿಂತಲೂ ಹೆಚ್ಚು man days generate ಆಗುತ್ತದೆ ಎಂಬ ವಿಶ್ವಾಸ ನಮಗಿದೆ. ಈಗ natural disaster ಬಗ್ಗೆ ಒಂದು ಕ್ಯಾಬಿನೆಟ್ ಸಬ್-ಕಮಿಟಿ ಇದೆ. ಈ ಸಂಬಂಧ 7 ಬಾರಿ ಸಭೆ ಮಾಡಿದ್ದೇವೆ. ನಿರಂತರವಾಗಿ ಇದರ ಬಗ್ಗೆ ನಾವು ರಿವ್ಯೂ ಮಾಡುತ್ತಿದ್ದೇವೆ. ಹೆಚ್ಚುವರಿ ಕಾರ್ಯದರ್ಶಿಗಳು, ಡೆವಲಪ್‌ಮೆಂಟ್ ಕಮೀಷನರ್‌ರವರು ಅವರ ಹಂತಲ್ಲಿಯೇ ಪ್ರತಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಾರ, ಹವಾಮಾನ ಪರಿಸ್ಥಿತಿ, ಬೆಳೆ ಪರಿಸ್ಥಿತಿ, ಕುಡಿಯುವ ನೀರಿನ ಬಗ್ಗೆ ರಿವ್ಯೂ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮತ್ತು ಪ್ರಾದೇಶಿಕ ಆಯುಕ್ತರನ್ನು ಒಳಗೊಂಡಂತೆ ಎರಡು ಸಮ್ಮೇಳನಗಳು ನಡೆದಿವೆ. ಇತ್ತೀಚೆಗೆ ನಡೆದಂತಹ ಸಮ್ಮೇಳನದಲ್ಲಿ ಕೇವಲ ಬರಗಾಲ ಮತ್ತು ಅತಿವೃಷ್ಠಿಯ ವಿಷಯವನ್ನು ಚರ್ಚೆಗೆ ಇಟ್ಟುಕೊಂಡಿದ್ದರು. Only that was discussed.

(ಮುಂದು...)

**(586)19-12-2018(6-30)mm-rn**

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ವಿ. ದೇಶಪಾಂಡೆ (ಮುಂದು):-**

ವೀಡಿಯೋ ಕಾನ್ಫರೆನ್ಸ್ ಮುಖಾಂತರ ಮತ್ತು ಪ್ರವಾಸ ಮಾಡಿ ಸ್ಥಳಕ್ಕೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ಅವಲೋಕನ ಮಾಡಿದ್ದೇವೆ. ಎಸ್.ಡಿ.ಆರ್.ಎಫ್ ಫಂಡ್‌ನಲ್ಲಿ ಏಪ್ರಿಲ್ ನಿಂದ ನವೆಂಬರ್ ತಿಂಗಳವರೆಗೆ ಸುಮಾರು 142.58 ಕೋಟಿ ರೂಪಾಯಿ ವೆಚ್ಚ ಮಾಡಿದ್ದೇವೆ. ಅತಿವೃಷ್ಟಿಗೇ ಸುಮಾರು 20-25 ಕೋಟಿ ರೂಪಾಯಿ ಹೋಗಿರಬಹುದು. ಕುಡಿಯುವ ನೀರಿಗೆ, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದಕ್ಕೆ ಹಣ ಕೊಡುವುದು, ಇವುಗಳೆಲ್ಲಾ ಚುರುಕಾಗುವ ದಿಕ್ಕಿನಲ್ಲಿ ಕ್ಯಾಬಿನೆಟ್‌ನಿಂದ 4 ಡಿವಿಜನ್‌ಗೆ ಒಂದೊಂದು ಸಬ್ ಕಮಿಟಿಯನ್ನು ರಚನೆ ಮಾಡಿದೆ. ನಮ್ಮ ವಿರೋಧಪಕ್ಷದ ನಾಯಕರು 2017-18ನೇ ಸಾಲಿನಲ್ಲಿ ತೆಂಗು ಬೆಳೆ ಹಾಳಾಗಿರುವ ಬಗ್ಗೆ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಎಲ್ಲಾ ಕಡೆಯಿಂದಲೂ ಪರಿಹಾರ ಕೊಡಬೇಕೆಂಬ ಬೇಡಿಕೆ ಇತ್ತು. ನಾವು ಕೇಂದ್ರ ಸರ್ಕಾರದೊಡನೆ ಸಂಪರ್ಕ ಸಾಧಿಸಿ ಪ್ರಧಾನಮಂತ್ರಿಗಳಿಗೆ ಮತ್ತು ಸಚಿವರಿಗೆ ಮನವಿ ಕೊಟ್ಟರೂ ಪರಿಹಾರ ಸಿಕ್ಕಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಮುಂಗಡಪತ್ರದಲ್ಲಿ ಏನು ಇದಕ್ಕೆ ಪರಿಹಾರ ಕೊಡಬೇಕೆಂದು ಘೋಷಣೆ ಮಾಡಿದ್ದರು, ಆ ಪ್ರಕಾರ ಸುಮಾರು 44 ಲಕ್ಷ ತೆಂಗಿನ ಮರಗಳು ಸಂಪೂರ್ಣ ನಾಶವಾಗಿರುವುದಕ್ಕೆ ಸುಮಾರು 180 ಕೋಟಿ ರೂಪಾಯಿ ಪರಿಹಾರ ಕೊಡುತ್ತಿದ್ದೇವೆ, ಎನ್.ಡಿ.ಆರ್.ಎಫ್ ನಾರ್ಮ್ಸ್ ಪ್ರಕಾರ 180 ರೂಪಾಯಿಗಳನ್ನು ಒಂದು ತೆಂಗಿನ ಮರಕ್ಕೆ ಕೊಡಬೇಕು. ಆದರೆ 400 ರೂಪಾಯಿ ಕೊಡಬೇಕೆಂದು ಕ್ಯಾಬಿನೆಟ್‌ನಲ್ಲಿ ನಿರ್ಣಯ ಮಾಡಿದ್ದೇವೆ. ನಮ್ಮ ರಾಜ್ಯದ ಬರಗಾಲದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಸುಮಾರು 2,434 ಕೋಟಿ ರೂಪಾಯಿಗಳ ಬೆಳೆ ಪರಿಹಾರ ಮತ್ತು ಬೇರೆ ಕೆಲವು ವಿಚಾರಗಳಿಗೆ ನಾವು ಅಕ್ಟೋಬರ್ 30 ರಂದು ಒಂದು memorandum ಕೊಟ್ಟಿದ್ದೇವೆ. ಅದರಲ್ಲಿ 1,938.86 ಕೋಟಿ ಹಣವನ್ನು ರೈತರ ಬೆಳೆ ಹಾನಿ ಬಗ್ಗೆ ಕೇಳಿದ್ದೇವೆ. ಅದರ ನಂತರ ಕೇಂದ್ರ ಸರ್ಕಾರ ಕೂಡ ತ್ವರಿತವಾಗಿ ನಮ್ಮ ರಾಜ್ಯಕ್ಕೆ 10 ಸದಸ್ಯರ ತಂಡವನ್ನು ಕಳುಹಿಸಿತ್ತು. ಶ್ರೀ ಅಮಿತಾಭ್ ಗೌತಮ್ ಅವರ ನೇತೃತ್ವದಲ್ಲಿ ದಿನಾಂಕ 17, 18, 19 ಮೂರು ದಿವಸಗಳು ರಾಜ್ಯದಲ್ಲಿ ಪ್ರವಾಸ ಮಾಡಿದ್ದಾರೆ. ಅವರು 13 ಜಿಲ್ಲೆಗೆ ಭೇಟಿ ಕೊಟ್ಟಿದ್ದರು. ಅದರ ನಂತರ



Formatted: Font: Bold

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೆಂಗಳೂರಿನಲ್ಲಿ ಮುಖ್ಯಮಂತ್ರಿಯವರು ಮತ್ತು ನಾವು ಅವರ ಜೊತೆ ಸಮಾಲೋಚನೆ ಮಾಡಿ, ಅವರಿಗೆ ಬೇಕಾದ ಎಲ್ಲಾ ಮಾಹಿತಿಗಳನ್ನೂ ಒದಗಿಸಿದ್ದೇವೆ. ನಾವು ಪುನಃ ಪ್ರಧಾನಮಂತ್ರಿಯವರಿಗೆ, ಕೇಂದ್ರ ಕೃಷಿ ಸಚಿವರಿಗೆ ಮತ್ತು ಗೃಹ ಸಚಿವರಿಗೆ ಪತ್ರ ಬರೆದು ಆದಷ್ಟು ಬೇಗನೆ ಹಣ ಬಿಡುಗಡೆ ಮಾಡಬೇಕೆಂದು ಕೂಡ ಮನವಿ ಮಾಡಿದ್ದೇವೆ. ಕೇಂದ್ರ ಸರ್ಕಾರವು ಆದಷ್ಟು ಬೇಗ ನಮ್ಮ ಮನವಿಗೆ ಸ್ಪಂದಿಸಬಹುದು ಎಂದು ನಮಗೆ ವಿಶ್ವಾಸವಿದೆ. ನಾವು ಜಿಲ್ಲಾಧಿಕಾರಿಗಳಿಗೆ data entries ಮಾಡುವುದಕ್ಕೆ ಪ್ರಾರಂಭ ಮಾಡಬೇಕೆಂದು ಹೇಳಿದ್ದೇವೆ. ಕೊಡಗು ವಿಚಾರದಲ್ಲಿ ಹಣ ಬಂತು. ಈಗಾಗಲೇ ಪರಿಹಾರ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಮುಂದಿನ 7 ದಿವಸಗಳಲ್ಲಿ 8 ಜಿಲ್ಲೆಗಳಲ್ಲಿ ರೈತರಿಗೆ ಎನ್.ಡಿ.ಆರ್.ಎಫ್ ನಾರ್ಮ್ಸ್ ಪ್ರಕಾರ ಪರಿಹಾರ ಸಿಗುತ್ತದೆ. 18 ವರ್ಷಗಳಲ್ಲಿ 14 ವರ್ಷ ಬರಗಾಲ. ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನಕ್ಕಿಂತ ನಮ್ಮ ಕಡೆ ತೀವ್ರವಾದ ಬರಗಾಲವಿದೆ. ಆದರೆ 14ನೇ ಹಣಕಾಸು 2015-2020ರಲ್ಲಿ ಮಹಾರಾಷ್ಟ್ರಕ್ಕೆ ಎನ್.ಡಿ.ಆರ್.ಎಫ್ ನಿಂದ ಅನುದಾನ ಸಿಕ್ಕಿರುವುದು ಸುಮಾರು 8,195 ಕೋಟಿ ರೂಪಾಯಿಗಳು. ಗುಜರಾತ್‌ಗೆ ಸುಮಾರು 3,894 ಕೋಟಿ, ತಮಿಳುನಾಡಿಗೆ ಸುಮಾರು 3,751 ಕೋಟಿ, ಆಂಧ್ರಪ್ರದೇಶಕ್ಕೆ ಸುಮಾರು 2,430 ಕೋಟಿ ಕರ್ನಾಟಕ ರಾಜ್ಯಕ್ಕೆ 1,527 ಕೋಟಿ ರೂಪಾಯಿ ಅನುದಾನ ಹಂಚಿಕೆಯಾಗಿದೆ. ರಾಜಸ್ಥಾನಕ್ಕೆ ಸುಮಾರು 2,150 ಕೋಟಿ ಇದರಲ್ಲಿ ನಮಗೆ ಅನ್ಯಾಯವಾಗಿದೆ. ಇದನ್ನು ಕೂಡ ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು, ನಾನು ಮತ್ತು ಮಾನ್ಯ ಹೆಚ್.ಡಿ. ದೇವೇಗೌಡರು ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿದ ಸಮಯದಲ್ಲಿ ಮಾನ್ಯ ಪ್ರಧಾನಮಂತ್ರಿಗಳಿಗೆ ಮತ್ತು ಗೃಹಸಚಿವರ ಗಮನಕ್ಕೂ ತಂದಿದ್ದೇವೆ. ಈಗ 15ನೇ ಹಣಕಾಸು ರಚನೆ ಆಗಿದೆ. ಅವರಿಗೂ represent ಮಾಡಿ ಕರ್ನಾಟಕ ರಾಜ್ಯದ ಸಂಪೂರ್ಣ ಪರಿಸ್ಥಿತಿಯ ಬಗ್ಗೆ ಪರಿಚಯ ಮಾಡಿಕೊಟ್ಟಿದ್ದೇವೆ. ನಮಗೆ ವಿಶ್ವಾಸವಿದೆ, ತಮ್ಮೆಲ್ಲರ ಸಹಕಾರದಿಂದ 15ನೇ ಹಣಕಾಸಿನಲ್ಲಿ ನಮಗೆ ನ್ಯಾಯ ಸಿಗಬಹುದೆಂದು ಭಾವಿಸಿದ್ದೇವೆ. ಆ ದಿಕ್ಕಿನಲ್ಲಿ ಮುಖ್ಯಮಂತ್ರಿಯವರು ಪತ್ರ ಬರೆದಿದ್ದಾರೆ. ಹಿಂದೆ ಕೂಡ ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗಲೂ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆ ಪ್ರಯತ್ನವೂ ನಡೆಯುತ್ತಿದೆ. ಹಿಂಗಾರು ಬೆಳೆ ಕೂಡ ಬಹುತೇಕ ಕೈ ಬಿಟ್ಟಿದೆ. Continuous ಮಳೆ ಇಲ್ಲದೇ ಸಾಕಷ್ಟು ಕಡೆ ರೈತರು ಬಹಳ ಕಷ್ಟದಲ್ಲಿದ್ದಾರೆ ಮತ್ತು ಮೊದಲನೇ ಡಿಸೆಂಬರ್ ತಿಂಗಳಿನಲ್ಲಿ north-east monsoon ನಲ್ಲಿ ವಾಡಿಕೆಯಾಗಿ 183 ಎಂ.ಎಂ ನಷ್ಟು ಮಳೆ ಆಗಬೇಕಾಗಿತ್ತು, ಅಕ್ಟೋಬರ್ ನಿಂದ ಡಿಸೆಂಬರ್ ತಿಂಗಳ ಇಲ್ಲಿಯವರೆಗೆ ಕೇವಲ 94 ಎಂ.ಎಂ ಮಳೆಯಾಗಿದೆ. 183 ಎಂ.ಎಂ normal rain fall. Deficit rain fall is 48%. 'Rabi' ಬೆಳೆಯಲ್ಲಿ 30 ಲಕ್ಷ 80 ಸಾವಿರ ಲಕ್ಷ ಹೆಕ್ಟೇರ್ ಬಿತ್ತನೆಯಾಗಬೇಕು. ಆದರೆ ಈ ವರ್ಷ ನವೆಂಬರ್ 30ನೇ ತಾರೀಖಿನವರೆಗೆ 23 ಲಕ್ಷ 74 ಸಾವಿರ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಗರಿಷ್ಠ 25 ಲಕ್ಷ ಬಿತ್ತನೆಯಾಗಿದೆ. 6.8 ಲಕ್ಷ ಹೆಕ್ಟೇರ್ ಬಿತ್ತನೆಯಾಗುವುದಕ್ಕೆ ಸಾಧ್ಯವಿಲ್ಲ. ಕೆಳಮನೆಯ ಗೌರವಾನ್ವಿತ ಶಾಸಕರು ಮತ್ತು

ಈ ಮನೆಯಲ್ಲಿಯೂ ಸಹ ಒಬ್ಬಿಬ್ಬರು ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಗಂಭೀರ ಪರಿಸ್ಥಿತಿ ಇದೆ ಅವುಗಳನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ Draught Manual ಪ್ರಕಾರ ಮಾಡಬೇಕು ಆದರೆ 'Rabi' failure ಯಿಂದ ಕೆಲವು ತಾಲ್ಲೂಕುಗಳನ್ನು draught declare ಮಾಡಬೇಕಾಗುತ್ತದೆ. ಇದೇ ತಿಂಗಳ 30ನೇ ತಾರೀಖಿನ ಒಳಗಾಗಿ ರಬಿ ಬೆಳೆ ಹಾನಿಯಾಗಿ ಯಾವ ತಾಲ್ಲೂಕಿನಲ್ಲಿ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿದೆ ಅದನ್ನು ನಾವು ಘೋಷಿಸುತ್ತೇವೆ ಎಂದು ಈ ಸದನಕ್ಕೆ ಭರವಸೆ ಕೊಡುತ್ತಿದ್ದೇನೆ. ಬರಪೀಡಿತ ತಾಲ್ಲೂಕುಗಳಿಗೆ 50 ಲಕ್ಷ ಮಂಜೂರು ಮಾಡಿರುವುದು ಕಡಿಮೆಯಾಗುತ್ತದೆ ಎಂದು ಇಲ್ಲಿಯ ಸದಸ್ಯರು ಕೆಲವು ಬೇಡಿಕೆ ಇಟ್ಟರು, ಕೆಳಮನೆಯಲ್ಲಿಯೂ ಇಟ್ಟರು. ಅದೇ ಪ್ರಕಾರ ಮೊನ್ನೆ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಇನ್ನೂ ಹೆಚ್ಚುವರಿಯಾಗಿ 50 ಲಕ್ಷ ರೂಪಾಯಿ ಪ್ರತಿ ಬರಪೀಡಿತ ತಾಲ್ಲೂಕಿಗೆ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಆದಷ್ಟು ಬೇಗನೆ ಹಣ ಮಂಜೂರು ಮಾಡಿ Task Force ಗೆ ಕೊಟ್ಟು ಅವರ ಮುಖಾಂತರ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತೇವೆ. ಕೆಲವು ಶಾಸಕರು ನಮ್ಮ ತಾಲ್ಲೂಕಿನಲ್ಲಿಯೂ ಕುಡಿಯುವ ನೀರಿನ ಅಭಾವವಿದೆ ಎಂದು ಹೇಳಿದಾಗ ಯಾವ ತಾಲ್ಲೂಕಿನಲ್ಲಿ ಬರ ಇಲ್ಲ ಅಲ್ಲಿಗೂ 25 ಲಕ್ಷ ರೂಪಾಯಿಯನ್ನು Task Force ಗೆ ಬಿಡುಗಡೆ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಅಷ್ಟೇ ಅಲ್ಲದೇ, ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದ ನಿರ್ದೇಶನ ಕೊಟ್ಟಿದ್ದೇವೆ. ಒಂದು ತಾಲ್ಲೂಕಿನಲ್ಲಿ ಬರ ಇರಲಿ ಇಲ್ಲದಿರಲಿ ಕುಡಿಯುವ ನೀರಿನ ವಿಚಾರದಲ್ಲಿ ಅಭಾವವಾಗಬಾರದು. ಎಸ್.ಡಿ.ಆರ್.ಎಫ್ ನಲ್ಲಿ ಹಣ ಬಿಡುಗಡೆಯಾಗಬೇಕು. ಬೋರ್‌ವೆಲ್ deepen ಮಾಡುವುದಕ್ಕೆ, ಪ್ರೈವೇಟ್ ಬೋರ್‌ವೆಲ್ಸ್ ಕಡೆಯಿಂದ ನೀರನ್ನು ಖರೀದಿ ಮಾಡುವುದಕ್ಕೆ, ಟ್ಯಾಂಕರ್‌ನಿಂದ ನೀರು ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಿದ್ದೇವೆ.

~~(ಮುಂದು . . .~~

Formatted: Font: Bold

**(587) 19-12-2018/06-40/ಕೆಹೆಚ್-ಆರ್‌ಎನ್**

~~(ಉಪಸಭಾಪತಿಯವರ ಉಪಸ್ಥಿತಿ)~~

**ಶ್ರೀ ಆರ್.ವಿ.ದೇಶಪಾಂಡೆ (ಮುಂದು):-** ಮೊನ್ನೆಯ ದಿವಸ ಮೇವಿನ ಕೊರತೆ ಆಗಬಾರದೆಂಬ ಕಾರಣಕ್ಕೆ 10 ಕೋಟಿ ರೂಪಾಯಿಗಳನ್ನು ಪಶುಸಂಗೋಪನೆಗೆ ಎಸ್.ಡಿ.ಆರ್.ಎಫ್., ಅಡಿಯಲ್ಲಿ ಮಂಜೂರು ಮಾಡಲಾಗಿದೆ. ಇದುವರೆಗೂ 25 ಕೋಟಿ ರೂಪಾಯಿಗಳನ್ನು ಕೊಟ್ಟಂತಾಗುತ್ತದೆ ಮತ್ತು ಬಹಳಷ್ಟು ಜನ ಮಾನ್ಯ ಸದಸ್ಯರು ಪಟ್ಟಣ ಪ್ರದೇಶದಲ್ಲೂ ಕೂಡ ಕುಡಿಯುವ ನೀರಿನ ಅಭಾವ ಇದೆ ಎಂಬ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಯಾವ ಯಾವ ಪಟ್ಟಣದಲ್ಲಿ ಮತ್ತು ವಾರ್ಡ್‌ನಲ್ಲಿ ಕುಡಿಯುವ ನೀರಿನ ಅಭಾವ ಇದೆ, ಅದರ ಬಗ್ಗೆ ತಿಳಿದುಕೊಂಡು ನಗರಾಭಿವೃದ್ಧಿ ಇಲಾಖೆಗೆ 50 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. 25 ಕೋಟಿ



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪಾಯಿಗಳಂತೆ ಎರಡು ಹಂತದಲ್ಲಿ ಹಣ ಬಿಡುಗಡೆಯಾಗುತ್ತದೆ. ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವವನ್ನು ದೂರ ಮಾಡುವುದಕ್ಕೆ ಸರ್ಕಾರದಿಂದ ಈ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈ ಬರಗಾಲವನ್ನು ಎದುರಿಸುವುದು ಕೇವಲ ಸರ್ಕಾರದ ಕೆಲಸವಲ್ಲ, ಇದಕ್ಕೆ ತಮ್ಮೆಲ್ಲರ ಸಹಕಾರ ಕೂಡ ಬೇಕಾಗುತ್ತದೆ. ಈ ಎಲ್ಲಾ ಕೆಲಸಗಳು ಪಕ್ಷಾತೀತವಾಗಿ ನಡೆಯಬೇಕು. ರೈತರು, ಬಡವರು, ಕೂಲಿ ಕಾರ್ಮಿಕರು . . .

**ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮನ್ನು ಸಹ Task Force ಕಮಿಟಿಗೆ ಹಾಕಬೇಕು. ಆ ಕಮಿಟಿಯಲ್ಲಿ ಎಂ.ಎಲ್.ಸಿ., ಗಳು ಯಾರು ಇಲ್ಲ.

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಾವೆಲ್ಲಾ ಮಾನ್ಯ ಸದಸ್ಯರು ಸಹಕಾರ ಕೊಟ್ಟರೆ ಆಗಬಹುದು ಎಂದು ಹೇಳಿದರು. ಆದರೆ Task Force ಕಮಿಟಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಯಾರು ಇಲ್ಲ. ಇದಕ್ಕೆ ಮಾನ್ಯ ಸದಸ್ಯರುಗಳೆಲ್ಲಾ ಹೇಗೆ ಸಹಕಾರ ಕೊಡುವುದಕ್ಕೆ ಸಾಧ್ಯ? ಆದ್ದರಿಂದ ಈ ಸದನದ ಮಾನ್ಯ ಸದಸ್ಯರುಗಳನ್ನು ಸಹ ಅದರಲ್ಲಿ ಸೇರಿಸುವಂತಹ ವ್ಯವಸ್ಥೆಯನ್ನು ಮಾನ್ಯ ಸಚಿವರು ಮಾಡಬೇಕು.

**ಶ್ರೀ ಆರ್.ವಿ.ದೇಶಪಾಂಡೆ (ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾನು examine ಮಾಡುತ್ತೇನೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ. ಹಾಗಾಗಿ ಇವತ್ತಿನ ದಿವಸ ಸರ್ಕಾರ ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿದೆ. ಇದರ ಬಗ್ಗೆ ಒಂದು ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಭೀಕರವಾದ ಬರಗಾಲ ಇದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಒಂದು ಕಡೆ ಕೊಡಗು ಮತ್ತು ಇನ್ನು 8 ಜಿಲ್ಲೆಗಳಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಸಾಕಷ್ಟು ಸಮಸ್ಯೆಗಳು ನಿರ್ಮಾಣವಾಗಿವೆ. ಹಾಗಾಗಿ ಇದರ ಬಗ್ಗೆ ನಾವು ಸಹ ನಿರ್ಣಯ ಮಾಡಿದ್ದೇವೆ. ಕುಡಿಯುವ ನೀರಿನ ವಿಚಾರದಲ್ಲಿ ಜನರಿಗಾಗಲೀ, ದನಕರುಗಳಿಗಾಗಲೀ ಕುಡಿಯುವ ನೀರಿನ ಅಭಾವ ಆಗಬಾರದು. ಅದಕ್ಕೆ ಎಷ್ಟು ಹಣದ ಅವಶ್ಯಕತೆ ಇದೆಯೋ, ಅಷ್ಟು ಹಣವನ್ನು ಮಂಜೂರು ಮಾಡುತ್ತೇವೆ. ಇದ್ದರಿಂದ ಯಾರು ಗುಳೆ ಹೋಗಬಾರದು. ಅದಕ್ಕೂ ಸಹ ಆರ್.ಡಿ.ಪಿ.ಆರ್., ಇಲಾಖೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ಯಾರಿಗೆ ಕೆಲಸ ಬೇಕೋ, ಅವರಿಗೆ ಕೆಲಸ ಸಿಗಬೇಕು. ಆ ದಿಕ್ಕಿನಲ್ಲೂ ಸಹ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಮತ್ತು ದನಕರುಗಳಿಗೆ ಮೇವಿನ ಕೊರತೆಯಾಗಬಾರದು. ಹಾಗಾಗಿ 25 ಕೋಟಿ ರೂಪಾಯಿಗಳನ್ನು ಪಶುಸಂಗೋಪನೆ ಇಲಾಖೆಗೆ ಮಂಜೂರು ಮಾಡಿ, ಅವರು ಸಹ ಕ್ರಮ ತೆಗೆದುಕೊಂಡಿದ್ದಾರೆ. ಬಳ್ಳಾರಿ ಮತ್ತು ಯಾದಗಿರಿಯಲ್ಲಿ irrigation potential ಇದೆ. ಅಲ್ಲಿ ಸಹ ಈ ಭತ್ತದ ಬೆಳೆ ಬಂದಾಗ ಮೇವನ್ನು ಶೀಘ್ರವಾಗಿ ರೈತರಿಗೆ ಕೊಡುತ್ತಾರೆ. ಅದನ್ನು ತೆಗೆದುಕೊಂಡು bailing ಮಾಡಿ, fodder banks

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೂ ಆದೇಶವನ್ನು ಕೊಟ್ಟಿದ್ದೇವೆ. ಹಾಗಾಗಿ, ಕುಡಿಯುವ ನೀರು, ಮೇವು ಮತ್ತು ಉದ್ಯೋಗ ಸೃಷ್ಟಿ ಈ ಮೂರು ವಿಚಾರದಲ್ಲಿ ಸರ್ಕಾರ ಯುಧ್ಧೋಪಾದಿಯಲ್ಲಿ ಕೆಲಸ ಮಾಡುತ್ತಿದೆ. ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಇನ್ನು ಮುಂದೆಯೂ ಸಹ ತಮ್ಮೆಲ್ಲರ ಸಲಹೆಗಳೇನಾದರೂ ಇದ್ದರೆ ಸಲಹೆಗಳನ್ನು ಕೊಡಬೇಕೆಂದು ಮನವಿ ಮಾಡುತ್ತಾ, ಇವತ್ತಿನ ದಿವಸ ಒಂದು ಮಾತನ್ನು ಹೇಳುತ್ತೇನೆ. ಈಗ ನಾನು ಹೇಳಿದ್ದೇನೆ, ಅದು ನಮ್ಮ ದೃಷ್ಟಿಯಿಂದ ಮತ್ತು ನಿಮ್ಮ ದೃಷ್ಟಿಯಿಂದ temporary measures. ಏನೋ ಒಂದು situation arise ಆಗಿದೆ. ಅದರ ಬಗ್ಗೆ ನಾವು alert ಆಗಿದ್ದೇವೆ. ಹಾಗಾಗಿ, ಇದರಿಂದ ರಾಜ್ಯದ economy ಮೇಲೆ ಪರಿಣಾಮವಾಗುತ್ತದೆ. ಕಳೆದ ಬಾರಿ GSDP ಶೇಕಡಾ 8.5 ರಷ್ಟು ಇದೆ. ಈ ಬರಗಾಲದಿಂದ GSDP ಯ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಆಗುವಂತಹ ಸಂಭವ ಇದೆ. ಹಾಗಾಗಿ ಇದರ ಬಗ್ಗೆ ನಾವು ದೂರದೃಷ್ಟಿಯನ್ನಿಟ್ಟುಕೊಂಡು possible measures ಅನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಆ ದಿಕ್ಕಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಇದರ ಬಗ್ಗೆ ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ, ಇದು ಏಕೆ ಈ ರೀತಿಯಾಗುತ್ತಿದೆ ಎಂಬ ಬಗ್ಗೆ ಚಿಂತನೆ ಮತ್ತು ಸಂಶೋಧನೆಯನ್ನು ಮಾಡಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲೂ ಸಹ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ಕೆಳಮನೆಯಲ್ಲಿ ಮಾತನಾಡುವಾಗ ಸಭಾಧ್ಯಕ್ಷರೂ ಸಹ ಸಲಹೆಯನ್ನು ಕೊಟ್ಟಿದ್ದಾರೆ. ತಾವು ಏನು ಸೂಚನೆಯನ್ನು ಕೊಟ್ಟಿದ್ದೀರಿ, ಅದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮತ್ತು ತಮ್ಮೆಲ್ಲರ ಸಹಕಾರದಿಂದ ಸರ್ಕಾರ ಈ ಭೀಕರವಾದ ಬರಗಾಲವನ್ನು ಎದುರಿಸುತ್ತದೆ ಎಂದು ಹೇಳಿ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕೆ ಸಮಯವನ್ನು ಕೊಟ್ಟಿರುವುದಕ್ಕಾಗಿ ನಾನು ತಮಗೆ ಅಭಾರಿಯಾಗಿದ್ದೇನೆ. ಮಾನ್ಯ ಹಿರಿಯ ಸಚಿವರು ಸವಿಸ್ತಾರವಾಗಿ ಬರಗಾಲದ ಬಗ್ಗೆ ಟೀಕೆಗಳನ್ನು ಮಾಡಿದ್ದಾರೆ. ಇದು crisis, ಈ ಸಮಸ್ಯೆಯನ್ನು ನಾವು ಪಕ್ಷಾತೀತವಾಗಿ ಎದುರಿಸಬೇಕಾಗುತ್ತದೆ. ನಮ್ಮ ಸದನದಲ್ಲಿ ವಿಧಾನ ಪರಿಷತ್ತು ಮೇಲ್ಮನೆಯಾಗಿರುವುದರಿಂದ, ತಾಲ್ಲೂಕು ಮಟ್ಟದಲ್ಲಿ ಎಂ.ಎಲ್.ಎ., ಗಳು Task Force ಕಮಿಟಿಯ ಅಧ್ಯಕ್ಷರಾಗುತ್ತಾರೆ. ಇದರಲ್ಲಿ ನಮ್ಮ ಪಾತ್ರ ಇರುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದರು. ನಾವು ಕೂಡ ಬೇರೆ ಬೇರೆ ಕ್ಷೇತ್ರಗಳಿಂದ ವಿವಿಧ ರೂಪದಲ್ಲಿ ಆಯ್ಕೆಯಾಗಿ ಈ ಸದನಕ್ಕೆ ಬಂದಿದ್ದೇವೆ. ನಾವು 25 ಜನರು ಗ್ರಾಮೀಣ ಪ್ರದೇಶದಿಂದ ಆಯ್ಕೆಯಾಗಿ ಬಂದವರು. ನಮ್ಮ ಎಂ.ಎಲ್.ಸಿ., ಗಳನ್ನು ಸಹ ಅಧ್ಯಕ್ಷರಾಗಿ ನಾಮಕರಣ ಮಾಡಿದರೆ ಮಾತ್ರ ನಮಗೆ equal right ಇರುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಂದರೆ ಎಂ.ಎಲ್.ಸಿ. ಒಬ್ಬರನ್ನು Co-Chairman of Task Force Committee ಎಂದು ನೇಮಕ ಮಾಡಿದರೆ ಬಹಳ ಸೂಕ್ತವಾಗುತ್ತದೆ. ಆದ್ದರಿಂದ ಸರ್ಕಾರ ಇದನ್ನು ತಕ್ಷಣ ಜಾರಿಗೆ ತರಬೇಕು. ಇಲ್ಲದಿದ್ದರೆ ನಾವು ಹೋಗಿ ಮಾನ್ಯ ಸದಸ್ಯರುಗಳು ಎಂದರೆ, ಅವರಿಗೆ ಬೇಕಾಗಿರುವ ಎಂ.ಎಲ್.ಎ., ಗಳು ಯಾವುದೇ ಪಕ್ಷದವರಾಗಿರಲಿ, ನಮ್ಮ proposals ಅನ್ನು ಕೊಡಬೇಕು. ನಾವು ಒಂದು ಹಳ್ಳಿಗೆ ಹೋದಾಗ ಈ ಬರಗಾಲದ ದುಸ್ಥಿತಿ ಯಾವ ರೀತಿಯಲ್ಲಿ ಇದೆ ಎಂದರೆ; ಮಾನ್ಯ ವಿರೋಧ ಪಕ್ಷದ ನಾಯಕರುಗಳೆಲ್ಲಾ ಈ ಕಡೂರು ಕಡೆ ಪ್ರವಾಸ ಮಾಡಿ, ಈ ರೀತಿಯ ಬರಗಾಲದ ಪರಿಸ್ಥಿತಿ ಇದೆ ಎಂದು ಹೇಳಿದರು. ಅದಕ್ಕೆ ಒಂದು ಕಾಳಜಿ ಇರುತ್ತದೆ. ಆದ್ದರಿಂದ ಮಾನ್ಯ ಸಚಿವರು ತಕ್ಷಣ Task Force Committee ಗೆ ಈ ವಿಧಾನ ಪರಿಷತ್ತಿನ ಸದಸ್ಯರನ್ನು Co-Chairman ಎಂಬುದಾಗಿ ನೇಮಕ ಮಾಡುವುದಕ್ಕೆ ಒಂದು ಆದೇಶವನ್ನು ಮಾಡಿ ಎಂದು ನಾನು ಕೇಳಬಯಸುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮೆಲ್ಲರ ಬೆಂಬಲ ಇದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿರಿಯ ಸಚಿವರಾದ ಸನ್ಮಾನ್ಯ ಆರ್.ವಿ.ದೇಶಪಾಂಡೆಯವರು ಬಹಳ ವಿವರವಾಗಿ ಬರದ ಚರ್ಚೆಯ ಮೇಲೆ ಅತ್ಯಂತ ವಿವರವಾದ ಮತ್ತು ಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿದ್ದಾರೆ ಮತ್ತು ಬೆಳಗಾವಿಗೆ ಬಂದು ಕೆಲವೊಂದು ವಿಚಾರಗಳ ಬಗ್ಗೆ ಪ್ರಥಮ ಬಾರಿಗೆ ಸಭೆಯನ್ನು ಸಹ ಮಾಡಿದ್ದರು. ನಾನು ಸಹ ಬರದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಕಡೆಗೆ ಅವರು conclude ಮಾಡುವಾಗ ಒಂದು ಮಾತನ್ನು ಹೇಳಿದರು. ಬರ ಎನ್ನುವಂತಹದ್ದು ಬಂದಂತಹ ಸಂದರ್ಭದಲ್ಲಿ ಅದು ಇಡೀ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ತನ್ನ ಪರಿಣಾಮ ಬೀರುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ.

ನಾನು ಬರದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಟ್ಟಿದ್ದೆ. ಇವತ್ತಿನ ದಿವಸ crop insurance issue, ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಏನಿದೆ, ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಸಹಯೋಗದಲ್ಲಿರುವಂತಹ, it is a programme between the State and Central Government. ಶೇಕಡಾ 40 ರಷ್ಟು ಕೇಂದ್ರ ಸರ್ಕಾರ ಮತ್ತು ಶೇಕಡಾ 40 ರಷ್ಟು ರಾಜ್ಯ ಸರ್ಕಾರ ಹಾಗೂ ಇದರಲ್ಲಿ ಸಹಭಾಗಿಗಳಾಗುವಂತಹ ರೈತ, ಈ ಮೂರು ಜನರು ಕೂಡಿಕೊಂಡು ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಜಾರಿಯಾಗಿದೆ. ಅನೇಕ ಸಂದರ್ಭಗಳಲ್ಲಿ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಎಂದು ಏಕೆ ಕರೆಯಬೇಕು? ರಾಜ್ಯ ಸರ್ಕಾರವು ಕೂಡ ಶೇಕಡಾ 40 ರಷ್ಟು ಕೊಡುತ್ತದೆ

ಎಂಬ ಬಗ್ಗೆ ಹಿಂದೆಯೂ ಸಹ ಚರ್ಚೆಯಾಗಿದೆ. ಅದರ ಬಗ್ಗೆ ನನ್ನ ವಿರೋಧ ಇಲ್ಲ. It is a programme between the State Government, Government of India and the farmer. ಆದರೆ ನಾವು ಈ ಯೋಜನೆಯನ್ನು ಜಾರಿಗೊಳಿಸುವುದರಲ್ಲಿ ವಿಫಲರಾಗುತ್ತಿದ್ದೇವೆ. ಇವತ್ತಿನ ದಿವಸ ಆ ಯೋಜನೆಯನ್ನು ಜಾರಿಗೆ ತರುವಂತಹ long run ರೀತಿಯಲ್ಲಿ ಈ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಮಾಡುವಂತಹ ಸಂದರ್ಭದಲ್ಲಿ ಇನ್ಸೂರೆನ್ಸ್ ಕಂಪನಿಗಳನ್ನು appoint ಮಾಡ್ಡುವಂತಹ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಇಂತಹ ಸಂದರ್ಭದಲ್ಲಿ ಒಳ್ಳೆಯ ಕಂಪನಿಗಳನ್ನು ಆಯ್ಕೆ ಮಾಡುವಂತಹ ಜವಾಬ್ದಾರಿಯು ಸಹ ಸರ್ಕಾರದ ಮೇಲಿರುವುದರಿಂದ, ರೈತರಿಗೆ ಸರಿಯಾದ ಸಮಯದಲ್ಲಿ ಯಾರು ಸ್ಪಂದನೆ ಮಾಡುತ್ತಾರೆ? ದಯವಿಟ್ಟು, ಅಂತಹ ಕಂಪನಿಗಳನ್ನು ಆಯ್ಕೆ ಮಾಡಿದರೆ, it is the most important and successful programme ಆಗುತ್ತದೆ. ನಾವು ಅದನ್ನು ಒಳ್ಳೆಯ ರೀತಿಯಿಂದ implement ಮಾಡಬೇಕು ಮತ್ತು ರೈತರಿಗೆ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಎಂದರೆ ಏನು? ನಾವು ದುಡ್ಡನ್ನು ತುಂಬಿದರೆ, ನಮಗೆ ನೇರವಾಗಿ ಹಣ ಬರುತ್ತದೆ ಎನ್ನುವಂತಹ ಭಾವನೆ ಬೇಡ. ಬೆಳೆ ನಾಶವಾದರೆ ಹಣ ಬರುತ್ತದೆ. ಹಣ ಎಷ್ಟು ಪಟ್ಟು ಬರುತ್ತದೆ? ಇದರ ಬಗ್ಗೆ ಮನವರಿಕೆ ಮಾಡಿ ಕೊಟ್ಟು, ನಾವು ಸಹಭಾಗಿತ್ವದಲ್ಲಿ ಅವರನ್ನು ಕೂಡಿಕೊಳ್ಳುವುದಕ್ಕೆ ಮತ್ತು ಭಾಗವಹಿಸುವುದಕ್ಕೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಅದಕ್ಕೆ ಹೆಚ್ಚು ಪ್ರಚಾರವನ್ನು ಕೊಡಬೇಕು. ಅದರಿಂದ ರೈತರಿಗೆ ಒಳ್ಳೆಯ ಲಾಭ ಆಗುತ್ತದೆ. ನಾವು ಕೇವಲ ಅದನ್ನು ಒಂದು source ಎಂದಲ್ಲ. ಇದು ನಿರಂತರವಾಗಿ ನಡೆಯುತ್ತಿರುವಂಥದ್ದು, ಪ್ರತಿ ಬಾರಿ ಬರಗಾಲ ಬಂದಾಗ ಸರ್ಕಾರ ಒಂದು ಹಂತಕ್ಕೆ ಸಹಾಯ ಮಾಡಬಹುದು. ಆದರೆ ಇನ್ಸೂರೆನ್ಸ್‌ನ್ನು ಸರಿಯಾದ ದೃಷ್ಟಿಯಿಂದ ಉಪಯೋಗ ಮಾಡಿಕೊಂಡರೆ ರೈತರಿಗೆ ಬಹಳ ದೊಡ್ಡ ಉಪಯೋಗವಾಗುತ್ತದೆ. ಪ್ರತಿ ವರ್ಷವೂ ಸಹ ಬೆಳೆ ನಾಶವಾಗಿದೆ ಎಂದು ಸಾಲ ಮನ್ನಾವನ್ನೇ ಆಧಾರವಾಗಿಟ್ಟುಕೊಂಡು ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. Crop Insurance ಇದು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು ರಾಜ್ಯ ಸರ್ಕಾರದ ಸಹಯೋಗದಲ್ಲಿ ಯಶಸ್ವಿಯಾಗಿ ಅಳವಡಿಸುವುದಕ್ಕೆ ಮತ್ತು ಇದರ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಟ್ಟು, ಇದರಲ್ಲಿ ಅವರು ಸಂಪೂರ್ಣವಾಗಿ ಭಾಗವಹಿಸುವಲ್ಲಿ ರಾಜ್ಯ ಸರ್ಕಾರ ಮುತುವರ್ಜಿಯನ್ನು ವಹಿಸಬೇಕೆಂಬ ವಿನಂತಿಯನ್ನು ತಮ್ಮ ಮುಖಾಂತರ ಮಾನ್ಯ ಕಂದಾಯ ಸಚಿವರಲ್ಲಿ ಮಾಡ ಬಯಸುತ್ತಿದ್ದೇನೆ.

_(ಮುಂದು)

**(588) 19–12–2018 (6–50) ಎಸ್‌ಪಿಆರ್–ವಿಕೆ**



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

~~(ಉಪಸಭಾಪತಿಯವರ ಉಪಸ್ಥಿತಿ)~~

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಾಯಶಃ ಕಡೂರು ತಾಲ್ಲೂಕಿನಲ್ಲಿ ಭೀಕರವಾದ ಬರಗಾಲವಿದೆ. ಇದು ಮಾನ್ಯ ಉಪಸಭಾಪತಿಗಳಿಗೂ ಸಹ ತಿಳಿದ ವಿಚಾರವಾಗಿದೆ. ಈ ತಾಲ್ಲೂಕಿಗೆ task force ನಡಿ ಈಗಾಗಲೇ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಇನ್ನೂ 50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವುದಾಗಿ ಹೇಳಿದ್ದಾರೆ. ಇದು ಸಂತೋಷದ ವಿಚಾರವಾಗಿದ್ದು, ಇದನ್ನು ನಾನು ಸ್ವಾಗತಿಸುತ್ತೇನೆ. ಕಳೆದ ವರ್ಷ ಕಡೂರು, ಚಿಕ್ಕಮಗಳೂರು ಮತ್ತು ತರಿಕೇರೆ ವ್ಯಾಪ್ತಿ ಪ್ರದೇಶಗಳಲ್ಲಿ ಟ್ಯಾಂಕರ್ ಮುಖೇನ ಸರ್ಕಾರ ನೀರನ್ನು ಸರಬರಾಜು ಮಾಡಿದೆ. ಆದರೆ ಅಲ್ಲಿ ಟ್ಯಾಂಕರ್ ಮುಖಾಂತರ ಸರಬರಾಜು ಮಾಡಿರುವ ನೀರಿಗೆ ಪಾವತಿಸಬೇಕಾದ ಬಾಕಿ ಮೊತ್ತವು ನಾಲ್ಕೂವರೆ ಕೋಟಿ ರೂಪಾಯಿಗಳಷ್ಟಿದೆ. ಆದರೆ ಇಲ್ಲಿಯವರೆಗೆ ಸದರಿ ಮೊತ್ತವನ್ನು ಪಾವತಿಸುವ ವ್ಯವಸ್ಥೆಗಳಾಗಿಲ್ಲ. ಟ್ಯಾಂಕರ್ ಮೂಲಕ ಸರಬರಾಜು ಮಾಡಿರುವ ನೀರಿನ ಅಷ್ಟು ಮೊತ್ತವು ಪಾವತಿಸುವುದಕ್ಕೆ ಬಾಕಿಯಿರುವ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಸರಬರಾಜನ್ನು ಯಾವ ರೀತಿಯಾಗಿ ಮಾಡಬಹುದು. ಈ ಅಂಶದ ಕಡೆಗೆ ಮಾನ್ಯ ಕಂದಾಯ ಮಂತ್ರಿಗಳು ಯೋಚನೆ ಮಾಡಬೇಕು. ಚಿಕ್ಕಮಗಳೂರಿನ ಲಕ್ಯ ಮತ್ತು ಆಂಬ್ಲೆ ಗ್ರಾಮಗಳಲ್ಲಿಯೂ ಸಹ ಭೀಕರವಾದ ಬರಗಾಲ ಆವರಿಸಿದೆ. ಆದರೆ ಅವುಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿಲ್ಲ. ಇದಕ್ಕೆ ಕಾರಣವೇನು? ಬರಗಾಲ ಪ್ರದೇಶಗಳ ಸಮೀಕ್ಷೆಯಲ್ಲಿ ಸದರಿ ಗ್ರಾಮಗಳು ಒಳಪಡಲಿಲ್ಲವೇ? ಅಲ್ಲಿನ ಜನಗಳಿಗೆ, ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗಳಿಲ್ಲ. ನೀರಿನ ಅಭಾವ ವಿಪರೀತವಾಗಿದೆ. ಬರಗಾಲದಿಂದಾಗಿ ತುಂಬಾ ಬೆಳೆಗಳು ನಾಶವಾಗಿವೆ. ಆದರೆ ಇಲ್ಲಿಯವರೆಗೆ ಅದಕ್ಕೆ ಪರಿಹಾರವನ್ನು ಘೋಷಿಸಿಲ್ಲ. ಶೀಘ್ರದಲ್ಲೇ ವರದಿಯನ್ನು ಪಡೆದುಕೊಂಡು ಪರಿಹಾರವನ್ನು ಘೋಷಿಸಬೇಕು. ಅಲ್ಲಿನ ಕೆರೆಗಳನ್ನು ತುಂಬಿಸಿದರೆ, ನೀರಿನ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂದು ನಾವೆಲ್ಲರೂ ಒತ್ತಾಯಿಸಿದ್ದೇವೆ. ಈ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಳ್ಳಬೇಕು. ಶಾಶ್ವತ ಕುಡಿಯುವ ನೀರಿನ ಯೋಜನೆಯ ಅವಶ್ಯಕತೆ ಇದೆ. ತಾತ್ಕಾಲಿಕವಾಗಿ ಟ್ಯಾಂಕರ್ ಮುಖಾಂತರ ಕುಡಿಯುವ ನೀರನ್ನು ಒದಗಿಸಿದ್ದಕ್ಕೆ ನಾಲ್ಕೂವರೆ ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗಿದೆ. ಇದನ್ನು ಪಾವತಿಸಿಲ್ಲ. ಇಂತಿಷ್ಟೇ ಮೊತ್ತವನ್ನು ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಖರ್ಚು ಮಾಡಿದರೆ ಪ್ರಾಯಶಃ ಇಂತಹ ಸಮಸ್ಯೆಗಳು ಎದುರಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ. ಇದನ್ನು ಮಾನ್ಯ ಕಂದಾಯ ಮಂತ್ರಿಗಳು ಗಂಭೀರವಾಗಿ ಪರಿಗಣಿಸಬೇಕು. ಮಲೆನಾಡು ಭಾಗಗಳಲ್ಲಿ ಅತಿವೃಷ್ಟಿ ಸಂಭವಿಸಿದೆ. ಚಿಕ್ಕಮಗಳೂರಿನ ಮೂಡಿಗೆರೆ ಹಾಗೂ ಶೃಂಗೇರಿ ತಾಲ್ಲೂಕುಗಳಲ್ಲಿಯೂ ಸಹ ಅತಿವೃಷ್ಟಿ ಸಂಭವಿಸಿದೆ. ಅಲ್ಲಿನ ಕಾಫಿ, ಅಡಿಕೆ, ಮೆಣಸು, ಏಲಕ್ಕಿಯಂತಹ ಎಲ್ಲಾ ಬೆಳೆಗಳು ನಾಶವಾಗಿವೆ. ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರುಗಳೆಲ್ಲರೂ ಉಲ್ಲೇಖಿಸಿದ್ದಾರೆ. ಇವುಗಳೆಲ್ಲರ ನಡುವೆ ಕಾಡು ಪ್ರಾಣಿಗಳ ಹಾವಳಿಯಿಂದಾಗಿಯೂ ಸಹ ಬೆಳೆಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಶವಾಗುತ್ತಿವೆ. ಈ ಬಗ್ಗೆ ನಾನು ಈ ದಿನ ಬೆಳಿಗ್ಗೆ ಪ್ರಸ್ತಾಪಿಸಿದ್ದೇನೆ. ಇರುವ ಅಲ್ಪಸ್ವಲ್ಪ ಬೆಳೆಗಳು ನಾಶವಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಅದನ್ನು ಕೈಚೆಲ್ಲುವ ಸ್ಥಿತಿಯಲ್ಲಿ ಇವತ್ತಿನ ದಿವಸ ರೈತ ಇಲ್ಲ. ಹೀಗಾಗಿ ಸರ್ಕಾರ ಮಲೆನಾಡಿನಲ್ಲಿ ಅತಿವೃಷ್ಟಿಯಿಂದಾಗಿ ಆದ ಬೆಳೆ ಹಾನಿಗೆ ಹೆಚ್ಚು ಪರಿಹಾರವನ್ನು ಕೊಡಬೇಕು. ಮಲೆನಾಡು ಎರಡು ರೀತಿಯ ಹೊಡೆತಗಳಿಗೆ ತುತ್ತಾಗಿದೆ. ಚಿಕ್ಕಮಗಳೂರು ಜಿಲ್ಲೆಗೆ ಅತಿವೃಷ್ಟಿ ಹಾಗೂ ಅನಾವೃಷ್ಟಿಯ ಪರಿಹಾರಕ್ಕಾಗಿ 26 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಾಗಿ ಸರ್ಕಾರ ಹೇಳಿದೆ. ಸದರಿ ಮೊತ್ತವು ಎಲ್ಲೆಲ್ಲೆ ವಿತರಣೆಯಾಗಿದೆ ಎಂಬುದರ ಬಗ್ಗೆ ನಮಗೆ ಮಾಹಿತಿ ಇಲ್ಲ. ಪರಿಹಾರ ಹಣ ಬಿಡುಗಡೆಯಾಗಿರುವುದನ್ನು ಪತ್ರಿಕೆಗಳಲ್ಲಿ ನೋಡಿದ್ದೇವೆ. ಅಲ್ಲಿನ ಜಿಲ್ಲಾಧಿಕಾರಿಯನ್ನು ಈ ಬಗ್ಗೆ ವಿಚಾರಿಸಿದಾಗ, ಸರ್ಕಾರದಿಂದ ಹಣ ಬರಬೇಕು ಎಂದು ಹೇಳುತ್ತಾರೆ. ತಹಸೀಲ್ದಾರ್‌ರವರನ್ನು ವಿಚಾರಿಸಿದರೆ, ಸರ್ಕಾರದಿಂದ ಹಣ ಇನ್ನೂ ಬಿಡುಗಡೆಗೊಂಡಿಲ್ಲ ಆದರೆ ಜಿಲ್ಲಾಧಿಕಾರಿಗಳಿಗೆ 26 ಕೋಟಿ ರೂಪಾಯಿಗಳಷ್ಟು ಹಣ ಬಂದಿದೆ ಎನ್ನುವ ಮಾಹಿತಿಯನ್ನು ನೀಡಿದ್ದರು. ಅತಿವೃಷ್ಟಿ ಹಾಗೂ ಅನಾವೃಷ್ಟಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ ಎನ್ನುವ ಮಾಹಿತಿಯನ್ನು ಮಾನ್ಯ ಮಂತ್ರಿಗಳು ನೀಡಬೇಕು. ಮಾನ್ಯ ಉಪಸಭಾಪತಿಗಳು ನಿನ್ನೆಯ ದಿವಸ ನಮಗಿರುವ ಬರಗಾಲ ಸಮಸ್ಯೆಯನ್ನು ಯಾವ ರೀತಿಯಾಗಿ ಹೋಗಲಾಡಿಸಬೇಕು, ಯಾವ ರೀತಿಯ ಪ್ರಯತ್ನಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಬಹಳ ಗಂಭೀರವಾಗಿ ಮಾತನಾಡಿದ್ದಾರೆ. ಹೀಗಾಗಿ ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಬಯಲು ಸೀಮೆ ಪ್ರದೇಶಗಳಿಗಿಂತ ಮಲೆನಾಡು ಪ್ರದೇಶಗಳಲ್ಲಿ ನೀಲಗಿರಿ ಮತ್ತು ಅಕೇಷಿಯಾ ಮರಗಳನ್ನು ನೆಡುವುದರ ಅವಶ್ಯಕತೆ ಏನು? ಸಾಮಾಜಿಕ ಅರಣ್ಯ ಎಂದು ಜನರಿಗೆ ಜಾಗಗಳನ್ನು ನೀಡಲಾಗುತ್ತಿದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಕಂದಾಯ ಮಂತ್ರಿಗಳು ಈಗಾಗಲೇ ಉತ್ತರವನ್ನು ನೀಡಿದ್ದಾರೆ. ಈಗ ಮಾನ್ಯ ಸದಸ್ಯರು ಹೀಗೆ ಮಾತನಾಡಿದರೆ ಹೇಗೆ? ಅವರ ಜಿಲ್ಲೆಗೆ ಏನೋ ಬೇಕೋ ಅದನ್ನು ಮಾತ್ರವೇ ಕೇಳಲಿ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಮಗಿರುವ ಸಮಸ್ಯೆಗಳಿಗೆ ಪರಿಹಾರ ಸಿಗುವುದು ಬೇಡವೇ?

**ಉಪಸಭಾಪತಿಯವರು:–** ಮಾನ್ಯ ಪ್ರಾಣೇಶ್‌ರವರೇ, ತಾವು ಬಹಳ ಗಂಭೀರವಾದ ವಿಷಯದ ಬಗ್ಗೆ ಮಾತನಾಡುತ್ತಿದ್ದೀರಿ. ಆದರೆ ಅದನ್ನು ಬೇಗ ಮುಗಿಸಿ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಹಾಲಿ ಇರುವ ನಮ್ಮ ಸಮಸ್ಯೆಗಳ ನಡುವೆ ಬರಗಾಲ ಪರಿಸ್ಥಿತಿಯನ್ನು ಹೋಗಲಾಡಿಸುವ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಈ ದೃಷ್ಟಿಯಿಂದ ವಾಸ್ತವಿಕವಾಗಿ ಇರುವ ವಿಚಾರಗಳನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಇಂತಹ ವಿಚಾರಗಳ ಬಗ್ಗೆ ಗಮನಹರಿಸಬೇಕೆಂದು ನಾನು ವಿನಂತಿಸುತ್ತೇನೆ.

**ಉಪಸಭಾಪತಿಯವರು:-** ಬರಗಾಲದ ಬಗ್ಗೆ ಬಹಳ ಸದಸ್ಯರು ಮಾತನಾಡುವವರಿದ್ದಾರೆ. ಆದ್ದರಿಂದ ಶ್ರೀಮತಿ ಜಯಮ್ಮನವರೇ, ತಾವು ದಯಮಾಡಿ ತಮ್ಮ ಮಾತನ್ನು ಆದಷ್ಟು ಬೇಗ ಮುಗಿಸಿ.

**ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಸದನದ ಪದ್ಧತಿ ಏನು? ಮಾನ್ಯ ಪ್ರಾಣೇಶ್‌ನವರು ಮಾತನಾಡಿದ್ದಾರೆ. ಇದೇ ವಿಚಾರವಾಗಿ ನಾನು ಉತ್ತರವನ್ನು ನೀಡಿದ್ದೇನೆ. ಹೀಗಾಗಿ ನೀವು ಕೇವಲ ಸ್ಪಷ್ಟಕರಣವನ್ನು ಮಾತ್ರವೇ ಕೇಳಬಹುದು.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ನಾಳೆಯ ದಿನ ಉತ್ತರವನ್ನು ಕೊಡುವುದಾಗಿ ಹೇಳಿದ್ದರು. ಆದರೆ ಅವರು ನಿಗದಿತ ಸಮಯಕ್ಕಿಂತ ಮೊದಲೇ ಉತ್ತರವನ್ನು ಕೊಟ್ಟಿದ್ದಾರೆ. ಹೀಗಾದರೆ, ನಾವು ನಮ್ಮ ಅಭಿಪ್ರಾಯಗಳನ್ನು ಮಂಡಿಸುವುದಕ್ಕೆ ಅವಕಾಶವಿಲ್ಲವೇ? ಮಾನ್ಯ ಮಂತ್ರಿಗಳು ಈ ಬಗ್ಗೆ ಯೋಚನೆಯನ್ನು ಮಾಡಬೇಕೆಂದು ನಾನು ವಿನಂತಿಸುತ್ತೇನೆ.

**ಉಪಸಭಾಪತಿಯವರು:-** ನೀವು ಹೇಳಿರುವ ಅಂಶಗಳನ್ನು ಮಾನ್ಯ ಮಂತ್ರಿಗಳು ಗಮನಿಸಿದ್ದಾರೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಈ ಬಗ್ಗೆ ಯೋಚನೆಯನ್ನು ಮಾಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀಮತಿ ಜಯಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿವಯರೇ, ಬರಗಾಲ, ಉತ್ತರ ಕರ್ನಾಟಕದ ವಿಚಾರಗಳು ಹಾಗೂ ಚಿತ್ರದುರ್ಗ ಜಿಲ್ಲೆ ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡಬೇಕೆಂದುಕೊಂಡಿದ್ದೆನು. ಆದರೆ ಮಾನ್ಯ ಕಂದಾಯ ಮಂತ್ರಿಗಳು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸಾಕಷ್ಟು ಮಳೆ-ಬೆಳೆಯಿಲ್ಲದೇ ಬರಗಾಲಕ್ಕೆ ತುತ್ತಾಗಿದೆ. ಇಲ್ಲಿ ಕುಡಿಯುವ ನೀರಿನ ಅಭಾವವಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಿಗೆ ಕೊಡುವಂತೆ ಇದಕ್ಕೂ ಸಹ ವಿಶೇಷ ಪ್ಯಾಕೇಜ್‌ನ ಘೋಷಣೆ ಮಾಡಬೇಕು. ಅತೀ ಶೀಘ್ರದಲ್ಲಿ ಅಲ್ಲಿನ ಕೆರೆಗಳಿಗೆ ನೀರು ತುಂಬಿಸಿದರೆ, ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ ಇದರಿಂದ ರೈತರು ಒಳ್ಳೆಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರ ದೊಡ್ಡ ಮನಸ್ಸು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಉಪಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ನೇರವಾಗಿ ವಿಷಯಕ್ಕೆ ಬನ್ನಿ.

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ವಿರೋಧ ಪಕ್ಷದ ಉಪನಾಯಕರಾಗಿದ್ದು, ಕೇವಲ ಕೋಲಾರ ಜಿಲ್ಲೆಗೆ ಸಿಮೀತವಾಗಿ ಮಾತನಾಡುವುದು ಬೇಡ. ಬರಗಾಲದ ಬಗ್ಗೆ ಒಟ್ಟಾರೆಯಾಗಿ ಚರ್ಚೆಯಾಗಿದೆ. ಮಾನ್ಯ ಕಂದಾಯ ಮಂತ್ರಿಗಳು ಈಗಾಗಲೇ ಉತ್ತರ ನೀಡಿದ್ದಾರೆ. ಹೀಗಾಗಿ ಮಾನ್ಯ ಸದಸ್ಯರು ಕೇವಲ ಸ್ಪಷ್ಟೀಕರಣವನ್ನು ಮಾತ್ರವೇ ಕೇಳಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡ ರವರು ನನ್ನ ಭಾಷಣವನ್ನು ಕೇಳಿಲ್ಲ. ಮಾನ್ಯ ಸಚಿವರು ನೀಡಿರುವ ಉತ್ತರವು ನನಗೆ ಸಮಾಧಾನ ನೀಡಿಲ್ಲ. ಇದಕ್ಕೆ ಕಾರಣವೇನೆಂದರೆ, ಬರಗಾಲ ನಿರ್ವಹಣೆಯಲ್ಲಿ ಕಂದಾಯ ಸಚಿವರೊಬ್ಬರೇ ಸಕ್ರಿಯವಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಅವರನ್ನು ಬಿಟ್ಟರೆ, ಬೇರೆ ಸಚಿವರ್ಯಾರೂ ಇದರ ಬಗ್ಗೆ ಗಮನ ಹರಿಸಿಲ್ಲವೆಂದು ನಾನು ನೇರವಾಗಿ ಆರೋಪವನ್ನು ಮಾಡುತ್ತೇನೆ. ಸರ್ಕಾರ ಬರಗಾಲ ಬಂದಾಗ ಮಾತ್ರವೇ ಅದರ ನಿರ್ವಹಣೆಗೆ ಹೆಚ್ಚು ಒತ್ತು ಕೊಡುತ್ತಿದೆ. ಬರಗಾಲ ಮುನ್ಸೂಚನೆಯ ಬಗ್ಗೆ ತಿಳಿದುಕೊಳ್ಳಬೇಕು. ಕಳೆದ 18 ವರ್ಷಗಳಲ್ಲಿ 14 ವರ್ಷ ಬರಗಾಲವಿದ್ದಂತಹ ಪರಿಸ್ಥಿತಿಯಲ್ಲಿ ಸರ್ಕಾರವು ಬೆಳೆದ ತಂತ್ರಜ್ಞಾನವನ್ನು, ತಂತ್ರಜ್ಞಾನ ಸಂಶೋಧನೆ ಮತ್ತು ಅಭಿವೃದ್ಧಿಯಾದ ಮೇಲೆ, ಮಾಹಿತಿ ತಂತ್ರಜ್ಞಾಲ ವಲಯ ಅಭಿವೃದ್ಧಿಯಾದ ಮೇಲೆ, ಇಸ್ರೋ, ನಾಸಾದಂತಹ ಅನೇಕ ಸಂಸ್ಥೆಗಳು ವ್ಯವಸ್ಥೆಗಳು ನಮ್ಮ ಕಣ್ಣು ಮುಂದಿರಬೇಕಾದರೆ, ಅವುಗಳನ್ನು ಬಳಸಿಕೊಂಡು ಬರಗಾಲದ ಮುನ್ಸೂಚನೆಯನ್ನು ಬಹಳ ಮುಂಚಿತವಾಗಿಯೇ ತಿಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ. ಇದನ್ನು ಖಂಡಿತವಾಗಿಯೂ ಸಹ ಮಾಡಬಹುದು. Indian Meteorological Department, norms ಪ್ರಕಾರ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಮರುದಿನದ ವಾತಾವರಣವನ್ನು ಮೊದಲೇ ತಿಳಿದುಕೊಳ್ಳಬಹುದು. ರಾಜ್ಯ ವ್ಯಾಪ್ತಿಯಲ್ಲಿ ಈ ವ್ಯವಸ್ಥೆಯ ಬಗ್ಗೆ ಸೆಲ್‌ವೊಂದನ್ನು ಮಾಡಬೇಕು. ಇದರ ಬಗ್ಗೆ ಆಯೋಗವೊಂದನ್ನು ರಚಿಸಬೇಕು. ನಿರಂತರವಾಗಿ ಒಂದು ವರ್ಷದಲ್ಲಿ 100-120 ತಾಲ್ಲೂಕುಗಳನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರಪೀಡಿತ ಎಂಬುದಾಗಿ ಘೋಷಿಸಲಾಗುತ್ತಿದೆ. Don't neglect this system. ಕರ್ನಾಟಕ ರಾಜ್ಯಕ್ಕೂ ಮತ್ತು ಬರಗಾಲ ಪರಿಸ್ಥಿತಿಗೂ ಬಹಳ ದೊಡ್ಡ ಸಂಬಂಧ ಮತ್ತು ನಂಟು ಇದೆ. ಈಗ ಬರಗಾಲದ ಪರಿಸ್ಥಿತಿ ಇದೆ, ಹೀಗಾಗಿ ಸರ್ಕಾರ ಪರಿಹಾರ ನೀಡಬೇಕೆಂದು ಕೇಳುತ್ತಿಲ್ಲ. ಹೀಗಾಗಿ ಸರ್ಕಾರ ಬರದ ಪರಿಸ್ಥಿತಿಯನ್ನು ಮೊದಲೇ ನಿರೀಕ್ಷೆ ಮಾಡಬೇಕು. ಬರಗಾಲದ ವಿಷಯವಾಗಿ ಜೂನ್ ತಿಂಗಳಿನಲ್ಲೇ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸರ್ಕಾರ ಬರ ಪ್ರದೇಶಗಳನ್ನು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಘೋಷಣೆ ಮಾಡಲಾಗಿದೆ. ಡಿಸೆಂಬರ್ ತಿಂಗಳಿನಲ್ಲಿ ಬರಕ್ಕೆ ಸಂಬಂಧಪಟ್ಟಂತೆ ಅಗತ್ಯ ಕ್ರಮಗಳನ್ನು ಸರ್ಕಾರವು ತೆಗೆದುಕೊಂಡಿದೆ. Your facts speak here. ಏಕೆಂದರೆ, you have stated that, till today, only 6 lakh applications have been completed. ಈ ತಿಂಗಳ ಕೊನೆಯಲ್ಲಿ ಅಥವಾ ಮುಂದಿನ ತಿಂಗಳ ಪ್ರಾರಂಭದಲ್ಲಿ ಒಂದು ಕೋಟಿ generate ಮಾಡುತ್ತೇವೆಂದು ಸರ್ಕಾರ ಹೇಳಿದೆ. ಅಂದರೆ ಈಗ ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದೆ. ಆದರೆ ಬರಗಾಲ ಪರಿಸ್ಥಿತಿಯು ಜೂನ್ ತಿಂಗಳಿನಲ್ಲಿಯೇ ಪ್ರಾರಂಭವಾಗಿದೆ. ಆದ್ದರಿಂದ ನಾನು ಮನವಿ ಮಾಡುವುದೇನೆಂದರೆ, ಸರ್ಕಾರವು ವೈಜ್ಞಾನಿಕವಾಗಿ ಬರದ ಮುನ್ಸೂಚನೆಯನ್ನು ಅರಿಯುವ ತಂತ್ರಾಂಶದ ಮೊರೆ ಹೋಗಬೇಕು. ಈ ಸಂಬಂಧ ಶಾಶ್ವತವಾಗಿ ಒಂದು ಆಯೋಗದ ರಚನೆ ಮಾಡಬೇಕೆಂದು ಆಗ್ರಹಿಸುತ್ತೇನೆ.

~~(ಮುಂದು)~~

**(589) 19–12–2018 7:00 ಸಿಎಸ್/ವಿಕೆ**

**ಶ್ರೀ ವೈ.ಎ.ನಾರಾಯಣ ಸ್ವಾಮಿ(ಮುಂದು):–**

ಮೂರನೆಯದಾಗಿ ಮಾನ್ಯ ಕಂದಾಯ ಸಚಿವರನ್ನು ಬಿಟ್ಟು, ಏಕೆಂದರೆ ಅವರು ಕೋಲಾರ, ಬೆಳಗಾವಿ ಮತ್ತಿತರ ಜಿಲ್ಲೆಗಳಲ್ಲಿ ಸಭೆ ನಡೆಸಿರುವುದನ್ನು ನಾನು ಕಂಡಿದ್ದೇನೆ. ಆದರೆ ಈ ಬರದ ಬಗ್ಗೆ ಎಷ್ಟು ಜನ ಜಿಲ್ಲಾ ಸಚಿವರು ಎಷ್ಟು ಸಭೆಗಳನ್ನು ನಡೆಸಿದ್ದಾರೆ? ಬರವನ್ನು ಏಕೆ ನಿರ್ಲಕ್ಷ್ಯ ಮಾಡುತ್ತೀರಿ? ಅಧಿಕಾರಿಗಳು ಬೆಂಗಳೂರಿನಲ್ಲಿ ಕುಳಿತು video conference ಮಾಡುವ ಬದಲು ಜಿಲ್ಲೆಗಳಿಗೆ ಹೋಗಿ ಸಮೀಕ್ಷೆ ನಡೆಸಲು ಏನು ತೊಂದರೆ? ಸರ್ಕಾರ ಅವರಿಗೆ ಸವಲತ್ತುಗಳನ್ನು ನೀಡಿಲ್ಲವೇ? ಎಷ್ಟು ಜನ ಜಿಲ್ಲಾ ಕಾರ್ಯದರ್ಶಿಗಳು Incharge Secretaryಗಳ ಜೊತೆಯಲ್ಲಿ ಬರದ ಬಗ್ಗೆ ಸಭೆಗಳನ್ನು ನಡೆಸಿದ್ದಾರೆ, ಜಿಲ್ಲಾಧಿಕಾರಿಗಳು ಎಷ್ಟು ತಾಲ್ಲೂಕುಗಳಲ್ಲಿ ಸಭೆಗಳನ್ನು ನಡೆಸಿದ್ದಾರೆ. — ಆ ತಾಲ್ಲೂಕಿನ ತಹಶೀಲ್ದಾರ್‌ರವರು ಎಷ್ಟು ಹೋಬಳಿಗಳಲ್ಲಿ ಮೀಟಿಂಗ್ ನಡೆಸಿದ್ದಾರೆ. ಈ ಬರದ ಬಗ್ಗೆ ಅವರ vision ಏನು ಎನ್ನುವುದನ್ನು ದಯಮಾಡಿ ಸಚಿವರು



Formatted: Font: Not Bold
Formatted: Font: Bold
" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಿಳಿಸಬೇಕು. ಸಚಿವರು ಬಹಳ ಅನುಭವಸ್ಥರು, ಅವರಿಗೆ ಕಾಳಜಿ, ಬದ್ಧತೆ ಇದೆ, ಅವರು ಹೇಳುತ್ತಿದ್ದರೂ ಸಹ ಸರ್ಕಾರದ ಇನ್ನಿತರ ಸಚಿವರು, ಸರ್ಕಾರದ ಅಧಿಕಾರಿಗಳು ಆ speedಗೆ phaseಗೆ set ಆಗುತ್ತಿಲ್ಲ ಎನ್ನುವ ಆರೋಪವನ್ನು ನೇರವಾಗಿ ಮಾಡಬಯಸುತ್ತೇನೆ.

ನಾಲ್ಕನೇಯದಾಗಿ NREGS (National Rural Employment Guarantee Scheme) ಮುಖಾಂತರ ಯೋಜನೆಗಳನ್ನು ಸರ್ಕಾರ ಕೈಗೊಳ್ಳಲಿದೆ. ದಯಮಾಡಿ ಸರ್ಕಾರ asset creationಗೆ ಹೆಚ್ಚಿನ ಒತ್ತು ಕೊಡಬೇಕೆಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ. ಬರ ಮತ್ತು ನೀರಿನ ವಿಚಾರಕ್ಕೆ ಬಂದರೆ ಎಲ್ಲಿ ನೀರಿನ ತೇವಾಂಶ ಕಡಿಮೆ ಇರುತ್ತದೆ ಅಲ್ಲಿ, ಹಾಗೆಯೇ ಎಲ್ಲಿ ಮಳೆಯ ಪ್ರಮಾಣ ಕಡಿಮೆ ಆಗುತ್ತದೋ ಅಲ್ಲಿ ಬರ ಬರುತ್ತದೆ. ಅಂತರ್ಜಲ ಎಲ್ಲಿ ಕಡಿಮೆ ಆಗುತ್ತದೋ ಅಲ್ಲಿ ಬರ ಬರುತ್ತದೆ. ಈ NREG ಯೋಜನೆಗಳಿಗಾಗಿ ಪಂಚಾಯಿತಿ ಮೂಲಕ ನೀಡುವ ಹಣದಲ್ಲಿ ವಿಶೇಷವಾಗಿ ಕೆರೆಗಳಲ್ಲಿನ ಹೂಳು ತೆಗೆಯುವುದಕ್ಕೆ, ಚೆಕ್‌ಡ್ಯಾಮ್‌ಗಳನ್ನು ಕಟ್ಟುವುದಕ್ಕೆ, water points create ಮಾಡುವುದಕ್ಕೆ ಮತ್ತು ಜಲ ಮೂಲಗಳ ಸಂಕ್ಷರಣೆಯನ್ನು ಮಾಡಲಿಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಬೇಕು. ಇವುಗಳಿಗೆ ಆದ್ಯತೆಯನ್ನು ನೀಡಿ NREG ಮುಖಾಂತರ ಗುಳೆ ಹೋಗುವುದನ್ನು ತಡೆದು, ಜನರನ್ನು ಊರಿನಲ್ಲಿಯೇ ಇಟ್ಟುಕೊಳ್ಳಬೇಕೆಂದು ಹಾಗೂ ಅವರಿಗೆ ಸಂಭಾವನೆಯನ್ನು ಕೊಡಬೇಕು, ಅದರ ಮೂಲಕ ಹಣವನ್ನು ಖರ್ಚು ಮಾಡಿ, ಖರ್ಚು ಮಾಡಿದ ELC ಮುಖಾಂತರ ಬಿಡುಗಡೆ ಮಾಡಿಸಬೇಕೆನ್ನುವುದು ಬಹಳ ದೊಡ್ಡ ಮಾರಕವಾದ ವ್ಯವಸ್ಥೆ.

ಕೊನೆಯದಾಗಿ ಹೇಳುವುದೇನೆಂದರೆ, ಉತ್ತರ ಕರ್ನಾಟಕದಲ್ಲಿ 46 ತಾಲ್ಲೂಕುಗಳಲ್ಲಿ ಬರವಿದೆ. Subject to correction. ಈಗ ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಯುತ್ತಿದೆ. ಇಲ್ಲಿನ ಜನರು ಊಟ ಮತ್ತು ಕೂಲಿಯನ್ನು ಅರಸಿಕೊಂಡು ಮನೆ ಮಕ್ಕಳನ್ನು ಕಟ್ಟಿಕೊಂಡು ಟಂಟಂ ವಾಹನಗಳಲ್ಲಿ ಆಂಧ್ರಪ್ರದೇಶಕ್ಕೆ, ಗೋವಾ ರಾಜ್ಯಕ್ಕೆ ಮತ್ತು ಮಹಾರಾಷ್ಟ್ರ ರಾಜ್ಯಕ್ಕೆ ಗುಳೆ ಹೋಗುತ್ತಿದ್ದಾರೆ. ಇದು ನಮ್ಮ ರಾಜ್ಯಕ್ಕೆ ಅವಮಾನವಲ್ಲವೇ? ಹಾಗಾಗಿ ಈ ರಾಜ್ಯದಲ್ಲಿ ಒಬ್ಬರನ್ನು ಸಹ ಬೇರೆ ರಾಜ್ಯಕ್ಕೆ ಗುಳೆ ಹೋಗುವುದಕ್ಕೆ ಬಿಡುವುದಿಲ್ಲ ಎನ್ನುವ ಘೋಷಣೆಯನ್ನು ಮಾಡಬೇಕು, ಆ ಜನರನ್ನು ಇಲ್ಲಿಯೇ ಇಟ್ಟುಕೊಂಡು ಅವರಿಗೆ ಕೆಲಸ ಕೊಟ್ಟು, ಅವರ ಜೀವನ ನಿರ್ವಹಣೆ ಎಲ್ಲಾ ವ್ಯವಸ್ಥೆಗಳನ್ನು ಮಾಡುತ್ತೇವೆ ಎನ್ನುವ ಘೋಷಣೆಯನ್ನು ಕಂದಾಯ ಸಚಿವರು ಮಾಡಬೇಕು

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಬರದ ಬಗ್ಗೆ ಚರ್ಚೆ ಮಾಡಲು ಅವಕಾಶ ನೀಡಿದ ತಮ್ಮನ್ನು ವಂದಿಸುತ್ತಾ, ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ 7 ತಾಲ್ಲೂಕುಗಳಿವೆ, ಅದರಲ್ಲಿ 6 ತಾಲ್ಲೂಕುಗಳನ್ನು ಬರ ಪೀಡಿತವೆಂದು ಘೋಷಣೆಯನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದಾರೆ. ಈ 6 ತಾಲ್ಲೂಕಿಗಿಂತ ಕೆ.ಆರ್.ಪೇಟೆ ಹೆಚ್ಚು ಬರಪೀಡಿತ ತಾಲ್ಲೂಕು, Drought Management Manual ನಲ್ಲಿ ಕೇಂದ್ರ ಸರ್ಕಾರ ಯಾವ ಆಧಾರದ ಮೇಲೆ ಬರ ಪ್ರದೇಶವೆಂದು ಘೋಷಣೆ ಮಾಡುತ್ತದೆ ಎನ್ನುವುದು ಆಶ್ಚರ್ಯಕರ ಸಂಗತಿಯಾಗಿದೆ.

**ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಸಚಿವರು):-** ಬರಗಾಲವನ್ನು ಕೇಂದ್ರಸರ್ಕಾರ ಘೋಷಣೆಯನ್ನು ಮಾಡುವುದಿಲ್ಲ. ರಾಜ್ಯ ಸರ್ಕಾರ ಘೋಷಣೆ ಮಾಡುತ್ತದೆ. ಕೇಂದ್ರ ಸರ್ಕಾರದವರು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡುವುದಕ್ಕೆ ಒಂದು guidelines ಅನ್ನು ಕೊಟ್ಟಿದ್ದಾರೆ. ಅದರಲ್ಲಿ ಬಿತ್ತನೆ ಯಾವ ರೀತಿ ಮಾಡಬೇಕು, ground water level ಎಷ್ಟಿದೆ, area ಎಷ್ಟಿದೆ ಎನ್ನುವ ಆಧಾರದ ಮೇಲೆ ಬರವನ್ನು ಘೋಷಣೆ ಮಾಡುತ್ತೇವೆ.

ಶ್ರೀ ಎನ್.ಅಪ್ಪಾಜಿಗೌಡ:- ಮಾನ್ಯ ಸಭಾಪತಿಗಳೇ, ಆ guidelines ಆಶ್ಚರ್ಯಕರವಾಗಿದೆ. ಮಾನ್ಯ ಸಚಿವರಿಗೂ ಸಹ ಮಂಡ್ಯ ಜಿಲ್ಲೆಯ ಬಗ್ಗೆ ಸಂಪೂರ್ಣವಾದ ಮಾಹಿತಿ ಇದೆ ಎಂದು ನಾನು ಭಾವಿಸುತ್ತೇನೆ. ಮಂಡ್ಯ ಶ್ರೀರಂಗಪಟ್ಟಣ ಈ ಎರಡೂ ತಾಲ್ಲೂಕುಗಳು ಸ್ವಲ್ಪ ನೀರಾವರಿ ಇರುವ ಪ್ರದೇಶಗಳು. ಕೆ.ಆರ್.ಪೇಟೆ ಮತ್ತು ನಾಗಮಂಗಲ, ಪಾಂಡವಪುರ ಬಹಳ ಬರಗಾಲ ಪೀಡಿತ ಪ್ರದೇಶಗಳು. ಈ ಬಗ್ಗೆ ನಾವು ಈಗಾಗಲೇ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಕೆ.ಆರ್.ಪೇಟೆ ತಾಲ್ಲೂಕನ್ನು ಕೂಡ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಕೇಳಿದ್ದೇವೆ. ನಮ್ಮಲ್ಲಿ 7 ತಾಲ್ಲೂಕಿನಲ್ಲಿ ನೀರಾವರಿ ಇದ್ದರೂ ಸಹ ಬರಗಾಲ ಬಂದಿದೆ. ಅದರಲ್ಲಿಯೂ ನಾಗಮಂಗಲ ಮತ್ತು ಕೆ.ಆರ್.ಪೇಟೆ ತಾಲ್ಲೂಕುಗಳಲ್ಲಿ ತೆಂಗಿನ ಮರಗಳೇ ಒಣಗಿ ಹೋಗಿ ಅಲ್ಲಿರುವ ಜನರ ದುಃಖವನ್ನು ನಾವ್ಯಾರೂ ಕೂಡ ಊಹೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಮಂಡ್ಯ ಎಂದರೆ ನೀರಾವರಿ ಪ್ರದೇಶ ಬಹಳ ಫಲವತ್ತಾದ ಪ್ರದೇಶ, ಭತ್ತ ಮತ್ತು ಕಬ್ಬನ್ನು ಬೆಳೆಯುವ ಪ್ರದೇಶ ಎನ್ನುವುದು ನಿಜ. ಆದರೂ ಈಗಿನ ಪರಿಸ್ಥಿತಿಯಲ್ಲಿ ಅದರಲ್ಲಿಯೂ ಕೆ.ಆರ್.ಪೇಟೆ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎನ್ನುವ ಘೋಷಣೆಯನ್ನು ಮಾಡಬೇಕು. ಮಂಡ್ಯ ಜಿಲ್ಲೆಯಲ್ಲಿರುವ ಕೆರೆಗಳನ್ನು ತುಂಬಿಸುವ ಕೆಲಸವನ್ನು ಕೈಗೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

**ಡಾ||ತೇಜಸ್ವಿನಿಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಸಂಸದೀಯ ಕಲಾಪಗಳನ್ನು ನಾವು ಕಲಿತುಕೊಳ್ಳುವ ದೃಷ್ಟಿಯಿಂದ ಕೂಡ ಮಾನ್ಯ ಸಚಿವರಾದ ಶ್ರೀ ದೇಶಪಾಂಡೆಯವರಂತಹ ಮುತ್ಸದ್ಧಿಯ ಜೊತೆಯಲ್ಲಿ ಕೆಲಸ ಮಾಡುವುದು ನಮಗೆ ಸಿಕ್ಕಿರುವ ಒಂದು ಸೌಭಾಗ್ಯ. ಈ ಬರಗಾಲಕ್ಕಾಗಿ ಸರ್ಕಾರ 50 ಲಕ್ಷ ರೂಪಾಯಿಗಳ ನಿಧಿಯನ್ನು ನೀಡಿದೆ. ಆದರೆ ಇವತ್ತು ಬಯಲು ಪ್ರದೇಶಗಳಲ್ಲಿ 1500 ಅಡಿಯಿಂದ 1700 ಅಡಿಯವರೆಗೆ ಕೊಳವೆಬಾವಿಗಳನ್ನು ಕೊರೆದರೆ ಮಾತ್ರ ನೀರು ಸಿಗುತ್ತಿದೆ. ಇದಕ್ಕೆ 8 ರಿಂದ 10 ಲಕ್ಷ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಸುನೀಲ್ ಸುಬ್ರಮಣ್ಯರವರು ಕೊಡಗಿನಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೊನ್ನೆ ಆದ ಜಲಪ್ರಳಯದಿಂದ ನೈಜ ಜಲ ಮೂಲ ಬತ್ತಿ ಹೋಗಿ ನೀರಿನ ಕೊರತೆ ಉಂಟಾಗಿದೆ ಎನ್ನುವ ಮಾತನ್ನು ಹೇಳಿದರು. ಆ ಪ್ರದೇಶದಲ್ಲಿ 300 ಅಡಿಯಿಂದ 400 ಅಡಿ ಆಳ ಕೊರೆದರೆ ನೀರು ಸಿಗುತ್ತದೆ. ಈ ಹಿನ್ನಲೆಯಲ್ಲಿ ಸರ್ಕಾರ ನೀಡಿರುವ 50 ಲಕ್ಷ ರೂಪಾಯಿಗಳು ಯಾವುದಕ್ಕೂ ಸಾಕಾಗುವುದಿಲ್ಲ. 1 ಕೋಟಿ ರೂಪಾಯಿಗಳ ಅನುದಾನ ಕೊಟ್ಟರೂ ಸಹ ಹೆಚ್ಚು ಅಡಿಗಳನ್ನು ಕೊರೆಯಬೇಕಾದ ಕಡೆಗಳಲ್ಲಿ ಹೆಚ್ಚಿಗೆ ಹಣ ಖರ್ಚಾಗುತ್ತದೆ, ಆದ್ದರಿಂದ ಬರದ ತೀವ್ರತೆಯ ಆಧಾರದ ಮೇಲೆ ಈ ಅನುದಾನವನ್ನು ಸರ್ಕಾರ ಪರಿಷ್ಕರಿಸಬೇಕು.

ಮೊನ್ನೆ ಚರ್ಚೆ ಮಾಡಿದ ಹಾಗೆ ವನ್ಯಜೀವಿ ಹಾಗೂ ಮಾನವನ ನಡುವಿನ ಸಂಘರ್ಷವನ್ನು ನಾವು ಸತತವಾಗಿ ಎದುರಿಸಬೇಕಾದರೆ ಅರಣ್ಯ ಇಲಾಖೆಯವರಿಗೆ ಬಿದಿರನ್ನು ನೆಡಲು ತಾಕೀತು ಮಾಡಬೇಕಾಗುತ್ತದೆ. ಹಾಗೆಯೇ ಪ್ರಕೃತಿಗೆ ಪೂರಕವಲ್ಲದ ಸಸ್ಯಗಳನ್ನು ಅದರಲ್ಲಿಯೂ ವಿಶೇಷವಾಗಿ acacia ಅಂತಹ ಗಿಡಗಳನ್ನು discourage ಮಾಡಿ, ವೈವಿಧ್ಯಮಯವಾದ ಗಿಡಗಳನ್ನು ಹಂತ ಹಂತವಾಗಿ ನೆಡಬೇಕಾಗುತ್ತದೆ. ಈಗಾಗಲೇ ಮೇವು ಬ್ಯಾಂಕ್‌ಗಳನ್ನು ರಚನೆ ಮಾಡುವ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಅದು ಬಹಳ ತ್ವರಿತವಾಗಿ ಆಗಬೇಕು. ನಾಲ್ಕನೆಯದಾಗಿ, ಇನ್ನೂ ಐದೂವರೆ ತಿಂಗಳುಗಳ ಕಾಲ ನಾವು ತೀವ್ರ ಬರಗಾಲವನ್ನು ಎದುರಿಸಬೇಕಾಗುತ್ತದೆ. ಆದಕಾರಣ ತಾತ್ಕಾಲಿಕವಾಗಿ ಬರವನ್ನು address ಮಾಡಲಿಕ್ಕೆ, ಮತ್ತು long term ನಲ್ಲಿ ಮಾಡಲಿಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು. ಈಗ ಕೆರೆಗಳು ತುಂಬಿದಾಗ ಹೂಳು ತೆಗೆಯುವುದಕ್ಕೆ ಆಗುವುದಿಲ್ಲ. ಇಂತಹ ಸಮಯದಲ್ಲಿ ಹೂಳೆತ್ತುವ ಕೆಲಸವನ್ನು ಆದ್ಯತೆಯ ಮೇರೆಗೆ ನಿರಂತರವಾಗಿ ಮಾಡಬೇಕಾಗುತ್ತದೆ. ಇದರ ಮೂಲಕ ಜಲ ಮೂಲವನ್ನು ರಕ್ಷಣೆ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳಬಯಸುತ್ತೇನೆ.

**ಉಪ ಸಭಾಪತಿಯವರು:-** ಈಗ ನಿಯಮ 68ರ ಮೇರೆಗೆ ಬರಗಾಲದ ಮೇಲಿನ ಚರ್ಚೆ ಮುಕ್ತಾಯಗೊಂಡಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ನಾನು ಕೆಲವೊಂದು clarification ಅನ್ನು ಸರ್ಕಾರಕ್ಕೆ ಕೇಳಬೇಕಾಗಿದೆ. ಸರ್ಕಾರಕ್ಕೆ ಅಧಿವೇಶನ ಮುಗಿಸುವ ಗಡಿಬಿಡಿ ಇದೆ. ನಾಳೆ ಬೆಳಿಗ್ಗೆ ಉತ್ತರ ಕೊಟ್ಟರೂ ನಮಗೆ ಅಭ್ಯಂತರವಿಲ್ಲ. ಆದರೆ ಈಗಲೇ ನಿಯಮ 68ರ ಚರ್ಚೆ ಮುಗಿಯಿತು ಎಂದರೆ ನಾವು clarification ಕೇಳುವುದು ಬೇಡವೇ?

**ಉಪಸಭಾಪತಿಯವರು:-** ನೀವು ಮಾತನಾಡಿ.

ಶ್ರೀ **ಮರಿತಿಬ್ಬೇಗೌಡ:-** ನೀವು ಎಲ್ಲರಿಗೂ ಮಾತನಾಡಲು ಅವಕಾಶ ಕೊಟ್ಟು, ಈಗ ಮಾತನಾಡಲು ಎದ್ದರೆ ಹೇಗೆ?



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ವೈ.ಎ.ನಾರಾಯಣಸ್ವಾಮಿ:-** ಇಲ್ಲ ಹಾಗೆ ಹೇಳುವುದಕ್ಕೆ ಸಾಧ್ಯವಿಲ್ಲ. ವಿರೋಧ ಪಕ್ಷದ ನಾಯಕರಿಗೆ ಯಾವಾಗಲೂ ಮಾತನಾಡಲು ಅವಕಾಶ ನೀಡಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ** ಮರಿತಿಬ್ಬೇಗೌಡರು ಉಪಸಭಾಪತಿಗಳಾಗಿ ಕೆಲಸ ಮಾಡಿದ್ದಾರೆ, ಇಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡಲು ಸೂಚನೆ ಕೊಡಬೇಕೆ ಎಂದು ಅವರನ್ನು ಕೇಳಬಯಸುತ್ತೇನೆ. Clarification ಕೇಳಲಿಕ್ಕೆ ನನಗೆ 10 ನಿಮಿಷಗಳ ಕಾಲಾವಕಾಶ ಬೇಕಾಗುತ್ತದೆ. ನಾನು ಸಚಿವರ ಬಳಿ ಅಲ್ಲದೇ ಯಾರನ್ನು ಕೇಳಲಿ, ಸರ್ಕಾರದ ತರಾತುರಿ ನಮಗೆ ಅರ್ಥವಾಗುತ್ತದೆ, ಆದರೆ ನಾವು clarification ಕೇಳಬೇಕಲ್ಲವೇ?

**ಉಪಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಸ್ವಲ್ಪ ಸಮಯ ತೆಗೆದುಕೊಳ್ಳಬೇಕು, ತಮ್ಮ ಪಕ್ಷದಿಂದ ನಾರಾಯಣಸ್ವಾಮಿಯವರು, ತೇಜಸ್ವಿನಿಗೌಡ ಎಲ್ಲರೂ ಮಾತನಾಡಿದ್ದಾರೆ. ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾತನಾಡುವುದು ಬೇಡ ಎಂದರೆ ಸುಮ್ಮನಾಗುತ್ತೇನೆ, ನನ್ನದೇನೂ ಅಭ್ಯಂತರವಿಲ್ಲ.

**ಡಾ॥ಜಯಮಾಲ(ಸಭಾನಾಯಕರು):-** ವಿರೋಧ ಪಕ್ಷದ ನಾಯಕರು, clarification ಕೇಳುವುದು ತಮ್ಮ ಧರ್ಮ, ತಾವು ಕೇಳಿ.

~~(ಮುಂದು)~~

**(590) 19-12-2018 (7-10) ಎಲ್‌ಎಂ/ಬಿಎನ್‌ಎಸ್** ~~ಎಂಎಸ್‌ಎಸ್~~

~~ಉಪಸಭಾಪತಿಯವರ ಉಪಸ್ಥಿತಿ~~

Formatted: Font: Bold

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, 30 ಜಿಲ್ಲೆಗಳ ಪೈಕಿ 17 ಜಿಲ್ಲೆಗಳಲ್ಲಿ ಭೀಕರ ಬರಗಾಲವಿದೆ ಎಂದು ನಾವು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇವೆ. 176 ತಾಲ್ಲೂಕುಗಳ ಪೈಕಿ ಹೆಚ್ಚು-ಕಡಿಮೆ 100 ತಾಲ್ಲೂಕುಗಳಲ್ಲಿ ಬರಗಾಲವಿದೆ. ಇವುಗಳ ಬಗ್ಗೆ ವಿಚಾರವನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. 74 ಲಕ್ಷ ಹೆಕ್ಟೇರ್ ಭೂಮಿಯಲ್ಲಿ 62 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆಯನ್ನು ಬಿತ್ತಿದ್ದಾರೆ. ಶೇಕಡಾ 50ರಷ್ಟಕ್ಕಿಂತ ಜಾಸ್ತಿ ರೈತರು ಭೀಕರ ಬರಗಾಲದಿಂದ ಕಂಗಾಲಾಗಿದ್ದಾರೆ. ಅನೇಕ ವಿಚಾರಗಳನ್ನು ಮಾನ್ಯ ಮಂತ್ರಿಗಳು ತಿಳಿದುಕೊಂಡಿದ್ದಾರೆ, ನೋಟ್ ಮಾಡಿಕೊಂಡಿದ್ದಾರೆ, ಅಧಿಕಾರಿಗಳು ಮಾಹಿತಿಯನ್ನು ಕೊಟ್ಟಿದ್ದಾರೆ. ಒಂದೊಂದು ವಿಚಾರದಲ್ಲೂ ಕೂಡಾ ತಾವು ಸೂಕ್ತವಾದ ಉತ್ತರವನ್ನು ಕೊಡುತ್ತಾರೆಂದು ಭಾವಿಸಿದ್ದೇನೆ. ಇದರಿಂದ ಇಡೀ ರಾಜ್ಯದ ಜನರಿಗೆ ನಿಮ್ಮ ಸಂದೇಶದಿಂದ ತೃಪ್ತಿಯಾಗುತ್ತದೆ, ಸರ್ಕಾರ ಬರಗಾಲವನ್ನು ಅತ್ಯಂತ ತೀವ್ರವಾಗಿ, ಸವಾಲಾಗಿ ಎದುರಿಸಿದೆ ಎಂದು ಜನರ ಮನಸ್ಸಿಗೆ ಬರುವಂತಹ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉತ್ತರವನ್ನು ತಾವು ಕೊಡುತ್ತೀರಿ ಎಂದು ತಿಳಿದುಕೊಂಡಿದ್ದೆ. ಮಾನ್ಯ ಮಂತ್ರಿಗಳು ಯಾರ್ಯಾರು ಮಾತನಾಡಿದ್ದಾರೆ ಎಂದು ಸದಸ್ಯರ ಹೆಸರನ್ನು ಉಲ್ಲೇಖ ಮಾಡುವುದನ್ನು ಬಿಟ್ಟರೆ ಅವರು ಏನು ಮಾತನಾಡಿದ್ದಾರೆ ಎನ್ನುವುದನ್ನು ಉಲ್ಲೇಖವೇ ಮಾಡಲಿಲ್ಲ.

**ಉಪಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ತಡವಾಗಿ ಬಂದಿದ್ದೀರಿ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಎಲ್ಲವನ್ನು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಪೂರಕ ಅಂದಾಜು ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ನಾವು ಸಭಾತ್ಯಾಗ ಮಾಡಿದ್ದೇವೆ. ಸಭಾತ್ಯಾಗ ಮಾಡಿದಾಗ ಹೊರಗೆ ಕುಳಿತು ಮಾನ್ಯ ಮಂತ್ರಿಗಳಾದ ದೇಶಪಾಂಡೆಯವರು ಮಾತನಾಡುವುದನ್ನೇ ಟಿ.ವಿ. ಯಲ್ಲಿ ನೋಡುತ್ತಿದೆ. ಅವರನ್ನು ಬಹಳಷ್ಟು ಪ್ರೀತಿ ಮಾಡುವವರಲ್ಲಿ ನಾನು ಒಬ್ಬ. ಹೀಗಾಗಿ ಅವರು ಏನು ಮಾತನಾಡುತ್ತಾರೆ ಎನ್ನುವುದನ್ನು ತಿಳಿದುಕೊಂಡು ತಕ್ಷಣ ಒಳಗೆ ಬಂದಿದ್ದೇವೆ.

**ಶ್ರೀ ಆರ್.ವಿ.ದೇಶಪಾಂಡೆ:-** ರೆಕಾರ್ಡ್‌ನಲ್ಲಿ ಇದೆ ತೆಗೆದು ನೋಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ನಮಗೆ ಗೊತ್ತಿದೆ ರೆಕಾರ್ಡ್ ತೆಗೆಸುವ ಅವಶ್ಯಕತೆ ಇಲ್ಲ. ಈಗ ಇಷ್ಟೆಲ್ಲಾ ಹೇಳಿದ ಮೇಲೆ ಸರಿಯಾಗಿ ಉತ್ತರ ಕೊಡುತ್ತೀರಿ ಎಂದು ಭಾವಿಸುತ್ತೇವೆ. ನಮ್ಮ ಕಲ್ಪನೆ ಏನು ಇತ್ತು ಎಂದರೆ, ಅಧಿಕಾರಿಗಳು ಕೆಲಸ ಮಾಡಬೇಕು, ಡಿ.ಸಿ. ಗಳು ಕೆಲಸ ಮಾಡಬೇಕು, ತಹಸೀಲ್ದಾರರವರು ಕೆಲಸ ಮಾಡಬೇಕು ಎಂದು ನಾವು ನೀವು ಹೇಳುತ್ತೇವೆ ಹೊರತು, ಯಾರು ತಮ್ಮ ಕೆಲಸ ಮಾಡುತ್ತಿಲ್ಲ. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ತಮ್ಮ ಖುರ್ಚಿಯನ್ನು ಬಿಟ್ಟು ಹೊರಗೆ ಬರಬೇಕು ಎಂದರೆ ಅಲ್ಲಿಯ ಜಿಲ್ಲಾ ಉಸ್ತುವಾರಿ ಸಚಿವರು ಬರಬೇಕು. ಇವತ್ತು ಈ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು. ನಾವು ಮಾಡಿದ್ದೇವೆ, ನೀವು ಆ ರೀತಿ ಮಾಡಿದ್ದೀರಿ ಎನ್ನುವ ಪ್ರಶ್ನೆ ಅಲ್ಲ. ಒಬ್ಬ ಜಿಲ್ಲಾಧಿಕಾರಿ ಬರ ಪರಿಹಾರದ ಎಲ್ಲ ಕಾಮಗಾರಿಗಳನ್ನು ನೋಡಿಕೊಳ್ಳದಿದ್ದರೆ ಆ ಬರಕ್ಕೆ ಸರಿಯಾದ ಪರಿಹಾರ ಸಿಗುವುದು ಸುಲಭವಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಜಿಲ್ಲಾ ಜಿಲ್ಲಾಧಿಕಾರಿಗಳು ಎಷ್ಟು ತಾಲ್ಲೂಕುಗಳಿಗೆ ಮತ್ತು ಎಷ್ಟು ಗ್ರಾಮಗಳಿಗೆ ಹಾಗೂ ಎಷ್ಟು ಬರಪೀಡಿತ ಪ್ರದೇಶಗಳಿಗೆ ಹೋಗಿದ್ದಾರೆ, ಎಷ್ಟು ಕೊಳವೆಬಾವಿಗಳ ಬಗ್ಗೆ ಪರಿಶೀಲನೆ ಮಾಡಿದ್ದಾರೆ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ? ಸರ್ಕಾರ ಬಂದು 6-7 ತಿಂಗಳಾಯಿತು, ಸನ್ಮಾನಗಳು, ಉದ್ಘಾಟನೆಗಳು ಸಾಕಷ್ಟು ಇರಬಹುದು. ನಾವು ಇಲ್ಲ ಎಂದು ಹೇಳುವುದಿಲ್ಲ. ಆದರೂ ಸರ್ಕಾರ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ತೆಗೆದುಕೊಂಡಿದೆ ಎಂದು ಯಾವ ಆಧಾರ ಮೇಲೆ ಹೇಳುತ್ತೀರಿ? ಕೆಲವು ಮಂತ್ರಿಗಳು ವಿಧಾನಸೌಧವನ್ನು ಬಿಟ್ಟು ಬರುವ ಪರಿಸ್ಥಿತಿಯಲ್ಲಿ ಇಲ್ಲ, ಕೆಲವು ಮಂತ್ರಿಗಳು ಅವರ ಜಿಲ್ಲೆಗೆ ಮಾತ್ರ ಸೀಮಿತವಾಗಿದ್ದಾರೆ, ಕೆಲವು ಮಂತ್ರಿಗಳು ಅವರ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದ್ದಾರೆ. ಪ್ರತಿದಿನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅವರ ಕ್ಷೇತ್ರದಲ್ಲಿಯೇ ಇರುತ್ತಾರೆ. ತಾವು ಹಿರಿಯ ಮಂತ್ರಿಗಳು ಇದನ್ನು ಗಮನಿಸಬೇಕು. ಕಾರ್ಯದರ್ಶಿಗಳ ಮಟ್ಟದಲ್ಲಿ, ಸರ್ಕಾರದ ಮಟ್ಟದಲ್ಲಿ ಉಪಸಮಿತಿಯನ್ನು ರಚನೆ ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ ಅದು ಕಾರ್ಯಾಚರಣೆ ಮಾಡಬೇಕಲ್ಲ, ನಿಮ್ಮ ಉಪ ಸಮಿತಿ ಯಾವ ಜಿಲ್ಲೆಗೆ ಹೋಗಿ ಕುಳಿತು ಕೆಲಸ ಮಾಡಿದೆ ಎಂದು ಹೇಳಿ. ರಾಜ್ಯದಲ್ಲಿ ಒಟ್ಟು 16,500 ಕೋಟಿ ರೂಪಾಯಿಗಳ ಬೆಳೆ ನಷ್ಟವಾಗಿದೆ ಎಂದು ಸರ್ಕಾರದಲ್ಲಿ ಅಂದಾಜು ಇದೆ. ಆದರೆ, ಸರ್ಕಾರ ಕೊಟ್ಟಿರುವುದು 206 ಕೋಟಿ ರೂಪಾಯಿಗಳು. 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ಬೇರೆ. 206 ಕೋಟಿ ರೂಪಾಯಿಗಳಲ್ಲಿ ಯಾವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಾಧ್ಯ ಎನ್ನುವುದನ್ನು ಸ್ಪಷ್ಟಪಡಿಸಬೇಕು. ನಾನು ಹಾಸನ ಜಿಲ್ಲೆ ಅರಿಸಿಕೇರಿಗೆ ಹೋಗಿದ್ದೆ, ಅಲ್ಲಿ ಒಬ್ಬ ರೈತನ 4 ಎಕರೆ ತೆಂಗಿನ ತೋಟ ಸಂಪೂರ್ಣವಾಗಿ ನಾಶವಾಗಿದೆ. ಅಲ್ಲಿ ಚುನಾವಣೆ ಆಗುವುದಕ್ಕಿಂತ ಮೊದಲು ಶಾಸಕರಾಗಿದ್ದವರೊಬ್ಬರು ಒಂದು ತೆಂಗಿನ ಮರಕ್ಕೆ 10,000 ರೂ.ಗಳ ಪರಿಹಾರವನ್ನು ಕೊಡಬೇಕು ಎಂದು ಧರಣಿ ಕುಳಿತ್ತಿದರು.  ಚುನಾವಣೆ ಆದಮೇಲೆ ಮತ್ತೆ ಅವರು ಶಾಸಕರಾಗಿ ಆಯ್ಕೆಯಾಗಿ ಬಂದಿದ್ದಾರೆ. ಅವರದೇ ಸರ್ಕಾರವಿದೆ, ಅವರ ಮುಖ್ಯಮಂತ್ರಿಗಳೇ ಇದ್ದಾರೆ,

ಈಗ ಆ ರೈತನಿಗೆ 5000 ರೂ.ಗಳಾದರೂ, 2000 ರೂಪಾಯಿಗಳನ್ನಾದರೂ ಕೊಡಿಸುತ್ತಾರೆಯೇ? ಇಲ್ಲವೇ ಇಲ್ಲ 400 ರೂ.ಗಳಿಂತ ಹೆಚ್ಚು ಕೊಡುವುದಿಲ್ಲ. ಸರ್ಕಾರದಲ್ಲಿ ಮಂತ್ರಿಗಳಿಗಾಗಲಿ, ಅಧಿಕಾರಿಗಳಿಗೆ, ಶಾಸಕರಾಗಲಿ  ಕನಿಷ್ಠ ಬದ್ಧತೆಯಾದರೂ ಇರಬೇಕು. ನಿಮ್ಮ ಪರಿಹಾರದ ಕಲ್ಪನೆಗಳೇನು ಎನ್ನುವುದನ್ನು ಸ್ಪಷ್ಟಪಡಿಸಬೇಕೆಂದು ಕೇಳುತ್ತಿದ್ದೇನೆ. ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಬಗ್ಗೆ ನಾನು ಕೇಳಿದ್ದೇನೆ, ಇದು ಮಾನ್ಯ ಉಪಸಭಾಪತಿಯವರ ಕ್ಷೇತ್ರ ಕೂಡಾ. ಪಶು ಸಂಗೋಪನೆ ಬಗ್ಗೆ ಮಾತನಾಡುವಾಗ ನಾನು ಎಲ್ಲ ಅಧಿಕಾರಿಗಳನ್ನು ಕರೆದಿದೆ. ಎಂಟು ಹೋಬಳಿಗಳಿಗೆ ಒಂದೊಂದು ಗೋಶಾಲೆಯನ್ನು ನಿರ್ಮಾಣ ಮಾಡಬೇಕೆಂದು ಪಶುಸಂಗೋಪನೆ ಇಲಾಖೆಯಿಂದ ನಾವು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ.  ಆದರೆ ಒಂದೇ ಒಂದು ಗೋಶಾಲೆಯನ್ನು ಕೂಡಾ ಇದುವರೆಗೂ ತೆರೆದಿರುವುದಿಲ್ಲ ಎಂದು ಅಧಿಕಾರಿಗಳು ಸಭೆಯಲ್ಲಿ ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಮೇವು ಬ್ಯಾಂಕ್‌ನ ಬಗ್ಗೆ ಕಲ್ಪನೆ ಇಲ್ಲ. ಬರ ಬಂದಾಗ ಮೊದಲು ನಿರ್ಮಾಣ ಮಾಡುವುದು ಗೋಶಾಲೆಗಳನ್ನು. ಏಕೆಂದರೆ ಬರ ಬಂದಾಗ ರೈತರು ಅರ್ಧ ಬೆಲೆಗೆ ಗೋವುಗಳನ್ನು ಮಾರಾಟ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ಜಾನುವಾರಗಳನ್ನು ರಕ್ಷಣೆ ಮಾಡಬೇಕಾದರೆ ಗೋಶಾಲೆಗಳನ್ನು ತೆರೆಯಬೇಕು. ಒಂದೇ ಒಂದು ಗೋಶಾಲೆಯನ್ನು ತೆರೆದಿರುವುದಿಲ್ಲ. ಒಂದೇ ಇಂದು ಮೇವು ಬ್ಯಾಂಕ್ ತೆರೆದಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ಬರವನ್ನು ಎದುರಿಸುತ್ತಾರೆ ಎನ್ನುವ ಸ್ಪಷ್ಟಣೆಯನ್ನು ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಅನೇಕ ವಿಚಾರಗಳು ಇವೆ ಆದರೆ ಅವುಗಳ ಬಗ್ಗೆ ನಾನು ಮಾತನಾಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಬಗ್ಗೆ ಹೇಳಬೇಕು ಎಂದರೆ, 2016-17ನೇ ಸಾಲಿನಲ್ಲಿ 96,420 ಜನರು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ದಾಖಲು ಮಾಡಿಕೊಂಡಿದ್ದಾರೆ. 2017-18ನೇ ಸಾಲಿನಲ್ಲಿ 58,000 ಜನರು, 2018-19ನೇ ಸಾಲಿನಲ್ಲಿ 12,22,988 ಜನರು ದಾಖಲು ಮಾಡಿಕೊಂಡಿದ್ದಾರೆ. ಈ ಯೋಜನೆಯಡಿ ಒಂದಷ್ಟು ಭಾಗವನ್ನು ರೈತ, ಒಂದಷ್ಟು ಭಾಗವನ್ನು ಕೇಂದ್ರ ಸರ್ಕಾರ ಹಾಗೂ ಒಂದಷ್ಟು ಭಾಗವನ್ನು ರಾಜ್ಯ ಸರ್ಕಾರ ಹಣವನ್ನು ಕೊಡಬೇಕಾಗಿದೆ.

**ಉಪಸಭಾಪತಿಯವರು:-** ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಬಗ್ಗೆ ಸುದೀರ್ಘವಾಗಿ ಶಾಸಕರುಗಳು ಮಾತನಾಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ತಾವು ಪೀಠದಲ್ಲಿ ಮೊದಲಬಾರಿಗೆ ಕುಳಿತುಕೊಂಡಿದ್ದೀರಿ, ನಾನು ವಿರೋಧ ಪಕ್ಷದ ನಾಯಕ ನನಗೆ ಮಾತನಾಡಲು ಅಧಿಕಾರವಿಲ್ಲ ಎಂದು ಹೇಳಿದರೆ ನಾನು ಕುಳಿತುಕೊಂಡುಬಿಡುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಸಚಿವರು):-** ವಿರೋಧ ಪಕ್ಷದ ನಾಯಕರೆ ನಿಮಗೆ ಮಾತನಾಡುವ ಹಕ್ಕು ಇದೆ, ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ನಮ್ಮ ಪಕ್ಷದಿಂದ ಯಾರು ಏನೇ ವಿಷಯ ಮಾತನಾಡಿದರೂ ಮತ್ತೆ ಮಾತನಾಡುವ ಅಧಿಕಾರ ನನಗೆ ಇದೆ. ನಾನು ಸರ್ಕಾರಕ್ಕೆ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾತನಾಡಿ ಏಕೆ ಸುಮ್ಮನೆ ಚೇಷ್ಟೆ ಮಾಡುತ್ತೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಚೇಷ್ಟೆ ಮಾಡುತ್ತಿರುವುದು ನೀವು ನಾವಲ್ಲ.

**ಡಾ: ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಗಳೆ, ಚೇಷ್ಟೆ ಅಂದರೆ ಏನು? ವಿರೋಧ ಪಕ್ಷದ ನಾಯಕರಿಗೆ ಈ ರೀತಿ ಹೇಳುವುದು ಸರಿಯೇ? ಅವರು ಉಪಸಭಾಪತಿಗಳಾಗಿ ಕೆಲಸ ಮಾಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ತಮ್ಮ ಪೀಠಕ್ಕೆ ನಾನು ಕೇಳಿರುವುದು, ನನ್ನ ಪಕ್ಷದ ಸದಸ್ಯರು ಯಾರೇ ಮಾತನಾಡುವಾಗ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಬಗ್ಗೆ ಮಾತನಾಡಿರಬಹುದು. ಆದರೆ ಸರ್ಕಾರವನ್ನು ನಾನು ಪ್ರಶ್ನೆ ಮಾಡುವುದು ಇರುತ್ತದೆ.

**ಉಪಸಭಾಪತಿಯವರು:-** ಈಗಾಗಲೇ ನಿಮ್ಮ ಪಕ್ಷದ ಸದಸ್ಯರು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಬಗ್ಗೆ ಮಾತನಾಡಿದ್ದಾರೆ ಎಂದು ಹೇಳಿದೆ ಅಷ್ಟೇ. ಈಗ ನಿಮ್ಮ ಮಾತುಗಳನ್ನು ಮುಂದುವರೆಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-**ಮಾನ್ಯ ಸಭಾಪತಿಗಳೆ, 2018-19ನೇ ಸಾಲಿನಲ್ಲಿ ಈ ಯೋಜನೆಯಲ್ಲಿ 12,22,988 ಜನರು ದಾಖಲು ಮಾಡಿಕೊಂಡಿದ್ದಾರೆ. ರೈತರು ತಮ್ಮ ಭಾಗದ

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣವನ್ನು ಕಟ್ಟಿ ಆಗಿದೆ, ಕೇಂದ್ರ ಸರ್ಕಾರದಿಂದ ಬರಬೇಕು. ರಾಜ್ಯ ಸರ್ಕಾರ ವಿಮೆ ಕಂತನ್ನು ಕಟ್ಟಬೇಕು. ಯಾವ ಜಿಲ್ಲೆಗೆ ಯಾವ ಅಧಿಕಾರಿಯನ್ನು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ನೋಂದಾವಣಿ ಮಾಡಲು, ವಿಮೆ ಕಂತನ್ನು ಕಟ್ಟಲು ನಿಯೋಜನೆ ಮಾಡಿದ್ದಾರೆ ಎನ್ನುವುದನ್ನು ಉತ್ತರದಲ್ಲಿ ಹೇಳಬೇಕು. ಪ್ರಧಾನ ಮಂತ್ರಿ ಫಸಲ್ ಭೀಮಾ ಯಶಸ್ವಿಯಾದರೆ ಕೇಂದ್ರಕ್ಕೆ ಅಥವಾ ಪ್ರಧಾನ ಮಂತ್ರಿಗೆ ಹೆಸರು ಬರಬಹುದು ಆದರೆ ಅದರ ಉಪಯೋಗ ಸಿಗುವುದು ನಮ್ಮ ರಾಜ್ಯದ ರೈತರಿಗೆ. ಫಸಲ್ ಭೀಮಾ ಯೋಜನೆಯಲ್ಲಿ ಅರ್ಜಿ ಹಾಕಿಕೊಂಡ ಪ್ರತಿಯೊಬ್ಬ ಬಡ ರೈತನನ್ನು ಕರೆದು ನೀನು ಇಷ್ಟು ಹಣ ಕಟ್ಟು, ರಾಜ್ಯ ಸರ್ಕಾರ ಇಷ್ಟು ಹಣವನ್ನು ಕಟ್ಟುತ್ತದೆ ಈ ಹಣ ಕೇಂದ್ರ ಸರ್ಕಾರಕ್ಕೆ
ಹೋಗುತ್ತದೆ, ಇಂತಹ ದಿನಾಂಕದಂದು ಹಣ ಸಂದಾಯವಾಗುತ್ತದೆ ಎಂದು ಹೇಳುವುದು ಯಾರ ಜವಾಬ್ದಾರಿ? ದಯಮಾಡಿ ಯಾವ ಜಿಲ್ಲೆಗೆ ಯಾವ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ, ಆ ಅಧಿಕಾರಿಯ ಪ್ರಗತಿ ಏನು ಎನ್ನುವುದನ್ನು ತಿಳಿಸಬೇಕು ಎನ್ನುವುದು ನನ್ನ ಆಗ್ರಹ. ಆದರೆ ಕೇಂದ್ರ ಸರ್ಕಾರ ಕೊಟ್ಟಿರುವುದಿಲ್ಲ ಎನ್ನುವ ಮಾತನ್ನು ತುಂಬಾ ಬಾರಿ ಕೇಳಿದ್ದೇನೆ.

**ಶ್ರೀ ಆರ್.ವಿ.ದೇಶಪಾಂಡೆ** :–ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಏನು ಕೊಟ್ಟಿರುವುದಿಲ್ಲ ಎನ್ನುವುದನ್ನು ನಾನು ಹೇಳಿರುವುದಿಲ್ಲ. ಅದು ನಿಮ್ಮ ಕನಸಸಸು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ ಎಂದು ನಾವು ಹೇಳಿರುವುದಿಲ್ಲ. ಆ ಮಾತನ್ನು ನಾವು ಹೇಳಿರುವುದಿಲ್ಲ. ಆದರೆ ಸದನ ಪ್ರಾರಂಭವಾದಾಗಿನಿಂದ ಈ ಮಾತನ್ನು ಕೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ವಿರೋಧ ಪಕ್ಷದ ನಾಯಕರು ಹೊರಗಡೆ ಇದ್ದಾಗ ಕೇಂದ್ರ ಸರ್ಕಾರ ಏನು ಕೊಟ್ಟಿದೆ ಎನ್ನುವುದನ್ನು ಹೇಳಿದ್ದಾರೆ.

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:–** ವಿರೋಧ ಪಕ್ಷದ ನಾಯಕರಿಗೆ ಏನು ಗೌರವವಿಲ್ಲದೆ, ಬೆಲೆ ಇಲ್ಲದ ಹಾಗೆ ಮಾತನಾಡಬಾರದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ನಾನು ಹೇಳುತ್ತಿರುವುದನ್ನು ಗಮನಿಸಬೇಕು, ಬಹಳ ಗಡಿಬಿಡಿ ನಮಗೂ–ನಿಮಗೂ ಒಳ್ಳೆಯದಲ್ಲ. ಸರ್ಕಾರ ಉತ್ತರವನ್ನು ಯಾವಾಗಲಾದರೂ ಹೇಳಲಿ. ಕೇಂದ್ರ ಸರ್ಕಾರ ಅನುದಾನ ಕೊಡಲು ವಿಳಂಬ ಮಾಡಿದೆ ಎಂದು ಕಂದಾಯ ಸಚಿವರು ಹೇಳಿದ್ದಾರೆ ಎನ್ನುವುದಕ್ಕಷ್ಟೆ ನನ್ನ ಮಾತು



ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Formatted: Font: Bold
Formatted: Centered
Formatted: Font: Bold
Formatted: Centered
Formatted: Font: Bold
Formatted: Centered

ಸೀಮಿತವಲ್ಲ. ಇಡೀ ಸದನ ನಡೆಯುವಾಗ ಕೇಂದ್ರ ಸರ್ಕಾರದ ಕಡೆಗೆ ಬೊಟ್ಟು ಮಾಡಿ ಮಾತನಾಡಿರುವುದನ್ನು ನಾನು ಅನೇಕ ಸಾರಿ ಕೇಳಿದ್ದೇನೆ. ಈಗ ಸಂದರ್ಭ ಬಂದಿರುವುದರಿಂದ ಅದನ್ನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರ ಯಾವ್ಯಾವ ಯೋಜನೆಗೆ, ಯಾವ ಹಣಕಾಸು ಯೋಜನೆ ಎಷ್ಟು ಕೊಟ್ಟಿದೆ ಎನ್ನುವ ಎಲ್ಲಾ ದಾಖಲೆಗಳು ನನ್ನ ಹತ್ತಿರವಿದೆ. ಬರ ಪರಿಹಾರಕ್ಕೆ, ಬೇರೆ-ಬೇರೆ ಯೋಜನೆಗೆ, ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ, ಗ್ರಾಮೀಣಾಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದೆ, ರಸ್ತೆ ಕಾಮಗಾರಿಗೆ C.R.F. (Central Road Fund) ನಿಂದ ಎಷ್ಟು ಅನುದಾನವನ್ನು ಬಂದಿದೆ ಎಲ್ಲ ಮಾಹಿತಿ ಇದೆ. ಹೇಳಿ ಎಂದರೆ ಎಲ್ಲವನ್ನು ಹೇಳುತ್ತೇನೆ.

**ಉಪಸಭಾಪತಿಯವರು:-** ತಾವು ಒಂದು ಮಾರ್ಗದಲ್ಲಿ ಮಾತನಾಡುತ್ತೀದ್ದಿರಿ, ಆದರೆ ಮತ್ತೆ ವಿಷಯ ಬೇರೆ ಕಡೆ ಹೋಗುತ್ತಿದೆ.

~~(ಮುಂದು)~~

**(591)19-12-2018(07-20)ಬಿಎಸ್‌ಡಿ-ಜಿಎನ್‌ಎಸ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರು ಬಹಳ ತಿಳುವಳಿಕೆಯುಳ್ಳವರು ಎಂಬುದು ಸತ್ಯ, ಆದರೆ ಅವರು ನನ್ನನ್ನು ಕ್ರಾಸ್ ಮಾಡಬಾರದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೇಂದ್ರ ಸರ್ಕಾರದ ಬಗ್ಗೆ ಹೇಳುತ್ತಾರೋ ಅಥವಾ ಕ್ಲಾರಿಫಿಕೇಷನ್ ಕೇಳುತ್ತಾರೋ? ದಯಮಾಡಿ ಇದು ಸರಿಯಲ್ಲ. ಇದು ಒಂದು ರೀತಿ ಚೇಷ್ಟೆ ಆಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾನು ಇಂತಹದ್ದನ್ನೇ ಮಾತನಾಡಲು ನಿಮ್ಮ ಆದೇಶವನ್ನು ಪಾಲನೆ ಮಾಡಬೇಕೆಂದು ಸಭಾಪೀಠ ಹೇಳಿದರೆ ಒಪ್ಪಿಕೊಳ್ಳುತ್ತೇನೆ. ಆ ಪೀಠದಲ್ಲಿ ಅನೇಕರು ಕುಳಿತಿದ್ದಾರೆ. ಪೀಠ ನನಗೆ ಅವಕಾಶ ಕೊಟ್ಟಿದೆ, ಅದಕ್ಕೆ ನಾನು ಹೊಣೆ ಅಲ್ಲ. ಅವರ ನಿರೀಕ್ಷೆಗೆ ನಾನು ಹೊಣೆಯೇ? ದಯವಿಟ್ಟು ನನ್ನ ಮೇಲೆ ಕೋಪ ಮಾಡಿಕೊಳ್ಳಬಾರದು. ಯಾವುದೋ ಸಿಟ್ಟು ಯಾರ ಮೇಲೋ ತೆಗೆದರೆ ಪ್ರಯೋಜನವಿರುವುದಿಲ್ಲ. ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಸ್ಪಷ್ಟನೆ ಕೊಡಬೇಕು. ಸರ್ಕಾರ ಬರಗಾಲದ ಬಗ್ಗೆ ಚರ್ಚೆ ಮಾಡಲು



"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Formatted: Font: Nudi 01 e, 14 pt, Bold
Formatted: Justified, Line spacing: 1.5 lines
Formatted: Font: Bold
Formatted: Font: Nudi 01 e, 14 pt

ಮಾನಸಿಕವಾಗಿ ತಯಾರಿಲ್ಲ ಎಂಬುದಾಗಿ ನನಗೆ ಅರ್ಥವಾಗಿದೆ. ಆದ್ದರಿಂದ ನಾನು ಕಡತವನ್ನು ತರಿಸಲೇ ಇಲ್ಲ. ಸರ್ಕಾರಕ್ಕೆ ಸಮಯದ ಬರಗಾಲ ಬಂದಿದೆ. ಸದನ ನಡೆಯುತ್ತಿರುವಾಗ ಮಂತ್ರಿ ಮಂಡಲದ ಸಭೆ ಇಟ್ಟುಕೊಂಡು ಮಾನ್ಯ ಸಚಿವರು ತುರ್ತಾಗಿ ಮುಗಿಸಬೇಕೆಂದರೆ ನಾವೇನು ಮಾಡೋಣ? ಮಾನ್ಯ ಸಚಿವರು ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ಹಿರಿಯ ಸಚಿವರಾಗಿದ್ದಾರೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮನ್ಯ ಸಭಾಪತಿಯವರೇ, ನಾನು ಕೆಳಮನೆಯಲ್ಲಿಯೂ ಕಲಾಪದಲ್ಲಿ ಭಾಗವಹಿಸಿದ್ದೆನು. ಮಾನ್ಯ ವಿರೋಧ ಪಕ್ಷದ ನಾಯಕರ ಮೇಲೆ ದೊಡ್ಡ ಜವಾಬ್ದಾರಿ ಇದೆ. ಮಾನ್ಯ ಸಭಾನಾಯಕರಿಗೆ ಇರುವ ಜವಾಬ್ದಾರಿ ಅವರ ಮೇಲೂ ಇದೆ. ಅವರು ಪ್ರಶ್ನೆ ಕೇಳಲಿ. ನಾನು ಬರಗಾಲ ಚರ್ಚೆಗೆ ಉತ್ತರ ಕೊಟ್ಟಿದ್ದೇನೆ. ಕೆಲವರಿಗೆ ತೃಪ್ತಿ ಆಗಿರಬಹುದು, ಕೆಲವರಿಗೆ ಆಗಿಲ್ಲದೇ ಇರಬಹುದು. ಪ್ರಜಾಪ್ರಭುತ್ವದಲ್ಲಿ ಟೀಕೆ–ಟಿಪ್ಪಣಿ ಮಾಡುವುದು ಅವರ ಹಕ್ಕು. ಮಾನ್ಯ ವಿರೋಧ ಪಕ್ಷದ ನಾಯಕರು ಭಾಷಣ ಮಾಡುತ್ತಿದ್ದಾರೆ. ಅವರಿಗೆ ಏನು ಬೇಕೋ ಅದನ್ನು ಕೇಳಲಿ, ಅದಕ್ಕೆ ಉತ್ತರ ಕೊಡಲು ನಾನು ಇಲ್ಲಿ ಕುಳಿತಿದ್ದೇನೆ. ನಾನು ಕ್ಯಾಬಿನೆಟ್‌ಗೆ ಅರ್ಧ ಗಂಟೆ ತಡವಾಗಿ ಹೋಗುತ್ತೇನೆ. Why does he worry? ಅವರು ಪ್ರಶ್ನೆಯನ್ನು ಸಮಾಧಾನದಿಂದ ಕೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಭಾಷಣ ಮಾಡುತ್ತಿಲ್ಲ, ಆದರೆ ನಾನು ಸ್ಪಷ್ಟೀಕರಣ ಕೇಳುವ ರೀತಿ ಹೀಗೆ ಇರುತ್ತದೆ. ಸಣ್ಣ ಸಣ್ಣ ಪ್ರಶ್ನೆಗಳನ್ನು ಇದೇ ರೀತಿ ಕೇಳುತ್ತೇನೆ.

**ಶ್ರೀ ಪುಟ್ಟಣ್ಣ:–** ಇದನ್ನೇ ಮಾನ್ಯ ಮರಿತಿಬ್ಬೇಗೌಡರು ಮಾಡುತ್ತಿರುವುದು. ಅವರು ಈ ಕಡೆ ಈ ರೀತಿ ಮಾತನಾಡುತ್ತಾರೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡುವಾಗ ಅವರು ಹಿಂದೆ ಕೇಂದ್ರ ಸರ್ಕಾರ ಕೊಡಲಿಲ್ಲ ಎಂಬುದನ್ನು ಈಗ ತೆಗೆದುಕೊಂಡು ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅದೊಂದು ಭಾಗ. ಮಾನ್ಯ ಮರಿತಿಬ್ಬೇಗೌಡರು ನೀಡಿದ ಮಾತುಗಳಿಗೆ ಪ್ರತಿಕ್ರಿಯೆ ಕೊಡುವುದಿಲ್ಲ, ಏಕೆಂದರೆ ಅವರು ದೊಡ್ಡವರು ಎಂದು ಬಿಟ್ಟಿದ್ದೇನೆ. ನೋಡೋಣ, ಕಾಲ ಬರುತ್ತದೆ.

**ಡಾ॥ ಜಯಮಾಲ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ 'ಚೇಷ್ಟೆ' ಎಂಬುದಕ್ಕೆ 'ಹುಡುಗಾಟ' ಎನ್ನುವ ಅರ್ಥವನ್ನು ನೀಡುತ್ತದೆ. ಇದು ಆಡು ಭಾಷೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರು ಪುನ: ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ.

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಅಂತಹ ಪದ ಬಳಕೆ ಸರಿಯೇ?

**ಡಾ: ಜಯಮಾಲ:–** ಚೇಷ್ಟೆ ಪದ ತಪ್ಪು ಎನಿಸಿದರೆ ವಾಪಸ್ಸು ತೆಗೆದುಕೊಳ್ಳುತ್ತಾರೆ.



" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
Formatted: Font: 14 pt
Formatted: Font: Nudi 01 e, 14 pt

**ಶ್ರೀ ಪುಟ್ಟಣ್ಣ:–** ಅದು ಯಕ್ಷಗಾನದಲ್ಲಿ ಬರುವ ಭೂತ ಚೇಷ್ಟೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರಿಗೆ ಎಲ್ಲಾ ಕಲೆಯೂ ಗೊತ್ತಿದೆ. ಉದ್ಯೋಗ ಖಾತ್ರಿಯನ್ನು 100 ರಿಂದ 150 ದಿವಸಗಳಿಗೆ ಏರಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ದಿನನಿತ್ಯ ಗುಳೆ ಹೋಗುತ್ತಾರೆ. ಅಲ್ಲಿ ಉದ್ಯೋಗ ಮಾಡುತ್ತಾರೆ, ಅದರೆ ಅವರಿಗೆ ಪೇಮೆಂಟ್ ಕೊಡುತ್ತಿಲ್ಲ ಎಂದು ಹೇಳುತ್ತಾರೆ. ಉದ್ಯೋಗ ಖಾತ್ರಿ ಕೊಡುತ್ತಾರೆ, ಆದರೆ Engineer estimate ಮಾಡುತ್ತಿಲ್ಲ. Job Card ಕೊಟ್ಟಿರುತ್ತಾರೆ, ಪೇಮೆಂಟ್ ಕೊಡುತ್ತಿಲ್ಲ. ಇದಕ್ಕೆ ಯಾರು ಉತ್ತರ ಕೊಡಬೇಕು? ಸರ್ಕಾರದ ಜವಾಬ್ದಾರಿಯುತ ಮಂತ್ರಿಯಾಗಿ ಅಲ್ಲಿನ ಜಿಲ್ಲಾಧಿಕಾರಿಗೆ ಉದ್ಯೋಗ ಮಾಡಿದವರಿಗೆ ಒಂದು ವಾರದಲ್ಲಿ ಪೇಮೆಂಟ್ ಮಾಡಬೇಕು ಎಂದು ಹೇಳಲು ಶಕ್ತಿ ಇರುವ ಒಬ್ಬ ಮಂತ್ರಿಯನ್ನು ತೋರಿಸಿಕೊಡಲಿ. ಮಾನ್ಯ ಹಿರಿಯ ಸಚಿವರು ಕಂದಾಯ ಮಂತ್ರಿಗಳಾಗಿದ್ದಾರೆ, ಅವರ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಸರ್ಕಾರ ಇಡೀ ತಂಡವಾಗಿ ಯಾವ ಜಿಲ್ಲೆಯಲ್ಲಿ ಕೆಲಸ ಮಾಡಿದೆ ಎಂದು ಹೇಳಲಿ. ಒಂದು ಜಿಲ್ಲೆಯ ಉದಾಹರಣೆ ಕೊಡಲಿ. ಎಲ್ಲರೂ ಸಾಲ ಮನ್ನಾ ಬಗ್ಗೆ ಮಾತನಾಡಿರುವುದರಿಂದ ನಾನು ಮಾತನಾಡುವುದಿಲ್ಲ. ಮೊದಲು ರೂ. 34 ಸಾವಿರ ಕೋಟಿ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿ, ರೂ. 9,400 ಕೋಟಿಗಳಿಗೆ ಸೀಮಿತ ಮಾಡಿದರು. ನಾನು ಪ್ರಶ್ನೆಗಳನ್ನು ಕೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಇಂತಹ ಪ್ರಶ್ನೆಗಳನ್ನೆಲ್ಲಾ ಕೇಳಿದಾಗ ಅವರ ಆತಂಕ ನನಗೆ ಅರ್ಥವಾಗುತ್ತದೆ. ಅವರು ಉತ್ತರ ಕೊಡುವುದು ಒಂದು ಭಾಗ. ಆದರೆ ಆತ್ಮಸಾಕ್ಷಿಗೆ ಉತ್ತರ ಕೊಡುವವರು ಯಾರು? ಸರ್ಕಾರ ಮಾಡಿರುವ ಪ್ರಮಾದಗಳು ಹಾಗೂ ಬರ ಪರಿಸ್ಥಿತಿಯನ್ನು ನಿಭಾಯಿಸಲು ಸಾಧ್ಯವಾಗದ ಸರ್ಕಾರದ ಚಡಪಡಿಕೆ, ಸರ್ಕಾರದ ಗೊಂದಲಗಳು, ಸರ್ಕಾರದ ಮಂತ್ರಿಗಳ್ಯಾರೂ ಕೆಲಸ ಮಾಡದ ರೀತಿಗಳನ್ನು ಕಣ್ಣಾರೆ ಕಂಡಿರುವ ಮಾನ್ಯ ದೇಶಪಾಂಡೆಯವರಂತಹ ಹಿರಿಯ ಮಂತ್ರಿಗಳು ಆತ್ಮಸಾಕ್ಷಿಗೆ ಹೇಗೆ ಉತ್ತರ ಕೊಟ್ಟುಕೊಳ್ಳುತ್ತಾರೆ? ಅವರ ಆತಂಕ, ನೋವು, ಸಂಕಟ, ಚಡಪಡಿಕೆಗಳೆಲ್ಲವೂ ನನಗೆ ಅರ್ಥವಾಗುತ್ತದೆ. ಆ ಕಾರಣದಿಂದ ನಾನು ಆ ಬಗ್ಗೆ ಮಾತನ್ನು ಮುಂದುವರೆಸಲಿಲ್ಲ. ಮಾನ್ಯ ದೇಶಪಾಂಡೆಯವರು ನಿರ್ಲಿಪ್ತತೆಯಿಂದ ಮುಖದ ಮೇಲೆ ಕೈಯನ್ನು ಇಟ್ಟುಕೊಂಡು ಸುಮ್ಮನೆ ಕುಳಿತಿರುವುದು ಅವರ ಅಸಹಾಯಕತೆಯ ಲಕ್ಷಣವಾಗಿದೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ಬಗ್ಗೆ ಏಕೆ ತಲೆಕೆಡಿಸಿಕೊಳ್ಳುತ್ತಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರ ಬಗ್ಗೆ ಗೌರವದಿಂದ ಮಾತನಾಡಿದರೆ ತಪ್ಪೇನು?

**ಶ್ರೀ ಆರ್.ವಿ. ದೇಶಪಾಂಡೆ:–** ನಾನು ಅವರ ಮಾತುಗಳನ್ನು ಕೇಳಲು ಇಲ್ಲಿ ಗಟ್ಟಿಯಾಗಿ ಕುಳಿತಿದ್ದೇನೆ. ಇನ್ನೂ ಅವರ ಕೂದಲು ಹಣ್ಣಾಗಿಲ್ಲ, ಆದರೆ ನನ್ನ ಎಲ್ಲಾ ಕೂದಲುಗಳು ಹಣ್ಣಾಗಿವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Formatted: Font: 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಬರದ ಮತ್ತೊಂದು ಭಾಗವಾಗಿ ಸರ್ಕಾರವು ಸಾಲ ಮನ್ನಾ ಮಾಡಿದೆ. ಮಾನ್ಯ ರೇವಣ್ಣನವರು 'ರೈತರಿಗೆ ನೋಟೀಸ್ ಕೊಟ್ಟರೆ ಬ್ಯಾಂಕ್ ಅಧಿಕಾರಿಗಳನ್ನು ಜೈಲಿಗೆ ಹಾಕುತ್ತೇವೆ' ಎಂದು ಆತ್ಮಹತ್ಯೆಯ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುತ್ತಾರೆ. ಆದರೆ ಮತ್ತೊಂದು ಕಡೆ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು 'ರೈತರಿಗೆ ಕೊಟ್ಟಿರುವುದು ನೋಟೀಸಲ್ಲ, ಅದೊಂದು ಮಾಹಿತಿ ಪತ್ರ' ಎಂದು ಹೇಳುತ್ತಾರೆ. ನಾನು ಇದನ್ನು ಮಾಹಿತಿ ಪತ್ರವೋ ಅಥವಾ ನೋಟೀಸ್ ಎಂಬುದು ಸರಿಯೋ ಎಂಬ ಕ್ಲಾರಿಫಿಕೇಷನ್ ಕೇಳುತ್ತೇನೆ. ಅವರಿಬ್ಬರು ಅಣ್ಣ-ತಮ್ಮಂದಿರು, ಒಟ್ಟಿಗೆ ಇದ್ದೇವೆ ಎಂದು ವಿಶ್ವಾಸದಿಂದ ಇದ್ದವರು. ಅವರ ಮಧ್ಯೆ ಏಕೆ ಗೊಂದಲವಾಗಿದೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಇನ್ನು ಕೊನೆಯದಾಗಿ ರೂ. 6,500 ಕೋಟಿಗಳನ್ನು ಸಾಲ ಮನ್ನಾ ಮಾಡುವುದಕ್ಕೆ ತೆಗೆದಿರಿಸಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಕಂದಾಯ ಸಚಿವರು ಸಾಲ ಮನ್ನಾ ಯೋಜನೆಗೆ ರೂ. 50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ನಾನು ಸಾಲ ಮನ್ನಾದ ಒಟ್ಟಾರೆ ವ್ಯಾಪ್ತಿಯ ಬಗ್ಗೆ ಹೇಳುತ್ತೇನೆ. ಸಾಲ ಮನ್ನಾ ಮಾಡುವುದಕ್ಕೆ ರೂ. 800 ಕೋಟಿಗಳನ್ನು ಮಂಜೂರು ಮಾಡಿದ್ದು, ರೂ. 50 ಕೋಟಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈವರೆಗೆ 627 ಖಾತೆಗಳಿಗೆ ರೂ. 2.92 ಕೋಟಿ ಹಣವನ್ನು ಬೆಳೆ ಸಾಲ ಮನ್ನಾದ ಲಾಭಕ್ಕೆ ರೈತರಿಗೆ ತಲುಪಿದೆ ಎಂದು ಮೊನ್ನೆ ಇದೇ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಅವರು ಸಾಲ ಮನ್ನಾದ ಬಗ್ಗೆ ವೈಭವೀಕರಿಸಿ ಈ ರೀತಿ ಸಾಲ ಮನ್ನಾ ಮಾಡಿದ್ದಾರೆ. 627 ರೈತರ ಖಾತೆಗಳಿಗೆ ರೂ. 2.92 ಕೋಟಿ ಹಣವನ್ನು ಹಾಕಲು ಸಾಲ ಮನ್ನಾದ ಬಗ್ಗೆ ಇಷ್ಟೊಂದು ವೈಭವೀಕರಿಸಬೇಕಾಗಿತ್ತೆ? ಅದಕ್ಕಾಗಿ ಸರ್ಕಾರ ವಿಫಲವಾಗಿದೆ ಎಂದು ಹೇಳಿದೆ. ಮಾನ್ಯ ಸಚಿವರು ಯಾವ ಉತ್ತರ ಕೊಡುತ್ತಾರೋ, ನನಗೆ ಗೊತ್ತಿಲ್ಲ. ಸರ್ಕಾರ ಬರ ಪರಿಸ್ಥಿತಿಯನ್ನು ನಿಭಾಯಿಸಲು ಸಂಪೂರ್ಣ ವಿಫಲವಾಗಿದೆ. ಕುಡಿಯುವ ನೀರು ಒದಗಿಸಿಲು ಹಾಗೂ ಜಾನುವಾರುಗಳಿಗೆ ಗೋಶಾಲೆಗಳನ್ನು ತೆರೆಯಲು ವಿಫಲವಾಗಿದೆ. ಇದಕ್ಕೆ ಅವರು ಕೊಡುವ ಉತ್ತರ ಏನು?

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ನನಗೆ ಬಹಳ ಗೌರವ ಇದೆ. ಸ್ವಲ್ಪ ಸಮಾಧಾನ ಮತ್ತು ತಾಳ್ಮೆ ಇರಬೇಕು. ಅವರು ನನ್ನನ್ನು appreciate ಮಾಡಬೇಕೆಂದು ನಾನು ಅಪೇಕ್ಷೆ ಮಾಡುವುದಿಲ್ಲ. ಆದರೆ ವಿರೋಧ ಪಕ್ಷದ ನಾಯಕರಾಗಿ ಎಲ್ಲರಿಗೂ ಮಾರ್ಗದರ್ಶನ ಮಾಡಬೇಕು. ನಾನು ಬಹಳ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದೇನೆ. ಮಾನ್ಯ ಕೊಂಡಯ್ಯನವರು Task Force ನಲ್ಲಿ ವಿಧಾನ ಪರಿಷತ್ತಿನ ಸದಸ್ಯರಿಗೆ ಅವಕಾಶ ಇಲ್ಲ ಎಂದು ತಿಳಿಸಿದ್ದು, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಗ್ರಾಮಾಂತರ ಪ್ರದೇಶಗಳಿಂದ ಬರುವ ಸದಸ್ಯರಿಗೆ ಅವಕಾಶ ಇಲ್ಲ ಎಂದು ಹೇಳಿರುವುದನ್ನು ಪರಿಶೀಲನೆ ಮಾಡುತ್ತೇನೆ. ಮಾನ್ಯ ಪ್ರಾಣೇಶ್‌ರವರು ಕಡೂರು, ಚಿಕ್ಕಮಗಳೂರು, ತರೀಕೆರೆ ಭಾಗಗಳ ಬಗ್ಗೆ ಕೆಲವು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Formatted: Font: 14 pt
Formatted: Font: Bookman Old Style, 14 pt
Formatted: Font: Nudi 01 e, 14 pt
Formatted: Font: 14 pt
Formatted: Font: Nudi 01 e, 14 pt

ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ರೂ. 27 ಕೋಟಿಗಳನ್ನು ಚಿಕ್ಕಮಗಳೂರಿಗೆ ಬಿಡುಗಡೆ ಮಾಡಿದ್ದೇನೆ ಎಂದು ಎಲ್ಲಿಯೂ ಹೇಳಿಲ್ಲ.

(ಮುಂದು)

Formatted: Font: Nudi 01 e, 14 pt

(592)19-12-2018(7-30)ಹೆಚ್‌ವಿಃಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ವಿ.ದೇಶಪಾಂಡೆ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ 7 ಕೋಟಿ 44 ಲಕ್ಷ ರೂಪಾಯಿಗಳನ್ನು ಚಿಕ್ಕಮಗಳೂರಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಬಳಿ 6 ಕೋಟಿ 35 ಲಕ್ಷ ರೂಪಾಯಿಗಳಿವೆ. ಕೆಳಮನೆಯ ಹಿರಿಯ ಸದಸ್ಯರು ಹಾಗೂ ಮಾಜಿ ಸಚಿವರು ಆಗಿರುವಂತಹ ಶ್ರೀ ಗೋವಿಂದ ಕಾರಜೋಳರವರು, 'ನಮ್ಮ ತಾಲ್ಲೂಕನ್ನು ಬರಪೀಡಿತ ಪ್ರದೇಶವನ್ನಾಗಿ ಘೋಷಿಸಬೇಕೆಂದು ನಾನು ಅರ್ಜಿಯನ್ನು ಕೊಟ್ಟಿದ್ದೆ. ತಾವು ಆ ತಾಲ್ಲೂಕನ್ನು ಬರಪೀಡಿತ ತಾಲ್ಲೂಕೆಂದು ಪರಿಗಣಿಸಿರುವುದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತಿದ್ದೇನೆ' ಎನ್ನುವ ಮಾತುಗಳನ್ನು ಹೇಳಿದರು. ಆಗ ನಾನು, 'ತಾವು ನನಗೆ ಅಭಿನಂದಿಸಬಾರದು. ನಾನು ನಿಮ್ಮ ತಾಲ್ಲೂಕನ್ನು ಬರ ಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡಲಿಲ್ಲ. ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡುವುದಕ್ಕೆ ಬೇಕಾದಂತಹ ಎಲ್ಲ ಮಾನದಂಡಗಳು ಆ ತಾಲ್ಲೂಕಿನಲ್ಲಿ ಇದ್ದವು' ಎನ್ನುವ ಮಾತುಗಳನ್ನು ಹೇಳಿದ್ದೆ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರಲಿ, ಕೇಂದ್ರ ಸರ್ಕಾರ ಬರಕ್ಕೆ ಸಂಬಂಧಪಟ್ಟಂತೆ ಒಂದು ಕೈಪಿಡಿಯನ್ನು ಹೊರತಂದಿದೆ, ಆ ಪ್ರಕಾರವಾಗಿಯೇ ನಾವು ನಡೆದುಕೊಳ್ಳಬೇಕಾಗುತ್ತದೆ. ಈಗ ಉಪಗ್ರಹಗಳ ಮತ್ತು ತಾಂತ್ರಿಕತೆಯ ಬಳಕೆ ಹೆಚ್ಚಾಗುತ್ತಿರುವುದರಿಂದ ಸರ್ವೆ ಮುಂತಾದವುಗಳನ್ನು ಪಾರದರ್ಶಕವಾಗಿ ತಿಳಿದುಕೊಳ್ಳಬಹುದಾಗಿದೆ. ನಾವು ಇಲ್ಲಿ ಏನಾದರೂ ಹೆಚ್ಚು-ಕಡಿಮೆ ಮಾಡುವುದಕ್ಕೆ ಹೋದರೆ ಅದು ಅವರ ಗಮನಕ್ಕೆ ಬರುತ್ತದೆ. ಆಗ ನಾವು ನೀಡಿರುವ ಪ್ರಸ್ತಾವನೆಯೂ ವಾಪಸ್ಸು ಬರಬಹುದು. ಇದರಿಂದ ರೈತರಿಗೆ ಮತ್ತು ಬಡವರಿಗೆ ಅನ್ಯಾಯವಾಗಬಹುದು. ಆದ್ದರಿಂದ ನಾವು ಪ್ರಸ್ತಾವನೆಯನ್ನು ಕೊಡುವಂತಹ ಸಂದರ್ಭದಲ್ಲಿ ಬಹಳ ಪಾರದರ್ಶಕವಾಗಿ ಮತ್ತು ಜೋಪಾನವಾಗಿ ಕೊಡಬೇಕಾಗುತ್ತದೆ. ರಾಜ್ಯದಲ್ಲಿ ಮುಂಗಾರು ವಿಫಲವಾಗಿದೆ. ಹಿಂಗಾರು ಸಹ ಕೈಕೊಟ್ಟಿದೆ. ಡಿಸೆಂಬರ್ ತಿಂಗಳು ಮುಗಿಯುವುದರೊಳಗಾಗಿ ನಾವು ಇನ್ನೂ ಕೆಲವು ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಬೇಕಾಗಿದೆ. ಡಿಸೆಂಬರ್ ಮುಗಿಯುವುದಕ್ಕೆ ಇನ್ನೂ 8-10 ದಿನಗಳು ಬಾಕಿ ಉಳಿದಿವೆ. ಆ ಸಂದರ್ಭದಲ್ಲಿ ಮತ್ತೊಮ್ಮೆ ಪರಿಶೀಲನೆ ಮಾಡುತ್ತೇವೆಂಬ ಭರವಸೆಯನ್ನು ನೀಡುತ್ತಿದ್ದೇನೆ. ಈಗಾಗಲೇ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದ್ದೇವೆ. ಆ ಪ್ರಕಾರ ಕ್ರಮ ಜರುಗಿಸಲಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀಮತಿ ತೇಜಸ್ವಿನಿ ಗೌಡರವರು ಮಾತನಾಡುವಂತಹ ಸಂದರ್ಭದಲ್ಲಿ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಬಗ್ಗೆ ಹೇಳಬೇಕಾದರೆ, ಈಗಾಗಲೇ ಚಳ್ಳಕೆರೆಯಲ್ಲಿ ಎರಡು ಗೋಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಬರ ಪರಿಹಾರ ಕಾಮಗಾರಿಗಳಿಗಾಗಿ ಸಾಕಷ್ಟು ಹಣವನ್ನು ಚಿತ್ರದುರ್ಗ ಜಿಲ್ಲೆಗೂ ಬಿಡುಗಡೆ ಮಾಡಿದ್ದೇವೆ. ಆ ಜಿಲ್ಲೆಯ ಜಿಲ್ಲಾಧಿಕಾರಿಗಳ ಬಳಿ 7 ಕೋಟಿ 69 ಲಕ್ಷ ರೂಪಾಯಿಗಳಿವೆ. ಸರ್ಕಾರ ಕೆಲಸ ಮಾಡುವಂತಹ ಸಂದರ್ಭದಲ್ಲಿ ಕೆಲವೊಂದು ತಪ್ಪುಗಳಾಗಿರಬಹುದು. ನಾವು ಮಾಡಿರುವುದೆಲ್ಲ ಸರಿಯಾಗಿದೆಯೆಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಯಾವುದು ಸರಿಯಿಲ್ಲ ಅಂತಹವುಗಳ ಬಗ್ಗೆ ಮಾನ್ಯ ವಿರೋಧ ಪಕ್ಷದವರು ಟೀಕೆ ಮಾಡಲಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ, ಟೀಕೆ ಮಾಡುವುದಕ್ಕಾಗಿಯೇ ಟೀಕೆ ಮಾಡಬಾರದು. ಸದನ ಮುಗಿಸಿಕೊಂಡು ಹೋದ ನಂತರ ಅವರ ಮನಸ್ಸು 'ನಾನು ಟೀಕೆ ಮಾಡಿರುವುದರಲ್ಲಿ ಸತ್ಯಾಂಶವಿದೆ' ಎಂದು ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ಅದೇ ಮಾತುಗಳನ್ನು ಅವರಿಗೆ ಹೇಳುತ್ತಿದ್ದೇನೆ. ಸದನದಲ್ಲಿ ಅವರು ಏನು ಮಾತನಾಡುತ್ತಿದ್ದಾರೆ, ಅದು ಅವರ ಮನಸ್ಸಿಗೆ ಒಪ್ಪುವಂತಿರಬೇಕು.

**ಶ್ರೀ ಆರ್.ವಿ.ದೇಶಪಾಂಡೆ:-** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಸುಮ್ಮನೆ ಆಲಿಸುತ್ತಾ ಕುಳಿದುಕೊಂಡಿದ್ದೆ. ಅವರ ಮಾತಿನ ಮಧ್ಯೆ ಪ್ರವೇಶ ಮಾಡಲಿಲ್ಲ. ನನಗೆ ವಯಸ್ಸಾಗಿರುವ ಕಾರಣ ಸಹಜವಾಗಿ ನನಗೆ ಕೋಪ ಬರಬೇಕಾಗಿತ್ತು. ಆದರೆ, ನಾನು ಶಾಂತವಾಗಿದ್ದೇನೆ. ಅವರು ಇನ್ನೂ ಬಿಸಿ ರಕ್ತದವರು ಅದಕ್ಕೆ ಬೇಗ ಕೋಪ ಮಾಡಿಕೊಳ್ಳುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಮಾತನಾಡುತ್ತಾ, ಕೆಲವೊಂದು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಸಚಿವ ಸಂಪುಟದ ಉಪ ಸಮಿತಿಯನ್ನು ಈ ಡಿಸೆಂಬರ್ ತಿಂಗಳಿನಲ್ಲಿ ರಚನೆ ಮಾಡಲಾಗಿದೆ. ಯಾವ ಮಂತ್ರಿಗಳು ಎಲ್ಲೆಲ್ಲಿಗೆ ಹೋಗಿ review ಮಾಡಿದ್ದಾರೆ ಎನ್ನುವ ಪಟ್ಟಿ ನನ್ನ ಬಳಿ ಇದೆ. ವಿಧಾನಸಭೆಯಲ್ಲಿ ಅಲ್ಲಿನ ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಅವರಿಗೆ ನಾನು ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಮಂತ್ರಿಗಳು ಯಾವ ಯಾವ ದಿನಾಂಕದಂದು ಮೀಟಿಂಗ್ ಮಾಡಿದ್ದಾರೆ ಎನ್ನುವ ಪಟ್ಟಿಯನ್ನು ನೀಡಿದ್ದೇನೆ.

" ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವೈ.ಎ.ನಾರಾಯಣಸ್ವಾಮಿಃ-** ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಅವರು ಒಂದೇ ಒಂದು ಮೀಟಿಂಗ್ ಮಾತ್ರ ಮಾಡಿದ್ದಾರೆ.

**ಶ್ರೀ ಆರ್.ವಿ.ದೇಶಪಾಂಡೆಃ-** ಸನ್ಮಾನ್ಯ ಸಭಾಪತಿಯವರೇ, ಕೆಲವೊಂದು ಕಡೆಗಳಲ್ಲಿ ಮೂರು ಮೀಟಿಂಗ್‌ಗಳನ್ನು ನಡೆಸಲಾಗಿದೆ. Disaster Managementಗೆ ಸಂಬಂಧಿಸಿದಂತೆ ನಾನು ಏಳು ಬಾರಿ ಸಚಿವ ಸಂಪುಟದ ಉಪ ಸಮಿತಿಯ ಸಭೆಗಳನ್ನು ನಡೆಸಿದ್ದೇನೆ. ಮಂತ್ರಿಗಳು, ಶಾಸಕರು ಮತ್ತು ಅಧಿಕಾರಿಗಳು ಬರಪೀಡಿತ ಪ್ರದೇಶಗಳಿಗೆ ಪ್ರವಾಸ ಹೋಗಿ ವಾಸ್ತವಾಂಶಗಳನ್ನು ತಿಳಿದುಕೊಳ್ಳಬೇಕಾಗಿದೆ. ಯಾವ ರೀತಿಯಲ್ಲಿ ಬರಗಾಲವನ್ನು ಎದುರಿಸಬೇಕು ಎನ್ನುವುದರ ಬಗ್ಗೆ ನಾನು ವೈಯಕ್ತಿಕವಾಗಿ ಸವಿವರವಾಗಿರುವ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇನೆ. ಬರ ನಿರ್ವಹಣೆಯಲ್ಲಿ ನಮಗೆ ಅನುಭವವಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ, 1983ನೇ ಇಸವಿಯಿಂದ ಅಂದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಿಂದಲೂ ನಮ್ಮ ರಾಜ್ಯ ಬರಗಾಲವನ್ನು ಎದುರಿಸುತ್ತಿದೆ. ಆದ್ದರಿಂದ ನಮ್ಮ ಅನುಭವದ ಆಧಾರದ ಮೇಲೆ ಮುಂದಾಲೋಚನೆ ಮಾಡಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ನಾವು ಮುಂದಾಲೋಚನೆ ಮಾಡದಿದ್ದರೆ ಇಷ್ಟೊಂದು ಹಣವನ್ನು ಮುಂಚಿತವಾಗಿಯೇ ಬಿಡುಗಡೆ ಮಾಡುತ್ತಿರಲಿಲ್ಲ. ಮಹಾರಾಷ್ಟ್ರ ಸರ್ಕಾರ ಇನ್ನೂ ಬರ ಪೀಡಿತ ಪ್ರದೇಶಗಳನ್ನು ಘೋಷಣೆ ಮಾಡಿಲ್ಲ. ಹಿಂದೊಮ್ಮೆ ಭಾರತೀಯ ಜನತಾ ಪಕ್ಷಕ್ಕೆ ಬೆಂಬಲಿಗ ಪಕ್ಷವಾಗಿದ್ದ ಶಿವಸೇನೆಯು ಈಗ ಕೇಂದ್ರ ಸರ್ಕಾರದ ಮೇಲೆ ಹರಿಹಾಯುತ್ತಿದೆ. ಈ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಅವರುಗಳು ಅದನ್ನು ಓದಿರಬಹುದು. ಆದರೆ, ನಾವು ಸಕಾಲದಲ್ಲಿ ಪ್ರಸ್ತಾವನೆ ಕೊಟ್ಟಿದ್ದೇವೆ, ಸರ್ಕಾರದ ಮಟ್ಟದಲ್ಲಿ ಬರಪೀಡಿತ ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದೇವೆ. ಅಷ್ಟೇ ಅಲ್ಲ ಕೇಂದ್ರ ಸರ್ಕಾರದ ತಂಡ ಬಂದು ಬರಪೀಡಿತ ಪ್ರದೇಶಗಳನ್ನು ಪರಿಶೀಲನೆ ಮಾಡಿ ಹಣವನ್ನು ಸಹ ಬಿಡುಗಡೆ ಮಾಡಿದೆ. ನಾವು ಇಷ್ಟೆಲ್ಲ ಕ್ರಮಗಳನ್ನು ಕೈಗೊಂಡಿರುವಾಗ ವಿರೋಧ ಪಕ್ಷದವರು ಸರ್ಕಾರವನ್ನು ಅಭಿನಂದಿಸದಿದ್ದರೆ ಬೇಡ, ಕೊನೆಯ ಪಕ್ಷ ಆಗುತ್ತಿರುವ ಕೆಲಸಕ್ಕೆ ಅಡ್ಡಿ ಮಾಡಬಾರದು ಎನ್ನುವಂತಹ ಭಾವನೆಯಾದರೂ ಅವರಲ್ಲಿ ಇರಬೇಕಾಗುತ್ತದೆ. ಯಾವುದಾದರೊಂದು ಒಳ್ಳೆಯ ಕೆಲಸ ನಡೆಯುತ್ತಿರುವಾಗ, ನಡೆಯಲಿ ಎಂದು ಸುಮ್ಮನಿರಬೇಕು.

ಸನ್ಮಾನ್ಯ ಸಭಾಪತಿಯವರೇ, ಅವರು ಸಲಹೆಗಳನ್ನು ಕೊಟ್ಟರೆ ಅದನ್ನು ಸ್ವೀಕಾರ ಮಾಡುವುದಕ್ಕೆ ನಾವು ಸದಾ ಸಿದ್ಧರಾಗಿದ್ದೇವೆ. ಅವರು ನೀಡುವಂತಹ ಸಲಹೆಗಳಿಂದ ರೈತರಿಗೆ, ಬಡವರಿಗೆ ಮತ್ತು ಕಡುಬಡವರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸನ್ಮಾನ್ಯ ಸಭಾಪತಿಯವರೇ, ಬರಗಾಲದ ನಿರ್ವಹಣೆಗೆ ಸರ್ಕಾರದಲ್ಲಿ ಹಣಕ್ಕೇನೂ ಕೊರತೆಯಿಲ್ಲ. ಸುಮಾರು 50 ಲಕ್ಷ ರೂಪಾಯಿಗಳನ್ನು ಟಾಸ್ಕ್‌ಫೋರ್ಸ್‌ಗಾಗಿ ಕೊಟ್ಟಿದ್ದೇವೆ. ಇನ್ನೂ 50 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಕೊಟ್ಟಿರುವ ಹಣವನ್ನು ಅವರು ಬಳಕೆ ಮಾಡಿಕೊಂಡ ನಂತರ ಅವರಿಗೆ ಪುನಃ ಹಣ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಒಂದು ಟಾಸ್ಕ್‌ಫೋರ್ಸ್‌ಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟು ಅದು ಖರ್ಚಾಗಿದೆಯೋ ಇಲ್ಲವೋ ಎನ್ನುವುದನ್ನು ನೋಡುತ್ತಾ ಕುಳಿತುಕೊಳ್ಳಬೇಕಾಗುತ್ತದೆ. ಜನರಿಗೆ ಮತ್ತು ದನಕರುಗಳಿಗೆ ಕುಡಿಯಲು ನೀರು, ಜಾನುವಾರುಗಳಿಗೆ ಮೇವು ಮತ್ತು ಜನರಿಗೆ ಉದ್ಯೋಗ ಒದಗಿಸಿಕೊಡುವುದಕ್ಕೆ ನಮ್ಮ ಸರ್ಕಾರದಲ್ಲಿ ಹಣದ ಕೊರತೆ ಇಲ್ಲ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಮಾನ್ಯ ಸದಸ್ಯರು ಮಾತನಾಡುತ್ತಾ, ಕೊಪ್ಪಳ ಜಿಲ್ಲೆಯಲ್ಲಿ ಜನರು ಗುಳೆ ಹೋಗುತ್ತಿದ್ದಾರೆಂದು ಹೇಳಿದರು. ಕೇವಲ ಗುಳೆ ಹೋಗುತ್ತಿದ್ದಾರೆ ಎಂದರೆ ಸಾಕಾಗುತ್ತದೆಯೇ? ಯಾರು ಎಲ್ಲಿಗೆ ಗುಳೆ ಹೋಗಿದ್ದಾರೆ ಎನ್ನುವ ಮಾಹಿತಿಯನ್ನು ಅವರು ನೀಡಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಯಾವುದೋ ಒಂದು ಚಿಕ್ಕ ಗ್ರಾಮದಲ್ಲಿರುವ ಬಡವನೊಬ್ಬ ಕಂದಾಯ ಮಂತ್ರಿಗಳನ್ನು ಹುಡುಕಿಕೊಂಡು ಬಂದು ಮನವಿ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ?

**ಶ್ರೀ ಆರ್.ವಿ.ದೇಶಪಾಂಡೆಃ–** ಸನ್ಮಾನ್ಯ ಸಭಾಪತಿಯವರೇ, ಮನವಿಯನ್ನು ಇವರೇ ಕೊಡಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಬರ ಪರಿವೀಕ್ಷಣೆಗೆ ಹೋಗಿದ್ದರು. ಅವರು ಮನವಿ ಕೊಟ್ಟರೆ ಸಾಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ನಾನೇ ಮನವಿಯನ್ನು ಕೊಟ್ಟಿದ್ದೇನೆ. ಸರ್ಕಾರ 100 ತಾಲ್ಲೂಕುಗಳನ್ನು ಬರ ಪ್ರದೇಶಗಳೆಂದು ಘೋಷಣೆ ಮಾಡಿದ್ದಾರೆ. ನಾನು ಆ ಪ್ರದೇಶಗಳಿಗೆ ಹೋಗಿ ನೋಡಿಕೊಂಡು ಬಂದು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದೇನೆ. ನಾನು ಈ ಸದನದಲ್ಲಿ ಬರ ಪರಿಸ್ಥಿತಿಯ ಬಗ್ಗೆ ನಿಲುವಳಿ ಸೂಚನೆಯನ್ನು ತಂದಿರುವ ಉದ್ದೇಶವನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕಾಗಿದೆ. ಸರ್ಕಾರ 100 ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿ, ಸುಮಾರು 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅದರಲ್ಲಿ ಶೇಕಡಾ 50ರಷ್ಟು ಹಣವನ್ನು ಜಿಲ್ಲಾಧಿಕಾರಿಗಳು ಖರ್ಚು ಮಾಡಿಲ್ಲ. ಇದರ ಬಗ್ಗೆ ನಾವು ಯಾರನ್ನು ಕೇಳಬೇಕು?

**ಶ್ರೀ ಆರ್.ವಿ.ದೇಶಪಾಂಡೆ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮೊಂದಿಗೆ ಸಹಕರಿಸಬೇಕಾಗಿದೆ. ಅವರು ದಾಖಲೆ ತೆಗೆದು ನೋಡಲಿ, ಸದಸ್ಯರುಗಳು ಮಾತನಾಡುವಾಗ ಕೇವಲ ಅವರ ಹೆಸರನ್ನು ಮಾತ್ರ ಬರೆದುಕೊಂಡಿಲ್ಲ. ಅವರು ಪ್ರಸ್ತಾಪ ಮಾಡಿರುವ ವಿಚಾರಗಳನ್ನು ಸಹ ನಾವು note ಮಾಡಿಕೊಂಡು ಅದಕ್ಕೆ ಉತ್ತರವನ್ನು ಹೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಅದನ್ನು ಕೇಳಿಸಿಕೊಳ್ಳಲು ಆಗದೇ ಸದನದ ಹೊರಗೆ ಇದ್ದರೋ, ಅಥವಾ ಸದನದ ಒಳಗೆ ಕುಳಿತು ಕಿವಿ ಮುಚ್ಚಿಕೊಂಡಿದ್ದಾರೆಯೋ ನನಗೆ ಗೊತ್ತಿಲ್ಲ. ಬರಗಾಲ ನಿರ್ವಹಣೆಯ ಬಗ್ಗೆ ಸರ್ಕಾರದ ಮೇಲೆ ಎಷ್ಟು ಜವಾಬ್ದಾರಿ ಇದೆಯೋ, ಅಷ್ಟೇ ಜವಾಬ್ದಾರಿ ವಿರೋಧ ಪಕ್ಷದ ಮೇಲೂ ಇದೆ. ಅವರು ಸರ್ಕಾರವನ್ನು ಎಚ್ಚರಿಸಬೇಕಾಗುತ್ತದೆ. ಒಂದು ವೇಳೆ ಸರ್ಕಾರ ತಪ್ಪು ದಾರಿ ಹಿಡಿದರೆ ಸರಿಪಡಿಸುವಂತಹ ಜವಾಬ್ದಾರಿ ವಿರೋಧ ಪಕ್ಷದವರ ಮೇಲಿದೆ. ನಾನು ಸಹ ವಿರೋಧ ಪಕ್ಷದ ನಾಯಕನಾಗಿ ಕಾರ್ಯನಿರ್ವಹಿಸಿದ್ದೇನೆ. The members of Opposition party are also part of this House. We all are members of this family.

ಸನ್ಮಾನ್ಯ ಸಭಾಪತಿಯವರೇ, ನರೇಗಾ ಯೋಜನೆಯಡಿಯಲ್ಲಿ 100-150 ದಿನಗಳ ಕಾಲ ಕೆಲಸವನ್ನು ನೀಡುವುದಕ್ಕೆ ಕ್ರಿಯಾಯೋಜನೆ ತಯಾರಾಗಿದೆ. ಅದು ಅನುಷ್ಠಾನಗೊಳ್ಳುತ್ತಿದೆ. ಈ ಬಾರಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ, it will exceed more than Rs.10 Crores and this will be a record. ಈ ಎಲ್ಲ ಕ್ರಮಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಮ್ಮಿಕೊಂಡಿದೆ.

ಮಾನ್ಯ ಸದಸ್ಯರು ಮಾತನಾಡುತ್ತಾ, 'ಫಸಲ್ ವಿಮಾ ಯೋಜನೆ' ಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಯೋಜನೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಜೊತೆಯಾಗಿ ಮಾಡುವ ಯೋಜನೆಯಾಗಿದೆ. ನಾನು ಮೊನ್ನೆ ಕಲ್ಬುರ್ಗಿಗೆ ಹೋಗಿದ್ದೆ, ನನಗೆ ಸರಿಯಾಗಿ ಅಂಕಿಅಂಶಗಳು ನೆನಪಿಲ್ಲ. ನಾವು ಕೋಟಿ ಲೆಕ್ಕದಲ್ಲಿ ಪೇಮೆಂಟ್ ಮಾಡಿದ್ದರೆ, ಲಕ್ಷಗಳ ಲೆಕ್ಕದಲ್ಲಿ ವಿಮೆ ಬಂದಿದೆ. ರೈತರು 'ಫಸಲ್ ವಿಮಾ ಯೋಜನೆ'ಯ ಮೇಲೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಇದು ರಾಜಕೀಯ ಸಂಗತಿಯಲ್ಲ. ಈ ಯೋಜನೆಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಜಾಹಿರಾತುಗಳನ್ನು ಕೊಟ್ಟು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಕೃಷಿ ಇಲಾಖೆಗೆ ಈ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸೇರಿ, 'ಇದೊಂದು ಒಳ್ಳೆಯ ಯೋಜನೆಯಾಗಿದೆ. ವಿಮೆ ಮಾಡಿಸಿ' ಎಂದು ರೈತರಿಗೆ

Formatted: Indent: First line: 0 cm

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬೇಕಾಗುತ್ತದೆ ಮತ್ತು ಈ ಯೋಜನೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಬೇಕಾಗುತ್ತದೆ. ಅವರುಗಳ ಅನುಭವಕ್ಕೂ ಇದು ಬಂದಿರಬಹುದು.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅಪ್ಪಾಜಿಗೌಡರು ಕೆ.ಆರ್.ಪೇಟೆ ತಾಲ್ಲೂಕಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬರ ಪ್ರದೇಶವೆಂದು ಘೋಷಣೆ ಮಾಡುವುದಕ್ಕೆ ನಿಗದಿಪಡಿಸಿರುವ ಮನದಂಡಗಳ ವ್ಯಾಪ್ತಿಗೆ ಈ ತಾಲ್ಲೂಕು ಬಂದರೆ, ಇದನ್ನು ಖಂಡಿತವಾಗಿಯೂ ಪರಿಗಣಿಸಲಾಗುತ್ತದೆ.

ಸಾಲ ಮನ್ನಾ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಮನ್ನಾ ಮಾಡುವುದಕ್ಕೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಈ ಬಗ್ಗೆ ರಾಷ್ಟ್ರೀಕೃತ ಬ್ಯಾಂಕ್‌ಗಳ ಜೊತೆಗೆ ಮಾತುಕತೆ ನಡೆಯುತ್ತಿದೆ. ಅದು ಒಂದು ಹಂತಕ್ಕೆ ಬಂದಿದೆ.

(ಮುಂದುವರಿದಿದೆ)

(592)+(593) 19.12.2018 7.40 ಪಿಕೆ:ಕೆಎಸ್

(ಉಪಸಭಾಪತಿಗಳ ಉಪಸ್ಥಿತಿ)

**ಶ್ರೀ ಆರ್.ವಿ.ದೇಶಪಾಂಡೆ(ಮುಂದು)**

ಮತ್ತೆ, ಸಾಲ ಮನ್ನಾ ಮಾಡುವುದರ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿರುವ ಸಾಲವನ್ನು ಮನ್ನಾ ಮಾಡುವುದಕ್ಕೆ ಸಚಿವ ಸಂಪುಟದಲ್ಲಿ ನಾವು ಮಾನ್ಯತೆ ಕೊಟಿದ್ದೇವೆ. ರಾಷ್ಟ್ರೀಕೃತ ಬ್ಯಾಂಕ್‌ಗಳ ಜೊತೆ ಚರ್ಚೆ ನಡೆದು ಅದು ಒಂದು ಹಂತಕ್ಕೆ ಬಂದಿದೆ. ಅದಕ್ಕೆಂದು ಈ ವರ್ಷದ ಬಜೆಟ್‌ನಲ್ಲಿ ಆರೂವರೆ ಸಾವಿರ ಕೋಟಿಗಳನ್ನು ಇಟ್ಟಿದ್ದಾರೆ. ಈ ದಿಸೆಯಲ್ಲಿ ಸೇಡಂ ಮತ್ತು ದೊಡ್ಡಬಳ್ಳಾಪುರದಲ್ಲಿ ಪೈಲೆಟ್ ಪ್ರಾಜೆಕ್ಟ್ ಆಗಿದೆ. ಇದಕ್ಕೆಂದು ಹಣ ಬಿಡುಗಡೆ ಮಾಡಲಾಗಿದೆಯೇ ಹೊರತು ಎಲ್ಲಕ್ಕೂ ಅನ್ವಯವಾಗುವ ಹಾಗೆ ಅಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಸಹಕಾರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ರೂ. 9600 ಕೋಟಿ ಸಾಲ ಮನ್ನಾ ಮಾಡಿದ್ದೇವೆ. ಮಾನ್ಯ ನಾರಾಯಣಸ್ವಾಮಿಯವರೇ ನಿಮಗೆ ಚೆನ್ನಾಗಿ ಗೊತ್ತು. ಡ್ಯೂವ್ ಡೇಟ್ಸ್ ವ್ಯತ್ಯಾಸವಾಗುತ್ತದೆ. ನವೆಂಬರ್,



Formatted: Indent: First line: 1.27 cm, Right: -0.17 cm

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್ ಹೀಗೇ ಮೇ ತಿಂಗಳುಗಳ ತನಕ ಇರುತ್ತದೆ. The difference of amount is Rs. 8,000 Crores. ಡ್ಯೂವ್ ಡೇಟ್ಸ್ ಇರುವುದರ ಪ್ರಕಾರ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಇದಕ್ಕೆ ಮೀಸಲಿಟ್ಟ ಹಣವನ್ನು ಒಟ್ಟಾಗಿ ಅಪೆಕ್ಸ್ ಬ್ಯಾಂಕ್‌ನಲ್ಲಿ ಇಡುವುದಕ್ಕೆ ಬರುವುದಿಲ್ಲ. ಇವತ್ತು ಇಡೀ ದೇಶದಲ್ಲಿ ರೈತರು ಒತ್ತಡದಲ್ಲಿದ್ದಾರೆ. ಸರಿಯಾದ ಮಾರುಕಟ್ಟೆ ಇಲ್ಲ, ಸರಿಯಾದ ಬೆಲೆ ಸಿಗುವುದಿಲ್ಲ, ಅತಿವೃಷ್ಟಿ-ಅನಾವೃಷ್ಟಿ, ಬರಗಾಲ ಹೀಗೆ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರೈತರ ಸಹಾಯಕ್ಕೆ ಧಾವಿಸುತ್ತಿರುವಾಗ ನೀವು ಅದನ್ನು ತಾಳ್ಮೆಯಿಂದ ನೋಡಬೇಕಾಗುತ್ತದೆ; ಇದನ್ನು follow-up ಮಾಡಬೇಕಾಗುತ್ತದೆ. ಸರ್ಕಾರ ತನ್ನ ಈ commitment ಅನ್ನು ಈಡೇರಿಸದೇ ಇದ್ದರೆ ನೀವು ಈ ಭಾಗಕ್ಕೆ ಬರುತ್ತೀರಿ; ನಾವು ಭಾಗದಲ್ಲಿ ಕುಳಿತುಕೊಂಡಿರುತ್ತೇವೆ. ಮಾನ್ಯ ಸಭಾಪತಿಯವರೇ, ಬರಗಾಲವನ್ನು ಸರ್ಕಾರ ಯುದ್ಧೋಪಾದಿಯಲ್ಲಿ ಎದುರಿಸುತ್ತಿದೆ. ಬರಗಾಲವನ್ನು ಎದುರಿಸುವುದಕ್ಕೆ ನಾವು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಮುಂದಾಲೋಚನೆ ಮಾಡಿ fodder banks ಎಲ್ಲಿ ತೆಗೆಯಬೇಕು, ಗೋಶಾಲೆಗಳನ್ನು ಎಲ್ಲಿ ತೆಗೆಯಬೇಕು, ಎಲ್ಲಿ ಕುಡಿಯುವ ನೀರಿನ ಅಭಾವ ಇದೆ, ಹೀಗೆ ನಾವು ಎಲ್ಲಾ ಮಾಹಿತಿಗಳನ್ನು ಸಂಗ್ರಹ ಮಾಡಿದ್ದೇವೆ. ಕೇಂದ್ರ ಸರ್ಕಾರದ ಗಮನವನ್ನೂ ಸೆಳೆದಿದ್ದೇವೆ. ಹಾಗಾಗಿ ಎಲ್ಲಾ ಸದಸ್ಯರು ಸಹಕರಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ರಾಜ್ಯದ 100 ತಾಲ್ಲೂಕುಗಳಲ್ಲಿ ಬರಗಾಲ ಬಂದಿದೆ. ಜನ ಕುಡಿಯುವ ಹನಿ ನೀರಿಗಾಗಿ ಬಡಿದಾಡುತ್ತಿದ್ದಾರೆ. ನೀವು ಮಾಡುತ್ತಿರುವಂತಹ ಯಾವುದೇ ಯೋಜನೆಗಳು ಜನರಿಗೆ ತಲುಪುತ್ತಿಲ್ಲ. ರಾಜಕೀಯ ಮೇಲಾಟದ ಪರಿಸ್ಥಿತಿಯಲ್ಲಿ ನೀವಿದ್ದೀರಿ. ತುತ್ತು ಅನ್ನಕ್ಕೋಸ್ಕರ ಜನ ಬಡಿದಾಡುವ ಸ್ಥಿತಿಯಲ್ಲಿದ್ದರೆ, ಸರ್ಕಾರ ಕುಂಭಕರ್ಣ ನಿದ್ದೆಯಲ್ಲಿದೆ. ಸರ್ಕಾರ ಕೊಟ್ಟ ಉತ್ತರವನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಸದನದಿಂದ ಸಭಾತ್ಯಾಗ ಮಾಡಿದರು)**

**ಡಾ:ಜಯಮಾಲ:-** ಮಾನ್ಯ ಸಭಾಪತಿಯವರೇ, ಇದು ಸರಿಯಾದ ಕ್ರಮವಲ್ಲ. ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಆ ಉತ್ತರವನ್ನು ಒಪ್ಪದೇ ಹೊರಗೆ ಹೋಗುತ್ತಿದ್ದಾರೆ. ಇದು ರಾಜಕೀಯ ಪ್ರೇರಿತ ಸಭಾತ್ಯಾಗವಾಗಿದೆ.

**ಉಪಸಭಾಪತಿಯವರು:-** ನಿಯಮ 68ರ ಅಡಿ ತೆಗೆದುಕೊಂಡಿದ್ದ ಬರಗಾಲದ ಮೇಲಿನ ಚರ್ಚೆ ಇಲ್ಲಿಗೆ ಮುಗಿದಿದೆ. ಸದನವನ್ನು ನಾಳೆ 11 ಗಂಟೆಯವರೆಗೆ ಮುಂದೂಡಲಾಗಿದೆ.



Formatted: Indent: Left: 3.81 cm, Line spacing: single
Formatted: Font: Bold
Formatted: Indent: First line: 1.27 cm

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಸದನವು ಸಂಜೆ 7 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು
ಪುನಃ ದಿನಾಂಕ 20ನೇ ಡಿಸೆಂಬರ್ ಮಾಹೇ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ
ಸೇರಲು ನಿಶ್ಚಯಿಸಿತು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "